ಮಂಗಳವಾರ, ಡಿಸೆಂಬರ್ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 348 | ಪುಟ 14

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಬದಲಾದ ನಮ್ಮ ಜೀವನಶೈಲಿ ನಮಗೆ ಬೊಜ್ಜನ್ನು ನೀಡುತ್ತಿದೆ. ಇದು ಆರೋಗ್ಯಕ್ಕೆ ಮಾರಕ

ಮಸೀದಿಯಲ್ಲಿ ಜೈ ಶ್ರೀರಾಮ್ ಘೋಷಣೆ ಅಪರಾಧವೇ: ಸುಪ್ರೀಂ ಪ್ರಶ್ನೆ 5

ಕುಟುಂಬ, ಸರ್ವಾಧಿಕಾರದ ಸುತ್ತ ಚರ್ಚೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,748 ▼	24,668 ▼	₹80,280 (ಬೆಂಗಳೂರು)	₹94,900 (ಬೆಂಗಳೂರು)	84.88

ಅಭಿವೃದ್ಧಿಗೆ ಬಿಡಿಗಾಸು ಇಲ್ಲ: ವಿಧಾನಸಭೆಯಲ್ಲಿ ಪ್ರತಿಪಕ್ಷ ಸದಸ್ಯರ ಸಿಟ್ಟು ● ಶ್ವೇತಪತ್ರ ಪ್ರಕಟಿಸಲು ಆಗ್ರಹ

ಅನುದಾನ – ಅಸಮಾಧಾನ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಈ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡಿಗಾಸು ಅನುದಾನವೂ ಬಿಡುಗಡೆಯಾಗಿಲ್ಲ. ಕ್ಷೇತ್ರದಲ್ಲಿ ಓಡಾಡುವುದೂ ಶಾಸಕರಿಗೆ ಕಷ್ಟವಾಗಿದೆ' ಎಂದು ವಿರೋಧ ಪಕ್ಷಗಳ ಸದಸ್ಯರು ತಮ್ಮ ಅಸಮಾಧಾನವನ್ನು ಹೊರಹಾಕಿದರು.

ನಿಯಮ 69ರ ಅಡಿಯಲ್ಲಿ ಸೋಮವಾರ ವಿಷಯ ಪ್ರಸ್ತಾಪಿಸಿ ಮಾತನಾಡಿದ ವಿರೋಧ ಪಕ್ಷಗಳಾದ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು, ಅನುದಾನದ ಕುರಿತು ಸಚಿವರು ಮತ್ತು ಆಡಳಿತ ಪಕ್ಷದ ಸದಸ್ಯರ ಹೇಳಿಕೆಯನ್ನೂ ತಮ್ಮ ವಾದದ ಸಮರ್ಥನೆಗೆ ಬಳಸಿಕೊಂಡರು.

'ಗ್ಯಾರಂಟಿ ಯೋಜನೆಗಳ ಕಾರಣವನ್ನು ಮುಂದಿಟ್ಟುಕೊಂಡು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಒದಗಿಸುತ್ತಿಲ್ಲ. ಎರಡು ವರ್ಷಗಳಲ್ಲಿ ಒಂದು ಕಾಮಗಾರಿಗೂ ಭೂಮಿ ಪೂಜೆ ನಡೆಸಲು ಸಾಧ್ಯವಾಗಿಲ್ಲ. ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣವಾಗಿ ಸ್ಥಗಿತಗೊಂಡಿದೆ' ಎಂದು ವಾಗ್ದಾಳಿ ನಡೆಸಿದರು.

ಚರ್ಚೆ ಆರಂಭಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, '19 ತಿಂಗಳುಗಳಿಂದ ಶಾಸಕರು ಗೌರವದಿಂದ ಕೆಲಸ ಮಾಡುವ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ. ಅನುದಾನ ಬಿಡುಗಡೆ ಆಗದೇ ಇರುವುದರಿಂದ ಜನರು ನಮ್ಮನ್ನು ದೂರುವ ಸ್ಥಿತಿ ನಿರ್ಮಾಣವಾಗಿದೆ. ಆಡಳಿತ ಪಕ್ಷದ ಶಾಸಕರ ಕ್ಷೇತ್ರಗಳಿಗೂ ಅನುದಾನ ಬಂದಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ರಾಜ್ಯದ ಅಭಿವೃದ್ಧಿ ಶೂನ್ಯವಾಗಿದೆ. ಈ ಸರ್ಕಾರ ಆರ್ಥಿಕವಾಗಿ ದಿವಾಳಿ ಆಗಿದೆ ಎನ್ನಬಹುದಾ' ಎಂದು ಪ್ರಶ್ನಿಸಿದರು.

ಪ್ರಸಕ್ತ ವರ್ಷ ಮುಖ್ಯಮಂತ್ರಿಯವರು ₹3,71,383 ಕೋಟಿ ಮೊತ್ತದ ಬಜೆಟ್ ಮಂಡಿಸಿದ್ದರು. ಅದರಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ₹52,009 ಕೋಟಿ ಮೀಸಲಿಡಲಾಗಿದೆ. ವೇತನಕ್ಕೆ ₹80,434 ಕೋಟಿ, ಪಿಂಚಣಿಗೆ ₹32,355 ಕೋಟಿ, ಬಡ್ಡಿ ಪಾವತಿಗೆ ₹39,234 ಕೋಟಿ, ಸಹಾಯಧನಕ್ಕೆ ₹25,904 ಕೋಟಿ, ಸಾಮಾಜಿಕ ಪಿಂಚಣಿ ಯೋಜನೆಗಳಿಗೆ ₹10,230 ಕೋಟಿ ಮೀಸಲಿಡಲಾಗಿದೆ. ಉಳಿದ ₹56,000 ಕೋಟಿಯನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಡಲಾಗಿತ್ತು. ಇದರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರವಾರು ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಒಳಗೊಂಡ ಶ್ವೇತಪತ್ರ ಪ್ರಕಟಿಸಬೇಕು ಎಂದು ಆಗ್ರಹಿಸಿದರು.

10ನೇ ಪುಟ ನೋಡಿ

ಕಾಂಗ್ರೆಸ್ ಅಧಿವೇಶನಕ್ಕೆ ₹8 ಕೋಟಿ ದೇವಸ್ಥಾನಗಳಿಗೆ ₹85 ಕೋಟಿ

ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮಕ್ಕೆ ₹8 ಕೋಟಿ ಹಾಗೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ₹85 ಕೋಟಿ ವಿನಿಯೋಗಿಸಲು ಸರ್ಕಾರ ಮುಂದಾಗಿದೆ.

ಈ ಆರ್ಥಿಕ ವರ್ಷದ ಎರಡನೇ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಅದರಲ್ಲಿ ಈ ವಿವರಗಳಿವೆ. ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಹೆಚ್ಚುವರಿಯಾಗಿ ₹20 ಕೋಟಿಯನ್ನು ಒದಗಿಸಲಾಗುತ್ತಿದೆ ಎಂದು ಅಂದಾಜು ಪ್ರಸ್ತಾವಿಸಿದೆ.

ವಿರೋಧ ಪಕ್ಷದ ಸದಸ್ಯರ ಆರೋಪದಲ್ಲಿ ಹುರುಳಿಲ್ಲ. ಹಿಂದೆ ಇವರು ಬಾಕಿ ಇರಿಸಿದ್ದ 8,000 ಕೊಳವೆ ಬಾವಿಗಳನ್ನು ನಮ್ಮ ಸರ್ಕಾರ ಕೊರೆಸಿದೆ
ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ನಿಮ್ಮ ಕಾಲದಲ್ಲಿ ಎಷ್ಟು ಕಿಲೋ ಮೀಟರ್ ರಸ್ತೆ ಕಾಮಗಾರಿ ಬಾಕಿ ಇಟ್ಟು ಹೋಗಿದ್ದೀರಿ ಎನ್ನುವುದನ್ನು ಮೊದಲು ಹೇಳಿ? ಆ ಮೇಲೆ ಬೇರೆ ಮಾತನಾಡಬಹುದು
ಕೆ.ಎಂ. ಶಿವಲಿಂಗೇಗೌಡ, ಕಾಂಗ್ರೆಸ್ ಸದಸ್ಯ

ಕೇಂದ್ರ ಸರ್ಕಾರ ತೆರಿಗೆ ಆದಾಯದಲ್ಲಿ ಸಮಾನ ಪಾಲು ಕೊಡುತ್ತಿಲ್ಲ ಎಂದು ರಾಜ್ಯ ಸರ್ಕಾರ ಪ್ರತಿಭಟನೆ ಮಾಡುತ್ತಿದೆ. ನೀವು ನಮ್ಮ ಕ್ಷೇತ್ರಗಳಿಗೆ ಅನುದಾನ ಕೊಡುತ್ತಿಲ್ಲ. ನಮ್ಮ ಕ್ಷೇತ್ರದ ಜನ ತೆರಿಗೆ ಪಾವತಿಸುವುದಿಲ್ಲವೇ?
ಎಂ.ಟಿ.ಕೃಷ್ಣಪ್ಪ, ಜೆಡಿಎಸ್ ಸದಸ್ಯ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಜಾಕಿರ್ ಹುಸೇನ್ ಇನ್ನಿಲ್ಲ

ನವದೆಹಲಿ (ಪಿಟಿಐ): ಆರು ದಶಕಗಳ ವೃತ್ತಿಜೀವನದಲ್ಲಿ ಸಂಗೀತ ಪ್ರಿಯರನ್ನು ಮಂತ್ರಮುಗ್ಧರನ್ನಾಗಿಸಿದ ವಿಶ್ವವಿಖ್ಯಾತ ತಬಲಾ ವಾದಕ ಜಾಕಿರ್ ಹುಸೇನ್ (73) ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿನ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಭಾರತದ ಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರರಲ್ಲಿ ಒಬ್ಬರಾದ ಹುಸೇನ್ ಅವರು ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು ಎಂದು ಅವರ ಕುಟುಂಬವು ತಿಳಿಸಿದೆ. ಕಳೆದ ಎರಡು ವಾರಗಳಿಂದ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಅವರ ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ತೀವ್ರ ನಿಗಾ ಘಟಕಕ್ಕೆ (ಐಸಿಯು) ಸ್ಥಳಾಂತರಿಸಲಾಗಿತ್ತು. 'ವೆಂಟಿಲೇಷನ್ ತೆರವುಗೊಳಿಸಿದ ಬಳಿಕ ಅವರು ನಿಧನರಾದರು' ಎಂದು ಹುಸೇನ್ ಅವರ ಸಹೋದರಿ ಖುರ್ಷಿದ್ ಔಲಿಯಾ ತಿಳಿಸಿದರು.

11ನೇ ಪುಟ ನೋಡಿ

ಚಿತ್ರ: ರಂಜು ಪಿ.

09.03.1951 – 16.12.2024

ತುಳಸಿ ಗೌಡ ನಿಧನ

ಪ್ರಜಾವಾಣಿ ವಾರ್ತೆ

ಕಾರವಾರ: ಗಿಡಗಳ ಆರೈಕೆ ಮೂಲಕ ಪ್ರಸಿದ್ಧಿ ಪಡೆದು, ಅದೇ ಕಾರಣಕ್ಕೆ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದ ಅಂಕೋಲಾ ತಾಲ್ಲೂಕು ಹೊನ್ನಳ್ಳಿಯ ತುಳಸಿ ಗೌಡ (80) ಸೋಮವಾರ ಸ್ವಗೃಹದಲ್ಲಿ ನಿಧನರಾದರು. ಕೆಲ ತಿಂಗಳುಗಳಿಂದ ಅವರಿಗೆ ಅನಾರೋಗ್ಯ ಕಾಡುತ್ತಿತ್ತು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಜೀವನಾಧಾರಕ್ಕೆ ಅರಣ್ಯ ಇಲಾಖೆಯ ನರ್ಸರಿಯಲ್ಲಿ ದಿನಗೂಲಿ ಆಧಾರದಲ್ಲಿ ಕೆಲಸಕ್ಕೆ ಸೇರಿದ್ದ ತುಳಸಿ ಅವರು ಗಿಡಗಳ ಆರೈಕೆಗೆ ಜೀವನ ಮುಡಿಪಿಟ್ಟಿದ್ದರು. ಈವರೆಗೆ ಲಕ್ಷಕ್ಕೂ ಹೆಚ್ಚು ಸಸಿಗಳನ್ನು ಬೆಳೆಸಿದ್ದಾರೆ. 1999ರಲ್ಲಿ 'ರಾಜ್ಯೋತ್ಸವ' ಪ್ರಶಸ್ತಿ, 'ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ' ಪ್ರಶಸ್ತಿ ನೀಡಲಾಗಿತ್ತು. ಅಂತ್ಯಕ್ರಿಯೆ ಹೊನ್ನಳ್ಳಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ.

ನುಡಿ ನಮನ 7

ADVERTORIAL

ಮಂಡಿನೋವು

ಸರ್ಜರಿ ಇಲ್ಲದೇ ಉಪಶಮನ

10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ

✔ ಕೇವಲ 30-60 ನಿಮಿಷದ ವಿಧಾನ ✔ ಆಸ್ಪತ್ರೆ ವಾಸವಿಲ್ಲ ✔ ವೇಗವಾದ ಚೇತರಿಕೆ

ಮೊಣಕಾಲಿನ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.

ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.

ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.

ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು

RADIO FREQUENCY ABLATION FDA APPROVED

ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟುವಟಿಕೆಗಳನ್ನು ಶುರು ಮಾಡಬಹುದು.

ಆರ್‌ಎಫ್‌ಎ ವಿಧಾನದ ಹಂತಗಳು :

1. **ತಯಾರಿ:** ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂಡಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2. **ಚಿತ್ರಣ:** ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್–ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3. **ಪರೀಕ್ಷೆ:** ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4. **ತಾಪನ:** ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ, ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸದಂತೆ ತಡೆಯುತ್ತದೆ.

5. **ಪ್ರಕ್ರಿಯೆಯ ನಂತರ:** ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್
ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ

ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888

ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್

ಪೀಣ್ಯಾ ದಾಸರಹಳ್ಳಿ Google Reviews 4.8 ★★★★★

ಇವರ ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆ (ರಿ), ಟಮಕ, ಕೋಲಾರ

3ನೇ ವರ್ಷದ ಪುಣ್ಯ ಸ್ಮರಣೆ

ಪೂಜ್ಯ ಶ್ರೀ ಆರ್.ಎಲ್.ಜಾಲಪ್ಪ

19-10-1925 ರಿಂದ 17-12-2021

ನಾಡು ಕಂಡ ಮುತ್ಸದ್ದಿ ರಾಜಕಾರಣಿ,
ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು.
ಹಾಗೂ ಮಾಜಿ ಕೇಂದ್ರ ಮತ್ತು ರಾಜ್ಯ ಸಚಿವರಾದ
ಶ್ರೀ ಆರ್ ಎಲ್ ಜಾಲಪ್ಪ ಅವರ ಪುಣ್ಯ ಸ್ಮರಣೆಯ ದಿನದಂದು
ಅವರಿಗೆ ನಮ್ಮ ಗೌರವ ನಮನ
ನಿಮ್ಮ ವಸ್ತು ನಿಷ್ಠ ಆಲೋಚನೆ, ಸಾಮಾಜಿಕ ಕಾಳಜಿ, ಮಾನವೀಯ
ಅಂತಃಕರಣ ಹಾಗೂ ಅನನ್ಯ ಮಾರ್ಗದರ್ಶನಗಳೇ ನಮಗೆ ಸ್ಫೂರ್ತಿ,
ನಿಮ್ಮ ಗುಣಾತ್ಮಕ ಚಿಂತನೆಗಳ ಸಾಕಾರ ನಮ್ಮ ಗುರಿ

ನೆನಪಿನ ನುಡಿನಮನ

ಶ್ರೀ ಜಿ. ಹೆಚ್. ನಾಗರಾಜ	ಶ್ರೀ ಜಿ. ರಾಜೇಂದ್ರ	ಶ್ರೀ ಕೆ. ಜಿ. ಹನುಮಂತರಾಜು
ಅಧ್ಯಕ್ಷರು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)	ಉಪಾಧ್ಯಕ್ಷರು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)	ಕಾರ್ಯದರ್ಶಿ ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)

ಎಲ್ಲಾ ಟ್ರಸ್ಟಿಗಳು, ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆ (ರಿ), ಟಮಕ, ಕೋಲಾರ.
ಮತ್ತು ಎಲ್ಲಾ ಶೈಕ್ಷಣಿಕ ಮುಖ್ಯಸ್ಥರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳು

ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಕೋಲಾರ
ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ
ಶ್ರೀ ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಕೋಲಾರ
ಶ್ರೀ ಆರ್.ಎಲ್. ಜಾಲಪ್ಪ ಸಮೂಹ ಶಿಕ್ಷಣ ಸಂಸ್ಥೆಗಳು, ದೊಡ್ಡಬಳ್ಳಾಪುರ

‘ಸಾಹಿತ್ಯ ಸಮ್ಮೇಳನಕ್ಕೆ ವಿದೇಶಿ ಕನ್ನಡಿಗರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಹೆಚ್ಚಿನ ವಿದೇಶಿ ಕನ್ನಡಿಗರು ಭಾಗವಹಿಸುತ್ತಿದ್ದಾರೆ.

18 ದೇಶಗಳ 250ಕ್ಕೂ ಹೆಚ್ಚು ವಿದೇಶಿ ಕನ್ನಡಿಗರು ಭಾಗವಹಿಸುತ್ತಿದ್ದಾರೆ. ಪು.ತಿ.ನರಸಿಂಹಾಚಾರ್ ಅವರ ಮಗಳು ಅಲಮೇಲು, ಪರಿಷತ್ತಿನ ಸ್ಥಾಪಕರಲ್ಲೊಬ್ಬರಾದ ಕರ್ಪೂರ ಶ್ರೀನಿವಾಸ ರಾವ್ ಅವರ ಮೊಮ್ಮಗಳು ನಿರ್ಮಲಾ ಕರ್ಪೂರ್, ಕನ್ನಡದ ಮೊಟ್ಟ ಮೊದಲ ಶಬ್ದಕೋಶದ ಕರ್ತೃ ಫರ್ಡಿನೆಂಡ್ ಕಿಟಲ್ ಅವರ ವಂಶಸ್ಥರು ಭಾಗವಹಿಸುವರು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ವಿದೇಶಿ ಕನ್ನಡಿಗರಲ್ಲಿ 21 ಜನರನ್ನು ಸನ್ಮಾನಿಸಲಾಗುವುದು. ಅಮೆರಿಕದ ಕನ್ನಡ ಸಂಘ, ಬಹ್ರೇನ್ ಕನ್ನಡ ಸಂಘ, ಆಸ್ಟ್ರೇಲಿಯಾದ ಮೆಲ್ಬರ್ನ್ ಕನ್ನಡ ಸಂಘಗಳೂ ಸೇರಿವೆ. ಷಿಕಾಗೋ ವಿಶ್ವವಿದ್ಯಾಲಯದಕನ್ನಡಪೀಠವನ್ನುಗೌರವಿಸಲಾಗುವುದು ಎಂದು ಹೇಳಿದ್ದಾರೆ.

ತ್ರಿವೇಣಿ ಅವರ ಕಾದಂಬರಿ ‘ಶರಪಂಜರ’ವನ್ನು ಇಟಲಿ ನಿವಾಸಿ ಕನ್ನಡತಿ ಜಯಾಮೂರ್ತಿ ಅವರು ಇಟಾಲಿಯನ್ ಭಾಷೆಗೆ ಅನುವಾದಿಸಿದ್ದು, ಆ ಕೃತಿ ಸಮ್ಮೇಳನದಲ್ಲಿ ಬಿಡುಗಡೆಯಾಗಲಿದೆ. ತ್ರಿವೇಣಿ ಅವರ ಮಗಳು ಮೀರಾ ಶಂಕರ್ ಸಹ ಸಮ್ಮೇಳನದಲ್ಲಿ ಭಾಗವಹಿಸುವರು. ‘ಸಪ್ತಸಾಗರದಾಚೆಯೆಲ್ಲೋ’ ಕೃತಿ ಸಮ್ಮೇಳನದ ಕೃತಿಗಳ ಮಾಲಿಕೆಯಲ್ಲಿ ಪ್ರಕಟವಾಗುತ್ತದೆ ಎಂದು ತಿಳಿಸಿದ್ದಾರೆ.

‘ಸಮ್ಮೇಳನದಲ್ಲಿ ಮಾಂಸಾಹಾರವೂ ಇರಲಿ’

ಬೆಂಗಳೂರು: ‘ಮಂಡ್ಯದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆಗೆ ಮಾಂಸಾಹಾರವೂ ಇರಬೇಕು. ಈ ಬಗ್ಗೆ ರಾಜ್ಯ ಸರ್ಕಾರ ಮಂಡ್ಯ ಜಿಲ್ಲಾಡಳಿತಕ್ಕೆ ಸೂಚನೆ ನೀಡಬೇಕು’ ಎಂದು ದಲಿತ ಹಕ್ಕುಗಳ ಸಮಿತಿ-ಕರ್ನಾಟಕದ ರಾಜ್ಯ ಸಮಿತಿ ಒತ್ತಾಯಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಮಿತಿಯ ರಾಜ್ಯ ಉಪಾಧ್ಯಕ್ಷ ಬಿ.ರಾಜಶೇಖರಮೂರ್ತಿ, ‘ಸಾಹಿತ್ಯ ಸಮ್ಮೇಳನಗಳಲ್ಲಿ ಆ ಜಿಲ್ಲೆಯ ಸಾಹಿತ್ಯ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಆಚಾರ-ವಿಚಾರಗಳ ಬಗ್ಗೆ ಚರ್ಚೆ-ಸಂವಾದಗಳ ಜೊತೆಗೆ ಆಹಾರ ವೈವಿಧ್ಯವನ್ನು ಪರಿಚಯಿಸುವುದು ವಾಡಿಕೆ. ಆದರೆ ಈ ಹಿಂದಿನ ಸಮ್ಮೇಳನಗಳಲ್ಲಿ ಆಹಾರ ವೈವಿಧ್ಯ ಪರಿಚಯಿಸುವಾಗ ಮಾಂಸಾಹಾರವನ್ನು ಮರೆಮಾಚುತ್ತಾ ಬಂದಿರುವುದು ತಾರತಮ್ಯವಾಗಿಯೇ ಮುಂದುವರೆದಿದೆ’ ಎಂದು ಹೇಳಿದ್ದಾರೆ.

ಫೈಲ್ ನಂ. 16–08/2014–ಡಿಆರ್‌ಸಿ/ಸಿಸಿಪಿಡಿ(ಪಿಟಿ.ವಾಲ್ಯೂ.2)

ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ

ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆ

5ನೇ ಮಹಡಿ, ಪಂ. ದೀನದಯಾಳ್ ಅಂತ್ಯೋದಯ ಭವನ, ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ–03

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಅಡಿಯಲ್ಲಿನ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯು (ಡಿಇಪಿಡಬ್ಲ್ಯುಡಿ) ತಮ್ಮ ಇಲಾಖೆ ಅಡಿಯಲ್ಲಿನ ಸಿಸಿಪಿಡಿ ಕಚೇರಿ ಅಡಿಯಲ್ಲಿನ ಅಂಗವಿಕಲ ವ್ಯಕ್ತಿಗಳ ಮುಖ್ಯ ಆಯುಕ್ತ (ಸಿಸಿಪಿಡಿ) ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಸದರಿ ಹುದ್ದೆಗೆ, ಸರ್ಕಾರಿ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ವೇತನ ಮತ್ತು ಭತ್ಯೆಗಳು ಎಂದರೆ, 7ನೇ ಕೇಂದ್ರ ವೇತನ ಆಯೋಗದ ಪ್ರಕಾರ ಮಾಸಿಕ ರೂ. 2,25,000/– (ನಿಗದಿತ) ಸಂಭಾವನೆ ಅನ್ವಯವಾಗುತ್ತವೆ.

ವಿವರವಾದ ಜಾಹೀರಾತಿಗಾಗಿ, ದಯವಿಟ್ಟು ಇಲಾಖೆಯ https://depwd.gov.in/ ವೆಬ್‌ಸೈಟ್‌ಗೆ ಭೇಟಿ ಕೊಡಿ. **ಈ ಜಾಹೀರಾತು ‘ಎಂಪ್ಲಾಯ್‌ಮೆಂಟ್ ನ್ಯೂಸ್’ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 45 ದಿನಗಳೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.**

(ದೇಬಲ ಭಟ್ಟಾರ್‌ಜೀ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

CBC 38117/11/0035/2425

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ–2024–25–ಓಟಿ–35
ದಿನಾಂಕ : 11–12–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ರಾಯದುರ್ಗ ಡಿಪೋ, ಬಳ್ಳಾರಿ ಡಿಪೋ, ತೋರಣಗಲ್ಲು ಡಿಪೋ, ಹೊಸಪೇಟೆ ಡಿಪೋ ಮತ್ತು ಗದಗ ಡಿಪೋ ಸೆಕ್ಷನ್‌ಗಳಲ್ಲಿ 2 ವರ್ಷಗಳ ಅವಧಿಗೆ ಟಿಆರ್‌ಡಿ ನಿರ್ವಹಣೆ ಮತ್ತು ಬ್ರೇಕ್‌ಡೌನ್ ಚಟುವಟಿಕೆಗಳನ್ನು ಹೊರಗುತ್ತಿಗೆ ನೀಡುವುದು.	ರೂ. 9,88,27,790/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **02–01–2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ
ಹುಬ್ಬಳ್ಳಿ

ಪಿಯುಬಿ/625/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಶ್ರೀ ಸಿದ್ಧಗಂಗಾ ಸಿರಿ’ ಪ್ರಶಸ್ತಿ ಸ್ವೀಕರಿಸಿ, ರಾಜಕಾರಣಿಗಳ ಕುಟುಕಿದ ಕುಂ. ವೀರಭದ್ರಪ್ಪ

‘ಸ್ವಾಮೀಜಿ ವೇಷದವರ ಬಯಲಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಜವಾಗಿ ಬಯಲಾಟ ವಾಡುವವರು ಸ್ವಾಮೀಜಿ ವೇಷದಲ್ಲಿರುವ ರಾಜಕಾರಣಿಗಳು. ಸ್ವಾಮೀಜಿಗಳ ವೇಷದಲ್ಲಿ ರಾಜಕಾರಣಿಗಳಂತೆ ವರ್ತಿಸುವವರು ಬಹಳ ಅಪಾಯಕಾರಿ’ ಎಂದು ಕಾದಂಬರಿಕಾರ ಕುಂ. ವೀರಭದ್ರಪ್ಪ ಹೇಳಿದರು.

ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ವತಿಯಿಂದ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ‘ಶ್ರೀ ಸಿದ್ಧಗಂಗಾ ಸಿರಿ’ ಪ್ರಶಸ್ತಿ ಸ್ವೀಕರಿಸಿ ಸೋಮವಾರ ಅವರು ಮಾತನಾಡಿದರು.

‘ರಾಜಕಾರಣಿಗಳಿಂತ ಹೆಚ್ಚಾಗಿ ರಾಜಕಾರಣ ಮಾಡುವ ಸ್ವಾಮೀಜಿಗಳು, ಬಸವಣ್ಣನ ಹೆಸರು ಹೇಳಬಾರದು. ಕೂಡಲ ಸಂಗಮ ಎಂಬ ಹೆಸರನ್ನು ಬಳಸಬಾರದು. ಬಲಿಷ್ಠ ಸಮುದಾಯಗಳಿಗೆ ಮೀಸಲಾತಿ ಕೇಳುವುದು ಸಂವಿಧಾನಕ್ಕೆ ಬಗೆಯುವ ದ್ರೋಹ. ಹಿಂದುಳಿದ ವರ್ಗಗಳಿಗೂ ಮಾಡುವ ದ್ರೋಹ. ಮೀಸಲಾತಿ ಕೇಳುವ ಇಂತಹವರನ್ನು ಎಲ್ಲರೂ ವಿರೋಧಿಸಬೇಕು’ ಎಂದರು.

‘ತಿರುಪತಿಗೆ ಹೋಗಿ ₹60 ಲಕ್ಷದ ಕಿರೀಟ ಕೊಟ್ಟವರು ಜೈಲಿನಲ್ಲಿ ಮುದ್ದೆ ಮುರಿಯುತ್ತಿದ್ದಾರೆ. ಹುಂಡಿಗಳಿಗೆ ಹಣ ಹಾಕುವ ಬದಲು ಬಡ ಮಕ್ಕಳ ಭವಿಷ್ಯಕ್ಕೆ ನೆರವಾಗಬೇಕು. ಬಡವರನ್ನು ದತ್ತು ತೆಗೆದುಕೊಂಡು ಅನ್ನ ಹಾಕಬೇಕು. ರಾಜಕಾರಣಿಗಳು ತಮ್ಮ ಮಕ್ಕಳನ್ನು ಮಠಗಳಿಗೆ ಸೇರಿಸಿ, ಅಲ್ಲಿ ಶಿಕ್ಷಣ ಕೊಡಿಸಬೇಕು’ ಎಂದು ಹೇಳಿದರು.

‘ತುಮಕೂರು ವಿಶ್ವವಿದ್ಯಾಲಯಕ್ಕೆ ‘ಶಿವಕುಮಾರ ಸ್ವಾಮೀಜಿ’ ಅವರ ಹೆಸರಿಡಬೇಕು. ಬೇರೆಯವರಿಗೆ ಭಾರತರತ್ನ ಕೊಟ್ಟಮೇಲೆ ಶಿವಕುಮಾರ ಸ್ವಾಮೀಜಿ ಅವರಿಗೆ ಕೊಡುವ ಅಗತ್ಯವಿಲ್ಲ. ಅವರು ವಿಶ್ವರತ್ನ, ರತ್ನಗಳನ್ನು ಸೃಷ್ಟಿಸಿದವರು’ ಎಂದರು.

‘ಜನಮನ ತಲುಪದ, ಜನರ ಮತ ಪರಿವರ್ತನೆ ಮಾಡದ ಸಾಹಿತ್ಯ ತನ್ನ ನೆಲೆ ಕಳೆದುಕೊಳ್ಳುತ್ತದೆ’ ಎಂದು ಜಾನಪದ ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ ಅಧ್ಯಕ್ಷ ಎಲ್. ರೇವಣಸಿದ್ದಯ್ಯ ಅವರು ಸಿದ್ಧಗಂಗಾಮಠದಲ್ಲಿ ಶಿಕ್ಷಣ ಪಡೆದ ದಿನಗಳನ್ನು ಮೆಲುಕು ಹಾಕಿದರು.

ತುಮಕೂರು ಸಿದ್ಧಗಂಗಾ ಮಠದ ಶಿವಸಿದ್ದೇಶ್ವರ ಕಿರಿಯ ಸ್ವಾಮೀಜಿ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ, ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ ಭಾಗವಹಿಸಿದ್ದರು.

ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಲಂಡನ್ ನೀಡುವ ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿಯನ್ನು ಸಾಹಿತಿ ಕುಂ. ವೀರಭದ್ರಪ್ಪ ಅವರಿಗೆ ಬೆಂಗಳೂರಿನಲ್ಲಿ ಸೋಮವಾರ ನೀಡಲಾಯಿತು. ಕೆ.ವಿ. ನಾಗರಾಜಮೂರ್ತಿ, ಎಲ್.ರೇವಣಸಿದ್ಧಯ್ಯ, ಗೊ.ರು. ಚನ್ನಬಸಪ್ಪ, ಸಿದ್ಧಗಂಗಾ ಕ್ಷೇತ್ರದ ಕಿರಿಯ ಸ್ವಾಮೀಜಿ ಶಿವಸಿದ್ಧೇಶ್ವರ ಮಹಾಸ್ವಾಮಿ, ಎಸ್. ಮಹಾದೇವಯ್ಯ, ಎಂ ಸದಾಶಿವಪ್ಪ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

‘ಶಿಕ್ಷಕ ಕೆಲಸ ಸಿಗದಿದ್ದಾಗ ಸಾಯಲು ನಿರ್ಧರಿಸಿದ್ದೆ’

‘ನನ್ನ 19ನೇ ವರ್ಷದಲ್ಲಿ ಸಿದ್ಧಗಂಗಾ ಮಠದಲ್ಲಿ ಶಿಕ್ಷಕನಾಗಲು ಬಯಸಿ ಬಂದಾಗ ಸಂದರ್ಶನದಲ್ಲಿ ವಿಫಲನಾಗಿದ್ದೆ. 19ರ ಮಗ್ಗಿ ಹೇಳಿ ಎಂದಿದ್ದರು, ನನಗೆ ಬರೊಲ್ಲ ಎಂದಿದ್ದೆ. 18 ಅಥವಾ 17ರ ಮಗ್ಗಿ ಹೇಳಿ ಅಂದರು. ಅದೂ ಬರೊಲ್ಲ ಎಂದಿದ್ದೆ. ಹೀಗಾಗಿ ಎರಡನೇ ಪಟ್ಟಿಯಲ್ಲಿಯೂ ನಾನು ಆಯ್ಕೆಯಾಗಿರಲಿಲ್ಲ. ಕ್ಯಾತಸಂದ್ರ ರೈಲು ನಿಲ್ದಾಣದಲ್ಲಿ ರೈಲಿಗೆ ಸಿಕ್ಕು ಸಾಯಬೇಕು ಅಂದುಕೊಂಡಿದ್ದೆ’ ಎಂದು ಸಿದ್ಧಗಂಗಾ ಮಠಕ್ಕೆ ಬಂದ ಪ್ರಥಮ ಸನ್ನಿವೇಶವನ್ನು ನೆನಪಿಸಿಕೊಂಡ ಕುಂ. ವೀರಭದ್ರಪ್ಪ ಭಾವುಕರಾದರು.

‘ಶಿವಕುಮಾರ ಸ್ವಾಮೀಜಿ ಶಿಫಾರಸು ಮಾಡಿದರೆ ಕೆಲಸ ಸಿಗುತ್ತದೆ ಎಂದು ಯಾರೋ ಹೇಳಿದರು. ಸ್ವಾಮೀಜಿ ಮುಂದೆ ಷಟ್ಪದಿಗಳನ್ನು ಹೇಳಿದಾಗ ಸಂತಸಗೊಂಡು, ಶಿಫಾರಸು ಮಾಡಿ ಶಿಕ್ಷಕ ಹುದ್ದೆ ಕೊಡಿಸಿದರು’ ಎಂದರು. ‘ಮಠದಲ್ಲಿದ್ದಾಗ ಬೆಳಿಗ್ಗೆ ಸ್ವಾಮೀಜಿ ಬಂದಾಗಲೂ ಎಚ್ಚರಗೊಳ್ಳದ ಸಂದರ್ಭದಲ್ಲಿ ಪಾದುಕೆಯಿಂದ ನನ್ನ ಹಣೆಗೆ ಹೊಡೆದಿದ್ದರು. ಆ ನಂತರ ಹಲವರು ನನ್ನ ಹಣೆ ಮುಟ್ಟಿ ನಮಸ್ಕರಿಸಿ, ಎಂತಹ ಅದೃಷ್ಟ ಎಂದಿದ್ದರು’ ಎಂದು ನೆನಪಿಸಿಕೊಂಡರು.

‘ಪ್ರಜಾವಾಣಿ’ಗೆ ಸ್ವಾಮೀಜಿ ಶಿಫಾರಸು ಪತ್ರ!

‘ಆರಂಭದ ದಿನಗಳಲ್ಲಿ ನಾನು ಕವಿತೆಗಳನ್ನು ಬರೆಯುತ್ತಿದ್ದೆ. ನನ್ನ ಕವಿತೆ ‘ಪ್ರಜಾವಾಣಿ’ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಆಸೆ ಇತ್ತು. ಇದಕ್ಕಾಗಿ ಶಿವಕುಮಾರ ಸ್ವಾಮೀಜಿ ಅವರನ್ನು ಕೇಳಿ ಕೊಂಡೆ. ನನ್ನ ಆಶಯದಂತೆ ಅವರು ‘ಪ್ರಜಾವಾಣಿ’ ಪತ್ರಿಕೆಗೆ ಕವಿತೆ ಪ್ರಕಟಿಸಲು ಸಂಪಾದಕರಿಗೆ ಶಿಫಾರಸು ಪತ್ರ ಬರೆದರು. ಆ ಕವಿತೆ ಪ್ರಕಟವಾಗಿದೆಯೇ ಎಂಬುದನ್ನು ಕ್ಯಾತಸಂದ್ರದಲ್ಲಿದ್ದ ವೆಂಕಟೇಶ್ವರ ಸಲೂನ್‌ಗೆ ಬರುತ್ತಿದ್ದ ಪತ್ರಿಕೆ ನೋಡುತ್ತಿದ್ದೆ. ಆ ಸಂದರ್ಭದಲ್ಲಿ ಯು.ಆರ್. ಅನಂತಮೂರ್ತಿ ಅವರು ‘ನವಿಲು’ ಕಥೆ ಪ್ರಕಟವಾಗಿತ್ತು. ಅದನ್ನು ಹತ್ತಾರು ಬಾರಿ ಓದಿದ್ದೆ. ಅದರಿಂದಲೇ ನಾನು ಕಥೆಗಾರನಾದೆ’ ಎಂದು ಕುಂ. ವೀರಭದ್ರಪ್ಪ ಅವರು ಸ್ಮರಿಸಿಕೊಂಡರು.

ಬಾಣಂತಿಯರ ಸಾವು: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ, ಬೆಳಗಾವಿ ಸೇರಿದಂತೆ ರಾಜ್ಯದ ವಿವಿಧೆಡೆ ಸಂಭವಿಸಿರುವ ಬಾಣಂತಿಯರ ಸಾವಿನ ಕುರಿತು ನ್ಯಾಯಾಂಗ ತನಿಖೆ ನಡೆಸುವಂತೆ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಹಿಂದಿನ ಬಿಜೆಪಿ ಸರ್ಕಾರದ ಅವಧಿಯೂ ಸೇರಿದಂತೆ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಬಾಣಂತಿಯರು ಮೃತಪಟ್ಟಿದ್ದಾರೆ ಎಂದು ಮುಖ್ಯಮಂತ್ರಿಯವರು ಸದನಕ್ಕೆ ತಿಳಿಸಿದ್ದಾರೆ. ಬಿಜೆಪಿಯ ಆಳ್ವಿಕೆಯಲ್ಲೂ ಬಾಣಂತಿಯರು ಆಸ್ಪತ್ರೆಗಳಲ್ಲಿ ಜೀವ ಬಿಟ್ಟಿದ್ದಾರೆ ಎಂಬುದು ಕಾಂಗ್ರೆಸ್ ಸರ್ಕಾರವನ್ನು ಯಾವ ರೀತಿಯಿಂದಲೂ ಸಮರ್ಥಿಸಿದಂತೆ ಆಗುವುದಿಲ್ಲ. ಬದಲಿಗೆ, ಎರಡೂ ಪಕ್ಷಗಳಿಗೆ ಜನರ ಜೀವದ ಕುರಿತು ಇರುವ ನಿಷ್ಕಾಳಜಿಯನ್ನು ಎತ್ತಿ ತೋರಿಸುತ್ತದೆ’ ಎಂದು ದೂರಿದ್ದಾರೆ.

‘ಬಳ್ಳಾರಿಯ ಘಟನೆಯೂ ಸೇರಿದಂತೆ ರಾಜ್ಯದಲ್ಲಿ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕು. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು’ ಎಂದು ಆಗ್ರಹಿಸಿದ್ದಾರೆ.

ಆದಾಯ ತೆರಿಗೆ ಪ್ರಧಾನ ಮುಖ್ಯ ಆಯುಕ್ತರ ಕಾರ್ಯಾಲಯ

ಸಿ.ಆರ್.ಬಿಲ್ಡಿಂಗ್, ಐ.ಪಿ.ಎಸ್ಟೇಟ್, ನವದೆಹಲಿ–110002.

ಎಫ್.ನಂ. ಅಡಿಷನಲ್. ಸಿಐಟಿ(ಎಚ್‌ಕ್ಯೂ)(ಕೋ.ಆರ್ಡಿ.)/142(2ಎ)/2024–25/ ದಿನಾಂಕ: .12.2024

ಅರ್ಜಿಗಾಗಿ ಅಧಿಸೂಚನೆ

ಆದಾಯ ತೆರಿಗೆ ಇಲಾಖೆ, ನವದೆಹಲಿ ಇವರು ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 142(2ಎ) ಅಡಿಯಲ್ಲಿ ವಿಶೇಷ ಆಡಿಟ್ ಕೈಗೊಳ್ಳುವ ಉದ್ದೇಶಕ್ಕೆ ತೊಡಗಿಸಿಕೊಳ್ಳುವುದಕ್ಕಾಗಿ, ಅರ್ಹ ಸಿಎ ಸಂಸ್ಥೆಗಳಿಂದ/ಸಂಘಟನೆಗಳಿಂದ/ಎಲ್‌ಎಲ್‌ಪಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ನಿಯೋಜನೆಯು 01.04.2025 ರಿಂದ ಮತ್ತು 31.03.2028 ರವರೆಗೆ ಜಾರಿಯಲ್ಲಿರುತ್ತದೆ.

ಸದರಿ ನಿಯೋಜನೆಯ ಮಾನದಂಡಗಳು ಕೆಳಗಿನಂತಿರುತ್ತವೆ:

1. ಸಿಎ ಸಂಸ್ಥೆಗಳು/ಸಂಘಟನೆಗಳು/ಎಲ್‌ಎಲ್‌ಪಿಗಳು 31.03.2024 ಕ್ಕೆ ಕನಿಷ್ಠ ಐದು ವರ್ಷಗಳ ಮುನ್ನ ಸ್ಥಾಪನೆಗೊಂಡಿರಬೇಕು.
2. ಸಿಎ ಸಂಸ್ಥೆಗಳ/ಸಂಘಟನೆಗಳ/ಎಲ್‌ಎಲ್‌ಪಿಗಳ ಒಟ್ಟಾರೆ ವೃತ್ತಿಪರ ವ್ಯವಹಾರ/ನಿವ್ವಳ ಸ್ವೀಕೃತಿಗಳು, ಕಳೆದ ಹಣಕಾಸು ವರ್ಷ ಹ.ವ. 2023–24 ಸೇರಿದಂತೆ ಹಿಂದಿ ಐದು ವರ್ಷಗಳಲ್ಲಿ ತಲಾ ಕನಿಷ್ಠ ರೂ. 1 ಕೋಟಿ ಆಗಿರತಕ್ಕದ್ದು.
3. ಕಳೆದ ಮೂರು ಹಣಕಾಸು ವರ್ಷಗಳಲ್ಲಿ, ಎಂದರೆ ಹ.ವ. 2021–22 ರಿಂದ ಆರಂಭಗೊಂಡಂತೆ, ಸಿಎ ಸಂಸ್ಥೆಗಳು/ಸಂಘಟಣೆ/ಎಲ್‌ಎಲ್‌ಪಿಗಳು ಕಡ್ಡಾಯವಾಗಿ ಕನಿಷ್ಠ ರೂ. 100 ಕೋಟಿ ವ್ಯವಹಾರವುಳ್ಳ ಐದು ವಿಭಿನ್ನ ಕಂಪನಿಗಳ ಆಡಿಟ್ ಮಾಡಿರತಕ್ಕದ್ದು.
4. ಸಿಎ ಸಂಸ್ಥೆಗಳ/ಸಂಘಟಣೆಗಳ/ಎಲ್‌ಎಲ್‌ಪಿಗಳ ಸಿಬ್ಬಂದಿ ಸಾಮರ್ಥ್ಯ ಕನಿಷ್ಠ 20 ಜನ ಆಗಿರಬೇಕು, ಈ ಸಿಬ್ಬಂದಿಯಲ್ಲಿ ಹಿಂದಿನ ಹಣಕಾಸು ವರ್ಷದಲ್ಲಿ ಕನಿಷ್ಠ 5 ಚಾರ್ಟರ್ಡ್ ಅಕೌಂಟಂಟ್‌ರನ್ನು ಒಳಗೊಂಡಿರತಕ್ಕದ್ದು. (ಹ.ವ. 2023–24)
5. ಸಿಎ ಸಂಸ್ಥೆಗಳು/ಸಂಘಟಣೆಗಳು/ಎಲ್‌ಎಲ್‌ಪಿಗಳು ಅಥವಾ ಅವುಗಳ ಸದಸ್ಯರು ಯಾರೂ ಕೂಡ ಯಾವುದೇ ನ್ಯಾಯಾಯದಿಂದ ದೋಷಿಗಳು ಎಂದು ನಿರೂಪಿಸಲ್ಪಟ್ಟಿರಬಾರದು.
6. ಸಿಎ ಸಂಸ್ಥೆಗಳು/ಸಂಘಟಣೆಗಳು/ಎಲ್‌ಎಲ್‌ಪಿಗಳು ಅಥವಾ ಅವುಗಳ ಸದಸ್ಯರು ಯಾವುದೇ ವೃತ್ತಿಪರ ದುರ್ನಡತೆಯಲ್ಲಿ ಒಳಗಾಗಿರಕೂಡದು ಮತ್ತು ಪರಿಶೋಧನೆಯಲ್ಲಿನ ಅನಿಯಮಿತತೆಗೆ ಸಂಬಂಧಿಸಿದಂತೆ ಚಾರ್ಟರ್ಡ್ ಅಕೌಂಟಂಟ್ಸ್ ಸಂಸ್ಥೆಯ ಎದುರು, ಚಾರ್ಟರ್ಡ್ ಅಕೌಂಟಂಟ್ಸ್ ಕಾಯ್ದೆ, 1949ರ ಸೆಕ್ಷನ್ 21ರ ಅಡಿಯಲ್ಲಿ ಯಾವುದೇ ದೂರನ್ನು ಎದುರಿಸಿರಬಾರದು.

ಈ ಕಚೇರಿಗೆ ಸಂದಾಯವಾಗುವ ಅರ್ಜಿಗಳನ್ನು ಪರಿಶೀಲನಾ ಸಮಿತಿಯಿಂದ ಪರೀಕ್ಷಿಸಲಾಗುತ್ತದೆ ಮತ್ತು ಸಿಎ ಸಂಸ್ಥೆಗಳ/ಸಂಘಟಣೆಗಳ/ಎಲ್‌ಎಲ್‌ಪಿಗಳ ನಿಯೋಜನೆಗೆ ಸಂಬಂಧಿತ ಅಂತಿಮ ತೀರ್ಮಾನವು ಇಲಾಖೆಯದ್ದಾಗಿರುತ್ತದೆ. ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವ ಸಮಯದಲ್ಲಿ, ಅರ್ಹಗೊಳ್ಳುವ ಸಿಎ ಸಂಸ್ಥೆಗಳು/ಸಂಘಟಣೆಗಳು/ಎಲ್‌ಎಲ್‌ಪಿಗಳು ಈ ಹಿಂದೆ ಆಡಿಟರ್‌ಗಳಾಗಿ ಮತ್ತು ವಿಶೇಷ ಆಡಿಟರ್‌ಗಳಾಗಿ ಮಾಡಿರುವ ಕೆಲಸದ ಗುಣಮಟ್ಟ ಮತ್ತು ತೀವ್ರತೆಯನ್ನು ಹಾಗೂ ಸಾಮಾನ್ಯ ಪ್ರತಿಷ್ಠೆಯನ್ನು ಕೂಡ ನಿರ್ಧರಣಾ ಸಮಿತಿಯಿಂದ ಪರಿಗಣಿಸಲಾಗುತ್ತದೆ. ಅರ್ಜಿದಾರರು ಕಳೆದ 5 ವರ್ಷಗಳಲ್ಲಿ ಕೈಗೊಂಡಿರುವ ಪ್ರಮುಖ ಆಡಿಟ್/ವಿಶೇಷ ಆಡಿಟ್ ಕೆಲದ ಕುರಿತಂತೆ ಒಂದು ವಿವರಣೆಯನ್ನು ಬರೆದು (ಸುಮಾರು 1000 ಶಬ್ದಗಳಲ್ಲಿ) ಸಲ್ಲಿಸಬಹುದು.

ಈ ಮೇಲ್ಕಂಡ ಮಾನದಂಡಗಳನ್ನು ಪೂರೈಸಬಲ್ಲ ಸಿಎ ಸಂಸ್ಥೆಗಳು/ಸಂಘಟಣೆಗಳು/ಎಲ್‌ಎಲ್‌ಪಿಗಳು, ಮೇಲೆ ಉಲ್ಲೇಖಿಸಲಾಗಿರುವ (1) ರಿಂದ (6) ವರೆಗಿನ ಷರತ್ತುಗಳನ್ನು ಪೂರೈಕೆಯನ್ನು ಉಲ್ಲೇಖಿಸಿರುವ ತಮ್ಮ ಅರ್ಜಿಗಳನ್ನು ದಾಖಲಾತಿ ಪುರಾವೆಗಳ ಸಮೇತ (ಪ್ರಮಾಣೀಕರಿಸಲಾದ ನೋಟರಿ ಅಫಿಡವಿಟ್ ಜೊತೆಗೆ) ಡಿಸಿಐಟಿ ಕಾರ್ಯಾಲಯ (ಹೆಡ್ ಕ್ವಾಟರ್) (ಕೋ.ಆರ್ಡ್–1), ನವದೆಹಲಿ ಇವರ ಕೊಠಡಿ ಸಂ. 361, 3ನೇ ಮಹಡಿ, ಸೆಂಟ್ರಲ್ ರೆವೆನ್ಯೂ ಬಿಲ್ಡಿಂಗ್, ಐಪಿ ಎಸ್ಟೇಟ್, ನವದೆಹಲಿ–110002 ವಿಳಾಸಕ್ಕೆ ರವಾನಿಸಬೇಕು ಅಥವಾ delhi.dcit.hq.coord1@incometax.gov.in ಇಮೇಲ್ ವಿಳಾಸಕ್ಕೆ ಸಲ್ಲಿಸಬೇಕು. ಯಾವುದೇ ಪೂರಕ ದಾಖಲಾತಿ ಪುರಾವೆಗಳಿಲ್ಲದಿರುವ ಅರ್ಜಿಗಳನ್ನು ನಿಯೋಜನೆಗೆ ಪರಿಗಣಿಸಲಾಗುವುದಿಲ್ಲ. incometaxdelhi.org ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈಗಾಗಲೇ ನಿಯೋಜನೆಗೊಂಡಿರುವ ಸಿಎ ಸಂಸ್ಥೆಗಳು/ಸಂಘಟಣಗಳು/ಎಲ್‌ಎಲ್‌ಪಿ’ಗಳು ಕೂಡ ಮತ್ತೊಮ್ಮೆ ಅರ್ಜಿ ಸಲ್ಲಿಸಿ 31.03.2028 ರವರೆಗಿನ ನಿಯೋಜನೆಗೆ ಮನವಿ ಮಾಡಿಕೊಳ್ಳಬೇಕು, ಇಲ್ಲವಾದಲ್ಲಿ ಅವರ ಪ್ರಸಕ್ತ ನಿಯೋಜನೆ ಆದೇಶದಲ್ಲಿ ಉಲ್ಲೇಖಿಸಲಾಗಿರುವ ದಿನಾಂಕದ ಬಳಿಕ, ಅಂತಹವರ ನಿಯೋಜನೆಯು ಸ್ಥಗಿತಗೊಳ್ಳುತ್ತದೆ. ಆದಾಯ ತೆರಿಗೆ ನಿಯಮಗಳು, 1962ರ ನಿಯಮ 14ಬಿ ಮೂಲಕ ವಿಶೇಷ ಆಡಿಟ್‌ನ ಸಂಭಾವನೆಯು ನಿಯಂತ್ರಣಕ್ಕೊಳಪಡುತ್ತದೆ.

ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ ಎರಡು ವಾರಗಳ ಅವಧಿಯು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ರಾಬಿನ್ ಕುಮಾರ್
ಡಿ/ಎಸಿಐಟಿ(ಹೆ.ಕ್ವಾ.)(ಕೋ.ಆರ್ಡ್)–1, ದೆಹಲಿ
ಆದಾಯ ತೆರಿಗೆ ಪ್ರಧಾನ ಮುಖ್ಯ ಆಯುಕ್ತರು (ಸಿಸಿಎ), ದೆಹಲಿ ಪರವಾಗಿ

ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 142(2ಎ) ಅಡಿಯಲ್ಲಿ ವಿಶೇಷ ಆಡಿಟ್‌ಗಾಗಿ ಸಿಎ ಸಂಸ್ಥೆ/ಸಂಘಟಣೆ/ಎಲ್‌ಎಲ್‌ಪಿ ನಿಯೋಜನೆಗಾಗಿ ಅರ್ಜಿ

1.	ಸಂಸ್ಥೆಯ ಹೆಸರು	
2.	ಸಂಸ್ಥೆಯ ಐಸಿಎಐ ನೋಂದಣಿ ಸಂಖ್ಯೆ	
3.	ಪ್ರಸಕ್ತ ಸ್ಥಿತಿಗತಿ	
4.	ಪ್ಯಾನ್ ವಾರ್ಡ್, ಸರ್ಕಲ್	
5.	ಕಚೇರಿಯ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ಐಡಿ	
6.	ಸಂಸ್ಥೆಯು ಎಎನ್ ಎಫ್‌ಸಿಎ ಪಡೆದಾಗಿನಿಂದಿನ ದಿನಾಂಕ	
7.	ಸಂಸ್ಥೆ/ಎಲ್‌ಎಲ್‌ಪಿ ಸಂಸ್ಥಾಪನೆಗೊಂಡ ದಿನಾಂಕ	
8.	ಸಿಎ ಹೆಸರು ಮತ್ತು ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇಮೇಲ್ ಐಡಿ	
9.	ಪೂರ್ಣಾವಧಿ ಪಾಲುದಾರರ ವಿವರ (ಅರ್ಹತೆಗಳು ಮತ್ತು ಅನುಭವ ಉಲ್ಲೇಖಿಸಿರುವ ಪ್ರತ್ಯೇಕ ಪುಟ)	
10.	ಸಂಸ್ಥೆಯ ಅರೆಕಾಲಿಕ ಪಾಲುದಾರರ ವಿವರಗಳು	
11.	ಉದ್ಯೋಗಿಗಳ ವಿವರ ಹೆಸರು ಮತ್ತು ಫೋನ್ ನಂ.	
12.	ಸಂಸ್ಥೆಯಲ್ಲಿ ನಿಯೋಜಿತ ಪೂರ್ಣಾವಧಿ ಆಡಿಟ್ ಸ್ಟಾಫ್‌ನ ಸಂಖ್ಯೆ (ಎ) ಆರ್ಟಿಕಲ್ಸ್/ಆಡಿಟ್ ಕ್ಲರ್ಕ್ಸ್ (ಹೆಸರು ಮತ್ತು ಫೋನ್ ನಂ.) (ಬಿ) ಇತರೆ ಆಡಿಟ್ ಸ್ಟಾಫ್ (ಹೆಸರು ಮತ್ತು ಫೋನ್ ನಂ.)	
13.	ಪಾಲುದಾರರು ಹೊಂದಿರುವ ನಿರ್ದೇಶಕತ್ವದ ವಿವರಗಳು	
14.	ಸಿಎ ಸಂಸ್ಥೆ/ಸಂಘಟಣೆ/ಎಲ್‌ಎಲ್‌ಪಿ’ಯ ವಹಿವಾಟು ಹ.ವ. 2019–20 ಹ.ವ. 2020–21 ಹ.ವ. 2021–22 ಹ.ವ. 2022–23 ಹ.ವ. 2023–24	ದಾಖಲಾತಿ ಪುರಾವೆಗಳ ಸಮೇತ (ಐಟಿಆರ್, ಆಡಿಟ್ ರಿಪೋರ್ಟ್ ಮತ್ತು ಇನ್ನಿತರೆ ಇಂತಹ ಯಾವುದೇ ದಾಖಲಾತಿ)
15.	ಕೈಗೊಂಡಿರುವ ಆಡಿಟ್ ವಿವರಗಳು: ಹ.ವ. 2021–22 ಹ.ವ. 2022–23 ಹ.ವ. 2023–24	ಅಂತಹ ಪ್ರತಿ ಸಂಸ್ಥೆಯ ವಿವರಗಳ ಜೊತೆಗೆ ಅಂತಹ ಪ್ರತಿ ಕಂಪನಿಗಳ ವಹಿವಾಟನ್ನು ಸಾಬೀತುಪಡಿಸಬಲ್ಲ ದಾಖಲಾತಿ ಪುರಾವೆಗಳ ಸಮೇತ (ಐಟಿಆರ್, ಆಡಿಟ್ ರಿಪೋರ್ಟ್ ಮತ್ತು ಇನ್ನಿತರೆ ಇಂತಹ ಯಾವುದೇ ದಾಖಲಾತಿ)
16.	ಸಿಎ ಸಂಸ್ಥೆ/ಸಂಘಟಣೆ/ಎಲ್‌ಎಲ್‌ಪಿ’ಯು, ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 142(2ಎ) ಅಡಿಯಲ್ಲಿ ಕೈಗೊಂಡಿರುವ ಎಲ್ಲಾ ವಿಶೇಷ ಆಡಿಟ್‌ಗಳ ವಿವರ	
17.	ಸಿಎ ಸಂಸ್ಥೆ/ಸಂಘಟಣೆ/ಎಲ್‌ಎಲ್‌ಪಿ’ಯು ಯಾವುದೇ ವೃತ್ತಿಪರ ದುರ್ನಡತೆಯಲ್ಲಿ ಒಳಗೊಂಡಿದೆಯ ಅಥವಾ ಆಡಿಟ್‌ನಲ್ಲಿನ ಅನಿಯಮಿತತೆಯ ಕುರಿತಾಗಿ ಐಸಿಎಐ ಸಮ್ಮುಖದಲ್ಲಿ ಚಾರ್ಟರ್ಡ್ ಅಕೌಂಟಂಟ್ಸ್ ಕಾಯ್ದೆಯ ಸೆಕ್ಷನ್ 21ರ ಅಡಿಯಲ್ಲಿ ಯಾವುದೇ ದೂರನ್ನು ಎದುರಿಸಿದೆಯೆ?	
18.	ಸಂಸ್ಥೆಯಾಗಲಿ ಅಥವಾ ಸಂಸ್ಥೆಯ ಪಾಲುದಾರರಾಗಲಿ ಐಟಿ ಕಾಯ್ದೆ ಅಡಿಯಲ್ಲಿ ಅಥವಾ ಇನ್ನಾವುದೇ ನ್ಯಾಯಾಲಯದ ಅಡಿಯಲ್ಲಿ ತನ್ನ ಕಾರ್ಯ ನಿರ್ವಹಣೆಯಲ್ಲಿ ದೋಷಿ ಎಂದು ಸಾಬೀತಾಗಿದೆಯೆ?	

ಸ್ವಯಂ ಘೋಷಣೆ

ಸಿಎ ಸಂಸ್ಥೆ/ಸಂಘಟಣೆ/ಎಲ್‌ಎಲ್‌ಪಿ’ಯ ಕೆಳಕಂಡ ಪಾಲುದಾರರಾದ ನಾವು, ಜಂಟಿಯಾಗಿ ಮತ್ತು ಗಂಭೀರವಾಗಿ ಪರಿಶೀಲನೆಗೊಳಪಟ್ಟು ಈ ಮೂಲಕ ಘೋಷಿಸುವುದು ಏನೆಂದರೆ,

1. ಇಲ್ಲಿ ಮೇಲೆ ನಿಡಲಾಗಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆ ಮತ್ತು ಒಂದು ವೇಳೆ ಈ ಮೇಲ್ಕಂಡ ಹೇಳಿಕೆಗಳಲ್ಲಿರುವಂತೆ ಅರ್ಜಿಯಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಮಾಹಿತಿಯು ಸರಿಯಾಗಿಲ್ಲ ಅಥವಾ ಸುಳ್ಳು ಮಾಹಿತಿಯಾಗಿದೆ ಅಥವಾ ವಾಸ್ತವ ಮಾಹಿತಿಯನ್ನು ಅಡಗಿಸಲಾಗಿದೆ ಎಂದು ಸಾಬೀತುಗೊಂಡಲ್ಲಿ, ನಮ್ಮ ಸಂಸ್ಥೆಯು ನಿಯೋಜನೆಗೆ ಅರ್ಹವಾಗುವುದಿಲ್ಲ ಮತ್ತು ಸಿಎ ಕಾಯ್ದೆ, 1949ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ಇನ್ನಿತರೆ ನಿಯಮಗಳ ಅಡಿಯಲ್ಲಿ ಶಿಸ್ತುಕ್ರಮಕ್ಕೆ ಬದ್ಧರಾಗಿರುತ್ತೇವೆ.
2. ನಾವುಗಳು ವೈಯಕ್ತಿಕವಾಗಿ ಕಾರ್ಯನಿರತರಾಗಿರುವುದಿಲ್ಲ ಅಥವಾ ಸಿಎ ಕಾಯ್ದೆ, 1949ರ ಸೆಕ್ಷನ್ 2(2) ಅಡಿಯಲ್ಲಿ ಕಾರ್ಯನಿರತವೆಂದು ಪರಿಗಣಿಸಲ್ಪಡುವ ಇನ್ನಾವುದೇ ಚಟುವಟಿಕೆಯಲ್ಲಿ ತೊಡಗಿಕೊಂಡಿರುವುದಿಲ್ಲ.

(ಪಾಲುದಾರರು)

CBC 15403/11/0013/2425

Form No. 18
Notice for appearance in Appeals Order 41 Rule 14 CPC, and Rules 1,2.4 and 11 of Chapter IV Karnataka High Court Rules
IN THE HIGH COURT OF KARNATAKA AT BENGALURU

MFA No. 3708/2023 (SMA/DB)

Appellant: SRI SAZEED PARVEJ
AGED ABOUT 37 YEARS, S/O SHAMSHER ALI, R/AT NO.89, 2ND FLOOR, 8TH CROSS. MADINA NAGAR, MANGAMMANA PALYA. BANGALORE SOUTH, BOMMANAHALLI, BANGALORE-560068.
ALSO AVAILABLE AT: NO.3046. TVH APARTMENT, OMR PADUR, CHENNAI-603103.
CURRENTLY RESIDING AT: NO.011. DIVYA JYOTI ROYAL COUNTY, MANIPAL COUNTY ROAD, SINGASANDRA BANGALORE-560068.
By SRI. C.V. SRINIVASA ADV. **V/s**

Respondent: SMT FARZANATAJ NISAR KHAN
AGED ABOUT 32 YEARS, W/O SAZEED PARVEJ, D/O NISAR KHAN. R/AT 4A CRS. NASASOFT COMPUTER ACADEMY, 178, VV BADAVANE. M V EXTENSION, HOSKOTE, BENGALURU RURAL-562114.
ALSO AVAILABLE AT APARTMENT NO.5 E, BLOCK-1, REAL VALUE NEEL KAMAL APARTMENTS, OLD MAHABALIPURAM ROAD, KAZHIPATTUR, CHENNAI-603103. TAMIL NADU.
ALSO AVAILABE AT SENIOR TEST AUTOMATION ENGINEER, HEXAWARE TECHNOLOGIES, H5, SIPCOT IT PARK, NAVALLUR POST. KANCHEEPURAM DISTRICT, CHENNAI-603103, TAMIL NADU.

Appeal From the Judgement/Award/Order passed on 28/03/2023 in M.C. Number 77/2018 on the file of the III ADDL. PRL. JUDGE, FAMILY COURT, BENGALURU.

TO: RESPONDENT SMT FARZANATAJ NISAR KHAN AGED ABOUT 32 YEARS, W/O SAZEED PARVEJ, D/O NISAR KHAN, R/AT 4A CRS, NASASOFT COMPUTER ACADEMY, 178, VV BADAVANE. M V EXTENSION, HOSKOTE, BENGALURU RURAL-562114.
ALSO AVAILABLE AT APARTMENT NO.5 E. BLOCK-1, REAL VALUE NEEL KAMAL APARTMENTS, OLD MAHABALIPURAM ROAD. KAZHIPATTUR, CHENNAI-603103. TAMIL NADU.
ALSO AVAILABE AT SENIOR TEST AUTOMATION ENGINEER, HEXAWARE TECHNOLOGIES, H5, SIPCOT IT PARK, NAVALLUR POST, KANCHEEPURAM DISTRICT, CHENNAI-603103, TAMIL NADU.

Whereas the aforementioned Appeal preferred has been registered by this Court.

NOTICE IS HEREBY given to you to appear in this Court in person or through an Advocate duly instructed or through some one authorized by law to act for you in this case on **22/01/2025 at 10.30 a.m.**, in case you intend to contest the appeal. If you fail so to appear, the appeal will be dealt with, heard and decided in your absence.

Given under my hand and the seal of this court on 25TH DAY OF NOVEMBER 2024.

By Order of the Court
Sd/- Assistant Registrar

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

General Public are hereby informed that my clients **Mr. K.V.R.Prasad, S/o Mr. K.C. Kondaiah,** aged about 42 years residing at No.E-139, 7A Cross, Manyata Residency, Nagavara, Bengaluru-560045, have laminated the original allotment letter issued by BDA in favor of Sri. Gopal Das Purushotham dated 11.04.1986 and have also laminated the original possession letter issued by BDA in favor of Sri. Gopal Das Purushotham dated 04.07.1989 in regard to property bearing no 153, in layout formed by BDA situated in 4th cross road, 4th Phase Dollars Layout, J.P.Nagar, Bangalore measuring 4000 sq ft, and my client declare that the said Lamination is done to the original letters and not on the duplicate copy or Color photo copy. My client further informs to the General Public that anybody having any objections towards the same, kindly reach out to the below mentioned Address or to the aforementioned address within 07 days from this Notice.

Uday Kiran D, Advocate,
No :86, Ward No :26, Tailor Street, Cowl Bazaar, Ballari -583012
Mobile: +91 8971575878
Email: Udaykiran12459@gmail.com

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Con verted& Agriculture Lands
Call:7204995189

PERSONAL

Change of Name

I, YASODHA CHANDRAN R/a.Flat #A51 5th Floor,Bysani Skyway Apartment Mountain Road, 1st Block Jayanagar Bengaluru- 560011 have changed name YASHODHA CHANDRAN vide affidavit 16.12.2024 before Notary Hemalatha, Bengaluru

ಕ್ಲಾಸಿಫೈಡ್ಸ್

CONNECT



ಮೀನಾ ಬಜಾರ್

Meena BAZAR

Arts, Crafts, Handlooms and Lifestyle Exhibition

Christmas and New Year Shopping Carnival

13th to 29th December 2024
10.30 AM - 7 PM | 17 Days Exhibition

Venue:
Karnataka Chitrakala Parishath
Kumara Krupa Road, Near Shivananda Circle, Bengaluru - 01

100+ Stalls | Live Performance
Entry Free

Puppet Show Live
21st Dec 2024 | 5 pm - 6.30 pm

Chendamelam Live
22nd Dec 2024 | 5 pm - 6.30 pm

For Details Contact : 6364685716 / 9036658774

HANDLOOMS | HOME DECOR | HANDICRAFTS | CLOTHING | JEWELLERY

CHANGE OF NAME
I, **C.P. Annapoorna Tejaswi, C.P.Poornachandra Tejaswi, Chudegowda Puttaswamy Gowda, A. Tejaswi, C.P. Annapurna Tejaswi & C.P.Annapurna** S/o Late Chudegowda @ Puttaswamy Gowda, residing at #469, Venugopalaswamy Road, Chikkamaluru, Channapatna Town, Ramangar Dist., declare that above names pertain to me only. Vide affidavit dated 13.12.2024 before Notary A.R. Nagendra, Channapatna.

I, SHEELAVATHI A.A w/o late. A.M Appacha(Ex Sep.ASC 6357620) Kolagadalu village, cherambane post Madikeri, Kodagu District. In my army EPPO documents my name is wrongly written Sheelavathi my First/last name is missing.for all purpose vide Affidavit dated 10/12/2024, sworn before notary P. Pondarika

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

I, HEMLAL, Residing at #C-111, 1st floor, 'C' Block 13/2, Premier Grihalakshmi Apartment, Subrotto Mukherjee Road Jalahalli West, Bengaluru-15 have changed my Daughter name from ADITI to ADITI VERMA vide affidavit dated 15/12/2024 before Notary V.Anjanappa, Bengaluru

I, SAMPATH_KUMAR KONDIKAL GANGADHAR S/O._GANGADHAR BELACHINTHA GOUDA R/a#240/27 Ground Floor 9th`Main_Road near_Nandini Public School,Nandini Layout Bengaluru- 560096 have changed`name SAMPATH KUMAR S/O GANGADHAR GOUDA vide`affidavit 16.12.2024 before_Notary Hemalatha Bengaluru

I, SNEHAL KANADIKAR have changed my name to SNEHAL NAMDEVRAO KANADIKAR vide affidavit dated: 16/12/2024 Before Notary Manohar Jeerige Bangalore.

I VIGNESH.B residing at No.48, 3rd cross, New A.K.Colony, Doddabanaswadi, Kalyannagar post, Bangalore-43 have changed my name to VICKY.B vide affidavit dated 13-12-2024, Before Notary A.R.MUNEER AHMED Bangalore.

DH DECCAN HERALD Classifieds
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ಎಐಎಂಎಸ್‌ಎಸ್ ರಾಜ್ಯಮಟ್ಟದ ಸಮಾವೇಶದಲ್ಲಿ ಬರಗೂರು ರಾಮಚಂದ್ರಪ್ಪ

‘ಬಾಣಂತಿಯರ ಸಾವು ದುಃಸ್ಥಿತಿಗೆ ಕನ್ನಡಿ’

ಪ್ರಜಾವಾಣಿ ವಾರ್ತೆ

ರಾಜ್ಯಮಟ್ಟದ ಮಹಿಳೆಯರ ಆಗ್ರಹ ಸಮಾವೇಶದಲ್ಲಿ ಬರಗೂರು ರಾಮಚಂದ್ರಪ್ಪ ಅವರೊಂದಿಗೆ ಎಂ.ಎನ್. ಮಂಜುಳಾ ಚರ್ಚಿಸಿದರು. ನಡಹಳ್ಳಿ ವಸಂತ್, ಡಾ. ಸುಧಾ ಕಾಮತ್, ಶೋಭಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ರಾಜ್ಯದ ಸರ್ಕಾರಿ ಆಸ್ಪತ್ರೆ ಗಳಲ್ಲಿ ಸಮರ್ಪಕ ವೈದ್ಯಕೀಯ ಸೌಲಭ್ಯಗಳಿಲ್ಲದೇ, ಸಕಾಲದಲ್ಲಿ ಅವರನ್ನು ಆರೈಕೆ ಮಾಡದೇ, ಅನೇಕ ಬಾಣಂತಿಯರ ಸಾಲು ಸಾಲು ಸಾವುಗಳು ಸಂಭವಿಸುತ್ತಿವೆ. ಇದು ಸರ್ಕಾರಿ ಆಸ್ಪತ್ರೆಗಳು ಎಂತಹ ದುಃಸ್ಥಿತಿಯಲ್ಲಿವೆ ಎಂಬುದಕ್ಕೆ ಉದಾಹರಣೆಯಾಗಿದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಸೋಮವಾರ ಆಯೋಜಿಸಿದ್ದ ‘ರಾಜ್ಯಮಟ್ಟದ ಮಹಿಳೆಯರ ಆಗ್ರಹ ಸಮಾವೇಶ’ ಉದ್ಘಾಟಿಸಿ ಅವರು ಮಾತನಾಡಿದರು.

‘ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ವರ್ಗದ ಜನರು ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಬಿಸಿದ್ದಾರೆ. ಆದರೆ, ಆಸ್ಪತ್ರೆಗಳಲ್ಲಿ ಸರಿಯಾದ ಸೌಲಭ್ಯಗಳಿಲ್ಲ. ಸರ್ಕಾರಿ ಆಸ್ಪತ್ರೆಯ ವೈದ್ಯರು ಪರಿಣತರಿದ್ದಾರೆ. ಆದರೆ, ಅಲ್ಲಿ ಅಗತ್ಯ ಉಪಕರಣಗಳಿವೆಯಾ, ಆಸ್ಪತ್ರೆಗೆ ಬೇಕಾದ ಮೂಲಸೌಲಭ್ಯ ಹಾಗೂ ಅಗತ್ಯ ಸಿಬ್ಬಂದಿ ಇದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಸಮಾಜದಲ್ಲಿ ಎಲ್ಲಿಯವರೆಗೆ ತಾಯ್ತನ ನೆಲಸುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯರ ಮೇಲಿನ ದೌರ್ಜನ್ಯಗಳು ನಿಲ್ಲುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಲಭ್ಯಗಳನ್ನು ಹೆಚ್ಚಿಸುವ ಮೂಲಕ ಉನ್ನತೀಕರಿಸಬೇಕು. ಬಾಣಂತಿಯರ ಹಾಗೂ ಮಕ್ಕಳ ಸಾವುಗಳನ್ನು ತಪ್ಪಿಸಬೇಕು. ಪ್ರಜಾಸತ್ತಾತ್ಮಕ ಸರ್ಕಾರ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಜನಸ್ನೇಹಿ ಆಸ್ಪತ್ರೆಗಳನ್ನು ನಿರ್ಮಿಸಬೇಕು’ ಎಂದು ಹೇಳಿದರು.

ನಮ್ಮೂರಿನಲ್ಲಿರುವ ಆಸ್ಪತ್ರೆಗೆ ಮಹಿಳಾ ವೈದ್ಯರೊಬ್ಬರನ್ನು ನಿಯೋಜಿಸುವಂತೆ ಎಂಟು ತಿಂಗಳ ಹಿಂದೆಯೇ ಕೇಳಿಕೊಂಡಿದ್ದೇನೆ. ಆದರೆ, ಇದುವರೆಗೂ ನಿಯೋಜಿಸಿಲ್ಲ.
ಬರಗೂರು ರಾಮಚಂದ್ರಪ್ಪ
ಸಾಹಿತಿ

‘ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಸರ್ಕಾರ ಗ್ಯಾರಂಟಿ ನೀಡಬೇಕು. ಸರ್ಕಾರಿ ಆಸ್ಪತ್ರೆಗಳನ್ನು ಉನ್ನತೀಕರಿಸಲು ಕ್ರಿಯಾಯೋಜನೆ ಸಿದ್ಧಪಡಿಸಬೇಕು. ಹೆಣ್ಣುಮಕ್ಕಳಿಗೆ ಆರೋಗ್ಯವನ್ನು ಖಾತ್ರಿಪಡಿಸಿದರೆ, ಅದು ಮಾನವೀಯ ನಡೆ ಆಗಲಿದೆ’ ಎಂದರು.

ಮಹಿಳಾ ಘನತೆ–ಮುಂದಿರುವ ಸವಾಲುಗಳು ಹಾಗೂ ಮಹಿಳಾ ಸ್ವಾಸ್ಥ್ಯ–ವ್ಯವಸ್ಥೆಯ ಕರಾಳತೆ ಕುರಿತು ಗೋಷ್ಠಿಗಳು ನಡೆದವು.

ಮನೋಚಿಕಿತ್ಸಕ ನಡಹಳ್ಳಿ ವಸಂತ್, ಎಐಎಂಎಸ್‌ಎಸ್‌ನ ರಾಜ್ಯ ಘಟಕದ ಅಧ್ಯಕ್ಷೆ ಎಂ.ಎನ್. ಮಂಜುಳಾ, ಕಾರ್ಯದರ್ಶಿ ಶೋಭಾ ಎಸ್., ರಾಷ್ಟ್ರೀಯ ಉಪಾಧ್ಯಕ್ಷೆ ಡಾ. ಸುಧಾ ಕಾಮತ್, ಗುಂಡಮ್ಮ ಉಪಸ್ಥಿತರಿದ್ದರು.

ಉದ್ಯಮಿ ಮನೆಯಲ್ಲಿ ₹50 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಲಕ್‌ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೆಲಸಿರುವ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಮನೆಗೆ ದುಷ್ಕರ್ಮಿಗಳು ನುಗ್ಗಿ ₹50 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದು ಪರಾರಿ ಆಗಿದ್ದಾರೆ. ಉದ್ಯಮಿ ನಾಗರಾಜ್ ಎಂಬುವವರ ಮನೆಯಲ್ಲಿ ಕೃತ್ಯ ನಡೆದಿದೆ.

ಎರಡು ವರ್ಷಗಳಿಂದ ಜಯನಗರ 4ನೇ ಬ್ಲಾಕ್‌ನ 13ನೇ ಮುಖ್ಯರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ನಾಗರಾಜ್ ಮತ್ತು ಕುಟುಂಬಸ್ಥರು ನೆಲಸಿದ್ದರು.

ಐದು ಅಂತಸ್ತಿನ ಅಪಾರ್ಟ್‌ಮೆಂಟ್‌ನಲ್ಲಿ ಐದು ಫ್ಲ್ಯಾಟ್‌ಗಳು ಇವೆ. ಈ ಪೈಕಿ ಒಂದನೇ ಅಂತಸ್ತಿನಲ್ಲಿ ನಾಗರಾಜ್ ಫ್ಲ್ಯಾಟ್ ಇದ್ದು, ನಾಗರಾಜ್ ಮತ್ತು ಕುಟುಂಬ ಸದಸ್ಯರು ಡಿ.13ರಂದು ಮಂತ್ರಾಲಯಕ್ಕೆ ತೆರಳಿದ್ದರು. ಭಾನುವಾರ ರಾತ್ರಿ ವಾಪಸ್ ಬಂದು ನೋಡಿದಾಗ, ಮನೆಯಲ್ಲಿ ಕಳ್ಳತನ ನಡೆದಿರುವುದು ಗೊತ್ತಾಗಿದೆ.

ಬೀರುವಿನಲ್ಲಿ ಇಟ್ಟಿದ್ದ 500 ಗ್ರಾಂ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ₹3 ಲಕ್ಷ ನಗದು ದೋಚಿ ಪರಾರಿ ಆಗಿದ್ದಾರೆ ಎಂದು ಮನೆಯ ಮಾಲೀಕರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆ: ಆರೋಪಿಗಳು ಅಪಾರ್ಟ್‌ಮೆಂಟ್‌ಗೆ ಪ್ರವೇಶಿಸಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ಆರು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು. ಹೊಸದಾಗಿ ಸೆಕ್ಯೂರಿಟಿ ಗಾರ್ಡ್ ನೇಮಿಸಿಕೊಂಡಿರಲಿಲ್ಲ.

ಮರಣಪತ್ರ ಬರೆದಿಟ್ಟು ಪತಿ ಆತ್ಮಹತ್ಯೆ

ಪತ್ನಿ ವಿರುದ್ಧ ಕಿರುಕುಳದ ಆರೋಪ: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ನಿಯ ಕಿರುಕುಳದಿಂದ ಬೇಸತ್ತಿದ್ದೇನೆ’ ಎಂದು ಮರಣಪತ್ರದಲ್ಲಿ ಉಲ್ಲೇಖಿಸಿ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಲದೇವನಹಳ್ಳಿಯ ಸಿಲುವೆಪುರ ನಿವಾಸಿ ಬಾಲರಾಜ್(42) ಅವರು ನ.19ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಸೋಲದೇವನಹಳ್ಳಿ ಠಾಣೆಯಲ್ಲಿ ಬಾಲರಾಜ್ ಅವರು ಪತ್ನಿ ಕುಮಾರಿ ಎಂಬುವವರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಪ್ರಕರಣ ದಾಖಲಾಗಿದೆ.

‘ಬಾಲರಾಜ್ ಹಾಗೂ ಕುಮಾರಿ 14 ವರ್ಷದ ಹಿಂದೆ ಮದುವೆ ಆಗಿದ್ದರು. ದಂಪತಿಗೆ 12 ವರ್ಷದ ಮಗ ಇದ್ದಾನೆ. ಬಾಲರಾಜ್ ಅವರು ಗಾರೆ ಕೆಲಸ ಮಾಡುತ್ತಿದ್ದರು. ದಂಪತಿ ಹೆಸರಘಟ್ಟ ಸಮೀಪದ ಸಿಲುವೆಪುರದಲ್ಲಿ ನೆಲಸಿದ್ದರು. ದಂಪತಿ ಮಧ್ಯೆ ಕೌಟುಂಬಿಕ ವಿಚಾರಕ್ಕೆ ಗಲಾಟೆ ನಡೆದು, ಪ್ರತ್ಯೇಕವಾಗಿ ನೆಲಸಿದ್ದರು. ಅದರಿಂದ ಬೇಸತ್ತು ಬಾಲರಾಜ್ ಅವರು ಮರಣಪತ್ರ ಬರೆದಿಟ್ಟು ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

‘ಆರು ತಿಂಗಳ ಹಿಂದೆ ಪತ್ನಿಯ ಜತೆಗೆ ರಾಜಿ ಸಂಧಾನ ಮಾಡುವುದಾಗಿ ಕರೆಸಿಕೊಂಡಿದ್ದ ಹಿರಿಯರು, ಪತ್ನಿಯ ಕಾಲಿಗೆ ಬೀಳಿಸಿದ್ದರು. ಇದರಿಂದ ನೋವಾಗಿತ್ತು. ಆಕೆಯೂ ತನಗೆ ಕಿರುಕುಳ ನೀಡಿದ್ದಾಳೆ. ಅಲ್ಲದೇ, ಅಂದು ರಾಜಿ ಸಂಧಾನ ಸಭೆಯಲ್ಲಿ ಪಾಲ್ಗೊಂಡಿದ್ದವರೂ ಮೋಸ ಮಾಡಿದ್ದಾರೆ’ ಎಂದು ಬಾಲರಾಜ್ ಮರಣಪತ್ರದಲ್ಲಿ ಉಲ್ಲೇಖಿಸಿದ್ದರು.

‘ಕನಕಪುರದ ಕುಮಾರಿ ಅವರು 16 ವರ್ಷಗಳ ಹಿಂದೆ ಸಂಬಂಧಿ ಯುವಕನನ್ನು ಮದುವೆ ಆಗಿದ್ದರು. ಆದರೆ, ಕೌಟುಂಬಿಕ ಕಾರಣಕ್ಕೆ ಪತಿಗೆ ವಿಚ್ಛೇದನ ನೀಡಿದ್ದರು. ಅದಾದ ಮೇಲೆ ಬಾಲರಾಜ್ ಅವರ ಪರಿಚಯವಾಗಿತ್ತು. ಇಬ್ಬರೂ ಪ್ರೀತಿಸಿ ಮದುವೆ ಆಗಿದ್ದರು. ಮೊದಲನೇ ಮದುವೆ ವಿಚಾರವನ್ನು ಕುಮಾರಿ ಅವರು ಬಾಲರಾಜ್ ಅವರ ಕುಟುಂಬಸ್ಥರಿಗೆ ತಿಳಿಸಿರಲಿಲ್ಲ. ಕೆಲವು ದಿನಗಳ ಹಿಂದೆ ಈ ಗೊತ್ತಾದ ಮೇಲೆ ಜಗಳ ಆರಂಭವಾಗಿತ್ತು. ದಂಪತಿ ಪ್ರತ್ಯೇಕವಾಗಿ ನೆಲಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಲೈಂಗಿಕ ದೌರ್ಜನ್ಯದ ಆರೋಪ ತಂದೆ ವಿರುದ್ಧ ಪ್ರಕರಣ

ಬೆಂಗಳೂರು: ನಾಲ್ಕೂವರೆ ವರ್ಷದ ಪುತ್ರಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪದಡಿ ತಂದೆಯ ವಿರುದ್ಧ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಸಂತ್ರಸ್ತೆಯ ತಾಯಿ ನೀಡಿದ ದೂರಿನ ಅನ್ವಯ ಆರೋಪಿ ವಿರುದ್ಧ ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದಾರೆ.

ಆರೋಪಿ ಮತ್ತು ಆಕೆಯ ಪತ್ನಿ ನಡುವೆ ಕೌಟುಂಬಿಕ ವ್ಯಾಜ್ಯವಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ನ್ಯಾಯಾಲಯದ ಸೂಚನೆ ಮೇರೆಗೆ ದೂರುದಾರ ಮಹಿಳೆ, ಇಬ್ಬರು ಮಕ್ಕಳನ್ನು ಪ್ರತಿ ಭಾನುವಾರ ಪತಿ ಮನೆಗೆ ಕಳುಹಿಸುತ್ತಿದ್ದರು. ‘ಭಾನುವಾರ ಬೆಳಿಗ್ಗೆ 11 ಗಂಟೆಗೆ ಇಬ್ಬರು ಮಕ್ಕಳನ್ನು ತಾಯಿಯು ಆರೋಪಿ ಮನೆಗೆ ಬಿಟ್ಟು ಬಂದಿದ್ದರು.

ವಾಪಸ್ ಕರೆದುಕೊಂಡು ಬರಲು ಮಧ್ಯಾಹ್ನ ಆರೋಪಿ ಮನೆಗೆ ತೆರಳಿದ್ದರು. ಆಗ ಮಗಳು ಅಳುತ್ತಿದ್ದಳು. ಅನುಮಾನಗೊಂಡು ಪ್ರಶ್ನಿಸಿದಾಗ, ಮಗಳು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಖಾಸಗಿ ಆಸ್ಪತ್ರೆಗೆ ಮಗಳನ್ನು ಕರೆದುಕೊಂಡು ಪರೀಕ್ಷಿಸಿದಾಗ ದೌರ್ಜನ್ಯ ಎಸಗಿರುವುದು ಗೊತ್ತಾಗಿದೆ’ ಎಂದು ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಟೋಪಿ, ಮಾಸ್ಕ್ ಧರಿಸಿ ಮೊಬೈಲ್ ಅಂಗಡಿಗೆ ಕನ್ನ

ಬೆಂಗಳೂರು: ಶಿವಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಮೊಬೈಲ್ ಅಂಗಡಿಯೊಂದಕ್ಕೆ ರಾತ್ರಿ ವೇಳೆ ನುಗ್ಗಿದ ಕಳ್ಳರು, 50ಕ್ಕೂ ಹೆಚ್ಚು ಮೊಬೈಲ್ ಫೋನ್ ಕದ್ದು ಪರಾರಿ ಆಗಿದ್ದಾರೆ.

ಎಂ.ಕೆ.ರಸ್ತೆಯಲ್ಲಿ ಇರುವ ವಿಶ್ವಾಸ್ ಕಮ್ಯೂನಿಕೇಷನ್ ಹೆಸರಿನ ಅಂಗಡಿಯಲ್ಲಿ ಡಿ.11ರಂದು ಮಧ್ಯರಾತ್ರಿ ಕಳ್ಳತನ ನಡೆದಿದೆ. ಇಬ್ಬರು ಕಳ್ಳರ ಕೃತ್ಯ ಅಂಗಡಿಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಕಳ್ಳರು ಮೊಬೈಲ್ ದೋಚುತ್ತಿರುವ ದೃಶ್ಯ ಸೆರೆಯಾಗಿದೆ.

‘₹2 ಲಕ್ಷ ನಗದು ಹಾಗೂ ₹3 ಲಕ್ಷ ಮೌಲ್ಯದ ವಿವಿಧ ಕಂಪನಿಗಳ 54 ಮೊಬೈಲ್ ಫೋನ್‌ಗಳ ಕಳ್ಳತನವಾಗಿದೆ ಎಂದು ಮಾಲೀಕ ಅಬ್ದುಲ್ ಮುನಾಫ್ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮುಖಚಹರೆ ಪತ್ತೆ ಆಗದಂತೆ ತಲೆಗೆ ಟೋಪಿ, ಮುಖಕ್ಕೆ ಮಾಸ್ಕ್ ಹಾಗೂ ಕೈಗಳಿಗೆ ಗ್ಲೌಸ್ ಧರಿಸಿದ್ದಾರೆ. ಮೊಬೈಲ್ ಟಾರ್ಚ್ ಬಳಸಿ ಕಳವು ಮಾಡಲಾಗಿದೆ. ಬ್ಯಾಗ್‌ನಲ್ಲಿ ಇಟ್ಟು ಮೊಬೈಲ್ ಹೊತ್ತೊಯ್ಯುತ್ತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಧನುರ್ಮಾಸ ಸಂಗೀತೋತ್ಸವ: ಗಾಯನ: ಅನುಷಾ ರಾಘವೇಂದ್ರ, ಪಿಟೀಲು: ಎಸ್. ಶಶಿಧರ್, ಮೃದಂಗ: ರಾಘವೇಂದ್ರ, ತಬಲಾ: ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಲಾಲ್‌ದಾಸ್ ಭಕ್ತ ಆಂಜನೇಯಸ್ವಾಮಿ ಭಜನಾ ಮಂಡಳಿ, ಒಟಿಸಿ ರಸ್ತೆ ಬಳೇಪೇಟೆ ವೃತ್ತದ ಹತ್ತಿರ, ಬೆಳಿಗ್ಗೆ 6.30

ಹನುಮ ಜಯಂತಿ ಮಹೋತ್ಸವ: ಬೆಳಿಗ್ಗೆ 10.30ಕ್ಕೆ ವಾಯುಸ್ತುತಿ ಪೂರ್ವಕ ಮಧು ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ, ಪವಮಾನ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಆಂಜನೇಯ ದೇವರ ರಥಯಾತ್ರೆ, ಆಯೋಜನೆ ಮತ್ತು ಸ್ಥಳ: ದಾರಿ ಆಂಜನೇಯ ಸ್ವಾಮಿ ಚಾರಿಟಬಲ್ ಟ್ರಸ್ಟ್, ದಾರಿ ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆ, ಯಶವಂತಪುರ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಮನು ಬಳಿಗಾರ್, ‘ಕನ್ನಡಶ್ರೀ’ ಪ್ರಶಸ್ತಿ ಪ್ರದಾನ: ಜೆ. ಅಂತೋನಿ ಜಾರ್ಜ್, ಅಧ್ಯಕ್ಷತೆ: ಎಸ್. ಲಕ್ಷ್ಮಣ, ಅತಿಥಿ: ವ.ಚ. ಚನ್ನೇಗೌಡ, ಸನ್ಮಾನಿತರು: ಬೇಲೂರು ರಘುನಂದನ್, ಎಚ್.ಆರ್. ಸುಜಾತಾ, ಮ. ಚಂದ್ರಶೇಖರ್, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕನ್ನಡ ಕ್ರಿಯಾ ಸಮಿತಿ ಬೆಂಗಳೂರು ಕೇಂದ್ರೀಯ ವಿಭಾಗ, ಸ್ಥಳ: ಘಟಕ–2ರ ಯೋಗ ಸಭಾಂಗಣ, ಶಾಂತಿನಗರ, ಮಧ್ಯಾಹ್ನ 2

ಬಿ.ಎಂ.ಶ್ರೀ ದತ್ತಿಗಳ ಉಪನ್ಯಾಸ: ‘ಜಿ.ಪಿ. ರಾಜರತ್ನಂ ಅವರ ಕಾವ್ಯದ ಸೊಗಸು’ ಉಪನ್ಯಾಸ: ಎ.ವಿ. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸುಶೀಲಾ ಗೋಪಾಲನ್ ನೆನಪಿನ ರಾಷ್ಟ್ರೀಯ ಉಪನ್ಯಾಸ: ‘ಸಂಘರ್ಷದ ನಡುವೆ ನಲುಗಿದ ಮಹಿಳೆಯರು ಮತ್ತು ಮಕ್ಕಳು’: ಗೀತಾ ಹರಿಹರನ್, ಉಪಸ್ಥಿತಿ: ಕೀರ್ತಿ ಸಿಂಗ್, ಪಾರ್ವತಿ ಮೆನನ್, ಆಯೋಜನೆ: ಸುಶೀಲಾ ಗೋಪಾಲನ್ ಮೆಮೋರಿಯಲ್ ಟ್ರಸ್ಟ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ: ಸೌಹಾರ್ದ, ನಂ. 1, ಮೊದಲನೇ ಅಡ್ಡರಸ್ತೆ, ಸಿಎಸ್‌ಐ ಕಾಂಪೌಂಡ್ ಸುಬ್ಬಯ್ಯ ವೃತ್ತದ ಬಳಿ, ಮಿಷನ್ ರಸ್ತೆ, ಸಂಜೆ 4

ಪದವಿ ಪ್ರದಾನ ಸಮಾರಂಭ: ಭಾಷಣಕಾರರು: ಪರಶುರಾಮನ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಕಾಲೇಜ್ ಎಂಜಿನಿಯರಿಂಗ್, ಸಂಜೆ 4.30

ರಾಮನಾಥ್ ಅವರ ‘ಅಶ್ವಪರ್ವ’ ನಾಟಕ ಪ್ರದರ್ಶನ: ನಿರ್ದೇಶನ: ಪುನೀತ್ ಕರ್ತ, ಆಯೋಜನೆ: ಕಲಾ ಕುಟೀರ ಸಾಂಸ್ಕೃತಿಕ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

‘ಕರ್ನಲ್‌ಗೆ ಯಾರೂ ಬರೆಯೋದಿಲ್ಲ’ ನಾಟಕ ಪ್ರದರ್ಶನ: ನಿರ್ದೇಶನ: ಕೆ.ಪಿ. ಲಕ್ಷ್ಮಣ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಪ್ರೆಸ್ಟೀಜ್ ಮಾಸ್ಟರ್ಸ್: ಅನುಪಮಾ ವಿಜಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಪಮಾ ವಾಟಾಳ್ ಅವರು ಪ್ರೆಸ್ಟೀಜ್ ಗಾಲ್ಫ್‌ಷೈರ್ ಕ್ಲಬ್ ಆಯೋಜಿಸಿದ್ದ ಪ್ರೆಸ್ಟೀಜ್ ಮಾಸ್ಟರ್ಸ್ ಸೀರೀಸ್ 10ನೇ ವಾರ್ಷಿಕೋತ್ಸವದ ಕ್ಲಬ್ ಗಾಲ್ಫರ್ಸ್‌ಗಾಗಿ ನಡೆದ ಓಪನ್ ಸ್ಪರ್ಧೆಯಲ್ಲಿ ವಿಜೇತರಾದರು. ಅನುಪಮಾ 37 ಅಂಕ, ಜಿಬಿನ್ ಜಾನ್ 36, ಸನ್ ಯಾಂಜಿ 35 ಅಂಕ ಗಳಿಸಿದರು. ಸ್ಪರ್ಧೆಯಲ್ಲಿ ಭಾರತದ ವಿವಿಧೆಡೆಯಿಂದ ಸ್ಪರ್ಧಿಗಳು ಭಾಗವಹಿಸಿದ್ದರು.

ಪ್ರೆಸ್ಟೀಜ್ ಗಾಲ್ಫ್‌ಶೈರ್ ಕ್ಲಬ್ ಗಾಲ್ಫರ್ಸ್ ಓಪನ್ ಗಾಲ್ಫ್‌ನಲ್ಲಿ ವಿಜೇತರಾದವರು

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ತೆಲುಗು ಸ್ಮಾರ್ತ ವೇದಿಕಾದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳಿಸಿರುವ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳು ಡಿಸೆಂಬರ್ 25ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 78920 25600, 98453 28041

ವಿವಿಧೆಡೆ ಇಂದು, ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್‌ನಿಂದ ತುರ್ತು ಕಾರ್ಯ ನಿರ್ವಹಣೆ ಕೈಗೊಂಡಿರುವ ಕಾರಣ ಎಚ್‌ಎಸ್‌ಆರ್ ವಿಭಾಗದ ಆರ್‌ಬಿಐ ವಿವಿ ಕೇಂದ್ರ, ನಾಗನಾಥಪುರ ಸ್ವೀಕರಣ ಕೇಂದ್ರ, ಶೋಭಾ ಫಾರೆಸ್ಟ್ ವ್ಯೂ ವಿದ್ಯುತ್ ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ ಡಿ.17 ಮತ್ತು ಡಿ.18ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಆರ್‌ಬಿಐ ಲೇಔಟ್, ಕೊತ್ತನೂರು, ಜೆ.ಪಿ.ನಗರ 5ನೇ ಹಂತ, ಶ್ರೇಯಸ್ ಕಾಲೊನಿ, ಗೌರವ್‌ನಗರ ಅಪಾರ್ಟ್‌ಮೆಂಟ್, ಸಿ.ಕೆ.ನಗರ- ಹೊಸರೋಡ್, ಸಿಂಗಸಂದ್ರ, ಹೊಂಗಸಂದ್ರ, ಎ.ಇ.ಸಿ.ಎಸ್ ಎ ಆ್ಯಂಡ್ ಬಿ ಬ್ಲಾಕ್, ಹುಸ್ಕೂರು, ನಾಗನಾಥಪುರ, ಮೈಕೊ ಬಾಷ್, ಕೂಡ್ಲು, ಮುನೇಶ್ವರ ಲೇಔಟ್, ದೊಡ್ಡನಾಗಮಂಗಲ, ಪರಪ್ಪನ ಅಗ್ರಹಾರ, ಚಿಕ್ಕತೋಗೂರು, ಬೆಳ್ಳಂದೂರು-2, ಮಹಾವೀರ ರಾಂಚಸ್ ಅಪಾರ್ಟ್‌ಮೆಂಟ್, ಕ್ಲಾಸಿಕ್ ಲ್ಯಾಂಡ್ ಮಾರ್ಕ್, ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ನಾಳೆ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ: ಟೆಲಿಕಾಂ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವುದರಿಂದ ಬುಧವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಹೊಸಹಳ್ಳಿ ಮುಖ್ಯರಸ್ತೆ, ಉರ್ಫತ್ ನಗರ ಪಾದರಾಯನಪುರ, ದೇವರಾಜ್ ಅರಸ್ ನಗರ, ಸುಜಾತಾ ಟೆಂಟ್, ಜೆ.ಜೆ.ಆರ್ ನಗರ, ಹೆರಿಗೆ ಆಸ್ಪತ್ರೆ, ಸಂಗಮ್ ಸರ್ಕಲ್, ಓಬಳೇಶ್ ಕಾಲೊನಿ, ವಿ.ಎಸ್.ಗಾರ್ಡನ್, ರಾಯಪುರ, ಬಿನ್ನಿಪೇಟೆ, ಪಾದರಾಯನಪುರ, ಜೆ.ಜೆ.ಆರ್. ನಗರ, ಗೋಪಾಲನ್ ಮಾಲ್, ಮೈಸೂರು ರಸ್ತೆ 1,2 ಮತ್ತು 3ನೇ ಕ್ರಾಸ್, ಮೋಮಿಂಪುರ, ಜನತಾ ಕಾಲೊನಿ, ಶಾಮಣ್ಣ ಗಾರ್ಡನ್, ರಂಗನಾಥ ಕಾಲೊನಿ, ಪೂರ್ವ ವೆಸ್ಟ್ ಅಪಾರ್ಟ್‌ಮೆಂಟ್, ಬಿನ್ನಿಪೇಟೆ, ಅಂಜನಪ್ಪ ಗಾರ್ಡನ್, ದೊರೆಸ್ವಾಮಿ ನಗರ, ಹೂವಿನ ಉದ್ಯಾನ, ಹೊಸ ಪೊಲೀಸ್ ಕ್ವಾರ್ಟರ್ಸ್, ಎಸ್.ಡಿ.ಮಠ, ಮಾಮೂಲ್ ಪೇಟೆ, ಕಾಟನ್‌ಪೇಟೆ, ಅಕ್ಕಿಪೇಟೆ, ಬಾಲಾಜಿ ಕಾಂಪ್ಲೆಕ್ಸ್, ಸುಲ್ತಾನ್ ಪೇಟೆ, ಪೊಲೀಸ್ ರಸ್ತೆ, ಗೋಪಾಲನ್ ಅಪಾರ್ಟ್‌ಮೆಂಟ್, ಮರಿಯಪ್ಪ ಎ. ಕೆಪಿಎಸ್ ಮಠ, ಗಂಗಪ್ಪ ಗಾರ್ಡನ್, ಭುವನೇಶ್ವರಿ ನಗರ, ಪ್ರೆಸ್ಟೀಜ್ ವುಡ್ ಅಪಾರ್ಟ್‌ಮೆಂಟ್, ಹಂಪಿನಗರ, ವಿಜಯನಗರ, ಟೆಲಿಕಾಂ ಲೇಔಟ್, ಅಗ್ರಹಾರ ದಾಸರಹಳ್ಳಿ, ಇಂದ್ರನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಮಾನ್ಯತಾ ಕಾಫಿಬೋರ್ಡ್ ಲೇಔಟ್, ಮರಿಯನಪಾಳ್ಯ, ಮಾನ್ಯತಾ ರೆಸಿಡೆನ್ಸಿ, ಶ್ರೀ ಭಾಗ್ಯಶ್ರೀ ಲೇಔಟ್ ಮತ್ತು ರಾಚೇನಹಳ್ಳಿ, ಐಬ್ರಾಕ್ಸ್, ಅಮರಜ್ಯೋತಿ ಲೇಔಟ್, ಫಾತಿಮಾ ಲೇಔಟ್, ಅಂಜನಾದ್ರಿ ಲೇಔಟ್, ಮಂತ್ರಿ ಲಿಥೋಸ್, ಫಿಡಿಲಿಟಿ, ಫಿಲಿಪ್ಸ್, ಇನ್‌ಕ್ಯುಬೇಟರ್, ಐಬಿಎಮ್ –ಡಿ-1-4 ಬ್ಲಾಕ್, ಎಲ್-6 ಸೀಮನ್ಸ್, ಬಿಟಿಎಸ್ ಲೌಸೆಂಟ್, ಚಿರಂಜೀವಿ ಲೇಔಟ್, ವೆಂಕಟಗೌಡ ಲೇಔಟ್, ಜೆಎನ್‌ಸಿ, ಎಲ್-5 ನೋಕಿಯಾ ಬ್ಲಾಕ್, ಥಣಿಸಂದ್ರ, ಮೇಸ್ತ್ರಿ ಪಾಳ್ಯ, ಜೆಎನ್‌ಸಿ, ಗಾದ್ರೇಜ್ ಅಪಾರ್ಟ್‌ಮೆಂಟ್, ಬ್ರಿಗೇಡ್ ಕ್ಯಾನಾಡಿಯಮ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

‘ಮಂಜುನಾಥ ನಗರ, ಶಿವನಗರ, ಗಾಯತ್ರಿ ನಗರ, ಪ್ರಕಾಶನಗರ, ಎಲ್.ಎನ್ ಪುರ, ಸುಬ್ರಹ್ಮಣ್ಯ ನಗರ, ವಿಜಯನಗರ, ರಾಜಾಜಿನಗರ 2ನೇ ಬ್ಲಾಕ್ ಮತ್ತು 6ನೇ ಬ್ಲ್ಯಾಕ್, ಅಗ್ರಹಾರ ದಾಸರಹಳ್ಳಿ, ಇಂದ್ರನಗರ, ಶಂಕರಮಠ, ಬ್ರಿಗೇಡ್ ಅಪಾರ್ಟ್‌ಮೆಂಟ್, ಮಾಗಡಿ ರಸ್ತೆ 1ನೇ ಕ್ರಾಸ್‌ನಿಂದ 8ನೇ ಕ್ರಾಸ್, ಮಾಗಡಿ ರಸ್ತೆ 9ನೇ ಕ್ರಾಸ್ ಮತ್ತು 10ನೇ ಕ್ರಾಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಬೆಂಗಳೂರಿನಲ್ಲಿ ಸೋಮವಾರ ನಡೆದ 'ಪ್ರಜಾವಾಣಿ ರಸಪ್ರಶ್ನೆ' ಬೆಂಗಳೂರು ವಲಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ಸಮೂಹ

ಕಾರ್ಯಕ್ರಮವನ್ನು ವಿದ್ಯಾರ್ಥಿಗಳೊಂದಿಗೆ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್, 'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ್, 'ಪೈಲೆಟ್ ಪೆನ್' ಪ್ರಾದೇಶಿಕ ವ್ಯವಹಾರ ವ್ಯವಸ್ಥಾಪಕ ಕುಮಾರ್ ಆರ್. ಉದ್ಘಾಟಿಸಿದರು.

ನಾಲ್ಕು ಸುತ್ತುಗಳಲ್ಲಿ ಹಿಂದೆ ಉಳಿದಿದ್ದ ಆರ್ಮಿ ಪಬ್ಲಿಕ್ ಸ್ಕೂಲ್ ತಂಡ

ಕೊನೇ ಸುತ್ತಿನಲ್ಲಿ ಕಮಾಲ್ ಮಾಡಿದ ನಿಯತಿ, ರಿದಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ನಾಲ್ಕು ಸುತ್ತುಗಳಲ್ಲಿ ಸಾಧಾರಣ ಅಂಕ ಗಳಿಸಿದ್ದ ನಗರದ ಕಾಮರಾಜ ರಸ್ತೆಯ ಆರ್ಮಿ ಪಬ್ಲಿಕ್ ಸ್ಕೂಲ್‌ನ ನಿಯತಿ ಜೊಇಸ್, ರಿದಂ ಶ್ರೀವಾಸ್ತವ್ ಕೊನೇ ಸುತ್ತಿನಲ್ಲಿ ಅತ್ಯುತ್ತಮವಾಗಿ ಉತ್ತರಿಸುವ ಮೂಲಕ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆಯಲ್ಲಿ ಬೆಂಗಳೂರು ವಲಯ ಮಟ್ಟದ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಪೈಲೆಟ್ ಪೆನ್ಸ್ ಸಹಯೋಗದಲ್ಲಿ ಸೋಮವಾರ ಜಯನಗರದ ವಿವೇಕ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಸಪ್ರಶ್ನೆ ಸ್ಪರ್ಧೆ ರೋಚಕ ಕ್ಷಣಕ್ಕೆ ಸಾಕ್ಷಿಯಾಯಿತು.

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಜಿಲ್ಲೆಗಳ 120 ವಿದ್ಯಾಸಂಸ್ಥೆಗಳ ತಂಡಗಳು ವಲಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಅದರಲ್ಲಿ ಪ್ರಾಥಮಿಕ ಹಂತದ ಪರೀಕ್ಷೆಯಲ್ಲಿ ಶಿಶುಗೃಹ ಸೀನಿಯರ್ ಸ್ಕೂಲ್, ಸ್ಟ್ಯಾಂಡರ್ಡ್ ಪಬ್ಲಿಕ್ ಸ್ಕೂಲ್, ಕಾರ್ಮೆಲ್ ಪ್ರೌಢಶಾಲೆ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಎಸ್‌ಜೆಆರ್ ಕೆಂಗೇರಿ ಪಬ್ಲಿಕ್ ಸ್ಕೂಲ್ ಮತ್ತು ಆರ್ಮಿ ಪಬ್ಲಿಕ್ ಸ್ಕೂಲ್‌ಗಳು ಮೊದಲ ಆರು ಸ್ಥಾನ ಪಡೆದು ವಲಯ ಮಟ್ಟದ ಅಂತಿಮ ಹಂತಕ್ಕೆ ಆಯ್ಕೆಯಾಗಿದ್ದವು.

'ಪೈಲೆಟ್ ನಂ.1 ಚಾಯ್ಸ್' ಮೊದಲ ಸುತ್ತಿನಲ್ಲಿ ದ್ವಿತೀಯ, 'ವಸುದೈವ ಕುಟುಂಬಕಂ' ಎರಡನೇ ಸುತ್ತು ಮತ್ತು 'ದೃಶ್ಯ' ಮೂರನೇ ಸುತ್ತಿನಲ್ಲಿ ತೃತೀಯ ಸ್ಥಾನ ಪಡೆದಿದ್ದ ಆರ್ಮಿ ಪಬ್ಲಿಕ್ ಸ್ಕೂಲ್‌ನ ನಿಯತಿ ಮತ್ತು ರಿದಂ ಅವರು 'ನಿಮ್ಮ ಪ್ರಶ್ನೆ ನಮ್ಮ ಉತ್ತರ' ನಾಲ್ಕನೇ ಸುತ್ತಿನಲ್ಲಿ ದ್ವಿತೀಯ ಸ್ಥಾನಕ್ಕೇರಿದ್ದರು. 'ಫಟಾಫಟ್' ಅಂತಿಮ ಸುತ್ತಿನಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಎಲ್ಲರನ್ನು ಹಿಂದಿಕ್ಕಿ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದರು.

ಎರಡನೇ ಸ್ಥಾನಕ್ಕೆ ಟೈಬ್ರೇಕರ್: ಮೊದಲ ಸುತ್ತಿನಿಂದ ನಾಲ್ಕನೇ ಸುತ್ತಿನವರೆಗೆ ಶಿಶುಗೃಹ ಸೀನಿಯರ್ ಸ್ಕೂಲ್‌ನ ಹಂಸಿನಿ ಮತ್ತು ತ್ರಿವಿಕ್ರಮ್ ಮೊದಲ ಸ್ಥಾನವನ್ನು ಕಾಯ್ದುಕೊಂಡಿದ್ದರು. ಆದರೆ ಅಂತಿಮ ಸುತ್ತು ಅವರ ಕೈ ಹಿಡಿಯಲಿಲ್ಲ.

ಒಂದು ಹಂತದಲ್ಲಿ 'ಸ್ಟೆಪ್ ಅಪ್' ಪಡೆದು ಸರಿ ಉತ್ತರ ನೀಡಿ 15 ಅಂಕ ಗಳಿಸುವ ಅವಕಾಶ ಹಂಸಿನಿ ಮತ್ತು ತ್ರಿವಿಕ್ರಮ್‌ಗೆ ಇತ್ತು. ಆದರೆ, ಡಿಫಾಲ್ಟ್ ಪಡೆದು ಸರಿ ಉತ್ತರ ನೀಡಿದ್ದರಿಂದ 10 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿ ಉಳಿದರು. ಎಸ್‌ಜೆಆರ್ ಕೆಂಗೇರಿಯ ವರುಣ್ ಮತ್ತು ಸಮೀರ್ ಸ್ಟೆಪ್-ಅಪ್ ಪಡೆದು ಉತ್ತರ ನೀಡುವ ಮೂಲಕ ನಾಲ್ಕನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಜಿಗಿದರು. ಎರಡೂ ತಂಡಗಳು ಸಮವಾಗಿ ಅಂಕ ಗಳಿಸಿದ್ದರಿಂದ ಎರಡನೇ ಸ್ಥಾನಕ್ಕೆ ಟೈಬ್ರೇಕರ್ ಪ್ರಶ್ನೆ ನೀಡಬೇಕಾಯಿತು. ಎಸ್‌ಜೆಆರ್ ಕೆಂಗೇರಿಯ ವಿದ್ಯಾರ್ಥಿಗಳು ಇಲ್ಲಿಯೂ ಜಾಣ್ಮೆ ತೋರುವ ಮೂಲಕ ಎರಡನೇ ಸ್ಥಾನ ಪಡೆದರು. ಅಷ್ಟೇ ಅಂಕ ಗಳಿಸಿದ್ದ ಶಿಶುಗೃಹ ವಿದ್ಯಾರ್ಥಿಗಳು ಮೂರನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ಸ್ಪರ್ಧಿಗಳು ಉತ್ತರಿಸಲಾಗದೇ ಪ್ರೇಕ್ಷಕರ ಕಡೆಗೆ ಬಂದ ಪ್ರಶ್ನೆಗಳಿಗೆ ಮತ್ತು ಪ್ರೇಕ್ಷಕರಿಗಾಗಿಯೇ ಸೀಮಿತವಾದ ಪ್ರಶ್ನೆಗಳಿಗೆ ಉತ್ತರಿಸಿ ಹಲವರು ಸ್ಥಳದಲ್ಲೇ ಬಹುಮಾನ ಪಡೆದರು. 'ಕ್ಯೂರಿಯಾಸಿಟಿ ಸೊಲ್ಯುಷನ್ಸ್' ಸಂಸ್ಥೆಯ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಆಕರ್ಷಕವಾಗಿ ಕ್ವಿಜ್ ನಡೆಸಿಕೊಟ್ಟರು.

ಬೆಂಗಳೂರಿನಲ್ಲಿ ನಡೆದ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆಯಲ್ಲಿ ಬೆಂಗಳೂರು ವಲಯ ಮಟ್ಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಆರ್ಮಿ ಪಬ್ಲಿಕ್ ಸ್ಕೂಲ್‌ನ ನಿಯತಿ ಮತ್ತು ರಿದಂ ಅವರಿಗೆ 'ಪೈಲೆಟ್ ಪೆನ್' ಪ್ರಾದೇಶಿಕ ವ್ಯವಹಾರ ವ್ಯವಸ್ಥಾಪಕ ಗಣೇಶ್ ಹೆಗಡೆ ಮತ್ತು ಟಿಪಿಎಂಎಲ್ ಬ್ಯುಸಿನೆಸ್ ಆ್ಯಂಡ್ ಆಪರೇಶನ್ ನ್ಯಾಷನಲ್ ಹೆಡ್ ಆನಂದ್ ಬಿಲ್ಡಿಕರ್ ಮತ್ತು ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ ಬಹುಮಾನ ವಿತರಿಸಿ ಶುಭ ಕೋರಿದರು ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಸಕಾರಾತ್ಮಕ ಚಿಂತನೆ ಅಗತ್ಯ: ನ್ಯಾ. ಬಿ.ಎಸ್. ಪಾಟೀಲ್

ಎಷ್ಟೇ ಪ್ರತಿಭಾವಂತರಾಗಿದ್ದರೂ ಚಿಂತನೆ ನಕಾರಾತ್ಮಕವಾಗಿದ್ದರೆ ಅವರು ಸ್ವಾರ್ಥಿಗಳಾಗುತ್ತಾರೆ. ಹಿಂಸಾಪ್ರಿಯರಾಗುತ್ತಾರೆ. ಅಂಥವರು ಯಾವುದೇ ಹುದ್ದೆಯಲ್ಲಿದ್ದರೂ ಭ್ರಷ್ಟರಾಗುತ್ತಾರೆ. ಸಕಾರಾತ್ಮಕ ಚಿಂತನೆ ಇದ್ದರೆ ಪಾರದರ್ಶಕರಾಗಿದ್ದುಕೊಂಡು ಸಮಾಜಕ್ಕೆ ಹಿತ ಬಯಸುತ್ತಾರೆ. ದೇಶಕ್ಕೆ ಆಸ್ತಿಯಾಗುತ್ತಾರೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ತಿಳಿಸಿದರು.

'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೀವು ಸಕಾರಾತ್ಮಕ ಮತ್ತು ಅತ್ಯುತ್ತಮ ಚಿಂತನೆಯ ಮೂಲಕ ದೇಶದ ಭವಿಷ್ಯವನ್ನು ರೂಪಿಸುವವರಾಗಿ ಎಂದು ವಿದ್ಯಾರ್ಥಿಗಳನ್ನು ಹಾರೈಸಿದರು.

ಮಕ್ಕಳಲ್ಲಿ ಅಡಗಿರುವ ಶಕ್ತಿ, ಬುದ್ಧಿವಂತಿಕೆ ಹೊರಬರಬೇಕಿದ್ದರೆ ಹೆತ್ತವರು, ವಿದ್ಯಾಸಂಸ್ಥೆಗಳು, ಸಂಘಟನೆಗಳು ಅನೇಕ ಪ್ರಯತ್ನಗಳನ್ನು ಮಾಡುತ್ತ ಇರುತ್ತವೆ. 'ಪ್ರಜಾವಾಣಿ'ಯು ರಸಪ್ರಶ್ನೆ ಸ್ಪರ್ಧೆ ಮೂಲಕ ಮಕ್ಕಳ ಜ್ಞಾನಮಟ್ಟವನ್ನು ಹೆಚ್ಚಿಸುತ್ತಿದೆ ಎಂದು ಶ್ಲಾಘಿಸಿದರು.

'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಮಾತನಾಡಿ, 'ಪ್ರಜಾವಾಣಿಯು ರಾಜ್ಯಮಟ್ಟದಲ್ಲಿ ಜ್ಞಾನಧಾರೆಯ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಿದೆ. ಅದು ಹಳ್ಳಿ ಹಳ್ಳಿಗೆ ತಲುಪಬೇಕು. ವಿದ್ಯಾರ್ಥಿಗಳು ನಿತ್ಯ ಒಂದು ಕನ್ನಡ, ಒಂದು ಇಂಗ್ಲಿಷ್ ಪತ್ರಿಕೆಯನ್ನು ಓದಬೇಕು. ದಿನಕ್ಕೆ ಒಂದು ಗಂಟೆ ಸಾಹಿತ್ಯ ಮತ್ತು ಸಾಹಿತ್ಯೇತರ ಕೃತಿಗಳನ್ನು ಓದಲು ಸಮಯ ಮೀಸಲಿಡಬೇಕು' ಎಂದು ಸಲಹೆ ನೀಡಿದರು.

'ಪೈಲೆಟ್ ಪೆನ್' ಪ್ರಾದೇಶಿಕ ವ್ಯವಹಾರ ವ್ಯವಸ್ಥಾಪಕ ಕುಮಾರ್ ಆರ್., 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ.ನ ಸಿಒಒ ಕಿರಣ್ ಸುಂದರರಾಜನ್, ಎಚ್‌ಆರ್ ರಾಜೀವ್ ವೇಲೂರು ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಪರಿಹಾರ ಮೊತ್ತಕ್ಕೆ ತೆರಿಗೆ: ಆಕ್ಷೇಪ

ಬೆಂಗಳೂರು: ಭೂ ಸ್ವಾಧೀನ ಪರಿಹಾರಕ್ಕೆ ಆದಾಯ ತೆರಿಗೆ ವಿಧಿಸಿದ ಕ್ರಮವನ್ನು ಪ್ರಶ್ನಿಸಿ ಮಂಗಳೂರಿನ ಪ್ರಮುಖ ಉದ್ಯಮಿಯೊಬ್ಬರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಹೈಕೋರ್ಟ್, ಆದಾಯ ತೆರಿಗೆ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಈ ಸಂಬಂಧ ಮಂಗಳೂರಿನ ಉದ್ಯಮಿ ಸುಪ್ರಿಯಾ ಎಸ್.ಶೆಟ್ಟಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಮಧ್ಯಂತರ ಆದೇಶ ನೀಡಿರುವ ನ್ಯಾಯಪೀಠ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ ಸೇರಿದಂತೆ ಪ್ರಕರಣದಲ್ಲಿನ ಒಟ್ಟು ಎಂಟು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದೆ. ವಿಚಾರಣೆಯನ್ನು 2025ರ ಜನವರಿ 22ಕ್ಕೆ ಮುಂದೂಡಿದೆ.



ಅರ್ಜಿದಾರರಿಗೆ ಸೇರಿದ 17 ಎಕರೆಗೂ ಹೆಚ್ಚಿನ ಜಮೀನಿನಲ್ಲಿ ಕೆಲ ಭಾಗವನ್ನು ರಾಷ್ಟ್ರೀಯ ಹೆದ್ದಾರಿ-169ರ ವಿಸ್ತರಣೆಗಾಗಿ 2020ರಲ್ಲಿ ಸ್ವಾಧೀನ ಮಾಡಿಕೊಳ್ಳಲಾಗಿತ್ತು. 'ಈ ಸಂಬಂಧ ನಮಗೆ ನೀಡಲಾದ ಪರಿಹಾರ ಧನದ ಮೊತ್ತ ₹1.9 ಕೋಟಿಯಲ್ಲಿ ತೆರಿಗೆ ಅಧಿಕಾರಿಗಳು ಮೂಲದಲ್ಲೇ ತೆರಿಗೆ ಕಡಿತ (ಟಿಡಿಎಸ್) ಮಾಡಿಕೊಂಡಿದ್ದಾರೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ರಾಷ್ಟ್ರೀಯ ಹೆದ್ದಾರಿ ಕಾಯ್ದೆ-1956ರ ಪ್ರಕಾರ ನಮಗೆ, 2013ರ ಭೂಪರಿಹಾರ ಕಾಯ್ದೆ ಅನ್ವಯವಾಗುತ್ತದೆ. ಹಾಗಾಗಿ, ಪರಿಹಾರ ಧನಕ್ಕೆ ತೆರಿಗೆ ವಿನಾಯಿತಿ ಘೋಷಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ವಿ.ಧನಂಜಯ ವಾದ ಮಂಡಿಸಿದರು.

ಪಿಜಿಸಿಇಟಿ: 15,670 ಸೀಟು ಉಳಿಕೆ

ಬೆಂಗಳೂರು: ಎಂ.ಬಿ.ಎ, ಎಂ.ಸಿ.ಎ, ಎಂ.ಇ, ಎಂ.ಟೆಕ್ ಮತ್ತು ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಅಂತಿಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ಅಂತಿಮ ಸುತ್ತಿನಲ್ಲಿ 993 ಸೀಟು ಹಂಚಿಕೆಯಾಗಿದೆ. ಇನ್ನೂ 15,670 ಸೀಟು ಬಾಕಿ ಉಳಿದಿವೆ. ಇದರಲ್ಲಿ ಎಂ.ಬಿ.ಎಗೆ ಸೇರಿದ ಸುಮಾರು 9 ಸಾವಿರ, ಎಂ.ಸಿ.ಎ 4 ಸಾವಿರ ಮತ್ತು ಎಂ.ಟೆಕ್‌ಗೆ ಸೇರಿದ 3 ಸಾವಿರ ಸೀಟು ಉಳಿದಿವೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಪಿಜಿ-ಸಿಇಟಿಗೆ ಒಟ್ಟು 36,648 ಸೀಟು ಲಭ್ಯವಿತ್ತು. ಇದರಲ್ಲಿ ಮೊದಲ ಮತ್ತು ಎರಡನೇ ಸುತ್ತಿನಲ್ಲಿ 24 ಸಾವಿರ ಸೀಟು ಹಂಚಿಕೆ ಮಾಡಲಾಗಿತ್ತು. ಅದರಲ್ಲಿ ಸುಮಾರು 4 ಸಾವಿರ ಅಭ್ಯರ್ಥಿಗಳು ತಮ್ಮ ಸೀಟನ್ನು ರದ್ದುಪಡಿಸಿಕೊಂಡಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಚಿತ್ರಾವಳಿ

ನಗರದ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ನಡೆದ ಕ್ಷಿತಿ ನೃತ್ಯ ಕಲಾ ಕೇಂದ್ರ ಹಾಗೂ ಸೌಖ್ಯ ಅಕಾಡೆಮಿಯ ವಾರ್ಷಿಕೋತ್ಸವದಲ್ಲಿ ಶಾಲೆಯ ಮಕ್ಕಳು ನವದುರ್ಗೆಯರಿಂದ ಮಹಿಷಾಸುರ ಸಂಹಾರ ನೃತ್ಯ ಪ್ರದರ್ಶಿಸಿದರು.

'ನಮ್ಮ ಮೆಟ್ರೊ' ಹೂಡಿ ನಿಲ್ದಾಣದಲ್ಲಿ ಸನ್ ಮೊಬಿಲಿಟಿಯ 19ನೇ ಬ್ಯಾಟರಿ ಸ್ವಾಪಿಂಗ್ ಕಾರ್ಯಾಚರಣೆ ಕೇಂದ್ರವನ್ನು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಉದ್ಘಾಟಿಸಿದರು. ಬಿಎಂಆರ್‌ಸಿಎಲ್ ಮತ್ತು ಸನ್ ಮೊಬಿಲಿಟಿ ಅಧಿಕಾರಿಗಳು ಉಪಸ್ಥಿತರಿದ್ದರು.

ಲಂಚ: ಲೋಕಾಯುಕ್ತ ಬಲೆಗೆ ಪಿಡಿಒ

ಪ್ರಜಾವಾಣಿ ವಾರ್ತೆ

ಪ್ರೀತಿರಾಜ್

ಕಲಬುರಗಿ: ಪಂಪ್ ಆಪರೇಟರ್ ಅವರ ಬಾಕಿ ವೇತನ ಪಾವತಿ ಹಾಗೂ ಮರು ನೇಮಕ ಮಾಡಿಕೊಳ್ಳಲು ₹17 ಸಾವಿರ ಲಂಚ ಪಡೆದ ತಾಲ್ಲೂಕಿನ ಕವಲಗಾ (ಬಿ) ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಪ್ರೀತಿರಾಜ್ ಅವರು ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಪಂಪ್ ಆಪರೇಟರ್ ಗುರುಸಿದ್ದಯ್ಯ ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದಾರೆ.

ಗುರುಸಿದ್ದಯ್ಯ ಅವರ ಆರು ತಿಂಗಳ ಬಾಕಿ ವೇತನ ಮಂಜೂರು ಮಾಡಿ, ಮರು ನೇಮಕ ಮಾಡಿಕೊಳ್ಳಲು ಪ್ರೀತಿ ಅವರು ₹17 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಗರದ ಧರಿಯಾಪುರದ ಉಪ್ಪಿನ ಲೇಔಟ್‌ನ ಮನೆಯಲ್ಲಿ ಫೋನ್‌ಪೇ ಮೂಲಕ ಲಂಚದ ಹಣ ಪಡೆದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಪ್ರೀತಿ ಅವರನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಅರುಣ್ ಕುಮಾರ್, ಸಿಬ್ಬಂದಿ ಮಸೂದ್, ಮಲ್ಲಿನಾಥ್, ಬಸವರಾಜ್, ಸಂತೋಷ, ಮಧುಮತಿ ಮತ್ತು ಪ್ರಮೋದ್ ಅವರಿದ್ದ ತಂಡ ದಾಳಿ ನಡೆಸಿದೆ.

ಸಿ.ಎಂ ಅವಹೇಳನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ದೇವರಹಿಪ್ಪರಗಿ (ವಿಜಯಪುರ ಜಿಲ್ಲೆ): ಸಾಮಾಜಿಕ ಜಾಲತಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ ಕಾರಣಕ್ಕೆ ಬೋರಗಿ ಗ್ರಾಮದ ಕಾಂಗ್ರೆಸ್ ಮುಖಂಡ ಈರಣ್ಣ ರಟಗಲ್ ಎಂಬಾತನನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಆರೋಪಿಯ ಬಂಧನಕ್ಕೆ ಆಗ್ರಹಿಸಿ ಸಿಂದಗಿ ತಾಲ್ಲೂಕಿನ ಬೋರಗಿ ಗ್ರಾಮದಲ್ಲಿ ಭಾನುವಾರ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು.

'ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಹೋರಾಟದ ಸಂದರ್ಭದಲ್ಲಿ ಲಾಠಿಚಾರ್ಜ್ ನಡೆಸಿದ್ದಕ್ಕೆ ಆರೋಪಿಯು ಅವಹೇಳನಕಾರಿ ಪದಗಳನ್ನು ಬಳಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದ.

ಶೋಷಿತ ಸಮುದಾಯಗಳ ಮಂಥನಾ ಸಮಾವೇಶದಲ್ಲಿ ಪುರುಷೋತ್ತಮ ಬಿಳಿಮಲೆ ಪ್ರಶ್ನೆ

ಆರ್‌ಎಸ್‌ಎಸ್ ಪಡೆದಿರುವ ಭೂಮಿ ಎಷ್ಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಎಸ್‌ಎಸ್‌ನವರು 2014ರ ಈಚೆಗೆ ಎಷ್ಟು ಭೂಮಿಯನ್ನು ಪಡೆದುಕೊಂಡಿದ್ದಾರೆ ಎಂಬುದರ ಮಾಹಿತಿ ಇಲ್ಲ. ಅವರ ಬಳಿ ಈಗ ಎಷ್ಟು ಜಮೀನು ಇದೆ ಎಂಬುದು ಈ ಹೊತ್ತಿನ ಬಹುದೊಡ್ಡ ಪ್ರಶ್ನೆಯಾಗಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

'ಕರ್ನಾಟಕ ಜನಶಕ್ತಿ' ಸಂಘಟನೆಯು ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ಶೋಷಿತ ಸಮುದಾಯಗಳ ಮಂಥನಾ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಕ್ಫ್ ಮಂಡಳಿ ಮತ್ತು ಅದರ ಬಳಿ ಇರುವ ಜಮೀನಿನ ಬಗ್ಗೆ ನಾವು ದೀರ್ಘವಾಗಿ ಮಾತನಾಡಿದ್ದೇವೆ. ಆದರೆ ದೇಶದ ಶೇ 58ರಷ್ಟಿರುವ ಶೋಷಿತ ಸಮುದಾಯಗಳ ಬಳಿ ಒಂದಿಂಚೂ

ಪುರುಷೋತ್ತಮ ಬಿಳಿಮಲೆ

ಜಮೀನಿಲ್ಲ ಎಂಬುದರ ಬಗ್ಗೆ ಮಾತನಾಡುವುದಿಲ್ಲ. ಆರ್‌ಎಸ್‌ಎಸ್‌ನವರ ಬಳಿ ಎಷ್ಟು ಜಮೀನಿದೆ ಎಂಬುದರ ಬಗ್ಗೆ ಮಾತನ್ನು ಆಡುವುದಿಲ್ಲ' ಎಂದರು.

'ಆರ್‌ಎಸ್‌ಎಸ್‌ನವರು ವನವಾಸಿ ಮತ್ತಿತರ 22 ಸಂಘಟನೆಗಳ ಹೆಸರಿನಲ್ಲಿ, ಹತ್ತು ವರ್ಷಗಳಲ್ಲಿ ದೇಶದಾದ್ಯಂತ ಜಮೀನು ಪಡೆದುಕೊಂಡಿದ್ದಾರೆ. ಆ ಬಗ್ಗೆ ಯಾರಿಗೂ ಮಾಹಿತಿ ಇಲ್ಲ. ಭೂಮಿ ಮೇಲೆ ಪುನಃ ಅಧಿಕಾರ ಸ್ಥಾಪಿಸುವ ಹುನ್ನಾರದ ಭಾಗವಾಗಿ ಅದನ್ನು ಮಾಡುತ್ತಿದ್ದಾರೆ' ಎಂದರು.

'ಈ ಮೊದಲು ಜಮೀನಿನ ಸಂಬಂಧ ಜಮೀನ್ದಾರ ಮತ್ತು ಒಕ್ಕಲು ಮಾಡುವವರ ಮಧ್ಯೆ ಮಾತ್ರ ಇತ್ತು. ಈಗ ಅಧಿಕಾರ ಪಡೆಯುವ ಸಂಚಿನ ಭಾಗವಾಗಿ ಜಮೀನಿನ ವಿಚಾರದಲ್ಲಿ ಧರ್ಮವನ್ನು ಸೇರಿಸಲಾಗುತ್ತಿದೆ. ಆರ್‌ಎಸ್‌ಎಸ್ ಮತ್ತು ಕೆಲಸಗಾರರ ಸಂಬಂಧವಾಗಿ ಬದಲಾಗಿದೆ. ಭೂಮಿಯ ಹಂಚಿಕೆಯಲ್ಲಿನ ಈ ಸಮಸ್ಯೆ ದೇಶದ ಅತ್ಯಂತ ದೊಡ್ಡ ಸಮಸ್ಯೆ. ಈ ಬಗ್ಗೆ ಗಂಭೀರವಾಗಿ ಯೋಚಿಸುವ ಅಗತ್ಯವಿದೆ' ಎಂದರು.

'ಭೂಮಿಯ ಹಕ್ಕಿನ ಬಗ್ಗೆ ಮಾತನಾಡುವವರನ್ನು ನಕ್ಸಲರು ಎಂದು ಬಿಂಬಿಸಲಾಗುತ್ತಿದೆ ಮತ್ತು ಅವರನ್ನು ಕೊಲ್ಲಲಾಗುತ್ತಿದೆ. ಹೀಗಾಗಿ ಭೂಮಿಯ ಹಕ್ಕಿನ ಬಗ್ಗೆ ಮಾತನಾಡುವಲ್ಲಿ ಹಲವಾರು ಮಿತಿ ಮತ್ತು ಅಪಾಯಗಳಿವೆ. ಆದರೂ ಆ ಬಗ್ಗೆ ಮಾತನಾಡಲೇಬೇಕಿದೆ. ನಕ್ಸಲರ ಹೋರಾಟದ ವಿಧಾನವನ್ನು ಒಪ್ಪದಿದ್ದರೂ, ಭೂಮಿಯ ಹಕ್ಕಿನ ಬಗ್ಗೆ ಅವರು ಎತ್ತಿರುವ ಪ್ರಶ್ನೆಗಳು ಸಾಮಾಜಿಕ ಸಮಸ್ಯೆಗಳೇ ಎಂಬುದನ್ನು ಒಪ್ಪಬೇಕಾಗುತ್ತದೆ. ಈ ಎಲ್ಲ ಹುನ್ನಾರಗಳನ್ನು ಅರ್ಥಮಾಡಿಕೊಂಡು ಹೋರಾಡಬೇಕಿದೆ' ಎಂದರು.

ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಸದಸ್ಯ ಎನ್.ವೆಂಕಟೇಶ್ ಅವರು ಮಾತನಾಡಿ, 'ಸಾಮಾಜಿಕ ನ್ಯಾಯ, ಭೂಮಿಯ ಹಕ್ಕು ಮೊದಲಾದ ಸುಧಾರಣೆಗಳನ್ನು ಸಂವಿಧಾನ ಕೊಟ್ಟಿದೆ. ಅಷ್ಟೋ ಇಷ್ಟೋ ಮಟ್ಟಿಗೆ ಅವುಗಳ ಅನುಷ್ಠಾನವೂ ಬಂದಿತ್ತು. ಆದರೆ 2014ರ ನಂತರ ಬಂದ ಬಿಜೆಪಿ ನೇತೃತ್ವದ ಸರ್ಕಾರ ಅವೆಲ್ಲವನ್ನೂ ತೆಗೆದು ಹಾಕುತ್ತಿದೆ. ಮತ್ತೆ ಹಳೆಯ ವ್ಯವಸ್ಥೆಯನ್ನೇ ತರುತ್ತಿದೆ. ಶೋಷಣೆ ಮತ್ತು ದಬ್ಬಾಳಿಕೆಗೆ ಸಂಬಂಧಪಟ್ಟ ಎಲ್ಲ ವಿಚಾರಗಳು ಮತ್ತೆ ಮೈದಾಳುವಂತೆ ಮಾಡುವ ಮೂಲಕ ಸಂಘ ಪರಿವಾರ ಮತ್ತು ಮನು ಧರ್ಮದ ಕಾರ್ಯಸೂಚಿಯನ್ನು ಜಾರಿಗೆ ತರುತ್ತಿದೆ' ಎಂದರು.

'ಪ್ರಸ್ತುತತೆ ಕಳೆದುಕೊಂಡ ಸಾಹಿತಿಗಳು'

'ಕನ್ನಡದ ಸಾಹಿತಿಗಳು ಅಪ್ರಸ್ತುತವಾಗಿದ್ದಾರೆ. ಇದನ್ನು ಹೇಳಲು ಬೇಸರವಾಗುತ್ತದೆ' ಎಂದು ಪುರುಷೋತ್ತಮ ಬಿಳಿಮಲೆ ಹೇಳಿದರು.

'ಇಂದಿನ ಸಾಮಾಜಿಕ ಸಮಸ್ಯೆಗಳ ಬಗ್ಗೆ, ಕನ್ನಡದ ಶಾಲೆಗಳು ಮುಚ್ಚುತ್ತಿರುವುದರ ಬಗ್ಗೆ ಯಾವೊಬ್ಬ ಸಾಹಿತಿಯಾಗಲೀ, ಪ್ರಾಧ್ಯಾಪಕರಾಗಲೀ ಮಾತನಾಡುವುದಿಲ್ಲ. ನನ್ನ ಪುಸ್ತಕವನ್ನು ತೆಗೆದುಕೊಳ್ಳುವವರು ಯಾರೂ ಇಲ್ಲ ಎಂಬುದಷ್ಟೇ ಅವರ ಗೋಳು. ಕನ್ನಡವೇ ಇಲ್ಲದಿದ್ದರೆ ಅವರ ಪುಸ್ತಕ ತೆಗೆದುಕೊಳ್ಳುವವರು ಎಲ್ಲಿರುತ್ತಾರೆ' ಎಂದರು.

ಕೆಪಿಎಸ್‌ಸಿ ಪರೀಕ್ಷೆ: ತಡೆ ಆದೇಶ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಇದೇ ತಿಂಗಳ 29ರಂದು ನಿಗದಿಯಾಗಿರುವ ಮರು ಪರೀಕ್ಷೆಗೆ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ತೆರವುಗೊಳಿಸಿದೆ.

ಅಭ್ಯರ್ಥಿಯಾದ ಬೆಳಗಾವಿಯ ಸ್ಫೂರ್ತಿ ಬೈರಪ್ಪನವರ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರು ವಿಚಾರಣೆ ನಡೆಸಿ; ಮರು ಪರೀಕ್ಷೆಗೆ 2024ರ ಅಕ್ಟೋಬರ್ 16ರಂದು ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ತೆರವುಗೊಳಿಸಿತು.

'ಮರು ಪರೀಕ್ಷೆಯನ್ನು ಇದೇ 29ರಂದು ನಿಗದಿಪಡಿಸಲಾಗಿದೆ. ಅರ್ಜಿದಾರರು ಪರೀಕ್ಷೆಯಲ್ಲಿ ಭಾಗವಹಿಸಿದರೆ ಮತ್ತು ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಅರ್ಜಿ ಊರ್ಜಿತ ಆಗುವುದಿಲ್ಲ. ಹಾಗಾಗಿ, ಅರ್ಜಿದಾರರು ತಮ್ಮ ವಾದ ಏನೇ ಇದ್ದರೂ ಅದನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಮುಂದೆ ಮಂಡಿಸಿ

ಹೈಕೋರ್ಟ್ ಸುದ್ದಿ

ಸೂಕ್ತ ಪರಿಹಾರ ಕಂಡುಕೊಳ್ಳಬಹುದು. ಕೆಪಿಎಸ್‌ಸಿ, ಅರ್ಜಿದಾರರ ಉತ್ತರ ಪತ್ರಿಕೆಗಳನ್ನು ಜೋಪಾನವಾಗಿ ಇರಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

2024ರ ಆಗಸ್ಟ್ 27ರಂದು ಕೆಪಿಎಸ್‌ಸಿ ನೇಮಕಾತಿಗಾಗಿ ಪೂರ್ವಭಾವಿ ಪರೀಕ್ಷೆ ನಡೆಸಿತ್ತು. ಅದರಲ್ಲಿ 2.10 ಲಕ್ಷ ಅರ್ಜಿ ಸಲ್ಲಿಸಿದ್ದವರ ಪೈಕಿ 1.31 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. 'ಪ್ರಶ್ನೆ ಪತ್ರಿಕೆಯನ್ನು ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡುವಲ್ಲಿ ಲೋಪಗಳು ಉಂಟಾಗಿವೆ' ಎಂದು ಆಕ್ಷೇಪಿಸಿದ್ದ ಅಭ್ಯರ್ಥಿಗಳು ಪರೀಕ್ಷೆ ರದ್ದು ಮಾಡುವಂತೆ ಆಯೋಗದ ಮೇಲೆ ಒತ್ತಡ ಹಾಕಿದ್ದರು.

ಅಂತಿಮವಾಗಿ ಸರ್ಕಾರವೇ ಆಯೋಗಕ್ಕೆ ಪೂರ್ವಾಭಾವಿ ಪರೀಕ್ಷೆಯನ್ನು ರದ್ದುಗೊಳಿಸಿ ಹೊಸದಾಗಿ ಪರೀಕ್ಷೆ ಬರೆಯಲು ಆದೇಶಿಸಿತ್ತು.

ಅದರಂತೆ ಆಯೋಗವು ಇದೇ 29ಕ್ಕೆ ಮರುಪರೀಕ್ಷೆ ದಿನಾಂಕವನ್ನು ನಿಗದಿ ಮಾಡಿತ್ತು.

ಕೆಎಸ್‌ಪಿಸಿಬಿ ಅಧ್ಯಕ್ಷರ ನೇಮಕ: ನಿಯಮ ಸಡಿಲಿಕೆ ಪ್ರಶ್ನಿಸಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ ಸ್ಥಾನಕ್ಕೆ ಹೊಸ ನೇಮಕಾತಿ ಪ್ರಕ್ರಿಯೆ ಆರಂಭಿಸಿರುವ ಸರ್ಕಾರ, ಈ ಹುದ್ದೆಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಸಡಿಲಗೊಳಿಸಿದೆ' ಎಂದು ಆಕ್ಷೇಪಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಕುಣಿಗಲ್ ತಾಲ್ಲೂಕು ಅಮೃತೂರಿನ ಟಿ.ಎನ್. ರವಿಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಂ ಹುಯಿಲಗೋಳ, 'ಸರ್ಕಾರ ಕೆಎಸ್‌ಪಿಸಿಬಿ ಅಧ್ಯಕ್ಷರ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಆದರೆ, ವಿದ್ಯಾರ್ಹತೆ ಸಡಿಲಗೊಳಿಸುವ ಮೂಲಕ ನಿಯಮಗಳನ್ನು ಗಾಳಿಗೆ ತೂರಿದೆ' ಎಂದು ಆಕ್ಷೇಪಿಸಿದರು.

'ರಾಜ್ಯ ಸರ್ಕಾರ 2020ರ ಜೂನ್ 19ರಂದು ಅಂತಿಮಗೊಳಿಸಿರುವ ನಿಯಮದ ಪ್ರಕಾರ ಅಧ್ಯಕ್ಷ ಸ್ಥಾನಕ್ಕೆ ಪರಿಸರ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪರಿಸರ ವಿಜ್ಞಾನ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯನ್ನು ನಿಗದಿ ಮಾಡಲಾಗಿತ್ತು. ಇದನ್ನು ಹೈಕೋರ್ಟ್ ಕೂಡಾ ಅನುಮೋದಿಸಿದೆ. ಆದರೆ, ರಾಜ್ಯ ಸರ್ಕಾರ ಕಳೆದ ಆಗಸ್ಟ್ 31 ಮತ್ತು 17ರಂದು ಎರಡು ಆದೇಶಗಳನ್ನು ಹೊರಡಿಸಿ ಈ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡಿ ಸಡಿಲಗೊಳಿಸಿದೆ' ಎಂದರು.

'ವಿದ್ಯಾರ್ಹತೆ ಸಡಿಲಗೊಳಿಸಿರುವುದು ಸುಪ್ರೀಂ ಕೋರ್ಟ್, ಹೈಕೋರ್ಟ್ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆದೇಶಗಳಿಗೆ ತದ್ವಿರುದ್ಧವಾಗಿದೆ. ಅಂತೆಯೇ, ಇದು ಜಲಮಾಲಿನ್ಯ ನಿಯಂತ್ರಣ ಮತ್ತು ತಡೆ ಕಾಯ್ದೆ-1974ರ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಪರ ವಕೀಲರು, 'ಈ ಸಂಬಂಧ ಸರ್ಕಾರದಿಂದ ಮಾಹಿತಿ ಪಡೆಯಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

ಸಮುದಾಯ ಪ್ರಾಣಿ: ನಿಯಮಕ್ಕೆ ಗಡುವು

ಜನವರಿ 15ರ ಒಳಗೆ ಅನುಷ್ಠಾನಕ್ಕೆ ತರಲು ಪಾಲಿಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸಮುದಾಯ ಪ್ರಾಣಿಗಳ ಪಾಲನೆಗೆ ಬಿಬಿಎಂಪಿಯ ಮಾರ್ಗಸೂಚಿಗಳನ್ನು 2025ರ ಜನವರಿ 15ರೊಳಗೆ ಅನುಷ್ಠಾನಗೊಳಿಸಿಕೊಳ್ಳಲು ಗಡುವು ವಿಧಿಸಲಾಗಿದೆ.

2024ರ ಜುಲೈನಲ್ಲಿ ಪಾಲಿಕೆ ಸಮುದಾಯ ಪ್ರಾಣಿಗಳ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಬಿಬಿಎಂಪಿ ನಿರ್ಧರಿಸಿದೆ.

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ-1960, ಪ್ರಾಣಿಗಳ ಜನನ ನಿಯಂತ್ರಣ ನಿಯಮಗಳು-2023 ಮತ್ತು ಹೈಕೋರ್ಟ್ ಆದೇಶಗಳ ಪ್ರಕಾರ, ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗುವಂತೆ, ಭಾರತೀಯ ಜೀವಜಂತು ಕಲ್ಯಾಣ ಮಂಡಳಿಯ (ಎಡಬ್ಲ್ಯುಬಿಐ) ಮಾರ್ಗಸೂಚಿಗಳನ್ನು ಸರಳೀಕರಿಸಿ ಪಾಲಿಕೆ ಮಾರ್ಗಸೂಚಿ ಪ್ರಕಟಿಸಿದೆ. ಸುಪ್ರೀಂ ಕೋರ್ಟ್‌ನ ಆದೇಶಗಳನ್ನೂ ಅಳವಡಿಸಿಕೊಳ್ಳಲಾಗಿದೆ ಎಂದು ಪಶು ಸಂಗೋಪನೆ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

ಮಾರ್ಗಸೂಚಿ ಅನುಷ್ಠಾನದಲ್ಲಿ ವಿಫಲವಾದ ಸಂಘ, ಸಂಸ್ಥೆಗಳ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಲು ವಲಯದ ಸಹಾಯ ನಿರ್ದೇಶಕರಿಗೆ ಸೂಚಿಸಲಾಗಿದೆ. ಪ್ರಾಣಿಗಳ ಕಾನೂನುಗಳ ಅನುಷ್ಠಾನ ಮತ್ತು ಅನುಸರಣೆ ಮಾಡಿ, ಪರಿಸರ ಸಮತೋಲನವನ್ನು ಕಾಪಾಡಬೇಕು. ನಿಸರ್ಗದಲ್ಲಿರುವ ಪ್ರತಿಯೊಂದು ಪ್ರಭೇದಕ್ಕೂ ವಿಶಿಷ್ಟವಾದ ಪಾತ್ರವಿದೆ ಎಂದಿದ್ದಾರೆ.

ಮಾರ್ಗಸೂಚಿಯ ಪ್ರಮುಖ ಅಂಶಗಳು

- ಸಾಕುಪ್ರಾಣಿಗಳ ನಿರ್ವಹಣೆ, ಸಮುದಾಯದ ನಾಯಿಗಳಿಗೆ ಆಹಾರ ನೀಡುವ ಸ್ಥಳಗಳ ನಿಯೋಜನೆ, ಪ್ರಾಣಿಗಳ ಕಾನೂನುಗಳು ಮತ್ತು ಪ್ರಾಣಿಗಳ ಹಕ್ಕುಗಳು ಮತ್ತು ನಾಯಿ ಕಡಿತ ನಿರ್ವಹಣೆ ಬಗ್ಗೆ ನಿವಾಸಿಗಳಿಗೆ ಶಿಕ್ಷಣ ನೀಡುವುದು
- ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು/ಅಪಾರ್ಟ್‌ಮೆಂಟ್ ಮಾಲೀಕರ ಅಸೋಸಿಯೇಷನ್‌ಗಳು ಮಾರ್ಗಸೂಚಿಗಳನ್ನು ಜಾರಿ ಮಾಡಬೇಕು
- ಸಮುದಾಯದ ನಾಯಿಗಳು ಮತ್ತು ಬೆಕ್ಕುಗಳನ್ನು ಸ್ಥಳಾಂತರಿಸುವುದು, ಸಾಕುಪ್ರಾಣಿಗಳನ್ನು ನಿಷೇಧಿಸುವುದು, ಸಮುದಾಯದ ಫೀಡರ್‌ಗಳಿಗೆ ಕಿರುಕುಳ ನೀಡುವ ಮೂಲಕ ಪ್ರಾಣಿಗಳ ಆಹಾರ ಮತ್ತು ನೀರನ್ನು ಕಸಿದುಕೊಳ್ಳುವುದು, ನಾಯಿ ಕಡಿತದ ಸುಳ್ಳು ಪ್ರಕರಣಗಳನ್ನು ದಾಖಲಿಸುವುದು, ಪ್ರಾಣಿಗಳ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತು ಮಾರ್ಗಸೂಚಿಗಳ ಹೊರತಾಗಿಯೂ ಪ್ರಾಣಿ ಕ್ರೌರ್ಯ ಸಂಬಂಧಿಸಿದ ಸಮಸ್ಯೆಗಳ ಮೇಲೆ ಬಿಬಿಎಂಪಿ ಗಮನಹರಿಸುತ್ತದೆ
- ಸಾರ್ವಜನಿಕ ಅಥವಾ ಖಾಸಗಿ ಕಚೇರಿಗಳು, ಟೆಕ್ ಪಾರ್ಕ್‌ಗಳು, ಶಾಲೆಗಳು, ಕಾಲೇಜುಗಳು, ಉದ್ಯಾನಗಳು, ಶಾಪಿಂಗ್ ಮಾಲ್‌ಗಳು, ವಸತಿ ಕಲ್ಯಾಣ ಸಂಘಗಳು ಮತ್ತು ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು
- ಬಿಬಿಎಂಪಿಯ ಪಶು ಸಂಗೋಪನೆ ವಿಭಾಗದ ಇನ್‌ಸ್ಟಾಗ್ರಾಂನಿಂದ (@bbmp_animalhusbandry) ಮಾರ್ಗಸೂಚಿಗಳು, ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ 1533ಗೆ ಕರೆ ಮಾಡಬಹುದು

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ; ದಾಖಲೆಗಳ ಪ್ರದರ್ಶನ

ಮುನಿರತ್ನ ಅಮಾನತಿಗೆ 'ಕೈ' ಪಟ್ಟು: ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಅತ್ಯಾಚಾರ, ಜಾತಿನಿಂದನೆ ಮತ್ತು ಎಚ್ಐವಿ ಸೋಂಕು ಹಬ್ಬಿಸಲು ಯತ್ನಿಸಿದ ಆರೋಪ ಎದುರಿಸುತ್ತಿರುವ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಅಮಾನತು ಮಾಡುವಂತೆ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಸೋಮವಾರ ಪಟ್ಟುಹಿಡಿದರು. ಇದು ಸದನದಲ್ಲಿ ಕೋಲಾಹಲಕ್ಕೆ ಕಾರಣವಾಯಿತು.



ಮುನಿರತ್ನ

ನಿಯಮ 69ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ, 'ಮುನಿರತ್ನ ವಿರುದ್ಧ ಜಾತಿನಿಂದನೆ ಆರೋಪದಡಿ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪ ಸಾಬೀತಾಗಿದೆ. ಪೊಲೀಸರು ಈಗಾಗಲೇ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ. ಇಂತಹ ವ್ಯಕ್ತಿ ಸದನದಲ್ಲಿ ಇರಬಾರದು. ದಲಿತರನ್ನು ಅವಮಾನಿಸಿದ ವ್ಯಕ್ತಿಯನ್ನು ಶಾಸಕ ಸ್ಥಾನದಿಂದ ಅಮಾನತುಗೊಳಿಸಿ. ಅವರು ನಿರ್ದೋಷಿ ಎಂದು ನ್ಯಾಯಾಲಯದಲ್ಲಿ ಸಾಬೀತಾದರೆ ಸದನಕ್ಕೆ ಬರಲು ಅವಕಾಶ ನೀಡಿ' ಎಂದು ಆಗ್ರಹಿಸಿದರು.

'ಶಾಸಕರಾಗಿರುವ ವ್ಯಕ್ತಿಯೇ ದಲಿತರ ಸ್ವಾಭಿಮಾನಕ್ಕೆ ಧಕ್ಕೆ ತಂದಿದ್ದಾರೆ. ಶಾಸಕ ಸ್ಥಾನ ಮತ್ತು ಸದನಕ್ಕೆ ಇವರು ಕಳಂಕ ತಂದಿದ್ದಾರೆ. ಅವರನ್ನು ಅಮಾನತು ಮಾಡಿ ಸಭಾಧ್ಯಕ್ಷರು ಆದೇಶ ಹೊರಡಿಸಬೇಕು. ಪೀಠ ಆದೇಶ ಹೊರಡಿಸುವವರೆಗೂ ನಾವು ಸುಮ್ಮನೆ ಕೂರುವುದಿಲ್ಲ' ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯ, ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ., ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ಹಲವರು ನರೇಂದ್ರಸ್ವಾಮಿ ಅವರ ಮಾತನ್ನು ಬೆಂಬಲಿಸಿದರು. ಪ್ರಸಾದ್ ಅಬ್ಬಯ್ಯ ಮಾತು ಮುಂದುವರಿಸುತ್ತಿದ್ದಂತೆಯೇ ಜೆಡಿಎಸ್ ಸದಸ್ಯರು ಎಚ್.ಡಿ. ರೇವಣ್ಣ ನೇತೃತ್ವದಲ್ಲಿ ಆಕ್ಷೇಪ ಎತ್ತಿದರು. ನ್ಯಾಯಾಲಯದಲ್ಲಿರುವ ಪ್ರಕರಣದ ಚರ್ಚೆಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದ ರೇವಣ್ಣ ತಮ್ಮ ಪಕ್ಷದ ಸದಸ್ಯರೊಂದಿಗೆ ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು.

ಈ ವೇಳೆ ರೇವಣ್ಣ ವಿರುದ್ಧ ಹರಿಹಾಯ್ದ ನರೇಂದ್ರಸ್ವಾಮಿ ಅವರು, ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಇನ್ನೊಂದೆಡೆ ಕಾಂಗ್ರೆಸ್ ಸದಸ್ಯರು, 'ದಲಿತರ ವಿರೋಧಿ ಬಿಜೆಪಿ, ಜೆಡಿಎಸ್‌ಗೆ ಧಿಕ್ಕಾರ' ಎಂದು ಘೋಷಣೆ ಕೂಗಲಾರಂಭಿಸಿದರು. ಪೀಠದಲ್ಲಿದ್ದ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ಪರಿಸ್ಥಿತಿ ನಿಯಂತ್ರಿಸಲು ಯತ್ನಿಸಿದರು. ಅಷ್ಟರಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಪೀಠಕ್ಕೆ ಮರಳಿದರು.

'ನ್ಯಾಯಾಲಯದಲ್ಲಿರುವ ಪ್ರಕರಣದ ಕುರಿತು ಚರ್ಚೆಗೆ ಅವಕಾಶವಿಲ್ಲ' ಎಂದು ಬಿಜೆಪಿಯ ವಿ.ಸುನಿಲ್ ಕುಮಾರ್ ಅವರು ಕ್ರಿಯಾಲೋಪ ಎತ್ತಿದರು.

'ಅಶೋಕಣ್ಣ ನಿಮ್ಮ ರಕ್ಷಣೆಗಾಗಿ ನಾವು ಬಂದಿದ್ದೇವೆ' ಎಂದು ಕಾಂಗ್ರೆಸ್ ಸದಸ್ಯರು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನುದ್ದೇಶಿಸಿ ಹೇಳಿದರು. ಗದ್ದಲ ಹೆಚ್ಚಾಗುತ್ತಿದ್ದಂತೆಯೇ ಹತ್ತು ನಿಮಿಷ ಕಲಾಪ ಮುಂದೂಡಿದ ಸಭಾಧ್ಯಕ್ಷರು, ತಮ್ಮ ಕೊಠಡಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಸಭೆ ನಡೆಸಿದರು.

ಪುನಃ ಕಲಾಪ ಆರಂಭಿಸಿದ ಸಭಾಧ್ಯಕ್ಷರು, 'ಚರ್ಚೆಯ ಬೇಡಿಕೆ ಮತ್ತು ಕ್ರಿಯಾಲೋಪದ ಕುರಿತು ಮಂಗಳವಾರ ಬೆಳಿಗ್ಗೆ ತೀರ್ಮಾನ ನೀಡುತ್ತೇನೆ' ಎಂದರು. ಬಳಿಕ ಪ್ರಶ್ನೋತ್ತರ ಕಲಾಪ ಆರಂಭವಾಯಿತು.

ಸದನದಲ್ಲಿದ್ದ ಮುನಿರತ್ನ

ತಮ್ಮ ಕುರಿತು ಚರ್ಚೆ ನಡೆಯುತ್ತಿದ್ದಾಗ ಬಿಜೆಪಿ ಸದಸ್ಯ ಮುನಿರತ್ನ ಅವರು ಸದನದಲ್ಲೇ ಇದ್ದರು. ಚರ್ಚೆ ಆರಂಭಕ್ಕೂ ಮೊದಲು ಬಿಜೆಪಿ ಮತ್ತು ಜೆಡಿಎಸ್‌ನ ಕೆಲವು ಸದಸ್ಯರ ಆಸನಗಳ ಬಳಿ ಹೋದ ಅವರು ಕೆಲಕಾಲ ಚರ್ಚಿಸಿ ವಾಪಸಾದರು.

ಸಮೃದ್ಧಿ ಮೇಲೆ ಏರಿಹೋದ ನಾರಾಯಣಸ್ವಾಮಿ

ಜೆಡಿಎಸ್ ಶಾಸಕರು ಧರಣಿ ನಡೆಸುತ್ತಿದ್ದಾಗ ಅದೇ ಪಕ್ಷದ ಸಮೃದ್ಧಿ ನಾರಾಯಣಸ್ವಾಮಿ ಅವರು ಬೆಂಬಲ ಸೂಚಿಸಿ ಸಭಾಧ್ಯಕ್ಷರ ಪೀಠದತ್ತ ಹೋಗುತ್ತಿದ್ದರು. 'ದಲಿತನಾಗಿ ನೀನು ಹೋಗಬೇಡ' ಎಂದು ಕಾಂಗ್ರೆಸ್‌ನ ನರೇಂದ್ರಸ್ವಾಮಿ ಹೇಳಿದರು. ಅದನ್ನು ಲೆಕ್ಕಿಸದೆ ಮಂಜುನಾಥ್ ಧರಣಿಯಲ್ಲಿ ಪಾಲ್ಗೊಂಡರು.

ಕಲಾಪ ಮುಂದೂಡಿಕೆಯಾದ ಬಳಿಕ ಸಮೃದ್ಧಿ ಮಂಜುನಾಥ್ ವಿರುದ್ಧ ಹರಿಹಾಯ್ದ ಕಾಂಗ್ರೆಸ್‌ನ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. ಅವರು, 'ನೀನು ಏಕೆ ಧರಣಿಗೆ ಹೋದೆ' ಎಂದು ಪ್ರಶ್ನಿಸಿದರು. 'ನನಗೆ ಪಕ್ಷ ಮುಖ್ಯ' ಎಂದು ಸಮೃದ್ಧಿ ಉತ್ತರಿಸಿದರು. 'ಪಕ್ಷವಲ್ಲ ಕಣೊ, ಜಾತಿ ಮುಖ್ಯ' ಎಂದು ಏರು ಧ್ವನಿಯಲ್ಲಿ ಹರಿಹಾಯ್ದ ನಾರಾಯಣಸ್ವಾಮಿ ಅವರು ಸಮೃದ್ಧಿ ಮಂಜುನಾಥ್ ಮೇಲೆ ಏರಿಹೋದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಜಮೀರ್ ಅಹಮ್ಮದ್ ಖಾನ್ ಸೇರಿದಂತೆ ಹಲವರು ಮಧ್ಯ ಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸಿದರು.

ಮೈಕ್ರೋ ಫೈನಾನ್ಸ್ ನಿಯಂತ್ರಣಕ್ಕೆ ಮಸೂದೆ: ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಕಿರು ಹಣಕಾಸು (ಮೈಕ್ರೋ ಫೈನಾನ್ಸ್) ಸಂಸ್ಥೆಗಳು ಸಾಲ ನೀಡಿ, ಹೆಚ್ಚಿನ ಬಡ್ಡಿ, ಶುಲ್ಕ ಸಂಗ್ರಹಿಸುವುದನ್ನು ಹಾಗೂ ಸಾಲಗಾರರಿಗೆ ಕಿರುಕುಳ ನೀಡುವುದನ್ನು ತಡೆಯಲು ಪ್ರತ್ಯೇಕ ಮಸೂದೆ ರೂಪಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಅತಿ ಹೆಚ್ಚಿನ ಬಡ್ಡಿ ನೀಡುವ ಆಮಿಷವೊಡ್ಡಿ, ಠೇವಣಿ ಸಂಗ್ರಹಿಸಿ, ವಂಚಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಇದ್ದ ತೊಡಕುಗಳನ್ನು ನಿವಾರಿಸಲು ರೂಪಿಸಿರುವ 'ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ–2024'ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಮಸೂದೆ ಕುರಿತ ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ, 'ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಜನರನ್ನು ಶೋಷಣೆ ಮಾಡುತ್ತಿವೆ. ಅವುಗಳ ನಿಯಂತ್ರಣವೂ ಆಗಬೇಕು' ಎಂದು ಆಗ್ರಹಿಸಿದರು.



ಕೃಷ್ಣ ಬೈರೇಗೌಡ

'ಶೇಕಡ 40ರಷ್ಟು ಬಡ್ಡಿ ಸಂಗ್ರಹಿಸುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ದೂರಿದರು.

ಜಿಎಸ್‌ಟಿ ಮಸೂದೆಗೂ ಒಪ್ಪಿಗೆ: ರಾಜ್ಯ ಸರ್ಕಾರ ಮತ್ತು ತೆರಿಗಾರರ ಮಧ್ಯೆ ಇರುವ 80,000 ಪ್ರಕರಣಗಳನ್ನು ಒಂದು ಬಾರಿ ತೀರುವಳಿ ಯೋಜನೆಯಡಿ ಇತ್ಯರ್ಥಪಡಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆ–2024'ಕ್ಕೆ ಸದನ ಒಪ್ಪಿಗೆ ನೀಡಿತು.

ಕೊಳವೆಬಾವಿ ಮುಚ್ಚದಿದ್ದರೆ ಒಂದು ವರ್ಷ ಜೈಲು ಶಿಕ್ಷೆ–₹25 ಸಾವಿರ ದಂಡ ವಿಧಿಸಲು ಅವಕಾಶ

ವಿಧಾನಸಭೆಯಲ್ಲಿ ಮಸೂದೆಗೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಕೊಳವೆಬಾವಿಗಳಲ್ಲಿ ಮಕ್ಕಳು ಬೀಳುವುದನ್ನು ತಡೆಯಲು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಇರುವವರಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹25,000ದವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಮಸೂದೆ–2024ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

'ಈ ಮಸೂದೆಯು, ಕೊಳವೆ ಬಾವಿಗಳನ್ನು ಕೊರೆಯುವವರು ಸಕ್ಷಮ ಪ್ರಾಧಿಕಾರಗಳಿಗೆ 15 ದಿನ ಮುಂಚಿತವಾಗಿ ಮಾಹಿತಿ ನೀಡಿ, ಒಪ್ಪಿಗೆ ಪಡೆಯುವುದನ್ನು ಕಡ್ಡಾಯಗೊಳಿಸಲಿದೆ. ವಿಫಲ ಕೊಳವೆಬಾವಿಗಳನ್ನು ಮುಚ್ಚಿ, ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕಾಗುತ್ತದೆ. ಈ ಜವಾಬ್ದಾರಿಯನ್ನು ಅನುಷ್ಠಾನ ಏಜೆನ್ಸಿ ಮತ್ತು ಕೊಳವೆಬಾವಿ ಕೊರೆಯುವವರಿಗೆ ನಿಗದಿಪಡಿಸಲಾಗಿದೆ. ವಿಫಲವಾದಲ್ಲಿ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ' ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ಅವರು ಸದನಕ್ಕೆ ವಿವರಿಸಿದರು.

'ಕೊಳವೆಬಾವಿ ಮುಚ್ಚದೇ ಇರುವವರಿಗೆ ಈಗ ಪ್ರಸ್ತಾಪಿಸಿರುವ ದಂಡ ತುಂಬಾ ಕಡಿಮೆಯಾಯಿತು. ₹1 ಲಕ್ಷದಿಂದ ₹5 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಸಲಹೆ ನೀಡಿದರು.

ಮಸೂದೆಯು ರೈತರಿಗೆ ಕಿರುಕುಳ ನೀಡುವುದಕ್ಕೆ ಬಳಕೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಒತ್ತಾಯಿಸಿದರು. ಪಂಚಾಯಿತಿ ಅಧಿಕಾರಿಗಳನ್ನೂ ಹೊಣೆ ಮಾಡಬೇಕು ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಆಗ್ರಹಿಸಿದರು.

ಖನಿಜಕ್ಕೆ ತೆರಿಗೆ: ಖನಿಜ ನಿಕ್ಷೇಪಗಳು ಮತ್ತು ಈಗಾಗಲೇ ತೆಗೆದು ಸಾಗಿಸಿರುವ ಖನಿಜಗಳಿಗೆ 2005ರಿಂದ ಪೂರ್ವಾನ್ವಯವಾಗುವಂತೆ ತೆರಿಗೆ ವಿಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ 'ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ಮಸೂದೆ–2024' ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಇದೇ ಸಂದರ್ಭದಲ್ಲಿ 'ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ–2024' ಅನ್ನು ಹಿಂಪಡೆಯಲಾಯಿತು. ರಾಜ್ಯಪಾಲರ ಸಲಹೆಯಂತೆ ಮಸೂದೆ ಹಿಂಪಡೆಯಲಾಗುತ್ತದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಬೆಳಗಾವಿ ಸುವರ್ಣ ವಿಧಾನಸಭಾದಲ್ಲಿ ಸೋಮವಾರ ನಡೆದ ಚಳಿಗಾಲದ ಅಧಿವೇಶನ ವೀಕ್ಷಿಸಲು ಬಂದ ಶಾಲಾ ವಿದ್ಯಾರ್ಥಿಗಳು ಕಾದು ಕುಳಿತ ದೃಶ್ಯ

ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ರಾಯಚೂರು ವಿ.ವಿ.ಗೆ ವಾಲ್ಮೀಕಿ ಹೆಸರು

ರಾಯಚೂರು ವಿಶ್ವವಿದ್ಯಾಲಯಕ್ಕೆ 'ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ' ಎಂದು ನಾಮಕರಣ ಮಾಡಲು ಅವಕಾಶ ಕಲ್ಪಿಸುವ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆ– 2024'ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಸೂದೆ ಕುರಿತು ಸದನಕ್ಕೆ ವಿವರಿಸಿದರು. ಎಲ್ಲ ಪಕ್ಷಗಳ ಸದಸ್ಯರು ಒಕ್ಕೊರಲಿನಿಂದ ಮಸೂದೆಯನ್ನು ಬೆಂಬಲಿಸಿದರು. ಖಾಸಗಿ ವಲಯದ ಚಾಣಕ್ಯ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ತಜ್ಞರನ್ನು ಸದಸ್ಯರನ್ನಾಗಿ ನೇಮಕ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ 'ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ–2024'ಕ್ಕೂ ಸದನ ಒಪ್ಪಿಗೆ ನೀಡಿತು.

ರೋಪ್‌ವೇ ಮಸೂದೆಗೆ ಒಪ್ಪಿಗೆ

ರಾಜ್ಯದಲ್ಲಿ ರೋಪ್ ವೇಗಳ ನಿರ್ಮಾಣ ಮತ್ತು ನಿರ್ವಹಣೆಯ ಮೇಲುಸ್ತುವಾರಿ, ನಿಯಂತ್ರಣಕ್ಕೆ ಸಲಹಾ ಸಮಿತಿ, ಪ್ರಾಧಿಕಾರಗಳನ್ನು ರಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ಮಸೂದೆ–2024'ಕ್ಕೆ ವಿಧಾನಸಭೆ ಸೋಮವಾರ ಒಪ್ಪಿಗೆ ನೀಡಿತು.

ಮಸೂದೆ ಕುರಿತು ವಿವರ ನೀಡಿದ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, 'ರಾಜ್ಯದಲ್ಲಿ 15 ರೋಪ್ ವೇಗಳನ್ನು ನಿರ್ಮಿಸಲಾಗುತ್ತದೆ. ಅವುಗಳ ನಿರ್ಮಾಣ ಮತ್ತು ನಿರ್ವಹಣೆ ಕುರಿತು ಮೇಲುಸ್ತುವಾರಿಗೆ ಸಮಿತಿ, ಪ್ರಾಧಿಕಾರಗಳನ್ನು ನಿರ್ಮಿಸಬೇಕಿದೆ. ಅದಕ್ಕೆ ಪೂರಕವಾಗಿ ಮಸೂದೆಯನ್ನು ತರಲಾಗಿದೆ' ಎಂದರು.

ಬಸವನ ಬಾಗೇವಾಡಿ ಅಭಿವೃದ್ಧಿಗೆ ಪ್ರತ್ಯೇಕ ಪ್ರಾಧಿಕಾರ ರಚನೆಗೆ ಅವಕಾಶ ಕಲ್ಪಿಸುವ 'ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಮಸೂದೆ–2024'ಕ್ಕೂ ಸದನ ಅಂಗೀಕಾರ ನೀಡಿತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಹಿಂಬಾಕಿ ಪಾವತಿಗೆ ಜಾರಿಗೊಳಿಸಿದ್ದ ಒಂದು ಬಾರಿಯ ತೀರುವಳಿ (ಒಟಿಎಸ್) ಯೋಜನೆಗೆ ಘಟನೋತ್ತರ ಅನುಮೋದನೆ ನೀಡುವ 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ಮಸೂದೆ–2024'ಕ್ಕೂ ವಿಧಾನಸಭೆ ಒಪ್ಪಿಗೆ ನೀಡಿತು.

ಗಾಂಧೀಜಿ ಸ್ಮರಣೆಯಲ್ಲೂ ರಾಜಕೀಯ ಕೆಸರೆರಚಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಪ್ರಯುಕ್ತ ವಿಧಾನ ಪರಿಷತ್‌ನಲ್ಲಿ ಸೋಮವಾರ ನಡೆದ ಗಾಂಧೀಜಿಯವರ ಸ್ಮರಣೆಯೂ ರಾಜಕೀಯ ಕೆಸರೆರಚಾಟಕ್ಕೆ ವೇದಿಕೆಯಾಯಿತು.

ಬಿಜೆಪಿಯ ಸಿ.ಟಿ. ರವಿ ಮಾತನಾಡಿ, 'ಸ್ವಾತಂತ್ರ್ಯದ ಸಮಯದಲ್ಲಿ ಭಾರತದ ವಿಭಜನೆಯನ್ನೇ ಮೂಲ ಧ್ಯೇಯವಾಗಿ ಇಟ್ಟುಕೊಂಡಿದ್ದ ಮುಸ್ಲಿಂ ಲೀಗ್ ಬಲಿಷ್ಠವಾಯಿತು. ದೇಹ ತುಂಡಾದರೂ, ಭಾರತ ವಿಭಜನೆಗೆ ಅವಕಾಶ ನೀಡುವುದಿಲ್ಲ ಎನ್ನುತ್ತಿದ್ದ ಗಾಂಧೀಜಿ, ನೆಹರೂ, ಸರ್ದಾರ್ ಪಟೇಲ್ ವಿಭಜನೆಗೆ ಸಮ್ಮತಿಸಿದ್ದೇ ವಿಸ್ಮಯ. ಕೊನೆಗೂ ಮಹಮದ್ ಅಲಿ ಜಿನ್ನಾ ಅವರೇ ಗೆದ್ದರು. ಪಟೇಲರು ಮನಸ್ಸು ಮಾಡದೇ ಹೋಗಿದ್ದರೆ ಹೈದರಾಬಾದ್ ದಕ್ಷಿಣ ಪಾಕಿಸ್ತಾನವಾಗುತ್ತಿತ್ತು' ಎಂದರು.

ಗೋಡ್ಸೆ ಗಾಂಧಿಯನ್ನು ದೈಹಿಕವಾಗಿ ಕೊಂದರೆ, ಅವರ ಅನುಯಾಯಿಗಳು ಎಂದು ಹೇಳಿಕೊಳ್ಳುವ ರಾಜಕೀಯ ವಾರಸುದಾರರು ಅವರ ವಿಚಾರಗಳಿಗೇ ಗುಂಡುಹಾಕಿದ್ದಾರೆ. ಅವರ ವಿಚಾರಗಳಿಗೆ ವಿರುದ್ಧವಾಗಿ ನಡೆದು ನಿತ್ಯ ಅಪಮಾನ ಮಾಡುತ್ತಿದ್ದಾರೆ ಎಂದು ಹೇಳಿದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಶರಣಪ್ರಕಾಶ ಪಾಟೀಲ, 'ಅವರ ಅನುಯಾಯಿಗಳು ನಾವೇ. ಏಕೆ ಪರೋಕ್ಷವಾಗಿ ಟೀಕೆ ಮಾಡುತ್ತೀರಿ. ಗಾಂಧಿ ಬಗ್ಗೆ ಮಾತನಾಡುವಾಗ ಬಿಜೆಪಿ ನಾಯಕರು ಹೀಗೆ ಗುಪ್ತಕಾರ್ಯಸೂಚಿ ಇಟ್ಟುಕೊಂಡೇ ಇರುತ್ತಾರೆ' ಎಂದು ಟೀಕಿಸಿದರು.

ಶರಣಪ್ರಕಾಶ ಪಟೀಲರ ಮಾತಿಗೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, 1935ರ ಬ್ರಿಟಿಷ್–ಇಂಡಿಯಾ ಸ್ವಾತಂತ್ರ್ಯ ಕಾಯ್ದೆ ಓದಿಕೊಳ್ಳಿ. ಸುಮ್ಮನೆ ಇತಿಹಾಸ ತಿರುಚಬೇಡಿ ಎಂದರು.

ಬಿಜೆಪಿ ಎನ್. ರವಿಕುಮಾರ್, ಅಂಬೇಡ್ಕರ್ ಅವರು ನಾನು ಎಂದಿಗೂ ಕಾಂಗ್ರೆಸ್‌ಗೆ ಹೋಗುವುದಿಲ್ಲ ಎಂದಿದ್ದರು. ಅವರನ್ನೂ ತೆರೆಗೆ ಸರಿಸುವ ಕೆಲಸವನ್ನು ಕಾಂಗ್ರೆಸ್ ಮಾಡಿತ್ತು ಎಂದು ಹೇಳಿದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಉಮಾಶ್ರೀ, ಅಂಬೇಡ್ಕರ್ ಹಿಂದೂ ಧರ್ಮ ತೊರೆದು ಬೌದ್ಧ ಧರ್ಮ ಸ್ವೀಕರಿಸಿದ ಕುರಿತೂ ಚರ್ಚೆ ನಡೆಸಬೇಕು ಎಂದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಐವನ್ ಡಿಸೋಜ, ಉಮಾಶ್ರೀ, ಬಲ್ಕೀಸ್ ಬಾನು, ನಾಗರಾಜ್ ಯಾದವ್, ಬಿಜೆಪಿಯ ಧನಂಜಯ ಸರ್ಜಿ, ಕೆ.ಎಸ್. ನವೀನ್, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಮತ್ತಿತರರು ಮಾತನಾಡಿದರು.

ಮುಜುಗರಕ್ಕೆ ಒಳಗಾದ ವಿಪಕ್ಷ ನಾಯಕ

'ಗಾಂಧೀಜಿ ಕುರಿತು ಏಕೆ ವಿಶೇಷ ಚರ್ಚೆ' ಎಂದು ಪ್ರಶ್ನಿಸುವ ಮೂಲಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮುಜುಗರಕ್ಕೆ ಒಳಗಾದರು.

ನಾರಾಯಣ ಸ್ವಾಮಿ

'ಮಹಾತ್ಮ ಗಾಂಧೀಜಿ ಬಗ್ಗೆ ಏಕೆ ಚರ್ಚೆಗೆ ಬಂತು, ಈ ಹಿಂದೆ ರಾಜ್ಯದಲ್ಲಿ ನಮ್ಮ ಸರ್ಕಾರ ಇದ್ದಾಗ ಸಂವಿಧಾನದ ಬಗ್ಗೆ ಚರ್ಚೆ ನಡೆದಿತ್ತು. ಈಗಲೂ ಸಂವಿಧಾನದ ಬಗ್ಗೆ ಚರ್ಚೆ ಮಾಡಬೇಕಿತ್ತಾ' ಎಂದರು.

ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಐವನ್ ಡಿಸೋಜ 'ಕಲಾಪ ಸಲಹಾ ಸಮಿತಿಯ ಸದಸ್ಯರಾಗಿರುವ ವಿರೋಧ ಪಕ್ಷದ ನಾಯಕರಿಗೆ ಚರ್ಚೆಯ ಕುರಿತು ಮಾಹಿತಿ ಇಲ್ಲ ಎನ್ನುವುದು ಸಮಂಜಸವಲ್ಲ' ಎಂದರು.

ಸಚಿವ ಪ್ರಿಯಾಂಕ್ ಖರ್ಗೆ, 'ನೂರು ವರ್ಷಗಳ ಹಿಂದೆ ಬೆಳಗಾವಿಗೆ ಬಂದಿದ್ದ ಗಾಂಧೀಜಿ ಅವರು ಭಾಷಾವಾರು ಪ್ರಾಂತ್ಯಗಳ ರಚನೆ ಆಧಾರದಲ್ಲಿ ಕನ್ನಡ ಭಾಷಿಕರು ಒಂದಾಗಬೇಕು ಎಂಬ ನಿರ್ಧಾರ ಕೈಗೊಂಡರು. ಅದರ ಮಹತ್ವ ಅರಿಯಲು ಇತಿಹಾಸವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

ಡಿಜಿಟಲ್ ಆರೋಗ್ಯ ಸೇವೆ ವೀಕ್ಷಿಸಿದ ಆಂಧ್ರದ ಸಚಿವರು

ಕೋಲಾರ: ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪುತ್ರ, ಮಾಹಿತಿ ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ನಾರಾ ಲೋಕೇಶ್ ಹಾಗೂ ಆರೋಗ್ಯ ಸಚಿವ ಸತ್ಯಕುಮಾರ್ ಯಾದವ್ ಸೋಮವಾರ ನಗರದ ಜಿಲ್ಲಾ ಆರೋಗ್ಯ ಇಲಾಖೆ ಕಚೇರಿಗೆ ಭೇಟಿ ನೀಡಿ ಡಿಜಿಟಲ್ ಸೇವೆ ಹಾಗೂ ಸೌಲಭ್ಯ ವೀಕ್ಷಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಸತ್ಯಕುಮಾರ್ ಯಾದವ್, 'ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ನಿರ್ದೇಶನದ ಮೇರೆಗೆ ಡಿಜಿಟಲ್ ನರ್ವ್ ಕೇಂದ್ರ ವೀಕ್ಷಿಸಿ ಮಾಹಿತಿ ಪಡೆದಿದ್ದೇವೆ. ಈ ಕೇಂದ್ರವು ಕೋಲಾರ ಜಿಲ್ಲೆಯ ಜನರ ಆರೋಗ್ಯ ವಿಚಾರದಲ್ಲಿ ಯಾವ ರೀತಿ ಬದಲಾವಣೆ ತಂದಿದೆ, ಯಾವ ರೀತಿ ಟೆಲಿ ಕನ್ಸಲ್ಟೆನ್ಸಿ ಸೇವೆ ನೀಡುತ್ತಿದೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಆಂಧ್ರಪ್ರದೇಶದಲ್ಲೂ ಈ ವ್ಯವಸ್ಥೆ ಅಳವಡಿಸಲಾಗುವುದು' ಎಂದರು.

ರಾತ್ರಿ 12.30ರ ಬಳಿಕವೂ ಮುಂದುವರಿದ ಕಲಾಪ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಸೋಮವಾರ ಬೆಳಿಗ್ಗೆ 10.40ಕ್ಕೆ ಆರಂಭವಾದ ವಿಧಾನಸಭೆ ಕಲಾಪ ತಡರಾತ್ರಿ ತಡರಾತ್ರಿಯವರೆಗೂ ನಡೆಯಿತು.

ರಾತ್ರಿ 12.30ರ ಬಳಿಕವೂ ವಿಧಾನಸಭೆ ಕಲಾಪ ಮುಂದುವರಿದಿತ್ತು.

ರಾತ್ರಿ 12.25ಕ್ಕೆ 'ತುಳು ಭಾಷೆಗೆ ಅಧಿಕೃತ ರಾಜ್ಯ ಭಾಷೆಯ ಸ್ಥಾನಮಾನ' ಕುರಿತು ಮಾತು ಆರಂಭಿಸಿದ ಕಾಂಗ್ರೆಸ್ ಸದಸ್ಯ ಅಶೋಕ್ ಕುಮಾರ್ ರೈ, 'ಸೊಲ್ಮೆಲು' ಎಂದೇ ತುಳು ಭಾಷೆಯಲ್ಲಿ ವಿಚಾರ ಮಂಡನೆ ಶುರುಮಾಡಿದರು. ಸಚಿವರಾದ ಕೃಷ್ಣ ಬೈರೇಗೌಡ, ಸತೀಶ ಜಾರಕಿಹೊಳಿ, ಕೆ.ಎನ್. ರಾಜಣ್ಣ, ಡಾ.ಎಂ.ಸಿ. ಸುಧಾಕರ್ ಸದನದಲ್ಲಿ ಹಾಜರಿದ್ದು, ಪ್ರಶ್ನೆಗಳಿಗೆ ಉತ್ತರಿಸಿದರು.

ರಾತ್ರಿ 11 ಗಂಟೆಯಾಗುತ್ತಿದ್ದಂತೆ ಸಚಿವ ಕೃಷ್ಣ ಬೈರೇಗೌಡ ಅವರು, 'ಸಭಾಧ್ಯಕ್ಷರೇ ಬೆಳಿಗ್ಗೆಯವರೆಗೂ ಕಲಾಪ ನಡೆಸೋಣ. ನಿಮ್ಮ ಅವಧಿಯಲ್ಲಿ ದಾಖಲೆ ನಿರ್ಮಾಣವಾಗಲಿ' ಎಂದರು.

'ನಾನು ಸಿದ್ಧನಿದ್ದೇನೆ' ಎಂದು ನಗುತ್ತಲೇ ಹೇಳಿದ ಸಭಾಧ್ಯಕ್ಷ ಯು..ಟಿ. ಖಾದರ್ ಕಲಾಪ ಮುಂದುವರಿಸಿದರು.

ದೇವದುರ್ಗ ಶಾಸಕಿ ಕರೆಮ್ಮ ನಾಯಕ ಅವರು ಶಿಕ್ಷಕರ ಕೊರತೆ ಕುರಿತು 11.50ಕ್ಕೆ ಗಮನ ಸೆಳೆದರು. ತಮ್ಮ ಕ್ಷೇತ್ರಕ್ಕೆ ಹೆಚ್ಚಿನ ಶಿಕ್ಷಕರನ್ನು ಒದಗಿಸುವಂತೆ ಮನವಿ ಮಾಡಿದರು.ನಂತರ ತೊಗರಿ ಬೆಳೆ ಹಾನಿ ಕುರಿತು ಗಮನ ಸೆಳೆದ ಕಾಂಗ್ರೆಸ್ ಸದಸ್ಯ ಯಶವಂತರಾಯಗೌಡ ಪಾಟೀಲ, ಬೆಳೆಹಾನಿಗೆ ಪರಿಹಾರ ನೀಡುವಂತೆ ಮನವಿ ಮಾಡಿದರು.

ಲೋಕಸಭೆಯಲ್ಲಿ ಆಕ್ಷೇಪ; ಗಮನಹರಿಸಲು ಆಗ್ರಹ

ಕರ್ನಾಟಕಕ್ಕೆ ನಬಾರ್ಡ್ ನೆರವು ಕಡಿತ; ರಾಯಚೂರು ಸಂಸದ ಜಿ.ಕುಮಾರ ನಾಯಕ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಸಾಧ್ಯವಾಗುವಂತೆ ಪ್ರಸಕ್ತ ಸಾಲಿನಲ್ಲಿ ಕರ್ನಾಟಕಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದರಿಂದ ರೈತರು ಸಂಕಷ್ಟಕ್ಕೆ ಈಡಾಗಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರ ತುರ್ತು ಗಮನ ಹರಿಸಬೇಕು' ಎಂದು ರಾಯಚೂರು ಸಂಸದ ಜಿ.ಕುಮಾರ ನಾಯಕ ಆಗ್ರಹಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಹಣಕಾಸು ಸಚಿವರಿಗೆ ಸೋಮವಾರ ಪ್ರಶ್ನೆ ಕೇಳಿದ ಅವರು, 'ವಾಣಿಜ್ಯ ಬ್ಯಾಂಕ್‌ಗಳು ನಗರ ಪ್ರದೇಶದ ಜನರಿಗೆ ಹೆಚ್ಚು ಸಾಲ ಕೊಡುತ್ತವೆ. ಅವುಗಳ ಬಡ್ಡಿ ದರ ಹೆಚ್ಚು ಇರುತ್ತದೆ. ಆದರೆ, ಕೃಷಿಕರಿಗೆ ಸಾಲ ನೀಡಲು ಹಿಂದೇಟು ಹಾಕುತ್ತವೆ. ನಬಾರ್ಡ್ ನೆರವು ಕಡಿತದಿಂದ ಕಲ್ಯಾಣ ಕರ್ನಾಟಕ, ಅಭಿವೃದ್ಧಿ ಆಕಾಂಕ್ಷಿ ಹಾಗೂ ಹಿಂದುಳಿದ ಜಿಲ್ಲೆಗಳ ರೈತರಿಗೆ ಭಾರಿ ತೊಂದರೆ ಆಗಿದೆ' ಎಂದು ಗಮನ ಸೆಳೆದರು.

ಜಿ.ಕುಮಾರ ನಾಯಕ

'2024-25ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು 35 ಲಕ್ಷ ರೈತರಿಗೆ ₹25 ಸಾವಿರ ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಗುರಿ ಹೊಂದಿದೆ. 2023-24ರಲ್ಲಿ ರಾಜ್ಯಕ್ಕೆ ನಬಾರ್ಡ್ ₹5,600 ಕೋಟಿ ಸಾಲ ಕೊಟ್ಟಿತ್ತು. ಈ ವರ್ಷ ಅದನ್ನು ₹2,340 ಕೋಟಿಗೆ ಇಳಿಸಲಾಗಿದೆ. ಇದರಿಂದಾಗಿ, ರೈತರು ಹೆಚ್ಚಿನ ಬಡ್ಡಿ ದರದ ಲೇವಾದೇವಿಗಾರರಿಂದ ಸಾಲ ಪಡೆಯುವಂತಾಗಿದೆ' ಎಂದರು.

ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಉತ್ತರಿಸಿ, 'ಬ್ಯಾಂಕ್‌ಗಳ ಆದ್ಯತೆಯ ವಲಯ ಸಾಲದ ಗುರಿ ತಲುಪಲು ಸಹಕಾರಿ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಆರ್‌ಬಿಐ ವಾರ್ಷಿಕವಾಗಿ ವಿತರಣಾ ಮಿತಿ ಹೇರುತ್ತದೆ' ಎಂದರು. 'ಆದ್ಯತೆ ವಲಯದ ಸಾಲದ ಹಂಚಿಕೆಯನ್ನು 2024-25ನೇ ಹಣಕಾಸು ವರ್ಷದಲ್ಲಿ ₹2.1 ಲಕ್ಷ ಕೋಟಿಯಿಂದ ₹1.5 ಲಕ್ಷ ಕೋಟಿಗೆ ಕಡಿತಗೊಳಿಸಲಾಗಿದೆ. ಹೀಗಾಗಿ, ಕರ್ನಾಟಕಕ್ಕೆ ನಬಾರ್ಡ್ ಮೂಲಕ ಕಡಿಮೆ ನಿಧಿ ಮಂಜೂರಾತಿ ಮಾಡಲಾಗಿದೆ' ಎಂದು ಸ್ಪಷ್ಟಪಡಿಸಿದರು.

ಯುವಜನರ ವಲಸೆ: ಬೀದರ್ ಸಂಸದ ಸಾಗರ್ ಖಂಡ್ರೆ ಪ್ರಶ್ನೆ ಕೇಳಿ, 'ಬೀದರ್ ಜಿಲ್ಲೆ ಬಹಳ ಹಿಂದುಳಿದಿದೆ. ಯುವಜನರು ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಉದ್ಯೋಗಕ್ಕಾಗಿ ಬೆಂಗಳೂರು, ಹೈದರಾಬಾದ್ ಹಾಗೂ ಮುಂಬೈಗೆ ವಲಸೆ ಹೋಗುತ್ತಿದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ ವಲಸೆ ಪ್ರಮಾಣ ಅತಿ ಹೆಚ್ಚು ಇದೆ. ವಲಸೆ ತಡೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು. ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯಾ ಉತ್ತರಿಸಿ, 'ಕೌಶಲ ಇದ್ದವರಿಗೆ ಉದ್ಯೋಗ ದೊರಕುತ್ತದೆ. ಬೀದರ್‌ನವರು ಹೈದರಾಬಾದ್‌ಗೆ, ಹೈದರಾಬಾದ್‌ನವರು ಕಲ್ಯಾಣ ಕರ್ನಾಟಕಕ್ಕೆ ಉದ್ಯೋಗ ಅರಸಿ ವಲಸೆ ಬಂದರೆ ತಪ್ಪಲ್ಲ' ಎಂದರು.

ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ, 'ತಾಪಮಾನ ಬದಲಾವಣೆ ನಿರ್ವಹಣೆಗೆ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ಎನ್‌ಎಎಫ್‌ಸಿಯಿಂದ ಒದಗಿಸಿರುವ ನೆರವೆಷ್ಟು' ಎಂದು ಪ್ರಶ್ನಿಸಿದರು.

'ಆನೆ ದಾಳಿ ತಡೆ: ಕಾಂಪಾ ಅನುದಾನ ನೀಡಿ'

ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್, 'ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಆನೆಗಳ ಹಾವಳಿ ವ್ಯಾಪಕವಾಗಿದೆ. ಬನ್ನೇರುಘಟ್ಟ, ಸಾತನೂರು ಮತ್ತಿತರ ಕಡೆಗಳಲ್ಲಿ ಆನೆ ದಾಳಿಗಳಿಂದ ಮನುಷ್ಯರು ಮೃತಪಟ್ಟಿದ್ದಾರೆ. ಕೃಷಿ ನಷ್ಟ ಅಪಾರವಾಗಿದೆ. ಬ್ಯಾರಿಕೇಡ್ ಅಳವಡಿಕೆಗೆ ಕಾಂಪಾ ನಿಧಿಯಿಂದ ವಿಶೇಷ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು. ಕಾಡು ಪ್ರಾಣಿಗಳ ದಾಳಿಯಿಂದ ಅರಣ್ಯ ಇಲಾಖೆಯವರು ಮೃತಪಟ್ಟರೆ ₹25 ಲಕ್ಷ ಪರಿಹಾರ ನೀಡಲಾಗುತ್ತದೆ. ರೈತರಿಗೆ ₹15 ಲಕ್ಷವಷ್ಟೇ ಪರಿಹಾರ ಒದಗಿಸಲಾಗುತ್ತದೆ. ಈ ತಾರತಮ್ಯ ಸರಿಯಲ್ಲ. ಪರಿಹಾರವನ್ನು ₹25 ಲಕ್ಷಕ್ಕೆ ಏರಿಸಬೇಕು' ಎಂದು ಅವರು ಒತ್ತಾಯಿಸಿದರು. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಅರಣ್ಯ ಸಚಿವ ಭೂಪೇಂದರ್ ಯಾದವ್ ಭರವಸೆ ನೀಡಿದರು.

ಆಲೂರು: ಮೊದಲ ದಿನವೇ ಟೋಲ್ ಸಂಗ್ರಹ ಸ್ಥಗಿತ

ಆಲೂರು ತಾಲ್ಲೂಕಿನ ಚೌಲಗೆರೆ ಬಳಿ ಟೋಲ್ ಕೇಂದ್ರ ಆರಂಭಿಸಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು ಹಾಗೂ ಸ್ಥಳೀಯರು ಸೋಮವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಹಾಸನ: ಆಲೂರು ತಾಲ್ಲೂಕಿನ ಚೌಲಗೆರೆ ಬಳಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಸೋಮವಾರದಿಂದ ಆರಂಭವಾದ ಟೋಲ್ ಸಂಗ್ರಹವನ್ನು ಜನರ ಪ್ರತಿಭಟನೆ ಕಾರಣ ಸ್ಥಗಿತಗೊಳಿಸಲಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಏಕಾಏಕಿ ಟೋಲ್ ಸಂಗ್ರಹ ಆರಂಭಿಸಿದ್ದರಿಂದ ರೊಚ್ಚಿಗೆದ್ದ ಸ್ಥಳೀಯರು ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಸದಸ್ಯರು, ಹೆದ್ದಾರಿ ಪ್ರಾಧಿಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. 'ರಸ್ತೆ ಕಾಮಗಾರಿ ಕಳಪೆಯಾಗಿದೆ. ಸಕಲೇಶಪುರದಿಂದ ಮಾರನಹಳ್ಳಿವರೆಗೂ ರಸ್ತೆ ಪೂರ್ಣಗೊಂಡಿಲ್ಲ. ಆದರೂ ಟೋಲ್ ಸಂಗ್ರಹಿಸಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾರಿಗೆ ಒಮ್ಮೆಗೆ ₹50, ಎರಡು ಬಾರಿಗೆ ₹75, ಮಿನಿ ಲಾರಿ, ಮಿನಿ ಬಸ್‌ಗೆ ಒಂದು ಸಲಕ್ಕೆ ₹80 ನಿಗದಿ ಮಾಡಲಾಗಿದ್ದು, ವಾಹನಗಳ ಮಾಲೀಕರಿಗೆ ಹೊರೆಯಾಗಲಿದೆ' ಎಂದು ಹೇಳಿದರು.

'ನಿಯಮದ ಪ್ರಕಾರ ಪ್ರತಿ 60 ಕಿ.ಮೀ. ಅಂತರದಲ್ಲಿ ಟೋಲ್ ಕೇಂದ್ರವಿರಬೇಕು. ಆದರೆ, ಈಗಾಗಲೇ ಶಾಂತಿಗ್ರಾಮದಲ್ಲಿ ಟೋಲ್ ಇದ್ದು, ಅಲ್ಲಿಂದ ಆಲೂರು ತಾಲ್ಲೂಕಿನ ಚೌಲಗೆರೆ ಬಳಿಯ ಟೋಲ್‌ಗೆ ಕೇವಲ 30 ಕಿ.ಮೀ. ದೂರವಿದೆ. ನಿಯಮ ಮೀರಿ ಟೋಲ್ ಸಂಗ್ರಹಿಸಲಾಗುತ್ತಿದೆ' ಎಂದು ಆರೋಪಿಸಿದರು.

ಪ್ರಧಾನಿ ಮೋದಿ-ಶ್ರೀಲಂಕಾ ಅಧ್ಯಕ್ಷ ದಿಸ್ಸನಾಯಕೆ ಮಾತುಕತೆ

ಶ್ರೀಲಂಕಾ ಸೇನೆಗೆ ಭಾರತದ ಸಹಕಾರ

ನವದೆಹಲಿ (ಪಿಟಿಐ): ಭಾರತ ಮತ್ತು ಶ್ರೀಲಂಕಾ ಶೀಘ್ರದಲ್ಲೇ ರಕ್ಷಣಾ ಸಹಕಾರ ಒಪ್ಪಂದವನ್ನು ಕೈಗೊಳ್ಳಲಿದ್ದು, ವಿದ್ಯುತ್ ಗ್ರಿಡ್ ಸಂಪರ್ಕ ಮತ್ತು ಬಹು-ಉತ್ಪನ್ನ ಪೆಟ್ರೋಲಿಯಂ ಪೈಪ್‌ಲೈನ್‌ಗಳನ್ನು ಸ್ಥಾಪಿಸುವ ಮೂಲಕ ಇಂಧನ ಸಂಬಂಧಿತ ಸಹಕಾರ ಹೆಚ್ಚಿಸಿಕೊಳ್ಳಲು ನಿರ್ಧರಿಸಿವೆ.

ಭಾರತವು ಶ್ರೀಲಂಕಾದ ಸೇನೆಗೆ ಅಗತ್ಯವಿರುವ ಸಾಧನಗಳನ್ನು (ಹಾರ್ಡ್‌ವೇರ್) ಪೂರೈಸಲಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ನಡುವೆ ಸೋಮವಾರ ನಡೆದ ಮಾತುಕತೆ ಬಳಿಕ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಭಾರತ-ಶ್ರೀಲಂಕಾ ನಡುವೆ ಹೂಡಿಕೆ ಆಧಾರಿತ ಪ್ರಗತಿಗೆ ಮತ್ತು ಸಂಪರ್ಕ ಸೌಲಭ್ಯ ಹೆಚ್ಚಿಸಲು ನಿರ್ಧರಿಸಲಾಗಿದೆ. ಸಹಕಾರದ ಪ್ರಮುಖ ಆಧಾರ ಸ್ತಂಭಗಳಾಗಿ ಭೌತಿಕ, ಡಿಜಿಟಲ್ ಮತ್ತು ಇಂಧನ ಸಂಪರ್ಕಗಳನ್ನು ಪರಿಗಣಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

'ಭಾರತದ ಹಿತಾಸಕ್ತಿಗೆ ಧಕ್ಕೆ ತರುವಂತಹ ಅಥವಾ ಪ್ರಾದೇಶಿಕವಾಗಿ ಆತಂಕ ಉಂಟುಮಾಡುವಂತಹ ಯಾವುದೇ ಚಟುವಟಿಕೆಯನ್ನು ಶ್ರೀಲಂಕಾ ತನ್ನ ಗಡಿಯೊಳಗೆ ನಡೆಯಲು ಬಿಡುವುದಿಲ್ಲ' ಎಂದು ದಿಸ್ಸನಾಯಕೆ ಭರವಸೆ ನೀಡಿದರು.

ಚೀನಾ ದೇಶವು ಭಾರತದ ವಿರುದ್ಧ ಯಾವುದೇ ಪಿತೂರಿ ನಡೆಸದೇ ಇರಲು ಕೈಗೊಳ್ಳುವ ಕ್ರಮ ಇದಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ವಿದ್ಯುತ್ ಗ್ರಿಡ್ ಸಂಪರ್ಕ ಮತ್ತು ಬಹುಉತ್ಪನ್ನ ಪೆಟ್ರೋಲಿಯಂ ಪೈಪ್‌ಲೈನ್‌ಗಳನ್ನು ಸ್ಥಾಪಿಸಲಾಗುವುದು. ಶ್ರೀಲಂಕಾದ ವಿದ್ಯುತ್ ಘಟಕಗಳಿಗೆ ಭಾರತವು ದ್ರವೀಕೃತ ನೈಸರ್ಗಿಕ ಅನಿಲವನ್ನು ಪೂರೈಕೆ ಮಾಡಲಿದೆ ಎಂದು ಮೋದಿ ತಿಳಿಸಿದ್ದಾರೆ.

ಎರಡೂ ರಾಷ್ಟ್ರಗಳ ನಡುವೆ ಸಂಪರ್ಕ ಸೌಲಭ್ಯ ಹೆಚ್ಚಿಸಲು ರಾಮೇಶ್ವರ ಮತ್ತು ತಲೈಮನಾರ್ ನಡುವೆ ದೋಣಿ ಸೇವೆ ಪ್ರಾರಂಭಿಸಲಾಗುವುದು. ಶೀಘ್ರವೇ ರಕ್ಷಣಾ ಒಪ್ಪಂದ ನಿರ್ಧರಿಸಲಾಗುವುದು. ಹೈಡ್ರೋಗ್ರಫಿ (ಸಮುದ್ರಯಾನ ಮಾರ್ಗದರ್ಶಿ) ಸಹಕಾರಕ್ಕಾಗಿಯೂ ಒಪ್ಪಂದ ನಡೆದಿದೆ ಎಂದು ಮೋದಿ ಹೇಳಿದರು.

'ಮೀನುಗಾರರು ಗಡಿ ದಾಟಿದಾಗ ಬಂಧನಕ್ಕೆ ಒಳಗಾಗುತ್ತಿದ್ದಾರೆ. ಈ ವಿಷಯದಲ್ಲಿ ಮಾನವೀಯ ಧೋರಣೆಯೊಂದಿಗೆ ಮುಂದುವರಿಯಲು ಸಹ ನಾವು ಒಪ್ಪಿದ್ದೇವೆ' ಎಂದು ಮೋದಿ ಹೇಳಿದರು.

ಶ್ರೀಲಂಕಾ ಸರ್ಕಾರವು ತಮಿಳರ ಆಕಾಂಕ್ಷೆಗಳನ್ನು ಈಡೇರಿಸುವ ನಿರೀಕ್ಷೆಯಿದೆ ಎಂದೂ ಹೇಳಿದರು.

ನವದೆಹಲಿಯಲ್ಲಿ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಮತ್ತು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಭೇಟಿಯಾಗಿ ಮಾತುಕತೆ ನಡೆಸಿದರು

–ಪಿಟಿಐ ಚಿತ್ರ

ಮುಖ್ಯಾಂಶಗಳು

- ಮೀನುಗಾರರ ಬಂಧನ ವಿಚಾರದಲ್ಲಿ ಮಾನವೀಯ ಧೋರಣೆ
- ರಾಮೇಶ್ವರ –ತಲೈಮನಾರ್ ನಡುವೆ ದೋಣಿ ಸೇವೆ ಪ್ರಾರಂಭಿಸಲು ನಿರ್ಧಾರ
- ಪೆಟ್ರೋಲಿಯಂ ಪೈಪ್‌ಲೈನ್ ಸ್ಥಾಪಿಸಲು ಸಹಕಾರ

ಕಾರಿನ ಬಾಗಿಲಿಗೆ ಹೆಬ್ಬೆರಳು ಸಿಲುಕಿದ್ದರೂ ವ್ಯಕ್ತಿಯನ್ನು ಅರ್ಧ ಕಿ.ಮೀ. ಎಳೆದೊಯ್ದರು!

ವಯನಾಡ್ (ಪಿಟಿಐ): ಕಾರಿನ ಬಾಗಿಲಿಗೆ ಬುಡಕಟ್ಟು ವ್ಯಕ್ತಿಯೊಬ್ಬರ ಹೆಬ್ಬೆರಳು ಸಿಲುಕಿದ್ದರೂ ಚಾಲಕ ಸುಮಾರು ಅರ್ಧ ಕಿ.ಮೀ. ದೂರ ಎಳೆದೊಯ್ದಿದ್ದಾನೆ.

ಕೇರಳದ ವಯನಾಡ್ ಜಿಲ್ಲೆಯ ಮಾನಂದವಾಡಿ ಸಮೀಪದ ಕೂಡಲ್ ಕಡವು ಚೆಕ್‌ಡ್ಯಾಂ ಬಳಿ ಭಾನುವಾರ ಸಂಜೆ ಈ ಘಟನೆ ನಡೆದಿದೆ. ಸ್ಥಳೀಯ ಬುಡಕಟ್ಟು ಸಮುದಾಯದ ಮದನ್‌ಗೆ (49) ಗಂಭೀರ ಗಾಯಗಳಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಅಮಾನವೀಯ ಕೃತ್ಯದ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿವೆ.

ಮದನ್ ಅವರನ್ನು ಡಾಂಬರು ರಸ್ತೆಯ ಮೇಲೆ ಎಳೆದೊಯ್ದಿರುವ ಕಾರಣ, ಅವರ ಸೊಂಟ ಹಾಗೂ ಕೈ, ಕಾಲುಗಳಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಚೆಕ್‌ಡ್ಯಾಂ ವೀಕ್ಷಿಸಲು ಬಂದಿದ್ದಿರಬಹುದು ಎಂದು ಶಂಕಿಸಿದ್ದಾರೆ.

'ಮಾಹಿತಿಗಳ ಪ್ರಕಾರ, ಕೂಡಲ್ ಕಡವು ಚೆಕ್‌ಡ್ಯಾಂ ಬಳಿ ಎರಡು ಗುಂಪುಗಳ ನಡುವೆ ಭಾನುವಾರ ಸಂಜೆ ವಾಗ್ವಾದ ನಡೆದಿದ್ದು, ಸ್ಥಳೀಯರು ಜಗಳ ಬಿಡಿಸಲು ಮುಂದಾಗಿದ್ದಾರೆ. ಈ ವೇಳೆ, ಕಾರಿನ ಬಾಗಿಲಿಗೆ ಮದನ್ ಅವರ ಕೈ ಸಿಲುಕೊಂಡಿದ್ದು, ಆರೋಪಿಗಳು ಈ ಹಿಂಸಾಕೃತ್ಯ ಎಸಗಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿದ್ದು, ಅವರು ಮಲಪ್ಪುರ ಜಿಲ್ಲೆಯ ಕುಟ್ಟಿಪುರಂ ನಿವಾಸಿಗಳೆಂದು ಶಂಕಿಸಲಾಗಿದೆ. ಆರೋಪಿಗಳನ್ನು ಬಂಧಿಸಲು ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಸಿ.ಸಿ. ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಗೋಗರೆದರೂ ಕಾರು ನಿಲ್ಲಿಸಲಿಲ್ಲ: 'ಮದನ್ ಅವರ ಹೆಬ್ಬೆರಳು ಕಾರಿನ ಬಾಗಿಲಿಗೆ ಸಿಕ್ಕಿಕೊಂಡಿದ್ದು, ಕಾರನ್ನು ನಿಲ್ಲಿಸುವಂತೆ ಮದನ್ ಅವರು ಗೋಗರೆಯುತ್ತಿದ್ದರು. ಆದರೂ, ಆರೋಪಿಗಳು ಕಾರನ್ನು ನಿಲ್ಲಿಸದೆ ವಿಕೃತಿ ಮೆರೆದರು. ಕಾರಿನಲ್ಲಿ ಕನಿಷ್ಠ ನಾಲ್ಕು ಮಂದಿ ಇದ್ದರು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಮುಖ್ಯಾಂಶಗಳು

- ಜಗಳ ಬಿಡಿಸಲು ಹೋದವನ ಮೇಲೆಯೇ ಪ್ರವಾಸಿಗರ ದರ್ಪ
- ಬುಡಕಟ್ಟು ವ್ಯಕ್ತಿಯನ್ನು ಕಾರಿನಲ್ಲಿ ಎಳೆದೊಯ್ದ ದುರುಳರು

ಕ್ಷೇಮ ಕುಶಲ

ಬೊಜ್ಜು

ಆರೋಗ್ಯದ ಭಾಗ್ಯ ಅಲ್ಲ, ಭಾರ

ಡಾ. ವಿನಯ ಶ್ರೀನಿವಾಸ್

ನಲವತ್ತರ ನಂತರ ಬಹತೇಕರನ್ನು ಕಾಡುವ ಸಮಸ್ಯೆ ಬೊಜ್ಜು. ಇದು ಆರೋಗ್ಯಕ್ಕೆ ಮಾರಕ. ದೇಹಕ್ಕೆ ಕೊಬ್ಬು ಅವಶ್ಯವಾದರೂ ವ್ಯಕ್ತಿಯ ಆರೋಗ್ಯದಲ್ಲಿ ವ್ಯತಯವನ್ನುಂಟು ಮಾಡುವಷ್ಟು ಕೊಬ್ಬು ಶೇಖರವಾಗುವುದನ್ನು 'ಬೊಜ್ಜು' ಎಂದು ಪರಿಗಣಿಸುತ್ತೇವೆ. ವ್ಯಕ್ತಿಯ ದೇಹತೂಕ ಆತನ ಎತ್ತರ ಮತ್ತು ವಯಸ್ಸಿಗೆ ಸಹಜವಾಗಿರದೆ ಹೆಚ್ಚಿದ್ದಾಗ ಅಧಿಕ ದೇಹತೂಕ ಎನ್ನಿಸಿಕೊಳ್ಳುತ್ತದೆ. ದೇಹ ದ್ರವ್ಯರಾಶಿ ಸೂಚ್ಯಂಕದ ('ಬಾಡಿ ಮಾಸ್ ಇಂಡೆಕ್ಸ್') ಆಧಾರದ ಮೇಲೆ ವ್ಯಕ್ತಿಯದು ಸಹಜ ತೂಕವೇ, ಅಧಿಕ ತೂಕವೇ ಅಥವಾ 'ಬೊಜ್ಜೇ' ಎಂದು ನಿರ್ಧರಿಸಬಹುದು. ದೇಹ ತೂಕವನ್ನು ಎತ್ತರದ (ಮೀಟರ್‌ನಲ್ಲಿ) ಚದರದಿಂದ ಭಾಗಿಸಿದಾಗ ಸಿಗುವ ಸಂಖ್ಯೆಯೇ ಅ ಸೂಚ್ಯಂಕ.

18.5-24.9 > ಸಹಜ ದೇಹತೂಕ
25.0-29.9 > ಅಧಿಕ ದೇಹತೂಕ
30.0 ಮತ್ತು ಹೆಚ್ಚು > ಬೊಜ್ಜು

ದೇಹದ ಇತರ ಭಾಗಗಳ ಚರ್ಮದ ಕೆಳಭಾಗದಲ್ಲಿ ಶೇಖರವಾಗುವ ಕೊಬ್ಬಿನಾಂಶಕ್ಕಿಂತಲೂ ಹೊಟ್ಟೆ ಹಾಗೂ ಸೊಂಟದ ಸುತ್ತ ಶೇಖರವಾಗುವ ಕೊಬ್ಬು ಅಪಾಯ. ಏಕೆಂದರೆ ಇದು ಆಂತರಿಕ ಅಂಗಾಂಗಗಳಾದ ಯಕೃತ್ತು, ಕರುಳು, ಗುಲ್ಮ, ಮೇದೋಜೀರಕ ಗ್ರಂಥಿಗಳ ಸುತ್ತಲೂ ಆವರಿಸಿಕೊಂಡು ಅವುಗಳ ಕ್ಷಮತೆಯನ್ನು ಗಣನೀಯವಾಗಿ ಕುಂಠಿತಗೊಳಿಸಬಲ್ಲದು. ಮುಖ್ಯವಾಗಿ ಮೇದೋಜೀರಕ ಗ್ರಂಥಿಯ ಬೀಟಾ ಜೀವಕೋಶಗಳಿಂದ ಇನ್ಸುಲಿನ್‌ನ ಉತ್ಪತ್ತಿ ಇಳಿಮುಖವಾಗತೊಡಗುತ್ತದೆ. ಉತ್ಪತ್ತಿಯಾದ ಅಲ್ಪಸ್ವಲ್ಪ ಇನ್ಸುಲಿನ್‌ನ ಕಾರ್ಯಕ್ಷಮತೆ ಕೂಡ ಕ್ಷೀಣಿಸತೊಡಗುತ್ತದೆ. ಇದು ಮಧುಮೇಹಕ್ಕೆ ಅಡಿಪಾಯ ಹಾಕಿದಂತಾಗುತ್ತದೆ. ಇದು ಮತ್ತಷ್ಟು ಮುಂದುವರೆದು ಪಿಷ್ಟ ಮತ್ತು ಕೊಬ್ಬಿನಾಂಶದ ಚಯಾಪಚಯಗಳಲ್ಲಿ ದೋಷ, ಅಧಿಕ ರಕ್ತದೊತ್ತಡ ಮತ್ತು ಅಂಗಾಂಶಗಳಲ್ಲಿ ಉರಿಯೂತದ ಸ್ಥಿತಿಗೂ ಕಾರಣವಾಗುತ್ತದೆ. ಈ ಸಂಕೀರ್ಣವನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಮೆಟಬಾಲಿಕ್ ಸಿಂಡ್ರೋಮ್' ಎನ್ನುತ್ತೇವೆ. ಈ ಎಲ್ಲ ಅಂಶಗಳು ಹೃದಯ ಮತ್ತು ರಕ್ತನಾಳಗಳ ಮೇಲೆಯೂ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತವೆ. ಒಟ್ಟಾರೆ ಸೂಚಿಸುವುದಾದರೆ ಬೊಜ್ಜು ಮುಖ್ಯವಾಗಿ ಮಧುಮೇಹ, ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು ಹಾಗೂ ಕೆಲ ಬಗೆಯ ಕ್ಯಾನ್ಸರ್‌ಗಳಿಗೂ ಕಾರಣವಾಗಬಲ್ಲದು.

ವ್ಯವಸ್ಥೆಯಲ್ಲಿ ದೋಷ

ಶರೀರದಲ್ಲಿ ಶಕ್ತಿಯ ಬಳಕೆಯಲ್ಲಿನ ಅಸಮತೋಲನವೇ ಅಧಿಕ ದೇಹತೂಕ ಮತ್ತು ಬೊಜ್ಜಿಗೆ ಮುಖ್ಯ ಕಾರಣ. ಶೇಖರಗೊಂಡ ಕೊಬ್ಬಿನಾಂಶದಿಂದ ಉತ್ಪತ್ತಿಯಾಗುವ 'ಲೆಪ್ಟಿನ್' ಹಾಗೂ ಜಠರ, ಕರುಳುಗಳಿಂದ ಉತ್ಪತ್ತಿಯಾಗುವ 'ಗ್ರೆಲಿನ್' ಮತ್ತಿತರ ಅಂಶಗಳು ಮಿದುಳಿನ ಹೈಪೋಥೆಲಾಮಸ್‌ನ ಮೂಲಕ ಹಸಿವೆಯನ್ನು ನಿಯಂತ್ರಿಸುವಲ್ಲಿ ಹಾಗೂ ಶಕ್ತಿಯ ಬಳಕೆಯನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಈ ವ್ಯವಸ್ಥೆಯು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದಾಗ ಶಕ್ತಿಯು ಸರಿಯಾಗಿ ಬಳಕೆಯಾಗದೆ ಕೊಬ್ಬಿನ ರೂಪದಲ್ಲಿ ಸಂಗ್ರಹವಾಗುತ್ತಹೋಗುತ್ತದೆ.

ಕಾರಣಗಳೇನು?

- ಆನುವಂಶೀಯತೆ
- ರಸದೂತಗಳ ವ್ಯತ್ಯಾಸ (ಥೈರಾಯ್ಡ್ ಮತ್ತು ಅಡ್ರೆನಲ್ ಗ್ರಂಥಿಯ ಕ್ಷಮತೆಯಲ್ಲಿ ವ್ಯತ್ಯಯ)
- ಜಡವಾದ ಜೀವನಶೈಲಿ
- ಅಧಿಕ ಕ್ಯಾಲೊರಿಯುಕ್ತ ಆಹಾರಸೇವನೆ
- ಕೆಲವು ಮಾನಸಿಕ ಕಾಯಿಲೆಗಳು
- ಕೆಲವು ಔಷಧಗಳ ದೀರ್ಘಕಾಲಿಕ ಸೇವನೆ, ಮೊದಲಾದುವು

ಪರಿಣಾಮಗಳು

- ಮಧುಮೇಹ, ರಕ್ತದ ಕೊಬ್ಬಿನಾಂಶದ ಹೆಚ್ಚಳ, ಅಧಿಕ ರಕ್ತದೊತ್ತಡ, ಹೃದಯಾಘಾತ ಮತ್ತು ಹೃದಯಕ್ಕೆ ಸಂಬಂಧಪಟ್ಟ ಇತರ ಸಮಸ್ಯೆಗಳು, ಪಾರ್ಶ್ವವಾಯು, ಯಕೃತ್ತಿನ ಸಮಸ್ಯೆಗಳು, ಪಿತ್ತಕೋಶದಲ್ಲಿ ಕಲ್ಲುಗಳು, ಸಂಧಿವಾತ ಮತ್ತು ಕೀಲುನೋವು, ನಿದ್ದೆಯಲ್ಲಿ ಉಸಿರಾಟದ ಸಮಸ್ಯೆ ಮೊದಲಾದುವು ಮುಖ್ಯವಾದ ಅಪಾಯದ ಪರಿಣಾಮಗಳು. ಬೊಜ್ಜು ಕ್ಯಾನ್ಸರ್‌ಗೂ ಕಾರಣವಾಗಬಲ್ಲದು. ಅಧಿಕ ತೂಕ ಹೊಂದಿದವರಲ್ಲಿ ಅನ್ನನಾಳ, ಥೈರಾಯ್ಡ್, ಕರುಳು ಮತ್ತು ಮೂತ್ರಪಿಂಡದ ಕ್ಯಾನ್ಸರ್ ಸಂಭವ ಹೆಚ್ಚು. ಸ್ಥೂಲಕಾಯದ ಮಹಿಳೆಯರಲ್ಲಿ ಪಿತ್ತಕೋಶ, ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಸಂಭವ ಕೂಡ ಹೆಚ್ಚು ಎನ್ನುತ್ತವೆ, ಅಧ್ಯಯನಗಳು.

ಆರಂಭದಲ್ಲಿಯೇ ನಿಯಂತ್ರಿಸಿ

- ಆಹಾರದಲ್ಲಿ ಪಿಷ್ಟಾಂಶ ಕಡಿಮೆಯಿರಲಿ. 'ಬಿಳಿವಿಷ'ಗಳೆಂದೇ ಪರಿಗಣಿಸಲ್ಪಟ್ಟಿರುವ ಸಕ್ಕರೆ, ಉಪ್ಪು, ಅಕ್ಕಿ, ಮೈದಾ ಬಳಕೆಯನ್ನು ಮಿತಿಯಲ್ಲಿಡುವುದು ಒಳ್ಳೆಯದು.
- ಪ್ರೊಟೀನ್ ಅಂಶ ಹೆಚ್ಚಿರುವ ಮೊಳಕೆ ಬರಿಸಿರುವ ಕಾಳು, ಮೊಟ್ಟೆ, ಮಾಂಸಾಹಾರ, ಹಾಲು ಹಾಗೂ ಹಾಲಿನ ಉತ್ಪನ್ನಗಳು, ಸೊಪ್ಪು, ಹಸಿರು ತರಕಾರಿಗಳು, ಹಣ್ಣುಗಳ ಬಳಕೆ ಉತ್ತಮ.
- ಸಂಸ್ಕರಿಸಿದ ಆಹಾರದಿಂದ ದೂರವಿರಿ. ಆದಷ್ಟೂ ಮನೆಯಲ್ಲಿಯೇ ತಯಾರಿಸಿದ ನೈಸರ್ಗಿಕ ಹಾಗೂ ಪೌಷ್ಟಿಕ ಆಹಾರಕ್ಕೆ ಒತ್ತನ್ನು ಕೊಡಿ.
- ನಿತ್ಯವೂ ಕಡ್ಡಾಯವಾಗಿ ವ್ಯಾಯಮ ಮಾಡಿ. ಸದಾ ಚಟುವಟಿಕೆಯಿಂದಿರಿ.
- ದಿನಕ್ಕೆ ಆರರಿಂದ ಎಂಟು ತಾಸುಗಳ ಸಮರ್ಪಕ ನಿದ್ದೆಯೂ ಆರೋಗ್ಯಕ್ಕೆ ಅತ್ಯವಶ್ಯಕ.
- ನೀವು ಮಾನಸಿಕ ತುಮುಲಗಳಿಂದ ಹೊರಬರಲಾರದೆ ಅತಿಯಾದ ಆಹಾರಸೇವನೆ ಮಾಡುತ್ತಿದ್ದರೆ ಪರಿಹಾರ ಕಂಡುಕೊಳ್ಳಿ. ಅಗತ್ಯವಿದ್ದರೆ ಆಪ್ತಸಮಾಲೋಚಕರಲ್ಲಿ ಅಥವಾ ಮನೋವೈದ್ಯರಲ್ಲಿ ಸಲಹೆ ಪಡೆಯಿರಿ

ಮಕ್ಕಳಲ್ಲಿ ಹೆಚ್ಚುತ್ತಿರುವ ಬೊಜ್ಜು

- ಬದಲಾದ ಜೀವನಶೈಲಿಯಿಂದ ಮಕ್ಕಳಲ್ಲಿಯೂ ಬೊಜ್ಜು ಹೆಚ್ಚಾಗುತ್ತಿರುವುದು ನಿಜಕ್ಕೂ ಆತಂಕಕಾರಿ. ಇದು ಅತಿ ಚಿಕ್ಕ ವಯಸ್ಸಿನಲ್ಲಿಯೇ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಾಘಾತ ಮೊದಲಾದ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಮೊಬೈಲ್ ವ್ಯಸನ, ಕಡಿಮೆಯಾಗುತ್ತಿರುವ ಹೊರಾಂಗಣದ ಕ್ರೀಡೆಗಳು, ಜಂಕ್ ಆಹಾರದ ಹಾವಳಿ, ಚಟುವಟಿಕೆರಹಿತ ಜೀವನ ಮೊದಲಾದ ಅಂಶಗಳು ಈ ನಿಟ್ಟಿನಲ್ಲಿ ಕಾರಣ. ಪೋಷಕರು ಆರಂಭದಿಂದಲೇ ಮಕ್ಕಳ ಆಹಾರದ ಬಗ್ಗೆ ಗಮನವನ್ನು ವಹಿಸಬೇಕು. ನಿತ್ಯವೂ ವ್ಯಾಯಾಮ ಮಾಡಲು ಮತ್ತು ಆಟೋಟಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಪ್ರೋತ್ಸಾಹಿಸಬೇಕು.

ಪೂರ್ವಭಾವಿ ಮಧುಮೇಹ

ದೋಷಪೂರಿತ ಜೀವನಶೈಲಿಯ ಕಾರಣದಿಂದಾಗಿ ಪೂರ್ಣಪ್ರಮಾಣದ ಮಧುಮೇಹ ಕಾಣಿಸಿಕೊಳ್ಳುವ ಮೊದಲ ಹಂತವನ್ನು 'ಪೂರ್ವಭಾವಿ ಮಧುಮೇಹ' ಎನ್ನಲಾಗುತ್ತದೆ. ಈ ಹಂತದಲ್ಲಿ ಎಚ್ಚರವನ್ನು ವಹಿಸಿದರೆ ಮಧುಮೇಹ ಬರುವುದನ್ನು ತಪ್ಪಿಸಬಹುದು. ಆದರೆ ಕಟ್ಟುನಿಟ್ಟಿನ ಆಹಾರಶೈಲಿ, ನಿಯಮಿತ ವ್ಯಾಯಾಮ ಮತ್ತು ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಂಡರೆ ಮಾತ್ರ ಅದು ಸಾಧ್ಯ.

❖

ನಮ್ಮೊಳಗೊಬ್ಬ ಕಲಹಪ್ರಿಯ!

ರಘು ವಿ.

ಎಐ ಚಿತ್ರ: ಶಶಿಧರ ಹಳೇಮನಿ

ಇದು ವೇಗ, ಆವೇಗದ ಯುಗ. ಕಾಲದ ಪರಿಣಾಮ ಅಥವಾ ನಮ್ಮೊಳಗಿನ ಧಾವಂತದ ಪರಿಣಾಮವಾಗಿ ಇಂದು ನಮ್ಮ ಕುಟುಂಬದಲ್ಲಿ, ಸಮಾಜದಲ್ಲಿ ನಾವು ಕೆಲಸ ಮಾಡುವ ಪರಿಸರದಲ್ಲಿ, ಎಲ್ಲೆಡೆಯಲ್ಲಿ ನಿತ್ಯ ಕಾಣುವ ಒಂದು ಪ್ರಹಸನವೆಂದರೆ ಜಗಳ.

ಬೆಳಗಾಗೆದ್ದು ಕಾಫಿ ತಡವಾಯಿತೆಂದು ಮನೆಯಲ್ಲಿ ಜಗಳ, ರಸ್ತೆಯಲ್ಲಿ ವಾಹನ ಅಡ್ಡ ಬಂದಿತೆಂದು ಅಥವಾ ತಗುಲಿತೆಂದು ಅಲ್ಲಿ ಜಗಳ, ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ, ಶಿಕ್ಷಕ-ವಿದ್ಯಾರ್ಥಿಗಳ ನಡುವೆ, ಆಡಳಿತ ಮಂಡಳಿ ಮತ್ತು ಶಿಕ್ಷಕರ ನಡುವೆ ಜಗಳ. ಇನ್ನು ಸಮಾಜದಲ್ಲಿ ಜಾತಿ, ಮತ, ಪಂಥ, ಧರ್ಮಗಳ ಜಗಳ. ಜಾಗತಿಕ ಮಟ್ಟದಲ್ಲಿ ಸರಹದ್ದುಗಳಲ್ಲಿ ಬಡಿದಾಟ, ಪರದೇಶದ ಮೇಲೆ ಆಕ್ರಮಣ, ಮಿಲಿಟರಿ ಬಲ ನಿರೂಪಿಸಲು ಯುದ್ಧ. ಹೀಗೆ ಎಲ್ಲೆಡೆಯಲ್ಲಿ ಜಗಳಗಳ ವಿಶ್ವರೂಪ ದರ್ಶನವಾಗುತ್ತಿದೆ. ಈ ನಿಟ್ಟಿನಲ್ಲಿ ಜಗಳ ಏಕಾಗುತ್ತದೆ ಮತ್ತು ಅದನ್ನು ನಿಯಂತ್ರಿಸುವ ಅಥವಾ ನಿಲ್ಲಿಸುವ ಬಗೆ ಏನು ಎಂಬುದನ್ನು ನಾವು ಗಮನಿಸಬೇಕಾಗಿದೆ. ಏಕೆಂದರೆ ನಮ್ಮ ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ, ವಿಜ್ಞಾನ ಎಲ್ಲ ಪ್ರಗತಿಯನ್ನು ಸಾಧಿಸಿದರೂ ಮನುಷ್ಯನ ಅಂತರಂಗದ ಶಾಂತಿ ಅನುಭೂತಿಗಳನ್ನು ಕಂಡುಕೊಳ್ಳಲು ವಿಫಲವಾಗಿದೆ. ಅವರು ತಮ್ಮ 'ಶತಮಾನದ ಸಂಧ್ಯೆ' ಕವನದಲ್ಲಿ ಮೂಡಿಸಿರುವ ಸಾಲುಗಳು ಹೀಗಿವೆ: 'ನೊಣ ಮೀಸೆಯ ಹುಳು ಹೆಜ್ಜೆಯ ಎಣಿಸುವ ಬಿಜ್ಜೆಯ ಬಲ್ಲ, ತನ್ನಾತ್ಮವ ತಾನರಸುವ ಸಾಧನೆಯೊಂದನ್ನು ಒಲ್ಲ, ಅನ್ವೇಷಣೆ ಅನ್ವೇಷಣೆ ಸುಖಿಸಲು ಪುರುಸೊತ್ತಿಲ್ಲ.'

ಜಗಳಗಳಿಗೆ ಮುಖ್ಯವಾಗಿ ಆರು ಕಾರಣಗಳನ್ನು ಪಟ್ಟಿ ಮಾಡಬಹುದು: ಪ್ರೀತಿ ಅಥವಾ ಪ್ರೇಮ, ಕುಟುಂಬ, ಅಧಿಕಾರ, ಸ್ವಾತಂತ್ರ್ಯ, ತ್ಯಾಗ ಮತ್ತು ಅಹಂಕಾರ - ಇವುಗಳ ಕಾರಣದಿಂದ ಕಲಹಗಳು ಆರಂಭವಾಗುತ್ತವೆ. ಆದರೆ ಇವೆಲ್ಲದರ ಮೂಲದಲ್ಲಿ ಸ್ವಾರ್ಥದ ಲೇಪ ಇದ್ದಾಗ ಅದು ಜಗಳಕ್ಕೆ ಕಾರಣವಾದರೆ ಅಲ್ಲಿ ನಿಃಸ್ವಾರ್ಥದ ಲೇಪ ಇದ್ದರೆ ಅದು ಶಾಂತಿಗೆ ಕಾರಣವಾಗುತ್ತದೆ. ಪ್ರೇಮವೆಂಬುದು ಮತ್ತೊಬ್ಬ ವ್ಯಕ್ತಿಯ ಮೇಲೆ ತಮ್ಮ ಅಧಿಕಾರ ಸ್ಥಾಪನೆ ಎಂದುಕೊಂಡಾಗ ಅದು ತಮಗೆ ಒಲಿಯದಿದ್ದಾಗ ಆ ವ್ಯಕ್ತಿಯ ಮೇಲೆ, ಆ ಕುಟುಂಬದ ಮೇಲೆ ಆ ಪರಿಸರದ ವಿರುದ್ಧ ಜಗಳ ಕಾಯುತ್ತಾರೆ. ಕುಟುಂಬದಲ್ಲಿ ಇರುವ ಸಂಪನ್ಮೂಲಗಳ ಬಳಕೆಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ ಅಲ್ಲಿ ಕಲಹ ಉಂಟಾಗುತ್ತದೆ. ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ಅವನು ಅದಕ್ಕಾಗಿ ಜಗಳ ಕಾಯುತ್ತಾನೆ. ತ್ಯಾಗದ ವಿಚಾರದಲ್ಲೂ ಜಗಳ ಉಂಟಾಗುತ್ತದೆ; ಅದಕ್ಕೂ ರಾಗ-ದ್ವೇಷಗಳೇ ಕಾರಣ. ಪೀಠಾಧಿಪತಿಗಳ ಕಲಹ ಇದಕ್ಕೊಂದು ಉದಾಹರಣೆ. ಅಹಂಕಾರದ ವಿವಿಧ ಮುಖಗಳು ಜಗಳದ ಕನ್ನಡಿಯಲ್ಲಿ ಕಾಣಿಸಿಕೊಳ್ಳುತ್ತವೆ. 'ಕಗ್ಗ'ದ ಒಂದು ಪದ್ಯ ಇದನ್ನು ಸೊಗಸಾಗಿ ಕಾಣಿಸುತ್ತದೆ: 'ದೇವ ದಾನವರ ರಣರಂಗ ಮಾನವ ಹೃದಯ, ಭಾವ ರಾಗ ಹಠಂಗಳವರ ಸೇನೆಗಳು, ಭೂವಿಭವ ಜಯಗಳ ಭ್ರಾಂತಿಯಲಿ ಮರೆಯುವರು ಜೀವಾಮೃತವನವರು.' ಬಾಳಿನ ರಣರಂಗದಲ್ಲಿ ಭಾವ ರಾಗ ಹಠಗಳ ಸೇನೆಗಳನ್ನು ಸಜ್ಜುಗೊಳಿಸುವುದರ ಮೂಲಕ ನಮ್ಮ ಮೂಲಸ್ವರೂಪವಾದ ಆನಂದವನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ಕಗ್ಗದ ಕವಿ ಪ್ರತಿಪಾದಿಸುತ್ತಿದ್ದಾರೆ.

ತಾಳ್ಮೆ ಎಂಬುದು ಸದಾ ನಮ್ಮನ್ನು ಕಾಪಾಡುವ ತಾಯಿತ. ಅದಿಲ್ಲದಿದ್ದರೆ ಬದುಕು ಸಂಘರ್ಷದ ಹಾದಿಯಾಗಿಬಿಡುತ್ತದೆ. ಜಗಳವೆಂಬ ಪ್ರಸಂಗದಲ್ಲಿ ನಮ್ಮ ಕೀಳರಿಮೆ, ಆತ್ಮವಿಶ್ವಾಸದ ಕೊರತೆ, ನಮ್ಮ ದೌರ್ಬಲ್ಯ – ಇವೆಲ್ಲವೂ ವ್ಯಕ್ತವಾಗಿಬಿಡುತ್ತದೆ. ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ತಾಳ್ಮೆಯನ್ನು ರೂಢಿಸಿಕೊಂಡು ಜಗಳಗಳಿಂದ ಮುಕ್ತರಾದಾಗ ಜೀವನವು ಸಂತಸಮಯವಾಗುತ್ತದೆ. 'ಕಳವಳವ ನೀಗಿಬಿಡು, ತಳಮಳವ ದೂರವಿಡು, ಕಳೆ, ತಳ್ಳು ಗಲಭೆ ಗಾಬರಿಯ ಮನದಿಂದ ಅಲೆದಾಡುತಿರೆ ದೀಪ ಕಣ್ಣೆ ಗುರಿ ತಪ್ಪುವುದು, ತಿಳಿತಿಳಿವು ಶಾಂತಿಯಲಿ' ಎನ್ನುತ್ತಾನೆ, ಮಂಕುತಿಮ್ಮ. ತಿಳಿವಿನಲ್ಲಿ ಶಾಂತಿಯ ಅಡಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಖಲೀಲ್ ಗಿಬ್ರಾನ್ ನಮ್ಮ ಹೋರಾಟದ ಒಟ್ಟು ಗುರಿಯನ್ನು ಒಂದೇ ವಾಕ್ಯದಲ್ಲಿ ಹಿಡಿದಿಡುತ್ತಾನೆ. 'ಮನುಷ್ಯ ಬದುಕನ್ನು ಹೊರಗೆ ಅರಸಲು ಹೆಣಗುತ್ತಾನೆ. ಆದರೆ ತಾನು ಹುಡುಕುತ್ತಿರುವ ಬದುಕು ತನ್ನೊಳಗೇ ಇದೆ ಎಂಬುದನ್ನು ಮರೆತಿರುತ್ತಾನೆ' ಎಂದು ಅವನು ಹೇಳಿದ್ದಾನೆ. ಅಂದರೆ ನಮ್ಮ ಬದುಕಿನ ಸಾರ್ಥಕ್ಯಕ್ಕೆ ಹೊರಗಿನ ಅಡೆತಡೆಗಳು ಕಾರಣವೆಂದು ಅವುಗಳ ಮೇಲೆ ಯುದ್ಧ ಸಾರುವ ಬದಲು ನಮ್ಮೊಳಗೆ ಇರುವ ದೌರ್ಬಲ್ಯಗಳನ್ನು ನೀಗಿಕೊಂಡು ಆಂತರಿಕವಾಗಿ ಶಕ್ತಿವಂತರಾದಾಗ ಬಾಹ್ಯ ಜಗಳಗಳು ನಿಲ್ಲುತ್ತವೆ. ಹೀಗೆ ತನ್ನ ಜೀವನದ ಸಾರ್ಥಕ್ಯವನ್ನು ವ್ಯಕ್ತಿಯು ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು ಗಿಬ್ರಾನ್ ಸೂಚಿಸುತ್ತಿದ್ದಾನೆ.

ಜಾಗತಿಕ ಮಟ್ಟದಲ್ಲಿ ಅಶಾಂತಿಯು ಹರಡಿ ಜಗಳಗಳು ತಲೆದೋರುತ್ತಿರುವ ಸಂದರ್ಭದಲ್ಲಿ ಬಹಳ ಹಿಂದೆ ಅಂದರೆ 1897ರಲ್ಲಿ ವಿಲಿಯಂ ಜೇಮ್ಸ್ ಬಾಸ್ಟನ್ನಿನಲ್ಲಿ ಅಮೆರಿಕದ ಅಂತರ್ಯುದ್ಧದ ಸ್ಮಾರಕದ ಉದ್ಘಾಟನಾ ಸಮಯದಲ್ಲಿ ಹೇಳಿದ ಮಾತುಗಳು ಮನಮುಟ್ಟವಂತಿವೆ. ಅದರ ಸಾರಾಂಶ ಹೀಗೆ: 'ದೇಶದ ಅಪಾಯಕಾರಿ ಶತ್ರುಗಳು ಹೊರಗಿನವರಲ್ಲ. ಅವರು ನಮ್ಮ ಗಡಿಗಳೊಳಗೆ ಇರುತ್ತಾರೆ. ಮೊದಲಿಗೆ ನಾಗರಿಕತೆಯು ಇಂತಹ ಆಂತರಿಕ ಶತ್ರುಗಳಿಂದ ತನ್ನನ್ನು ಕಾಪಾಡಿಕೊಳ್ಳಬೇಕು. ತಾವು ನಿಜವಾದ ಮನುಷ್ಯರು ನಿಜ ಅರ್ಥದ ಪ್ರಜೆಗಳು ಎಂಬುದನ್ನು ಅಲ್ಲಿನ ಪ್ರಜೆಗಳು ಬಿಂಬಿಸುತ್ತಾರೆ. ಮದಭರಿತ ಪ್ರತ್ಯೇಕತಾವಾದಿಗಳನ್ನು ಆರಿಸದೆ ಅವರು ಉತ್ತಮರನ್ನೇ ನಾಯಕರನ್ನಾಗಿ ಆರಿಸುತ್ತಾರೆ.'

ಇಂದು ಜಗತ್ತಿನಲ್ಲಿ ಎಲ್ಲೆಡೆಯಲ್ಲಿ ವ್ಯಕ್ತವಾಗುತ್ತಿರುವ ಜಗಳಗಳು ಮರೆಯಾಗಬೇಕಾದರೆ ಪ್ರೀತಿಯ ಅನುಸಂಧಾನದ ಅಂಟು ಮಾನವರೆಲ್ಲರನ್ನು ಬಂಧಿಸಬೇಕು. ಉನ್ನತ ಜೀವನದತ್ತ, ಶಾಂತಿ-ಸಮಾಧಾನಗಳ ಬಾಳನ್ನು ಬೆಳೆಸಿಕೊಳ್ಳುವತ್ತ ಎಲ್ಲರೂ ಗಮನವನ್ನು ಹರಿಸಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–10 ವೃತ್ತಗಳು

ಅಭ್ಯಾಸ 10.2

13) ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ, ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳಾಗಿರುತ್ತದೆ ಎಂದು ಸಾಧಿಸಿ.

ಪರಿಹಾರ:–



O ವೃತ್ತ ಕೇಂದ್ರವಿರುವ ವೃತ್ತಕ್ಕೆ ABCD ಚಕ್ರೀಯ ಚತುರ್ಭುಜವಾಗಿದ್ದು ಅದೂ P, Q, R, ಮತ್ತು S ಬಿಂದುಗಳಲ್ಲಿ ವೃತ್ತವನ್ನು ಸ್ಪರ್ಶಿಸಿದೆ.

OAP ಮತ್ತು OAS ತ್ರಿಭುಜದಲ್ಲಿ

AP = AS (A ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳಾಗಿವೆ)

OA = OA (It is the common side)

OP = OS (ವೃತ್ತದ ತ್ರಿಜ್ಯಗಳಾಗಿವೆ)

ಹೀಗಾಗಿ $\Delta OAP \cong \Delta OAS$

$\angle POA = \angle AOS$

ಇಲ್ಲಿ $\angle 1 = \angle 8$

ಅದೇ ರೀತಿ $\angle 4 = \angle 5$

$\angle 2 = \angle 3$

$\angle 6 = \angle 7$

ಮೇಲಿನ ಕೋನಗಳನ್ನು ಕೂಡಿಸಿದಾಗ

$\angle 1+\angle 2+\angle 3+\angle 4+\angle 5+\angle 6+\angle 7+\angle 8 = 360°$

ಈಗ ಪುನರ್ ಜೋಡಿಸಿದಾಗ

$(\angle 1+\angle 8)+(\angle 2+\angle 3)+(\angle 4+\angle 5)+(\angle 6+\angle 7) = 360°$

$2\angle 1+2\angle 2+2\angle 5+2\angle 6 = 360°$

$(\angle 1+\angle 2)+(\angle 5+\angle 6) = 180°$

$\angle AOB+\angle COD = 180°$

ಇದೇ ರೀತಿ $\angle BOC+\angle DOA = 180°$

ಆದ್ದರಿಂದ

ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ, ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳಾಗಿರುತ್ತದೆ

* * * * * * * * * * * * *

ವೃತ್ತಗಳಿಗೆ ಸಂಬಂಧಿಸಿದ ವಿಸ್ತೀರ್ಣಗಳು

ಅಭ್ಯಾಸ 11.1

[π ಗೆ ಯಾವುದೇ ಬೆಲೆಯನ್ನು ಕೊಡದೆ ಇದ್ದಲ್ಲಿ, $\pi = 22/7$ ಎಂದು ಪರಿಗಣಿಸಿ]

1. ಒಂದು ವೃತ್ತದ ತ್ರಿಜ್ಯಾಂತರ ಖಂಡದ ತ್ರಿಜ್ಯವು 6 cm, ತ್ರಿಜ್ಯಾಂತರ ಖಂಡದ ಕೋನವು 60° ಆದರೆ ಅದರ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ವೃತ್ತದ ತ್ರಿಜ್ಯಾಂತರ ಖಂಡದ ತ್ರಿಜ್ಯವು 6 cm, ತ್ರಿಜ್ಯಾಂತರ ಖಂಡದ ಕೋನವು 60° (ದತ್ತ)

ನಮಗೆ ಗೊತ್ತಿರುವಂತೆ ವೃತ್ತದ ಖಂಡದ ವಿಸ್ತೀರ್ಣ = $(\theta/360°)\times\pi r^2$

∴ ಒಂದು ವೃತ್ತದ ತ್ರಿಜ್ಯಾಂತರ ಖಂಡದ ತ್ರಿಜ್ಯವು 6 cm, ತ್ರಿಜ್ಯಾಂತರ ಖಂಡದ ಕೋನ = **60°**

$= (60°/360°)\times\pi r^2\ cm^2$

$= (36/6)\pi\ cm^2$

$= 6\times 22/7\ cm^2$

$= 132/7\ cm^2$

2. ಪರಿಧಿಯು 22 cm ಇರುವ ಒಂದು ವೃತ್ತ ಚತುರ್ಥಕ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ:– ವೃತ್ತದ ಪರಿಧಿ C= 22 cm (ದತ್ತ)

ವೃತ್ತದ ತ್ರಿಜ್ಯ = r

$C = 2\pi r = 22,$

$R = 22/2\pi\ cm = 7/2\ cm$

ವೃತ್ತದ ವಿಸ್ತೀರ್ಣ= $(\theta/360°)\times\pi r^2$

ಇಲ್ಲಿ $\theta = 90°$

ಹೀಗಾಗಿ $A = (90°/360°)\times\pi r^2\ cm^2$

$= (49/16)\pi\ cm^2$

$= 77/8\ cm^2 = 9.6\ cm^2$

3. ಒಂದು ಗಡಿಯಾರದಲ್ಲಿ ನಿಮಿಷದ ಮುಳ್ಳಿನ ಉದ್ದವು 14 cm ಆಗಿದೆ. ಐದು ನಿಮಿಷದಲ್ಲಿ ಅದು ಕ್ರಮಿಸಿದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ:–

ನಿಮಿಷದ ಮುಳ್ಳಿನ ಉದ್ದ= ಗಡಿಯಾರ ಎಂಬ ವೃತ್ತದ ತ್ರಿಜ್ಯವಾಗಿದೆ

∴ ವೃತ್ತದ ತ್ರಿಜ್ಯ = 14 cm (ದತ್ತ)

ನಿಮಿಷದ ಮುಳ್ಳು 60 ನಿಮಿಷಗಳನ್ನು ಸುತ್ತಿದಾಗ 360°ಆಗುತ್ತದೆ

∴ 5 ನಿಷಗಳ ಕಾಲ ನಿಮಿಷದ ಮುಳ್ಳು ಚಲಿಸಿದಾಗ ಆಗುವ

ಕೋನ= $360°\times 5/60 = 30°$

ನಮಗೆ ಗೊತ್ತಿರುವಂತೆ ಆ ವೃತ್ತ ಖಂಡದ ವಿಸ್ತೀರ್ಣ

$= (\theta/360°)\times\pi r^2$

$= (30°/360°)\times\pi r^2\ cm^2$

$= (1/12)\times\pi 14^2$

$= (49/3)\times(22/7)\ cm^2$

$= 154/3\ cm^2$

4. 10 cm ತ್ರಿಜ್ಯವುಳ್ಳ ವೃತ್ತದಲ್ಲಿನ ಒಂದು ಜ್ಯಾವು ವೃತ್ತಕೇಂದ್ರದಲ್ಲಿ ಲಂಬಕೋನವನ್ನುಂಟು ಮಾಡುತ್ತದೆ. ಜ್ಯಾದಿಂದ ಉಂಟಾದ

1) ಲಘುವೃತ್ತಖಂಡ

2) ಅಧಿಕ ತ್ರಿಜ್ಯಾಂತರ ಖಂಡಗಳ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ.

(π = 3.14 ಎಂದು ಬಳಸಿ).

ಪರಿಹಾರ:–



ಇಲ್ಲಿ ವೃತ್ತದಲ್ಲಿ O ವೃತ್ತ ಕೇಂದ್ರವಾಗಿದೆ. AB ವೃತ್ತದ ಜ್ಯಾ ಆಗಿದೆ $\angle BOA = 90°$

(ಮುಂದುವರಿಯುವುದು)

II PUC PHYSICS

MOVING CHARGES AND MAGNETISM

44. A rectangular loop carrying a current I_1 is situated near a long straight wire carrying a steady current I_2. The wire is parallel to one of the sides of the loop and is in the plane of the loop as in the figure below -



Then the current loop will

a) Rotate about an axis parallel to the wire
b) Move towards the wire
c) Move away from the wire
d) Remain stationary

Ans:= b

45. Two identical wires A and B have the same length L and carry the same current I. Wire A is bent into a circle of radius R and B is bent to form a square of side a. If B_1 and B_2 are the values of magnetic induction at the centre of the circle and the centre of the square respectively, then the ratio $\frac{B_1}{B_2}$ is

(a) $\frac{\pi^2}{8}$ (b) $\frac{\pi^2}{8\sqrt{2}}$
(c) $\frac{\pi^2}{16}$ (d) $\frac{\pi^2}{16\sqrt{2}}$

Ans:- B

46. A circular coil of wire of radius r has n turns and carries a current I. The magnetic induction (B) at a point on the axis of the coil at a distance from its centre is -

(a) $\frac{\mu_0 nI}{32r}$ (b) $\frac{\mu_0 nI}{8r}$
(c) $\frac{\mu_0 nI}{16r}$ (d) $\frac{\mu_0 nI}{4r}$

Ans:-C

47. A wire of certain length is bent to form a circular coil of a single turn. If the same wire is bent into a coil of smaller radius so as to have two turns, then magnetic field produced at the centre by the same value of current is -

(a) One quarter of its value in first case
(b) One half of its value in first case
(c) Two times its value in first case
(d) Four times its value in first case

Ans:-D

52. When a charged particle moving with velocity $\vec{v}$ is subjected to a magnetic field of Induction $\vec{B}$ the force is non zero. This implies that –

(a) The angle between B and v is either zero or 180^0
(b) The angle between B and v is necessarily 90^0
(c) The angle between B and v can have any value other than 90^0
(d) The angle between B and v can have any value other than zero and 180^0

Ans:- d

48. A circular coil of radius R carries an electric current. The magnetic field due to the coil at a point on the axis of the coil located at a distance r from the centre of the coil, such that r > > R, varies as

(a) $\frac{1}{r}$ (b) $\frac{1}{r^{3/2}}$
(c) $\frac{1}{r^2}$ (d) $\frac{1}{r^3}$

Ans:-d

49. A coil in the shape of an equilateral triangle of side l is suspended between the pole pieces of a permanent magnet, such that $\vec{B}$ is in plane of the coil. If due to a current I in the triangle, a torque $\vec{\tau}$ acts on it, the side l of the triangle is

(a) $\frac{2}{\sqrt{3}}\left(\frac{\tau}{BI}\right)$ (b) $2\left(\frac{\tau}{\sqrt{3}BI}\right)^{\frac{1}{2}}$
(c) $\frac{2}{\sqrt{3}}\left(\frac{\tau}{BI}\right)^{\frac{1}{2}}$ (d) $\frac{1}{\sqrt{3}}\left(\frac{\tau}{BI}\right)$

Ans:-a

50. Two particles of equal charges after being accelerated through the same potential difference enter a uniform transverse magnetic field and describe circular paths of radii R_1 and R_2 respectively. Then the ratio of their masses $\left(\frac{m_1}{m_2}\right)$ is

(a) $\frac{R_1}{R_2}$ (b) $\left(\frac{R_1}{R_2}\right)^2$
(c) $\frac{R_2}{R_1}$ (d) $\left(\frac{R_2}{R_1}\right)^2$

Ans:- b

51. A charged particle of mass m and charge q moves along a circular path of radius r that is perpendicular to a magnetic field B. The time taken by the particle to complete one revolution is –

(a) $\frac{2\pi mq}{B}$ (b) $\frac{2\pi q^2 B}{m}$
(c) $\frac{2\pi qB}{m}$ (d) $\frac{2\pi m}{qB}$

Ans:- d

53. A charge moving with velocity v in X –direction is subjected to a field of magnetic induction in negative X –direction. As a result, the charge will -

(a) Remain unaffected
(b) Start moving in a circular path in Y –Z plane
(c) Retard along X - axis
(d) Moving along a helical path around X – axis

Ans:- a

‘ಮಸೀದಿಯಲ್ಲಿ ಜೈ ಶ್ರೀರಾಮ್ ಘೋಷಣೆ ಅಪರಾಧವೇ?’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಸೀದಿಯೊಳಗೆ ‘ಜೈ ಶ್ರೀರಾಮ್’ ಘೋಷಣೆ ಕೂಗುವುದು ಅಪರಾಧ ಹೇಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ದಕ್ಷಿಣ ಕನ್ನಡದ ಕಡಬ ತಾಲ್ಲೂಕಿನ ಮಸೀದಿ ಆವರಣಕ್ಕೆ ನುಗ್ಗಿ ‘ಜೈ ಶ್ರೀರಾಮ್’ ಘೋಷಣೆ ಕೂಗಿದ ಇಬ್ಬರು ವ್ಯಕ್ತಿಗಳ ವಿರುದ್ಧದ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ಪರಿಶೀಲನೆಗೆ ಪೀಠ ಒಪ್ಪಿಗೆ ಸೂಚಿಸಿದೆ. ಕೀರ್ತನ್ ಕುಮಾರ್ ಮತ್ತು ಸಚಿನ್ ಕುಮಾರ್ ಎನ್.ಎಂ. ವಿರುದ್ಧ ದಾಖಲಿಸಿದ್ದ ಎಫ್ಐಆರ್ ಮತ್ತು ಕ್ರಿಮಿನಲ್ ಮೊಕದ್ದಮೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠವು ರದ್ದುಗೊಳಿಸಿತ್ತು.

ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು, ದೂರುದಾರ ಹೈದರ್ ಅಲಿ ಸಿ.ಎಂ. ಸಲ್ಲಿಸಿದ ಅರ್ಜಿಯ ಬಗ್ಗೆ ನ್ಯಾಯಾಲಯವು ನೋಟಿಸ್ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಜನವರಿಯಲ್ಲಿ ಪ್ರಕರಣದ ವಿಚಾರಣೆ ನಡೆಯಲಿದೆ.

ಎಫ್ಐಆರ್ ದಾಖಲಾದ 20 ದಿನಗಳಲ್ಲಿ ಹೈಕೋರ್ಟ್ ತನಿಖೆ ತಡೆ ನೀಡಿದೆ ಎಂದು ಹಿರಿಯ ವಕೀಲ ದೇವದತ್ ಕಾಮತ್ ಅವರು ನ್ಯಾಯಪೀಠದ ಗಮನಕ್ಕೆ ತಂದರು. ‘ಆರೋಪಿಗಳು ಧಾರ್ಮಿಕ ಘೋಷಣೆ ಕೂಗುತ್ತಿದ್ದರು. ಅದು ಅಪರಾಧವೇ’ ಎಂದು ಪೀಠ ಕೇಳಿತು.

‘ಇದು ಐಪಿಸಿಯ ಸೆಕ್ಷನ್ 153 ಎ ಅಡಿಯಲ್ಲಿ ಅಪರಾಧವಾಗಿದೆ. ಪೂಜಾ ಸ್ಥಳಗಳಿಗೆ ಹೋಗಿ ಘೋಷಣೆಗಳನ್ನು ಕೂಗಿದ್ದಾರೆ. ಈ ರೀತಿಯ ಚಟುವಟಿಕೆಗೆ ಅನುಮತಿ ಇದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ’ ಎಂದು ಕಾಮತ್ ವಾದಿಸಿದರು.

‘ದೂರು ದಾಖಲಿಸಿದ್ದು ಯಾರು? ಆರೋಪಿಗಳನ್ನು ಗುರುತಿಸಿದ್ದು ಹೇಗೆ? ಸಿ.ಸಿ.ಟಿ.ವಿಯಲ್ಲಿ ಆರೋಪಿಗಳು ಕಾಣಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಪ್ರಕರಣ ನಡೆದ ಪ್ರದೇಶದ ಸುತ್ತಮುತ್ತ ಕಂಡುಬಂದರೆ, ಅವರು ಭಾಗಿಯಾಗಿದ್ದಾರೆ ಎಂದರ್ಥವೇ’ ಎಂದು ಪೀಠ ಪ್ರಶ್ನಿಸಿತು.

ನ್ಯಾಯಾಲಯ ಬಲಹೀನವಲ್ಲ: ‘ಸುಪ್ರೀಂ’

ನವದೆಹಲಿ: ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಲೋಕಾಯುಕ್ತ ನಡೆಸುತ್ತಿರುವ ತನಿಖೆಗೆ ಮಧ್ಯಂತರ ಆದೇಶ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು. ಲೋಕಾಯುಕ್ತ ತನಿಖೆ ರದ್ದುಗೊಳಿಸಲು ಈ ನ್ಯಾಯಾಲಯವು ಬಲಹೀನವಾಗಿಲ್ಲ ಎಂದೂ ನ್ಯಾಯಾಲಯ ಹೇಳಿದೆ.

ಈಗಾಗಲೇ ಇತ್ಯರ್ಥಗೊಂಡಿದೆ ಎಂಬ ಕಾರಣಕ್ಕೆ ಅದನ್ನು ನ್ಯಾಯಾಲಯ ಒಪ್ಪಿಕೊಳ್ಳಬೇಕು ಎಂದೇನಿಲ್ಲ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠ ಹೇಳಿದೆ.

ಶಿವಕುಮಾರ್ ವಿರುದ್ಧದ ತನಿಖೆ ನಡೆಸಲು ನೀಡಿದ್ದ ಒಪ್ಪಿಗೆ ಹಿಂಪಡೆದಿರುವುದನ್ನು ಪ್ರಶ್ನಿಸಿ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ.

ಯತ್ನಾಳ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ. ಪರಮೇಶ್ವರ್, ‘ಸಿಬಿಐ ಪೂರ್ಣ ತನಿಖೆ ನಡೆಸಿದ ನಂತರವೂ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಲಾಗಿದೆ. ಸಿಬಿಐ ತನಿಖೆಯ ಅನುಮತಿ ಹಿಂಪಡೆದಿರುವುದು ದುಷ್ಟ. ಶಿವಕುಮಾರ್ ಅವರು ಸಂಪುಟದ ಸದಸ್ಯರಾಗಿರುವುದರಿಂದ ಲೋಕಾಯುಕ್ತದವರು ಮುಕ್ತವಾದ ತನಿಖೆ ನಡೆಸುವ ಸಾಧ್ಯತೆ ಇಲ್ಲ. ಆಗ ಇಡೀ ಪ್ರಕ್ರಿಯೆ ನಿಷ್ಪ್ರಯೋಜಕ ಆಗುತ್ತದೆ’ ಎಂದು ವಾದಿಸಿದರು.

ಆಗ ನ್ಯಾಯಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಬೇರೆ ನ್ಯಾಯಾಲಯದಲ್ಲಿ ಇರುವುದರಿಂದ ಇನ್ನೊಂದು ದಿನ ವಿಚಾರಣೆ ಕೈಗೆತ್ತಿಕೊಳ್ಳಬೇಕು ಎಂದು ಸಿಬಿಐ ವಕೀಲರು ಮನವಿ ಮಾಡಿದರು. ಇದಕ್ಕೆ ಪೀಠ ಒಪ್ಪಿತು. ಈ ಪ್ರಕರಣದಲ್ಲಿ ಮಧ್ಯಂತರ ಆದೇಶ ನೀಡಬೇಕು ಎಂದು ಸಿಬಿಐ ವಕೀಲರು ಮನವಿ ಮಾಡಿದರು.

ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ಕೋರಿದರು. ಪ್ರಕರಣದ ವಿಚಾರಣೆಯನ್ನು ಜನವರಿ 22ಕ್ಕೆ ನ್ಯಾಯಪೀಠ ಮುಂದೂಡಿತು.

ಯತ್ನಾಳ ಹಾಗೂ ಸಿಬಿಐ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು. ‘ಕೇಂದ್ರ ಸರ್ಕಾರ ಮತ್ತು ಸಿಬಿಐ ನಡುವಿನ ಪ್ರಕರಣವಾಗಿ ಪರಿಗಣಿಸಲು ಸಾಧ್ಯವಿಲ್ಲ. ಇದು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸಬೇಕಾದ ವಿಷಯ’ ಎಂದು ಅಭಿಪ್ರಾಯ ವ್ಯಕ್ತಪಡಿಸಿತ್ತು.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಿಜೆಪಿ ಸರ್ಕಾರವು ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಬಾಲ್ಯವಿವಾಹ: ಪತಿ, ಪೋಷಕರಿಗೆ ಶಿಕ್ಷೆ

2023ರಲ್ಲಿ ನಡೆದಿದ್ದ ಮದುವೆ • ಅತ್ತೆ–ಮಾವಗೂ ಜೈಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಬಾಲಕಿಯನ್ನು ಮದುವೆಯಾದ ವ್ಯಕ್ತಿ, ಆತನ ತಂದೆ-ತಾಯಿ ಮತ್ತು ಸಂತ್ರಸ್ತ ಬಾಲಕಿಯ ತಂದೆ ತಾಯಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ತ್ವರಿತ ಗತಿ ವಿಶೇಷ ನ್ಯಾಯಾಲಯ– 2 (ಪೋಕ್ಸೊ) ತಲಾ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದೆ.

ಬಾಲಕಿಯನ್ನು ವಿವಾಹವಾದ ಉಳ್ಳಾಲ ತಾಲ್ಲೂಕು ಮಂಜನಾಡಿ ಗ್ರಾಮದ ಮೋಂಟೆಪದವು ನಿವಾಸಿ ಮಹಮ್ಮದ್ ಇಮ್ತಿಯಾಜ್ ಅಲ್ಲದೆ ಆತನ ತಂದೆ ಕೆ.ಪಿ.ಮೊಹಮ್ಮದ್, ತಾಯಿ ಮೈಮುನಾ, ಸಂತ್ರಸ್ತ ಬಾಲಕಿಯ ತಂದೆ ಬಂಟ್ವಾಳ ತಾಲ್ಲೂಕು ಪಜೀರು ರಾಮಲ್‌ಕಟ್ಟೆಯ ಅಬ್ದುಲ್ ಖಾದರ್ ಹಾಗೂ ಬಾಲಕಿಯ ತಾಯಿ ರಮ್ಲತ್ ಶಿಕ್ಷೆಗೆ ಒಳಗಾದವರು.

ಮಹಮ್ಮದ್ ಇಮ್ತಿಯಾಜ್ 2023ರ ಮೇ 31ರಂದು ಅಪ್ರಾಪ್ತ ವಯಸ್ಸಿನ ಹುಡುಗಿಯನ್ನು ವಿವಾಹವಾಗಿದ್ದ. ಆತನ ತಂದೆ, ತಾಯಿ ಹಾಗೂ ಸಂತ್ರಸ್ತ ಬಾಲಕಿಯ ತಂದೆ ತಾಯಿ ಸೇರಿ ಈ ಮದುವೆ ಮಾಡಿಸಿದ್ದರು. 2023ರ ಜೂನ್ 1ರಂದು ಉಳ್ಳಾಲ ತಾಲ್ಲೂಕು ಕೈರಂಗಳ ಗ್ರಾಮದ ನಂದರಪದವಿನಲ್ಲಿ ಔತಣಕೂಟ ಏರ್ಪಡಿಸಲಾಗಿತ್ತು. ಬಾಲಕಿಯನ್ನು

ಮುಖ್ಯಾಂಶಗಳು

- ಆರೋಪಿಗಳಿಗೆ ತಲಾ ಒಂದು ವರ್ಷ ಕಠಿಣ ಜೈಲು ಶಿಕ್ಷೆ
- ದೂರು ದಾಖಲಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ

ಮದುವೆಯಾದ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ನೀಡಿದ ದೂರಿನ ಆಧಾರದಲ್ಲಿ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಇನ್‌ಸ್ಪೆಕ್ಟರ್ ರಾಜೇಂದ್ರ ಬಿ. ಅವರು ಐವರು ಆರೋಪಿಗಳ ವಿರುದ್ಧ ಪೋಕ್ಸೊ, ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಸೆಕ್ಷನ್ 9 (ವಯಸ್ಕ ಪುರುಷ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ವಿವಾಹವಾಗುವುದು), ಸೆಕ್ಷನ್ 10 (ವಯಸ್ಕ ಪುರುಷನಿಗೆ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಮದುವೆ ಮಾಡಿಕೊಡುವುದು) ಹಾಗೂ ಸೆಕ್ಷನ್ 11ರ (ಬಾಲಕಿಯ ಪೋಷಕರು ವಿವಾಹಕ್ಕೆ ಸಮ್ಮತಿಸುವುದು ಹಾಗೂ ವಿಧಿಗಳನ್ನು ನಿರ್ವಹಿಸುವುದು) ಅಡಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

‘ಬಾಲಕಿಯನ್ನು ಮದುವೆ ಮಾಡಿ ಕೊಟ್ಟಿದ್ದಕ್ಕೆ ಆಕೆಯ ತಂದೆ ತಾಯಿಗೆ ಬಾಲ್ಯ ವಿವಾಹ ಕಾಯ್ದೆಯ ಸೆಕ್ಷನ್ 10 ಮತ್ತು 11ರ ಅಡಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ತ್ವರಿತ ಗತಿ ವಿಶೇಷ ನ್ಯಾಯಾಲಯ– 2ರ (ಪೋಕ್ಸೊ) ನ್ಯಾಯಾಧೀಶರಾದ ಮಾನು ಕೆ.ಎಸ್. ಅವರು ತಲಾ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ತಲಾ ₹5 ಸಾವಿರ ದಂಡ ವಿಧಿಸಿ ಆದೇಶ ನೀಡಿದ್ದಾರೆ. ವರನ ತಂದೆ ತಾಯಿಗೆ ಕಾಯ್ದೆಯ ಸೆಕ್ಷನ್ 10ರ ಅಡಿ ತಲಾ 1 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ತಲಾ ₹5 ಸಾವಿರ ದಂಡ ವಿಧಿಸಿದ್ದಾರೆ. ಬಾಲಕಿಯನ್ನು ಮದುವೆಯಾದ ಮಹಮ್ಮದ್ ಇಮ್ತಿಯಾಜ್‌ಗೆ ಕಾಯ್ದೆಯ ಸೆಕ್ಷನ್ 9ರ ಅಡಿ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ₹5 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ’ ಎಂದು, ಸರ್ಕಾರದ ಪರ ವಾದ ಮಂಡಿಸಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಬದರಿನಾಥ ನಾಯರಿ ತಿಳಿಸಿದ್ದಾರೆ.

ಕೋರ್ಟ್‌ಗೆ ನಟ ದರ್ಶನ್ ಹಾಜರು ದಾಖಲೆಗಳಿಗೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಹೈಕೋರ್ಟ್‌ನಿಂದ ಜಾಮೀನು ಪಡೆದುಕೊಂಡಿರುವ ಎರಡನೇ ಆರೋಪಿ, ನಟ ದರ್ಶನ್ ಅವರು ಸೋಮವಾರ ಮಧ್ಯಾಹ್ನ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕಿದರು.

ಚಿಕಿತ್ಸೆಗೆಂದು ಕೆಂಗೇರಿಯ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದ ದರ್ಶನ್ ಅವರು ಆಸ್ಪತ್ರೆಯಿಂದ ಕಾರಿನಲ್ಲಿ ನ್ಯಾಯಾಲಯಕ್ಕೆ ಬಂದರು. ಜಾಮೀನು ಪತ್ರವು ಪೂರೈಸಿದರು. ದರ್ಶನ್ ಪರ ಸಹೋದರ ದಿನಕರ್ ತೂಗುದೀಪ ಹಾಗೂ ನಟ ಧನ್ವೀರ್ ಅವರು ಶ್ಯೂರಿಟಿ ನೀಡಿದರು. ನ್ಯಾಯಾಧೀಶ ಜೈಶಂಕರ್ ಅವರಿಗೆ ಕೈ ಮುಗಿದ ದರ್ಶನ್, ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್‌ಗೆ ಸಹಿ ಹಾಕಿದರು.

ಮುಟ್ಟುಗೋಲು ಹಾಕಿಕೊಂಡಿದ್ದ ದರ್ಶನ್ ಅವರ ಪಾಸ್‌ಪೋರ್ಟ್ ವಾಪಸ್ ನೀಡಲು ನ್ಯಾಯಾಲಯ ಸಮ್ಮತಿಸಿತು. ನ್ಯಾಯಾಲಯದ ಪ್ರಕ್ರಿಯೆ ಪೂರ್ಣಗೊಳಿಸಿದ ದರ್ಶನ್ ಅವರು ಮತ್ತೆ ಬಿಜಿಎಸ್ ಆಸ್ಪತ್ರೆಗೆ ವಾಪಸಾದರು.

ಬಳ್ಳಾರಿ ಜೈಲಿನಲ್ಲಿದ್ದಾಗ ದರ್ಶನ್ ಅವರಿಗೆ ತೀವ್ರವಾದ ಬೆನ್ನು ನೋವು ಕಾಣಿಸಿಕೊಂಡಿತ್ತು.

ಸರ್ವಿಸಸ್ ಪರೀಕ್ಷೆ ಹಿಮಾಂಶುಗೆ ಮೊದಲ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಎಂಜಿನಿಯರಿಂಗ್ ಸರ್ವಿಸಸ್ ಪರೀಕ್ಷೆಯಲ್ಲಿ ಎನ್‌ಐಟಿಕೆ ಹಳೆ ವಿದ್ಯಾರ್ಥಿ ಹಿಮಾಂಶು ಥಾಪ್ಲಿಯಾಲ್ ಮೊದಲ ರ‍್ಯಾಂಕ್ ಗಳಿಸಿದ್ದಾರೆ.

ಹಿಮಾಂಶು ಥಾಪ್ಲಿಯಾಲ್

‘ಉತ್ತರಾಖಂಡದಲ್ಲಿ ಹುಟ್ಟಿ ಲಖನೌನಲ್ಲಿ ಬೆಳೆದಿರುವ ಹಿಮಾಂಶು, ಜೆಇಇಯಲ್ಲಿ 5,83,000 ರ‍್ಯಾಂಕ್ ಗಳಿಸಿದ್ದರು. ದೃಢ ನಿಶ್ಚಯ ಮತ್ತು ಕಠಿಣ ಪರಿಶ್ರಮದಿಂದಾಗಿ ಎಂಜಿನಿಯರಿಂಗ್ ಸರ್ವಿಸಸ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಮೊದಲಿಗರಾಗಿ ಹೊರ ಹೊಮ್ಮಿದ್ದಾರೆ. ಪಿಥೋರ್‌ಗಢದ ಎನ್‌ಪಿಎಸ್‌ಇಐನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಷಯದಲ್ಲಿ ಬಿ–ಟೆಕ್ ಪದವಿ ಪಡೆದಿದ್ದ ಅವರು ಎನ್‌ಐಟಿಕೆಯಲ್ಲಿ ನ್ಯಾನೊ ತಂತ್ರಜ್ಞಾನ ವಿಷಯದಲ್ಲಿ ಎಂ.ಟೆಕ್ ಪದವಿ ಪಡೆದಿದ್ದಾರೆ’ ಎಂದು ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ತಿಳಿಸಿದ್ದಾರೆ.

‘ನನಗೆ ಭಾರತೀಯ ಟೆಲಿಕಾಂ ಸೇವೆಗೆ ಸೇರುವ ಆಸೆ ಇತ್ತು. ಅದೀಗ ನನಸಾಗುತ್ತಿದೆ. ಸಮಾಜಕ್ಕೆ ನನ್ನಿಂದ ಸಾಧ್ಯವಾದಷ್ಟನ್ನು ಮರಳಿಸಲು ಪ್ರಯತ್ನಿಸುತ್ತೇನೆ’ ಎಂದು ಹಿಮಾಂಶು ಪ್ರತಿಕ್ರಿಯಿಸಿದರು.

‘ನನ್ನ ಕಲಿಕೆ ಮತ್ತು ಬೆಳವಣಿಗೆಗೆ ಸುರತ್ಕಲ್‌ನ ಎನ್‌ಐಟಿಕೆ ಅತ್ಯುತ್ತಮ ವೇದಿಕೆಯನ್ನು ಒದಗಿಸಿ, ನನ್ನ ವ್ಯಕ್ತಿತ್ವ ರೂಪಿಸಿದೆ. ಸಮಯ ಅಮೂಲ್ಯ. ಪ್ರತಿ ಕ್ಷಣವನ್ನು ಆನಂದಿಸಿ. ಯುಪಿಎಸ್ಸಿ ಪರೀಕ್ಷೆಯ ಸಿದ್ಧತೆ ಮತ್ತು ಅಧ್ಯಯನದ ನಡುವೆ ಸಮತೋಲನವಿರಲಿ. ಎಲ್ಲ ಕೆಲಸ ಕಾರ್ಯದಲ್ಲೂ ಶಿಸ್ತು ಇರಲಿ’ ಎಂದು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

(ಕರ್ನಾಟಕ ಸರ್ಕಾರ)

ಪ್ರವಾಸೋದ್ಯಮ ಇಲಾಖೆ

ನಿರ್ದೇಶಕರ ಕಛೇರಿ, ನಂ.3, 4ನೇ ಮಹಡಿ, ಎಂಬಸ್ಸೀ ಐಕಾನ್ ಕಟ್ಟಡ, ಇನ್‌ಫ್ಯಾಂಟ್ರ ರಸ್ತೆ, ಬೆಂಗಳೂರು 560001.

ಇ–ಮೇಲ್ : director@karnatakatourism.org ದೂರವಾಣಿ : 080–22352525 ಫ್ಯಾಕ್ಸ್: 080–22352626

ಸಂಖ್ಯೆ: PLN/14/2024-DOT-PLN-DIRECTORATE OF TOURISM ದಿನಾಂಕ: 16–12–2024

ಪತ್ರಿಕಾ ಪ್ರಕಟಣೆ

ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ / ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2024–25ನೇ ಸಾಲಿನಲ್ಲಿ ಪ್ರವಾಸೋದ್ಯಮ/ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ **Food Craft Institute (FCI), Mysore** ಹಾಗೂ **Institute of Hotel Management (IHM)** ಬೆಂಗಳೂರು ರವರ ಮೂಲಕ ವಸತಿಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ತರಬೇತಿ ಕಾರ್ಯಕ್ರಮಗಳ ವಿವರ / ಅಭ್ಯರ್ಥಿಗಳ ವಿದ್ಯಾರ್ಹತೆಯ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದೆ.

ಕ್ರ. ಸಂ	ಕಾರ್ಯಕ್ರಮದ ವಿವರ	ಕನಿಷ್ಠ ವಿದ್ಯಾರ್ಹತೆ	ತರಬೇತಿ ಕಾಲಾವಧಿ (By Training Provider + on-the-Job Training (OJT)	ವಯಸ್ಸು	ಪ್ರತಿ ತರಬೇತಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಗುರಿ	ಪ್ರತಿ ತರಬೇತಿಗೆ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಗುರಿ
1.	Food & Beverage Service Steward	10th Class Pass	540 Hours (300 Hours + 240 Hours OJT) 15 Weeks (04 Months)	Above 20 to 45 Years	100	49
2.	Room Attendant	5th Class Pass	540 Hours (300 Hours + 240 Hours OJT) 15 Weeks (04 Months)	Above 20 to 45 Years	30	19
3.	Front Office Associate	12th Class Pass	580 Hours (340 Hours + 240 Hours OJT) 16 Weeks (04 Months)	Above 20 to 45 Years	15	5
4.	Multi Cuisine Cook	8th Class Pass	740 Hours (500 Hours + 240 Hours OJT) 20 Weeks (05 Months)	Above 20 to 45 Years	147	89
	Total				292	162

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ ತರಬೇತಿಗಳನ್ನು ಪಡೆಯಲು ದಿನಾಂಕ: 17/12/2024 ರಿಂದ ಎಲ್ಲಾ ಜಿಲ್ಲೆಗಳಲ್ಲಿನ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಕಛೇರಿಯಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು.

ಸದರಿ ತರಬೇತಿ ಪಡೆಯಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ದಿನಾಂಕ: 28/12/2024 ರೊಳಗೆ ಸಂಬಂಧಪಟ್ಟ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಕಛೇರಿಗಳಿಗೆ ಸಲ್ಲಿಸಬಹುದು.

ಈ ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ / ಸ್ಪಷ್ಟೀಕರಣ ಕುರಿತು ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗೆ ಸಂಪರ್ಕ: ಬೆಂಗಳೂರು ವಿಭಾಗ: 080–2222441 ಮೈಸೂರು ವಿಭಾಗ: 0821–2422096 ಬೆಳಗಾವಿ ವಿಭಾಗ: 0831–2470879 ಕಲಬುರಗಿ ವಿಭಾಗ: 08472–277848.

ಸಹಿ/–
ಜಂಟಿ ಆಯುಕ್ತರು,
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.

DIPR/CP/3792/Zen/2024-25

ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚಿದ ಚಳಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಳೆದ ಮೂರು ದಿನಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಚಳಿ ಹೆಚ್ಚುತ್ತಿದ್ದು, ಜನರನ್ನು ನಡುಗಿಸುತ್ತಿದೆ. ಬೀದರ್ ಜಿಲ್ಲೆಯಲ್ಲಿ ಸೋಮವಾರ ರಾಜ್ಯದಲ್ಲೇ ಅತಿ ಕಡಿಮೆ ತಾಪಮಾನ ದಾಖಲಾಗಿದೆ.

ಭಾರತೀಯ ಹವಾಮಾನ ಇಲಾಖೆಯ ವರದಿ ಪ್ರಕಾರ ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 8.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಜನವರಿ ತಿಂಗಳಿನಲ್ಲಿ ಚಳಿ ಇನ್ನಷ್ಟು ಹೆಚ್ಚಲಿದ್ದು, ದಾಖಲೆಯ ಅತಿ ಕಡಿಮೆ ತಾಪಮಾನ ದಾಖಲಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ತಾಂತ್ರಿಕ ಅಧಿಕಾರಿ ಬಸವರಾಜ್ ಬಿರಾದಾರ್ ಮಾಹಿತಿ ನೀಡಿದ್ದಾರೆ.

ಬೀದರ್ ಜಿಲ್ಲೆಯಲ್ಲಿ 2023ರ ಜನವರಿ 9ರಂದು ತಾಪಮಾನ 5.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಈ ವರ್ಷ ಆ ದಾಖಲೆಯನ್ನು ದಾಟಿ 5 ಡಿಗ್ರಿ ಸೆಲ್ಸಿಯಸ್‌ಗೆ ಉಷ್ಣಾಂಶ ಇಳಿಯುವ ಸಾಧ್ಯತೆಯಿದೆ’ ಎಂದು ಅವರು ಅಂದಾಜಿಸಿದ್ದಾರೆ.

ರಾಯಚೂರಿನಲ್ಲಿ 13 ಡಿಗ್ರಿ ಸೆಲ್ಸಿಯಸ್ ಹಾಗೂ ಕಲಬುರಗಿಯಲ್ಲಿ 13 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜೋಗದಲ್ಲಿ ಅಭಿವೃದ್ಧಿ ಜ.1ರಿಂದ ಪ್ರವೇಶ ನಿರ್ಬಂಧ

ಶಿವಮೊಗ್ಗ: ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿರುವ ಸುಪ್ರಸಿದ್ಧ ಜೋಗದಲ್ಲಿ ಪ್ರವಾಸಿಗರಿಗೆ ಮೂಲ ಸೌಲಭ್ಯ ಒದಗಿಸಲು ಸಮಗ್ರ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಜನವರಿ 1ರಿಂದ ಮಾರ್ಚ್ 15ರವರೆಗೆ 75 ದಿನಗಳ ಕಾಲ ಜೋಗ ಜಲಪಾತ ವೀಕ್ಷಣೆಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

ಕಾಮಗಾರಿ ಅನುಷ್ಠಾನದ ವೇಳೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಯಾವುದೇ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಜೋಗ ನಿರ್ವಹಣಾ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08182-251444 ಸಂಪರ್ಕಿಸಬಹುದು.

(ಕರ್ನಾಟಕ ಸರ್ಕಾರ)

ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ.

ಸಂ:ಸಾಆಹೊ/e-Proc/01/2024-25ದಿನಾಂಕ:16/12/2024

ದಿನಾಂಕ:16.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಾರ್ವಜನಿಕಆಸ್ಪತ್ರೆ, ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹೊಳೆನರಸೀಪುರ, ಒಟ್ಟು 350 ಹಾಸಿಗೆಗಳ ಈ ಆಸ್ಪತ್ರೆಗಳಿಗೆ 2025, 2026ನೇ ಕ್ಯಾಲೆಂಡರ್ ವರ್ಷದಲ್ಲಿ ಅವಶ್ಯಕವಾಗಿ ಬೇಕಾಗಿರುವ ಔಷಧಗಳು, ರಾಸಾಯನಿಕಗಳು, ಎಕ್ಸರೇ ಫಿಲ್ಮ್‌ಗಳು ಮತ್ತು ಇತರೆ ವಸ್ತುಗಳ ಖರೀದಿಗೆ ಸಂಭಂಧಿಸಿದಂತೆ ಇ–ಪ್ರಕ್ಯೂರ್ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ:16/12/2024 ರಿಂದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ದಾಖಲಾತಿಗಳ ಸ್ವೀಕೃತಿಗೆ ಅಂತಿಮ ದಿನಾಂಕ:31/12/2024ರ ಅಪರಾಹ್ನ 04.30 ಗಂಟೆಯಾಗಿರುತ್ತದೆ. ಹೆಚ್ಚಿನ ವಿವರಗಳು ಕಛೇರಿ ಮತ್ತು www.kppp.karnataka.gov.in ನಲ್ಲಿಲಭ್ಯವಿರುತ್ತದೆ.

ಸಹಿ/– ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ,
ಹೊಳೆನರಸೀಪುರ. ಹಾಸನ ಜಿಲ್ಲೆ–573211

ವಾಸಾಸಂಇ/ಹಿಸನಿ/ಹಾಸನ/750/ಕೆಎಸ್ಎಂಸಿಎ/2024–25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಸ್‌ಸಿ(ಎಫ್)ಆರ್‌ಪಿಓ/2024/1192 ದಿನಾಂಕ: 16.12.2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕ.ವಿ.ನಿ.ಆ. (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಮಾಡುವುದು) (ಹನ್ನೊಂದನೆಯ ತಿದ್ದುಪಡಿ) ವಿನಿಯಮಗಳು, 2024ರ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಮೇಲೆ ತಿಳಿಸಿರುವ ತಿದ್ದುಪಡಿ ವಿನಿಯಮಗಳ ಕರಡನ್ನು ಪ್ರಕಟಿಸಿ ಆಸಕ್ತರಿಂದ ಲಿಖಿತ ಆಕ್ಷೇಪಣೆಗಳು/ ಅಭಿಪ್ರಾಯಗಳು / ಸಲಹೆಗಳನ್ನು ಆಹ್ವಾನಿಸಿತ್ತು. ಮೇಲಿನ ವಿಷಯದ ಬಗ್ಗೆ ಮಾಡಲಾದ ಕರಡು ವಿನಿಯಮಗಳನ್ನು ಕರ್ನಾಟಕದ ರಾಜ್ಯಪತ್ರದಲ್ಲಿ ದಿನಾಂಕ: 04.11.2024ರಂದು ಪ್ರಕಟಿಸಲಾಗಿದೆ.

ಈ ವಿಷಯದಲ್ಲಿ, ಆಯೋಗವು ಕರಡು ವಿನಿಯಮಗಳ ಬಗ್ಗೆ **ಸಾರ್ವಜನಿಕ ವಿಚಾರಣೆಯನ್ನು** ನಡೆಸಲು ನಿಶ್ಚಯಿಸಿದ್ದು, ಅದು **ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ದಿನಾಂಕ: 30.12.2024ರಂದು ಬೆಳಿಗ್ಗೆ 11.00 ಗಂಟೆಗೆ ನಡೆಯಲಿದೆ.** ಆಸಕ್ತ ವ್ಯಕ್ತಿಗಳು / ಭಾಗೀದಾರರು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್ **https://kerc.karnataka.gov.in** ನಲ್ಲಿ ಮೇಲೆ ತಿಳಿಸಿರುವ ಕರಡು ವಿನಿಯಮವು ಲಭ್ಯವಿರುತ್ತದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/3791/2024-25

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ

12ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560001. ದೂರವಾಣಿ ಸಂ.: 080–22865069,
ಇ–ಮೇಲ್: md.scstndc@gmail.com

ಪ್ರಕಟಣೆ

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಲು ನೋಂದಾಯಿಸಿಕೊಳ್ಳುವ ಬಗ್ಗೆ

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ವತಿಯಿಂದ ಅಲೆಮಾರಿ, ಬುಡಕಟ್ಟು ಮತ್ತು ಆದಿವಾಸಿ ಸಮುದಾಯಗಳ ನೋಂದಾಯಿತ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಿಗಮದ ಮಾನ್ಯ ಅಧ್ಯಕ್ಷರಾದ **ಶ್ರೀಮತಿ ಪಲ್ಲವಿ ಜಿ.** ರವರ ಅಧ್ಯಕ್ಷತೆಯಲ್ಲಿ **29ನೇ ಡಿಸೆಂಬರ್–2024 ರಂದು ಸಮಾಲೋಚನಾ ಸಭೆಯುನ್ನು** ಆಯೋಜಿಸಲಾಗಿದೆ. ಆದ್ದರಿಂದ **ದಿನಾಂಕ: 24–12–2024** ರೊಳಗಾಗಿ ಆಸಕ್ತ ಮುಖಂಡರು ಸಂಘಟನೆಯ ಪತ್ರದ ಮೂಲಕ ಈ ಸಭೆಯಲ್ಲಿ ತಮ್ಮ ಭಾಗವಹಿಸುವಿಕೆ ಬಗ್ಗೆ ಕೆಳಕಾಣಿಸಿದ ದೂರವಾಣಿ ಸಂಖ್ಯೆಗೆ ವಾಟ್ಸ್‌ಆಪ್ ಅಥವಾ ಇ–ಮೇಲ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ ಹಾಗೂ ನೋಂದಾಯಿಸಿಕೊಂಡ ಪ್ರತಿನಿಧಿಗಳಿಗೆ (ಪ್ರತಿ ಸಂಘಟನೆಗೆ ಗರಿಷ್ಟ ಇಬ್ಬರಿಗೆ) ಮಾತ್ರ ಸಭೆಯಲ್ಲಿ ಭಾಗವಹಿಸಲು ಅವಕಾಶವಿದ್ದು ನೋಂದಣಿಯಾಗುವ ಪ್ರತಿನಿಧಿಗಳಿಗೆ ಕಾರ್ಯಕ್ರಮದ ವಿವರಗಳನ್ನು ನಂತರ ಪ್ರತ್ಯೇಕವಾಗಿ ತಿಳಿಸಲಾಗುತ್ತದೆ.

ವಾಟ್ಸ್‌ಆಪ್ ನಂಬರ್: 86607 29848 /
ಇ–ಮೇಲ್: md.scstndc@gmail.com /
scstntdntcell@gmail.com

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/3793/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ (ಸಾರಿಗೆ), 3ನೇ ಮಹಡಿ,
ಅನೆಕ್ಸ್–2 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–560002.

ಸಂಖ್ಯೆ: ಕಾಪಾಅ(ಸಾರಿಗೆ)/ಟೆಂಡರ್/02/2024–25 ದಿನಾಂಕ: 16.12.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಸಾರಿಗೆ), ಬಿಬಿಎಂಪಿ, ಬೆಂಗಳೂರು ಇವರು ವಿಶೇಷ ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	ಬಿಬಿಎಂಪಿ ಎಲ್‌ಎಂವಿ ವಾಹನಗಳಿಗೆ ಖಾಸಗಿ ಚಾಲಕರ ಸೇವೆಯನ್ನು ಒದಗಿಸುವುದು.	1,19,09,417/-	1,79,000/-

ಟೆಂಡರ್ ಕಾಲಾವಧಿ : **12 ತಿಂಗಳು.**

ಟೆಂಡರ್ ದಿನಾಂಕಗಳು : (1) ಐಎಫ್‌ಟಿ/ಆರ್‌ಎಫ್‌ಪಿ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ **ದಿನಾಂಕ: 17.12.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.** (2) ಪೂರ್ವ–ಬಿಡ್ ಸಭೆಯ ದಿನಾಂಕ: **20.12.2024ರಂದು ಮಧ್ಯಾಹ್ನ 3.30 ಗಂಟೆಗೆ– ಮುಖ್ಯ ಅಭಿಯಂತರು (ಯೋಜನೆ–ಕೇಂದ್ರ) ರವರ ಕಚೇರಿ, 4ನೇ ಮಹಡಿ, ಅನೆಕ್ಸ್–3 ಕಟ್ಟಡ, ಬಿಬಿಎಂಪಿ.** (3) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.12.2024ರ ಸಂಜೆ 5.30 ಗಂಟೆಯವರೆಗೆ.** (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **24.12.2024ರಂದು ಸಂಜೆ 5.30 ಗಂಟೆಯ ನಂತರ.** (5) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಸಾರಿಗೆ)

ತುಮಕೂರು ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
ದೂರವಾಣಿ ಸಂಖ್ಯೆ: 0816–2252937.

ಸಂ:20/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/AE-1&2&3/4980/2024-25 ದಿನಾಂಕ: 12–12–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 20/2024–25
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2024–25 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಮಧುಗಿರಿ, ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **(https://kppp.karnataka.gov.in/)** ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ **ರೂ. 7.80 ಲಕ್ಷ**ಗಳು, ಇ.ಎಂ.ಡಿ ಮೊತ್ತ **ರೂ. 19,500**/–ಗಳು ಹಾಗೂ ಆ) ಗರಿಷ್ಟ ಮೊತ್ತ **ರೂ. 95.71 ಲಕ್ಷ**ಗಳು, ಇ.ಎಂ.ಡಿ ಮೊತ್ತ **ರೂ. 1,91,420**/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ **ದಿನಾಂಕ : 27–12–2024 ಸಂಜೆ 5:00 ಘಂಟೆ** ವರೆಗೆ (2) ಪೂರ್ವಭಾವಿ ಸಭೆ **ದಿನಾಂಕ: 23–12–2024** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 30–12–2024 ಸಂಜೆ 05.30 ಘಂಟೆ**ಯ ನಂತರ (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 31–12–2024 ಸಂಜೆ 05.30 ಘಂಟೆ**ಯ ನಂತರ.

ಸಹಿ/– (ಶ್ರೀ ಕೆ.ಎಂ ಕುಮಾರಸ್ವಾಮಿ)
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TUM/RO- 116/24-25/Oysters

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023,
ದೂ: 080–29557023 ಇ–ಮೇಲ್: cekhsdrp@gmail.com

ಸಂ: ಆಕುಕ/ಇಂ.ಘ/ಮು.ಇಂ/ತಾಂ.ಸ–3/ಸ.ಇಂ–6/ಟೆಂಡರ್/2024–25/2703 ದಿನಾಂಕ: 16.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಅಲ್ಪಾವಧಿ ಟೆಂಡರ್‌ರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ: Construction of Aroghya Bhavana at Kalaburgi in Kalaburgi District. ಅಂದಾಜು ಮೊತ್ತ: **ರೂ. 2200.00 ಲಕ್ಷಗಳು.** ಇ.ಎಂ.ಡಿ ಮೊತ್ತ: **ರೂ. 22.00 ಲಕ್ಷಗಳು.** ಕಾಲಾವಧಿ(ಮಳೆಗಾಲ ಸೇರಿದಂತೆ): **18 ತಿಂಗಳು.**

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **02.01.2025 ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **03.01.2025 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP Platform) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through KPPP Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,ರಸ್ತೆ ಮೂಲ ಸೌಕರ್ಯ – ಯಲಹಂಕ ವಿಭಾಗ,
3ನೇ ಮಹಡಿ, ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು – 560064.

ಸಂಖ್ಯೆ: ಕಾಅ/ರಮೂಸೌ–ವೈಎನ್‌ಕೆ/ಟೆಂಡರ್/03/2024–25 ದಿನಾಂಕ: 16–12–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ – ಯಲಹಂಕ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಎಸ್ಕ್ರೋ ಅನುದಾನದ ಅಡಿಯಲ್ಲಿ ವೈಟ್ ಟಾಪಿಂಗ್ ಒದಗಿಸುವ ಮೂಲಕ ಯಲಹಂಕ ವಲಯ ಮತ್ತು ದಾಸರಹಳ್ಳಿ ವಲಯದಲ್ಲಿ ಆಯ್ದ 04 ಆರ್ಟಿರಿಯಲ್, ಸಬ್ ಆರ್ಟಿರಿಯಲ್ ಹಾಗೂ ಇತರೆ ಪ್ರಮುಖ ಸಂಪರ್ಕ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಪ್ಯಾಕೇಜ್–7) – **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 8009.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 80.09 (ರೂ. 1.00 ಲಕ್ಷ** ಕೆಪಿಪಿ ಪೋರ್ಟಲ್ ಮೂಲಕ, ಬಾಕಿ **ರೂ. 79.09 ಲಕ್ಷ** ಇ–ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸಲ್ಲಿಸುವುದು).

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **19–12–2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **26–12–2024 ರಂದು 16.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **06–01–2025 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **07–01–2025 ರಂದು 16.30 ಗಂಟೆಗೆ ವೆಬ್‌ಸೈಟ್: https://kppp.karnataka.gov.in** ನಲ್ಲಿ **ಕಾರ್ಯಪಾಲಕ ಅಭಿಯಂತರರ ಕಛೇರಿ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ – ಯಲಹಂಕ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443/2024–25/2911

ದಿನಾಂಕ: 16.12.2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2 & 3 ರಲ್ಲಿ ಲೆಕ್ಕ ಶೀರ್ಷಿಕೆ 8443 ಠೇವಣಿ ವಂತಿಕೆ ಅಡಿಯಲ್ಲಿ ಒಟ್ಟು 4 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, **ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 80.00 ಲಕ್ಷಗಳು & 9.00 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 1,60,000/– & 22,500.00 ರೂಗಳು.** ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಬದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:– 30.12.2024 ರ ಸಂಜೆ 4.30** ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 31.12.2024 ರ ಸಂಜೆ 4.31 ಘಂಟೆಯ** ನಂತರ ಮತ್ತು, ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 01.01.2025 ರ ಸಂಜೆ 4.31 ಘಂಟೆಯ** ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka. gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/518/ಕೆಎಸ್‌ಎಂಸಿಎ/2024–25

ಉತ್ತರ ಕರ್ನಾಟಕ ಸಮಸ್ಯೆ ಕುರಿತು ಚರ್ಚೆ; ಹೆಸರು ಬದಲಾದರೂ 'ಕಲ್ಯಾಣ'ವಾಗದ ಕರ್ನಾಟಕ– ಶರಣು ಸಲಗರ

'ಗುಳೆ: ಸತ್ತವರಿಗೆ ಮಣ್ಣು ಹಾಕುವವರು ಇಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಉತ್ತರ ಕರ್ನಾಟಕ ಭಾಗದ ಗ್ರಾಮಾಂತರ ಜನರು ಬಡತನ, ಹಸಿವಿನ ಕಾರಣಕ್ಕೆ ವಿವಿಧ ರಾಜ್ಯಗಳಿಗೆ ಗುಳೆ ಹೋಗುವುದು ನಿಂತಿಲ್ಲ. ಹೀಗೆ ಹೋದವರು ತಮ್ಮ ತಂದೆ–ತಾಯಿ ಮೃತಪಟ್ಟಾಗ ವಾಪಸ್ ಬಂದು ಒಂದು ಹಿಡಿ ಮಣ್ಣು ಹಾಕಲು ಸಾಧ್ಯವಾಗದ ದಯನೀಯ ಪರಿಸ್ಥಿತಿ ಇದೆ' ಎಂದು ಬಿಜೆಪಿಯ ಶರಣು ಸಲಗರ ಹೇಳಿದರು.

ವಿಧಾನಸಭೆಯಲ್ಲಿ ಉತ್ತರ ಕರ್ನಾಟಕದ ಸಮಸ್ಯೆ ಕುರಿತು ಸೋಮವಾರ ಆರಂಭವಾದ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯಾವುದೇ ಪಕ್ಷದ ಸರ್ಕಾರ ಬಂದರೂ ಈ ಭಾಗದ ಪರಿಸ್ಥಿತಿ ಸರಿ ಆಗಿಲ್ಲ. ಜನ ಉದ್ಯೋಗ ಅರಸಿ ಬೇರೆ ಬೇರೆ ಭಾಗಗಳಿಗೆ ಹೋಗುವುದು ನಿಂತಿಲ್ಲ. ಇದಕ್ಕೆ ತೀವ್ರ ಬಡತನವೇ ಕಾರಣ. ಈ ಭಾಗಕ್ಕೆ 'ಕಲ್ಯಾಣ ಕರ್ನಾಟಕ' ಎಂದು ಹೆಸರಿಟ್ಟಿದ್ದೇ ಬಂತು ಕಲ್ಯಾಣವಂತೂ ಆಗಲಿಲ್ಲ ಎಂದು ಅವರು ಹೇಳಿದರು.

'ಮೈಸೂರು, ಬೆಂಗಳೂರು, ತುಮಕೂರಿನ ಬಗೆಗೆ ಇರುವ ಪ್ರೀತಿ, ಕಲಬುರ್ಗಿ, ರಾಯಚೂರು, ಯಾದಗಿರಿಗೆ ಏಕಿಲ್ಲ. ಕಾವೇರಿಗೆ ಇರುವ ಪ್ರೀತಿ, ಕೃಷ್ಣೆಗೆ ಏಕಿಲ್ಲ? ಅಲ್ಲಿ ಆಗುವ ಅಭಿವೃದ್ಧಿ ನಮ್ಮ ಕಡೆ ಏಕೆ ಆಗುತ್ತಿಲ್ಲ. ಬಡತನ ನಮ್ಮ ಭಾಗದ ಜಿಲ್ಲೆಗಳಲ್ಲೇ ಹೆಚ್ಚು. ಹಸಿವು, ಬಡತನ ಮತ್ತು ಅವಮಾನದ ನೋವು ನಾನು ಉಂಡಿದ್ದೇನೆ. ನಮ್ಮ ಭಾಗದ ಜನರೂ ಉಂಡಿದ್ದಾರೆ. ಅದನ್ನು ಪತ್ರಿಕೆಗಳಲ್ಲಿ, ಪುಸ್ತಕದಲ್ಲಿ ಓದಿದರೆ ಗೊತ್ತಾಗುವುದಿಲ್ಲ' ಎಂದು ಹೇಳಿದರು.

ಬೆಳಗಾವಿಯ ವಿಧಾನಸೌಧದ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಡಾ.ಬಾಬು ರಾಜೇಂದ್ರ ಪ್ರಸಾದ್, ಇಂದಿರಾ ಗಾಂಧಿ, ಸ್ವಾಮಿ ವಿವೇಕಾನಂದ, ಸುಭಾಷ್ ಚಂದ್ರ ಬೋಸ್, ಬಿ.ಆರ್. ಅಂಬೇಡ್ಕರ್, ಜವಾಹರ ಲಾಲ್ ನೆಹರೂ, ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು– ಪ್ರಜಾವಾಣಿ ಚಿತ್ರ

ಉತ್ತರ ಕರ್ನಾಟಕ ಭಾಗದ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಎರಡು ವರ್ಷಗಳ ಬಜೆಟ್‌ನಲ್ಲಿ ಒಟ್ಟು ಬಜೆಟ್‌ನ ಶೇ 50 ಹಣ ನಿಗದಿ ಮಾಡಿ
ನೇಮಿರಾಜ್ ನಾಯ್ಕ್
ಜೆಡಿಎಸ್ ಶಾಸಕ

ಭೀಮಾನದಿ ನೀರನ್ನು ಮಹಾರಾಷ್ಟ್ರವು ಸೀನಾ ನದಿಗೆ ತಿರುಗಿಸಿಕೊಂಡು ಬಳಕೆ ಮಾಡುತ್ತಿದೆ. ಇದನ್ನು ತಡೆಯಬೇಕು. ಭೀಮಾ ನೀರು ಕಲುಷಿತಗೊಂಡಿದ್ದು, ಸ್ನಾನ ಮಾಡಿದರೆ ಮೈಯೆಲ್ಲ ಉರಿಯುತ್ತದೆ
ಅಲ್ಲಮಪ್ರಭು ಪಾಟೀಲ, ಕಾಂಗ್ರೆಸ್ ಶಾಸಕ

ಎಂಎಸ್‌ಪಿ ದರ ನಿಗದಿ ಮಾಡುವ ಸಮಿತಿಗೆ ಶಾಸಕರು ಮತ್ತು ರೈತ ಪ್ರತಿನಿಧಿಗಳನ್ನು ಸೇರಿಸಬೇಕು. ಐಎಎಸ್ ಅಧಿಕಾರಿಗಳು ನಿಗದಿ ಮಾಡುವುದು ಬೇಡ
ಎನ್.ಎಚ್. ಕೋನರಡ್ಡಿ
ಕಾಂಗ್ರೆಸ್ ಶಾಸಕ

ಉತ್ತರ ಕರ್ನಾಟಕದ ಗ್ರಾಮಾಂತರ ಭಾಗದಲ್ಲಿ ಯುವಕರು ಆನ್‌ಲೈನ್ ಜೂಜು, ಕ್ರಿಕೆಟ್ ಬೆಟ್ಟಿಂಗ್, ಮೊಬೈಲ್ ಗೇಮ್ಸ್‌ಗಳ ಗೀಳಿಗೆ ಬಿದ್ದು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೆಲ ಯುವಕರು ಆತ್ಮಹತ್ಯೆ ಮಾಡಿಕೊಂಡು ವೃದ್ಧ ತಂದೆ–ತಾಯಂದಿರನ್ನು ಅನಾಥ ಮಾಡುತ್ತಿದ್ದಾರೆ ಎಂದು ಹೇಳಿದಾಗ, ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರೂ ಇದಕ್ಕೆ ಧ್ವನಿಗೂಡಿಸಿದರು. ಈ ಕುರಿತು ವಿಸ್ತೃತ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಬಿಜೆಪಿಯ ಶೈಲೇಂದ್ರ ಬಿಲ್ದಾಳೆ ಮಾತನಾಡಿ, ಕಾರಂಜಾ ಯೋಜನೆಯ ಸಂತ್ರಸ್ತರಿಗೆ ಪುನರ್‌ವಸತಿ ಸಮರ್ಪಕವಾಗಿ ಆಗಿಲ್ಲ. ಸಂತ್ರಸ್ತರಿಗೆ ಪ್ರತಿ ಎಕರೆಗೆ ತಲಾ ₹25 ಲಕ್ಷ ನೀಡುವುದರ ಜೊತೆ ಪ್ರತಿಯೊಂದು ಕುಟುಂಬಕ್ಕೂ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಚನ್ನಾರೆಡ್ಡಿ ಪಾಟೀಲ ಮಾತನಾಡಿ, ಯಾದಗಿರಿ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದ್ದು, ಆರೋಗ್ಯ ಸೌಲಭ್ಯ ಉತ್ತಮವಾಗಿಲ್ಲ. ಆಯಷ್ಮಾನ್ ಸೌಲಭ್ಯದ ಆಸ್ಪತ್ರೆ ಸಮೀಪದಲ್ಲಿ ಇಲ್ಲ. ಆದ್ದರಿಂದ ಯಾದಗಿರಿಯಲ್ಲಿ ಆಯುಷ್ಮಾನ್ ಆಸ್ಪತ್ರೆಯನ್ನು ತೆರೆಯಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ಮಾತನಾಡಿ, ಕೇಂದ್ರದ ಅನುದಾನದ ಕೊರತೆಯಿಂದ ಉತ್ತರ ಕರ್ನಾಟಕ ಕೃಷಿ, ನೀರಾವರಿ, ಶಿಕ್ಷಣ, ವಿದ್ಯುತ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹಿಂದೆ ಉಳಿದಿದೆ. ಆದ್ದರಿಂದ ಹೆಚ್ಚಿನ ಅನುದಾನಕ್ಕಾಗಿ ಕೇಂದ್ರಕ್ಕೆ ಮನವಿ ಮಾಡಬೇಕಾಗಿದೆ ಎಂದು ಹೇಳಿದರು.

ಯಾದಗಿರಿ: 127 ಕಂದಮ್ಮಗಳ ಸಾವು

ಯಾದಗಿರಿ ಜಿಲ್ಲೆಯಲ್ಲಿ 127 ಕಂದಮ್ಮಗಳು ಸತ್ತಿವೆ. ಈ ಮಕ್ಕಳು ಬಡವರ ಮಕ್ಕಳು. ಈ ಸಾವಿಗೆ ಯಾರು ಕಾರಣ? ಉಸ್ತುವಾರಿ ಸಚಿವರು ಸೇರಿ ಯಾರೂ ಈ ಬಗ್ಗೆ ಗಮನ ಹರಿಸಿಲ್ಲ ಎಂದು ಜೆಡಿಎಸ್ ಶಾಸಕ ಶರಣುಗೌಡ ಕಂದಕೂರ ಆರೋಪಿಸಿದರು.

ಈ ಘಟನೆಗೆ ಸಂಬಂಧಿಸಿದಂತೆ ಯಾರ ಮೇಲೂ ಕ್ರಮ ಆಗಿಲ್ಲ. ಸತ್ತವರು ಬಡವರ ಮಕ್ಕಳು ಎಂಬ ಕಾರಣಕ್ಕೆ ಕ್ರಮ ಕೈಗೊಳ್ಳುತ್ತಿಲ್ಲವೇ ಎಂದು ಅವರು ಪ್ರಶ್ನಿಸಿದರು.

ಲಂಬಾಣಿ ಯುವತಿಯ ಮೇಲೆ ಇತ್ತೀಚೆಗೆ ಅತ್ಯಾಚಾರ ಆಯಿತು. ಈ ಕೃತ್ಯ ಎಸಗಿದವರನ್ನು ಗುಂಡಿಟ್ಟು ಕೊಲ್ಲಬೇಕಿತ್ತು ಎಂದು ಕಂದಕೂರ ಹೇಳಿದಾಗ, ಕಾಂಗ್ರೆಸ್ ಸದಸ್ಯರು ಆಕ್ಷೇಪಿಸಿದರು. ಈ ಪ್ರಕರಣದ ಆರೋಪಿಗಳ ವಿರುದ್ಧ ಕಾನೂನು ಪ್ರಕಾರ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಸಭಾಧ್ಯಕ್ಷರ ಪೀಠದಲ್ಲಿದ್ದ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಹೇಳಿದರು.

ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಕಂದಕೂರ ಅವರು ಆಕ್ರೋಶದಿಂದ ಮಾತನಾಡಿದ್ದಾರೆಯೇ ಹೊರತು, ಇದಕ್ಕೆ ಬೇರೆ ಅರ್ಥ ಕಲ್ಪಿಸಬೇಕಾಗಿಲ್ಲ ಎಂದರು.

ಯಾದಗಿರಿಯಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸಬೇಕು. ಕಲಬುರಗಿ ವಿಶ್ವವಿದ್ಯಾಲಯಕ್ಕೆ ಶರಣಬಸವೇಶ್ವರರ ಹೆಸರು ಇಡಬೇಕು ಎಂದು ಒತ್ತಾಯಿಸಿದರು.

'ಕೃಷ್ಣಾ ಮೇಲ್ದಂಡೆ ಯೋಜನೆಗೆ ₹1 ಲಕ್ಷ ಕೋಟಿ ನಿಗದಿ ಮಾಡಿ'

ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಎಲ್ಲ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ. ಕಾವೇರಿಗೆ ಕೊಟ್ಟ ಆದ್ಯತೆಯನ್ನು ಕೃಷ್ಣಾಗೆ ಕೊಟ್ಟಿಲ್ಲ ಎಂದು ಬಿಜೆಪಿಯ ಸಿದ್ದು ಸವದಿ ದೂರಿದರು.

ಹಿನ್ನೀರು ಪ್ರದೇಶದ ಜನರು ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇವರ ಗೋಳು ಕೇಳುವವರು ಇಲ್ಲ. ಈ ಪ್ರದೇಶಕ್ಕೆ ಅನುದಾನದಲ್ಲಿ ತಾರತಮ್ಯ ಮಾಡಬೇಡಿ. ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಇಡುವ ಪರಿಸ್ಥಿತಿ ತಂದುಕೊಳ್ಳುವುದು ಬೇಡ ಎಂದು ಹೇಳಿದರು.

ಆರು ತಿಂಗಳಿಂದ ಕಚ್ಚಾ ಮಾಲು ಸಿಗದೇ ನೇಕಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಶಾಲಾ ಮಕ್ಕಳ ಸಮವಸ್ತ್ರಕ್ಕೆ ಬಟ್ಟೆಯನ್ನು ದೊಡ್ಡ ಕಂಪನಿಗಳಿಂದ ಖರೀದಿಸುವುದನ್ನು ಬಿಟ್ಟು ನೇಕಾರರಿಂದಲೇ ಖರೀದಿಸಬೇಕು ಎಂದು ಆಗ್ರಹಿಸಿದರು.

ಅಲ್ಪಸಂಖ್ಯಾತರ ಇಲಾಖೆ: ಸುತ್ತೋಲೆ ಹಿಂಪಡೆಯಲು ಆಗ್ರಹ

ಬೆಳಗಾವಿ: ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಯೋಜನೆಗಳಲ್ಲಿ ಅತಿ ಹೆಚ್ಚು ಸೌಲಭ್ಯಗಳನ್ನು ಮುಸ್ಲಿಮರೇ ಪಡೆಯುತ್ತಿದ್ದು, ಇದರಿಂದ ಉಳಿದ ಧಾರ್ಮಿಕ ಅಲ್ಪಸಂಖ್ಯಾತರಿಗೆ ಅನ್ಯಾಯವಾಗುತ್ತಿದೆ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ವಿ.ಸುನಿಲ್‌ಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು.

80 + 10 + 10 ಅನುಪಾತದಲ್ಲಿ ಸೌಲಭ್ಯ ಹಂಚಿಕೆ ಮಾಡಲಾಗುತ್ತಿದೆ. ಶೇ 80 ಮುಸ್ಲಿಮರಿಗೂ, ಉಳಿದ ಶೇ 20 ರಲ್ಲಿ ಕ್ರೈಸ್ತ, ಬೌದ್ಧ, ಜೈನ, ಸಿಖ್, ಪಾರ್ಸಿಗಳಿಗೆ ಸೌಲಭ್ಯ ಕೊಡಬೇಕಾಗಿದೆ. ಇದರಿಂದ ಮುಸ್ಲಿಮೇತರರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸುತ್ತೋಲೆಯನ್ನು ಹಿಂಪಡೆಯಬೇಕು ಎಂದು ಹೇಳಿದರು.

ಇದಕ್ಕೆ ಉತ್ತರ ನೀಡಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಜಮೀರ್ ಅಹಮದ್ ಖಾನ್, 'ಈ ಸುತ್ತೋಲೆ ಆಗಿದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿ. ಈ ಕುರಿತು ಶಾಸಕರ ಸಭೆಯನ್ನು ಕರೆದು ಚರ್ಚೆ ನಡೆಸಿ, ಅನ್ಯಾಯವನ್ನು ಸರಿಪಡಿಸಲಾಗುತ್ತದೆ' ಎಂದರು.

'₹150 ಕೋಟಿ ಆಮಿಷ: ಸಿಬಿಐ ತನಿಖೆ ನಡೆಸಿ'

'ಮಾಣಿಪ್ಪಾಡಿ ವರದಿ, ಮುಡಾ ಪ್ರಕರಣವನ್ನೂ ಸಿಬಿಐಗೆ ಒಪ್ಪಿಸಲು ಬಿ.ವೈ. ವಿಜಯೇಂದ್ರ ಸವಾಲು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣವಿಧಾನಸೌಧ): 'ವಕ್ಫ್ ಭೂಕಬಳಿಕೆ ಕುರಿತ ಅನ್ವರ್ ಮಾಣಿಪ್ಪಾಡಿ ವರದಿ, ನನ್ನ ಮೇಲಿನ ₹150 ಕೋಟಿ ಆಮಿಷದ ಆರೋಪ ಮತ್ತು ಮೈಸೂರಿನ ಮುಡಾ ಹಗರಣದ ಕುರಿತು ಸಿಬಿಐ ತನಿಖೆ ನಡೆಸುವಂತೆ ಪ್ರಧಾನಮಂತ್ರಿಗೆ ಪತ್ರ ಬರೆಯಿರಿ' ಎಂದು ಶಾಸಕ ಬಿ.ವೈ.ವಿಜಯೇಂದ್ರ ಅವರು, ರಾಜ್ಯ ಸರ್ಕಾರಕ್ಕೆ ಸವಾಲು ಹಾಕಿದರು.

ತಮ್ಮ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಹೇಳಿಕೆ ಹಾಗೂ ವಿಧಾನಸಭೆಯಲ್ಲಿ ತಮ್ಮ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಮಾಡಿದ ಆರೋಪದ ಬಗ್ಗೆ ಸೋಮವಾರದ ಕಲಾಪದಲ್ಲಿ ಅವರು ಮಾತನಾಡಿದರು.

'ಸದನದಲ್ಲಿ ವಿಜಯೇಂದ್ರ ಹಾಜರಿಲ್ಲದ ವೇಳೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ₹150 ಕೋಟಿ ಆಮಿಷದ ಆರೋಪ ಮಾಡಿದ್ದಾರೆ. ಈ ಬಗ್ಗೆ ಸ್ಪಷ್ಟನೆ ನೀಡಲು ವಿಜಯೇಂದ್ರ ಅವರಿಗೆ ಅವಕಾಶ ನೀಡಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ವಿಷಯ ಪ್ರಸ್ತಾಪಿಸಿದರು. ಸಭಾಧ್ಯಕ್ಷ ಯು.ಟಿ.ಖಾದರ್ ಅವಕಾಶ ನೀಡಿದರು.

ಆಗ ಮಾತನಾಡಿದ ವಿಜಯೇಂದ್ರ, 'ನನ್ನ ಅನುಪಸ್ಥಿತಿಯಲ್ಲಿ ಪ್ರಿಯಾಂಕ್ ಖರ್ಗೆ ₹150 ಕೋಟಿ ಆಮಿಷ ಒಡ್ಡಿದ ಬಗ್ಗೆ ಆರೋಪ ಮಾಡಿದ್ದಾರೆ. ಅಲ್ಲದೆ, ಮುಖ್ಯಮಂತ್ರಿಯವರು ಸದನದ ಹೊರಗೆ ಆರೋಪ ಮಾಡಿ ಸಿಬಿಐ ತನಿಖೆಗೆ ಒಪ್ಪಿಸುವಂತೆಯೂ ಒತ್ತಾಯಿಸಿದ್ದಾರೆ. ಆಗಲಿ, ನನ್ನ ಮೇಲಿನ ಆರೋಪದ ಮೇಲೆ ಸಿಬಿಐ ತನಿಖೆ ಮಾಡಿಸಲಿ' ಎಂದರು.

ವಿಜಯೇಂದ್ರ ಆಮಿಷ ಒಡ್ಡಿದ್ದರೆಂದು ಮಾಣಿಪ್ಪಾಡಿ ಹೇಳಿರುವುದರ ಮೇಲೆ ಪ್ರತಿಕ್ರಿಯೆ ನೀಡಿದ್ದೆವು. ಆ ರೀತಿ ಹೇಳಿಲ್ಲ ಎಂದು ಈಗ ಹೇಳುತ್ತಿದ್ದಾರೆ. ಏನು ಮಾಡಬೇಕು ಮಾಧ್ಯಮದವರೇ ಹೇಳಿ?
ಸಿದ್ದರಾಮಯ್ಯ, ಮುಖ್ಯಮಂತ್ರಿ

ವಕ್ಫ್ ಭೂಮಿಯನ್ನು ಲೂಟಿ ಮಾಡಿದ ವಿಚಾರವಾಗಿ ಬಿಜೆಪಿ ಸರ್ಕಾರ ಇದ್ದಾಗ ಅನ್ವರ್ ಮಾಣಿಪ್ಪಾಡಿ ವರದಿ ನೀಡಿದ್ದಾರೆ. ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ ಈ ವರದಿಯನ್ನು ಆಧರಿಸಿ ಉಪಲೋಕಾಯುಕ್ತರಿಂದ ತನಿಖೆ ನಡೆಸಲಾಗಿತ್ತು. ನಂತರ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಉಪಲೋಕಾಯುಕ್ತರ ವರದಿಯನ್ನು ತಿರಸ್ಕರಿಸಿತು. ಅದರಲ್ಲಿ ಕಾಂಗ್ರೆಸ್‌ನ ಹಲವು ನಾಯಕರು ವಕ್ಫ್ ಭೂಮಿ ಲೂಟಿ ಮಾಡಿದ ವಿಚಾರ ಇತ್ತು. ಅದರ ಬಗ್ಗೆ ಸಿಬಿಐ ತನಿಖೆ ಆಗಲೇಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

'ಮುಖ್ಯಮಂತ್ರಿಯವರು ನನ್ನ ಬಗ್ಗೆ ಮಾಡಿದ ಆರೋಪದ ಬಗ್ಗೆ ಆಕ್ರೋಶವಿಲ್ಲ. ಆದರೆ, ಸಿದ್ದರಾಮಯ್ಯ ಮತ್ತು ಅವರ ಕುಟುಂಬದವರು ಸರಣಿ ಹಗರಣಗಳಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದಾರೆ. ಆ ಬಗ್ಗೆ ಅನುಕಂಪವಿದೆ. ಅವರೂ ಸಿಬಿಐ ತನಿಖೆ ಎದುರಿಸಲಿ' ಎಂದು ವ್ಯಂಗ್ಯವಾಡಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, 'ನಾನು ಪತ್ರಿಕೆಯಲ್ಲಿ ಬಂದ ವರದಿಯನ್ನು ಓದಿ ಪ್ರಸ್ತಾಪಿಸಿದ್ದೇನೆ ಹೊರತು, ನೇರವಾಗಿ ಆರೋಪಿಸಲಿಲ್ಲ' ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಸುಮ್ಮನೆ ರಾಜಕೀಯ ಭಾಷಣ ಮಾಡಬೇಡಿ. ಅದಕ್ಕೆ ನಾವೂ ಸಿದ್ಧರಿದ್ದೇವೆ. ಸಿಬಿಐ ಮತ್ತು ಜಾರಿ ನಿರ್ದೇಶನಾಲಯ ಕಾಂಗ್ರೆಸ್ ನಾಯಕರ ಮನೆಗಳ ಮೇಲೆ ಮಾತ್ರ ದಾಳಿ ಮಾಡುತ್ತವೆ, ವಿಚಾರಣೆ ನಡೆಸುತ್ತವೆ' ಎಂದರು.

'ಬಿಜೆಪಿ ನಾಯಕ ಅನ್ವರ್ ಮಾಣಿಪ್ಪಾಡಿ ಅವರೇ ವಿಜಯೇಂದ್ರ ಮೇಲೆ ಆರೋಪ ಮಾಡಿದ್ದಾರೆ. ಈ ಬಗ್ಗೆ ಏಕೆ ಸಿಬಿಐ, ಇ.ಡಿ ತನಿಖೆ ಆಗಿಲ್ಲ' ಎಂದು ಪ್ರಶ್ನಿಸಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಮಾಣಿಪ್ಪಾಡಿಗೆ ಬಿಜೆಪಿ ಯಾಕೆ ನೋಟಿಸ್ ನೀಡಿಲ್ಲ: ಪ್ರಿಯಾಂಕ್

'ವಿಜಯೇಂದ್ರ ಹಲವು ಬಾರಿ ತಮಗೆ ಆಮಿಷ ಒಡ್ಡಿದ್ದರು ಎಂದು ಆರೋಪ ಮಾಡಿರುವ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿಗೆ ಬಿಜೆಪಿ ಈವರೆಗೆ ನೋಟಿಸ್ ನೀಡದಿರಲು ಕಾರಣವೇನು' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾಣಿಪ್ಪಾಡಿ ಮಾಡಿರುವ ಆರೋಪ ಸುಳ್ಳಾಗಿದ್ದರೆ, ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿ' ಎಂದು ಆಗ್ರಹಿಸಿದರು.

'ವಿಜಯೇಂದ್ರ ವಿಚಾರದಲ್ಲಿ ನಾವಾಗಲಿ, ನಮ್ಮ ಸರ್ಕಾರವಾಗಲಿ ಹಿಟ್ ಆ್ಯಂಡ್ ರನ್ ಮಾಡುತ್ತಿಲ್ಲ. ಅದೇನಿದ್ದರೂ, ಬಿಜೆಪಿ ಕೆಲಸ. ವಿಜಯೇಂದ್ರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಅನ್ವರ್ ಮಾಣಿಪ್ಪಾಡಿ ಪತ್ರ ಬರೆದಿದ್ದಾರೆ. ಕೇಂದ್ರ ಸರ್ಕಾರ ಈ ಪ್ರಕರಣವನ್ನು ಯಾಕೆ ಸಿಬಿಐಗೆ ಕೊಟ್ಟಿಲ್ಲ' ಎಂದು ಪ್ರಿಯಾಂಕ್ ಪ್ರಶ್ನಿಸಿದರು.

'ವಕ್ಫ್ ಆಸ್ತಿ ಕಬಳಿಕೆಯಲ್ಲಿ ಶಾಸಕ ಎನ್.ಎ. ಹ್ಯಾರಿಸ್, ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಸರಿದೆ ಎಂದು ಹೇಳುತ್ತಿದ್ದೀರಿ. ಆದರೆ, ಕಾಂಗ್ರೆಸ್ ನಾಯಕರು ಆಮಿಷ ಒಡ್ಡಿದ್ದಾರೆ ಎಂದು ಅನ್ವರ್ ಮಾಣಿಪ್ಪಾಡಿ ಹೇಳಿದ್ದಾರೆಯೇ' ಎಂದು ಪ್ರಶ್ನಿಸಿದ ಪ್ರಿಯಾಂಕ್, 'ರಾಜ್ಯ ಸರ್ಕಾರವನ್ನು ಕಿತ್ತೊಗೆಯಲು ವಿಜಯೇಂದ್ರ ನೂರಾರು ಕೋಟಿ ರೂಪಾಯಿ ಜಮೆ ಮಾಡಿ ಇಟ್ಟುಕೊಂಡಿದ್ದಾರೆಂದು ನಿಮ್ಮದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದಾರೆ' ಎಂದು ಬಿಜೆಪಿ ನಾಯಕರನ್ನು ಟೀಕಿಸಿದರು.

'ಸಾರಿಗೆ ಸಂಸ್ಥೆ ನೌಕರರ ಜತೆ ಇದೇ 31ರೊಳಗೆ ಮಾತುಕತೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ವೇತನ ಪರಿಷ್ಕರಣೆ ಮತ್ತು ಹಿಂಬಾಕಿ ಸಂಬಂಧ ಸಾರಿಗೆ ಸಚಿವರು ಇದೇ 31ರೊಳಗೆ ನೌಕರರ ಸಂಘದ ಜತೆ ಮಾತುಕತೆ ನಡೆಸಲಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಉತ್ತರಿಸಿ, ಭರವಸೆ ನೀಡಿದರು.

ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ₹8,237 ಕೋಟಿ ಬೇಡಿಕೆ ಇತ್ತು. ₹6,543 ಕೋಟಿಯನ್ನು ಸರ್ಕಾರ ನೀಡಿದೆ. ಉಳಿದ ₹1,694 ಕೋಟಿ ಕೊಡಬೇಕಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಬಾಕಿ ಹೆಚ್ಚಾಗಿತ್ತು. ಇದಕ್ಕೆ ಕೋವಿಡ್ ಮತ್ತು ಇಂಧನ ಬೆಲೆ ಹೆಚ್ಚಿದ್ದೇ ಕಾರಣ. ಕೋವಿಡ್ ಅವಧಿಯಲ್ಲಿ ವೇತನ ಪರಿಷ್ಕರಣೆ ಮಾಡಿರಲಿಲ್ಲ ಎಂದು ಹೇಳಿದರು.

ತಜ್ಞರ ಸಮಿತಿ ರಚನೆ

ಮಲೆನಾಡು ಜಿಲ್ಲೆಗಳಲ್ಲಿ ಅರಣ್ಯ ಮತ್ತು ಕಂದಾಯ ಭೂಮಿ ಬೆರೆತುಕೊಂಡಿರುವುದರಿಂದ ಪರಿಹಾರ ಕಂಡುಕೊಳ್ಳಲು ಎರಡು ಇಲಾಖೆಗಳ ತಜ್ಞರ ಸಮಿತಿ ರಚಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ಕಾಂಗ್ರೆಸ್‌ನ ಮಂಥರ್‌ಗೌಡ ಅವರ ಪ್ರಶ್ನೆಗೆ ಉತ್ತರಿಸಿ, ಈ ಸಮಸ್ಯೆ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿರುವುದಾಗಿ ತಿಳಿಸಿದರು.

₹5,318 ಕೋಟಿ ಪೂರಕ ಅಂದಾಜು ಮಂಡನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ: 'ಮುಖ್ಯಮಂತ್ರಿ ಗ್ರಾಮೀಣ ರಸ್ತೆ'ಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ ₹500 ಕೋಟಿ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡಲು ₹200 ಕೋಟಿ ಸೇರಿ ವಿವಿಧ ಬೇಡಿಕೆಗಳಿಗೆ ಒಟ್ಟು ₹5,317.83 ಕೋಟಿ ಮೊತ್ತದ ಎರಡನೇ ಕಂತಿನ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಪೂರಕ ಅಂದಾಜು ಮಂಡಿಸಿದರು.

ಮುಖ್ಯಾಂಶಗಳು

- 2024–25ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನ ಯೋಜನೆಯಡಿ 2024ರ ಆಗಸ್ಟ್‌ನಿಂದ 2025 ಫೆಬ್ರುವರಿವರೆಗೆ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಪಾವತಿಸಲು ₹200 ಕೋಟಿ
- ಕರ್ನಾಟಕ ಲೋಕಸೇವಾ ಆಯೋಗ ಸಚಿವಾಲಯದ ಪರೀಕ್ಷಾ ವೆಚ್ಚಕ್ಕಾಗಿ ₹12.50 ಕೋಟಿ
- ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ಸಂದರ್ಭದಲ್ಲಿ ನಡೆದ ಕೋಮುಗಲಭೆಯಲ್ಲಿ ಹಾನಿಗೊಳಗಾಗಿ ಸಂತ್ರಸ್ತರಾದ ಕಟ್ಟಡ ಮಾಲೀಕರಿಗೆ ಮತ್ತು ಬಾಡಿಗೆದಾರರಿಗೆ ಪರಿಹಾರ ಒದಗಿಸಲು ₹2.66 ಕೋಟಿ
- ನಿಪುಣ ಕರ್ನಾಟಕ ಕಾರ್ಯಕ್ರಮ ಜಾರಿಗೊಳಿಸಲು ₹10 ಕೋಟಿ
- ಅತಿವೃಷ್ಟಿಯಿಂದ ರಾಜ್ಯದ ವಿವಿಧೆಡೆ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ಮುಂದುವರೆದ ದುರಸ್ತಿ ಕಾಮಗಾರಿಗಳ ಬಾಕಿ ಬಿಲ್‌ಗಳ ಪಾವತಿಗಾಗಿ ₹200 ಕೋಟಿ.
- ಗದಗ ಜಿಲ್ಲೆ ಅಂದಾನಪ್ಪ ದೊಡ್ಡಮೇಟಿ ಸ್ಮಾರಕ ನಿರ್ಮಾಣಕ್ಕಾಗಿ ₹3 ಕೋಟಿ, ಬಾಗಲಕೋಟೆ ಜಿಲ್ಲೆ ಕೂಡಲಸಂಗಮ ಬಸವ ಕಲಾಸಂಗ್ರಹಾಲಯವನ್ನು ನಿರ್ಮಿಸಲು ₹2.50 ಕೋಟಿ
- ಬೆಳಗಾವಿ ವಿಧಾನಮಂಡಲ ಅಧಿವೇಶನದ ವೆಚ್ಚಕ್ಕಾಗಿ ಹೆಚ್ಚುವರಿ ₹4 ಕೋಟಿ, ಅಧಿವೇಶನ ನಿರ್ವಹಣಾ ವೆಚ್ಚಗಳಿಗಾಗಿ ₹3 ಕೋಟಿ ಮತ್ತು ಸುವರ್ಣ ವಿಧಾನಸೌಧದ ಇತರ ಕಾಮಗಾರಿಗಳಿಗೆ ₹42.93 ಲಕ್ಷ.
- ವಿಧಾನಸಭಾ ಸದಸ್ಯರಿಗೆ ವಾಹನಗಳ ಖರೀದಿಗೆ ₹2ಕೋಟಿ, ವಿಧಾನಪರಿಷತ್ ಸದಸ್ಯರ ವಾಹನಗಳ ಖರೀದಿಗೆ ₹5.40 ಕೋಟಿ ಸೇರಿ ಒಟ್ಟು ₹7.40 ಕೋಟಿ
- ಆನೆ–ಮಾನವ ಸಂಘರ್ಷ ತಡೆಯಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ₹191 ಕೋಟಿ.
- ಹೊಸದಾಗಿ ಆರಂಭಿಸಲಿರುವ 52 ಮೌಲಾನಾ ಅಜಾದ್ ಶಾಲೆಗಳ ನಿರ್ವಹಣೆಗೆ ₹8.12 ಕೋಟಿ
- ವಿವಿಧ ಅಭಿವೃದ್ಧಿ ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆಗೆ ₹250 ಕೋಟಿ

ಪ್ರಶ್ನೆಗಳಿಗೆ ಬಾರದ ಉತ್ತರ: ಎಚ್ಚರಿಕೆ ನೀಡಿದ ಸಭಾಪತಿ

ಬೆಳಗಾವಿ (ಸುವರ್ಣ ವಿಧಾನಸೌಧ): 'ಕಲಾಪದ ವೇಳೆ ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಕಡ್ಡಾಯವಾಗಿ ಹಾಜರಿಲ್ಲದಿದ್ದರೆ ಕಲಾಪವನ್ನು ಮುಂದೂಡಬೇಕಾಗುತ್ತದೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಎಚ್ಚರಿಕೆ ಕೊಟ್ಟ ಪ್ರಸಂಗ ಮೇಲ್ಮನೆಯಲ್ಲಿ ನಡೆಯಿತು.

ಸದನದಲ್ಲಿ ಲಿಖಿತವಾಗಿ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವಂತೆ ಸಭಾ ನಾಯಕ ಎನ್.ಎಸ್. ಬೋಸರಾಜ್ ಅವರಿಗೆ ಸಭಾಪತಿ ಸೂಚಿಸಿದರು. ಅವರು ಮಂಡಿಸಲು ಮುಂದಾಗುತ್ತಿದ್ದಂತೆ, 'ಕೇಳಿದ ಪ್ರಶ್ನೆಗೆ ಸಮರ್ಪಕ ಉತ್ತರ ಬರುತ್ತಿಲ್ಲ. ಇಲ್ಲಿಯವರೆಗೆ 316ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ' ಎಂದು ಬಿಜೆಪಿ–ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಆಗ ಸದನದಲ್ಲಿ ಅಧಿಕಾರಿಗಳು, ಸಚಿವರ ಅನುಪಸ್ಥಿತಿಗೆ ಅಸಮಾಧಾನ ವ್ಯಕ್ತಪಡಿಸಿದ ಸಭಾಪತಿ, ಸದಸ್ಯರ ಲಿಖಿತ ಪ್ರಶ್ನೆಗಳಿಗೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು. ಅಂತಹ ಅಧಿಕಾರಿಗಳ ಪಟ್ಟಿ ನೀಡುವಂತೆ ಪರಿಷತ್ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದರು.

ವಿರೋಧಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ಟಿ.ಎ. ಶರವಣ, ಬಿಜೆಪಿಯ ಎನ್. ರವಿಕುಮಾರ್, ಸಿ.ಟಿ. ರವಿ ಲಿಖಿತ ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡುತ್ತಿಲ್ಲ ಎಂದರು.

ಮಧ್ಯಪ್ರವೇಶಿಸಿದ ಸಭಾಪತಿ, 'ಉತ್ತರ ನೀಡದ ಅಧಿಕಾರಿಗಳ ಹೆಸರನ್ನು ಸದನಕ್ಕೆ ತಿಳಿಸಲಾಗುವುದು' ಎಂದರು. ಎರಡು ದಿನಗಳಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಾಗಿ ಸಭಾನಾಯಕ ಮಾತು ಕೊಟ್ಟರು.



ಲಾಠಿ ಪ್ರಹಾರ ವಿರೋಧಿಸಿ ಸಭಾತ್ಯಾಗ

ಬೆಳಗಾವಿ (ಸುವರ್ಣ ವಿಧಾನಸೌಧ): ಮೀಸಲಾತಿಗೆ ಆಗ್ರಹಿಸಿ ಹೋರಾಟ ಮಾಡುತ್ತಿದ್ದ ಪಂಚಮಸಾಲಿ ಸಮುದಾಯದವರ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರ ಪ್ರಕರಣ ವಿಧಾನಪರಿಷತ್‌ನಲ್ಲಿ ಸೋಮವಾರವೂ ಗದ್ದಲ ಸೃಷಿಸಿತು. ಪೊಲೀಸರು ಹಾಗೂ ಸರ್ಕಾರದ ನಡೆಯನ್ನು ಖಂಡಿಸಿದ ಬಿಜೆಪಿ–ಜೆಡಿಎಸ್ ಸದಸ್ಯರು ನ್ಯಾಯಾಂಗ ತನಿಖೆಗೆ ಆಗ್ರಹಿಸಿ, ಸಭಾತ್ಯಾಗ ಮಾಡಿದರು.

'ಜನರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಬೀಸಿದ್ದಾರೆ. ಹಾಗಾಗಿ, ಯಾವುದೇ ತನಿಖೆ ಅಗತ್ಯವಿಲ್ಲ' ಎಂದು ಸಮರ್ಥಿಸಿಕೊಂಡ ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿಕೆ ವಿರೋಧಿಸಿದ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಪಂಚಾಮಸಾಲಿಗಳ ಮೀಸಲಾತಿ ಬೇಡಿಕೆ ಮತ್ತು ಪೊಲೀಸರ ದೌರ್ಜನ್ಯವನ್ನು ಸದನದಲ್ಲಿ ಪ್ರಶ್ನಿಸಿದ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪಂಚಮಸಾಲಿಗಳಿಗೆ ಬಿಜೆಪಿ ಸರ್ಕಾರ 2ಡಿ ಮೀಸಲಾತಿ ಕೊಟ್ಟಿತ್ತು. ಈ ಕುರಿತು ಆಗಸ್ಟ್ 2023ರಲ್ಲಿ ಕೋರ್ಟ್‌ಗೆ ಮೀಸಲಾತಿ ಹಿಂಪಡೆಯುವ ಪ್ರಮಾಣಪತ್ರ ಸಲ್ಲಿಸಿದಾಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆದರೆ, ಬಿಜೆಪಿ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು ಎಂದು ಮುಖ್ಯಮಂತ್ರಿ, ಗೃಹ ಸಚಿವರು ಸುಳ್ಳು ಹೇಳಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿಯ ಸಿ.ಟಿ. ರವಿ ಮಾತನಾಡಿ, ಲಾಠಿ ಬೀಸುವ ಮೊದಲು ಹೋರಾಟಗಾರರನ್ನು ತಡೆಯಲು ಪೊಲೀಸರು ಬದಲಿ ಕ್ರಮಗಳನ್ನು ಬಳಕೆ ಮಾಡಿಲ್ಲ. ಶಾಂತಿಯುತ ಹೋರಾಟ ನಡೆಸುತ್ತಿದ್ದವರ ಮೇಲೆ ದೌರ್ಜನ್ಯ ಎಸಗಲಾಗಿದೆ. ಪೊಲೀಸರ ಕ್ರಮವನ್ನೇ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಇದು ಸರ್ವಾಧಿಕಾರಿ ಸರ್ಕಾರ ಎಂದು ದೂರಿದರು.

ಕಾವೇರಿ ನದಿಪಾತ್ರ: 6 ತಿಂಗಳ ಒಳಗೆ ತ್ಯಾಜ್ಯ ಮುಕ್ತ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾವೇರಿ ನದಿಪಾತ್ರವನ್ನು ಆರು ತಿಂಗಳ ಒಳಗಾಗಿ ತ್ಯಾಜ್ಯ ನೀರಿನಿಂದ ಮುಕ್ತಗೊಳಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಂ.ಪಿ. ಕುಶಾಲಪ್ಪ ಪ್ರಶ್ನೆಗೆ ಉತ್ತರಿಸಿದ ಅವರು, 'ಕಾವೇರಿ ನದಿಗೆ ಕಲುಷಿತ ನೀರು, ತ್ಯಾಜ್ಯ ಸೇರುತ್ತಿರುವ ಬಗ್ಗೆ ಪರಿಶೀಲಿಸಿ ಅಧ್ಯಯನ ಸಮಿತಿ ವರದಿ ನೀಡಿದೆ. ಮೈಸೂರು ಮಹಾನಗರ ಪಾಲಿಕೆ, ಐದು ನಗರಸಭೆಗಳು, ಎಂಟು ಪುರಸಭೆಗಳು, ನಾಲ್ಕು ಪಟ್ಟಣ ಪಂಚಾಯಿತಿಗಳು, 110 ಗ್ರಾಮಗಳಿಂದ ಕಲುಷಿತ ನೀರು ಸೇರುತ್ತಿತ್ತು. ಹೀಗಾಗಿ ಕೊಳಚೆ ನೀರು ಸಂಸ್ಕರಣೆಗೆ ಕ್ರಮ ಕೈಗೊಳ್ಳಲಾಗಿದೆ. ಕಾಲ ಕಾಲಕ್ಕೆ ಈ ಬಗ್ಗೆ ನಿಗಾ ವಹಿಸಲಾಗುವುದು' ಎಂದರು.

ಸಿಸೇರಿಯನ್ ಹೆರಿಗೆ ತಡೆಯಲು ಹೊಸ ಕಾರ್ಯಕ್ರಮ: ಸಚಿವ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ರಾಜ್ಯದಲ್ಲಿ ಸಿಸೇರಿಯನ್ ಹೆರಿಗೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಮುಂದಿನ ತಿಂಗಳು ಹೊಸ ಕಾರ್ಯಕ್ರಮವನ್ನು ಘೋಷಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಜಗದೇವ ಗುತ್ತೇದಾರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ ಪ್ರತಿವರ್ಷ ಸಿಸೇರಿಯನ್ ಹೆರಿಗೆ ಪ್ರಮಾಣ ಹೆಚ್ಚಾಗುತ್ತಿದೆ. 2020–21ರಲ್ಲಿ ಶೇ 35ರಷ್ಟಿದ್ದ ಪ್ರಮಾಣ 2022–23ಕ್ಕೆ ಶೇ 38ಕ್ಕೆ ಏರಿಕೆಯಾಗಿತ್ತು. ಪ್ರಸ್ತುತ ಶೇ 46ರಷ್ಟಿದೆ' ಎಂದರು.

'ವಿಶೇಷವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಶೇ 91ರಷ್ಟು ಸಿಸೇರಿಯನ್ ಹೆರಿಗೆ ಮಾಡಲಾಗುತ್ತಿದೆ. ಹೆಚ್ಚು ಆದಾಯ ಬರುತ್ತದೆ ಮತ್ತು ಸುಲಭವಾಗಿ ಮಾಡಬಹುದು ಎಂಬ ಕಾರಣಕ್ಕೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳನ್ನೇ ಹೆಚ್ಚು ಮಾಡುತ್ತಿದ್ದಾರೆ. ತಾಯಿ ಮತ್ತು ಮಗುವಿನ ಆರೋಗ್ಯ ದೃಷ್ಟಿಯಿಂದ ಇದಕ್ಕೆ ಕಡಿವಾಣ ಹಾಕುವುದು ಅತ್ಯಗತ್ಯವಾಗಿದೆ. ಬಸುರಿಯರನ್ನು ಸಹಜ ಹೆರಿಗೆ ಮಾಡಿಸಿಕೊಳ್ಳಲು ಮಾನಸಿಕವಾಗಿ ಸಜ್ಜುಗೊಳಿಸಬೇಕಿದೆ. ಇದಕ್ಕಾಗಿ ನೂತನ ಕಾರ್ಯಕ್ರಮ ಜಾರಿಗೊಳಿಸುವ ಕುರಿತು ಈಗಾಗಲೇ ಚರ್ಚೆ ನಡೆದಿದೆ' ಎಂದರು.

46 ಜನರ ಬಂಧನ: 'ರಾಜ್ಯದಲ್ಲಿ 2023–24ರಿಂದ ಇಲ್ಲಿಯವರೆಗೆ ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಎಂಟು ಪ್ರಕರಣಗಳನ್ನು ದಾಖಲಿಸಿ 46 ಜನರನ್ನು ಬಂಧಿಸಲಾಗಿದೆ' ಎಂದು ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು.

'ರಾಜ್ಯದಲ್ಲಿ ಇದುವರೆಗೂ ಗರ್ಭಾವಸ್ಥೆ ಮತ್ತು ಪ್ರಸವಪೂರ್ವ ಲಿಂಗ ಪತ್ತೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾಯ್ದೆ ಉಲ್ಲಂಘಿಸಿರುವ ಸ್ಕ್ಯಾನಿಂಗ್ ಕೇಂದ್ರ, ಮಾಲೀಕರು, ವೈದ್ಯರ ವಿರುದ್ಧ ಒಟ್ಟು 136 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದು, 74 ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ. 65 ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಬಾಕಿಯಿವೆ' ಎಂದು ತಿಳಿಸಿದರು.

ಹೊರ ಗುತ್ತಿಗೆಯಡಿ 18,048 ಹುದ್ದೆ ಭರ್ತಿ: ಆರೋಗ್ಯ ಇಲಾಖೆಗೆ ಒಟ್ಟು 69,915 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 32,870 ಹುದ್ದೆಗಳು ಖಾಲಿ ಇವೆ. ಅವುಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿಯ ಎಂ.ಜಿ. ಮುಳೆ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಎನ್ಎಚ್ಎಂ ಅಡಿ, 13,448, ಎಂಬಿಬಿಎಸ್ ವೈದ್ಯರು 500 ಮತ್ತು 'ಡಿ' ಗ್ರೂಪ್ 4,300 ನೌಕರರು ಸೇರಿದಂತೆ ಒಟ್ಟು 18, 048 ಹುದ್ದೆಗಳನ್ನು ಗುತ್ತಿಗೆ ಆಧಾರದಡಿ ನೇಮಕ ಮಾಡಿಕೊಳ್ಳಲಾಗಿದೆ.ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯಜಾಗೃತಿ ಮೂಡಿಸುವ ನಿಟ್ಟಿನಲ್ಲಿ 1,500 ಹುದ್ದೆಗಳನ್ನು ತುಂಬಲಾಗುತ್ತಿದೆ' ಎಂದರು.

'ನಕಲಿ ವೈದ್ಯರ ಪರ ಸ್ವಾಮೀಜಿಗಳು'

'ರಾಜ್ಯದ ಗಡಿಭಾಗಗಳಲ್ಲಿ ನಕಲಿ ವೈದ್ಯರ ಸಂಖ್ಯೆ ಹೆಚ್ಚಾಗಿದ್ದು, ಅವರ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ನಕಲಿ ವೈದ್ಯರನ್ನು ಪತ್ತೆಹಚ್ಚಿ ಅವರ ಕ್ಲಿನಿಕ್‌ಗಳನ್ನು ಜಪ್ತಿ ಮಾಡುವ ಜತೆಗೆ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಪಾರಂಪರಿಕ, ನಾಟಿ ವೈದ್ಯರ ಪರವಾಗಿ ಕೆಲವು ಸ್ವಾಮೀಜಿಗಳು ವಕಾಲತ್ತು ವಹಿಸುತ್ತಿದ್ದಾರೆ. ಅಂತಹ ವೈದ್ಯರನ್ನು ಬಿಡಿಸಲು ರಾಜಕಾರಣಿಗಳು ಯತ್ನಿಸುತ್ತಿದ್ದಾರೆ' ಎಂದರು.

'ಮತ್ತೆ 10 ಸಾವಿರ ಎಕರೆಯಲ್ಲಿ ಸೌರ ವಿದ್ಯುತ್'

'ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ 10 ಸಾವಿರ ಎಕರೆಯಲ್ಲಿ ಸೌರ ವಿದ್ಯುತ್ ಯೋಜನೆ ಆರಂಭಿಸಲು ಚಿಂತನೆ ನಡೆದಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಜಾರ್ಜ್, 'ಈಗಾಗಲೇ ಪಾವಗಡದಲ್ಲಿ ಎರಡು ಸಾವಿರ ಎಕರೆ ಪ್ರದೇಶದಲ್ಲಿ ಸೌರ ವಿದ್ಯುತ್ ಯೋಜನೆ ಆರಂಭವಾಗಿದೆ. ಹೆಚ್ಚುವರಿಯಾಗಿ 10 ಸಾವಿರ ಎಕರೆ ಜಮೀನು ನೀಡಲು ರೈತರು ಮುಂದೆ ಬಂದಿದ್ದಾರೆ. ಅದನ್ನು ನಾವು ಭೋಗ್ಯದ (ಲೀಸ್) ಆಧಾರದಲ್ಲಿ ಪಡೆಯುತ್ತೇವೆ' ಎಂದು ತಿಳಿಸಿದರು.

'ಮಧುಗಿರಿಯಲ್ಲಿ ಸೌರ ವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳಲು ಸಚಿವ ಕೆ.ಎನ್. ರಾಜಣ್ಣ ಮನವಿ ಮಾಡಿದ್ದರು. ಆದರೆ, ಅಲ್ಲಿ ಜಮೀನು ಲಭ್ಯ ಇಲ್ಲದ ಕಾರಣ ಪಾವಗಡದಲ್ಲೇ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದೇವೆ' ಎಂದರು.

'ರಾಜ್ಯದಲ್ಲಿ ಪ್ರಸ್ತುತ ನವೀಕರಿಸಬಹುದಾದ ಇಂಧನ ಮೂಲಗಳಿಂದ ಒಟ್ಟು 18,407 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇದರಲ್ಲಿ 6,662 ಮೆಗಾ ವಾಟ್ ಪವನ ವಿದ್ಯುತ್, 940 ಕಿರುಜಲ, 8,261 ಮೆಗಾ ವ್ಯಾಟ್ ಸೌರ ವಿದ್ಯುತ್ (ಗ್ರೌಂಡ್ ಮೌಂಟೆಡ್), 674 ಸೌರ ವಿದ್ಯುತ್ (ರೂಫ್ ಟಾಪ್), 139 ಜೈವಿಕ ಇಂಧನ, 1,731 ಮೆಗಾ ವಾಟ್ ಸಹವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ' ಎಂದು ಸಚಿವರು ವಿವರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ

ಯುಕೆಪಿ: ಮುಳುಗಡೆ ಜಮೀನು ಒಂದೇ ಹಂತದಲ್ಲಿ ಸ್ವಾಧೀನ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) ಮೂರನೇ ಹಂತದಲ್ಲಿ ಮುಳುಗಡೆಯಾಗುವ ಜಮೀನನ್ನು ಒಂದೇ ಹಂತದಲ್ಲಿ ಸ್ವಾಧೀನ ಪಡಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಯುಕೆಪಿ ಮೂರನೇ ಹಂತದ ಯೋಜನೆಗೆ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕುರಿತು ಸೋಮವಾರ ಸಭೆ ನಡೆಯಿತು.

ಆಲಮಟ್ಟಿ ಜಲಾಶಯದ ನೀರಿನ ಮಟ್ಟವನ್ನು 519.60 ಮೀಟರ್‌ನಿಂದ 524.26 ಮೀಟರ್‌ಗೆ ಎತ್ತರಿಸುವ ಯೋಜನೆಗೆ ಮುಳುಗಡೆ ಆಗಲಿರುವ ಜಮೀನು, ಪುನರ್ವಸತಿ ಹಾಗೂ ಕಾಲುವೆ ನಿರ್ಮಾಣಕ್ಕಾಗಿ ಅಂದಾಜು ಒಟ್ಟಾರೆ 1,33,867 ಎಕರೆ ಜಮೀನು ಸ್ವಾಧೀನಪಡಿಸಬೇಕಾಗಿದೆ. ಇದುವರೆಗೆ 28,967 ಎಕರೆ ಸ್ವಾಧೀನಪಡಿಸಲಾಗಿದೆ. 1,04,963 ಎಕರೆ ಸ್ವಾಧೀನಪಡಿಸಲು ಬಾಕಿಯಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಸಂಬಂಧ ಸೋಮವಾರ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧಿಕಾರಿಗಳು ಮಾಹಿತಿ ನೀಡಿದರು. ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಕಾನೂನು ಸಚಿವ ಎಚ್.ಕೆ. ಪಾಟೀಲ ಇದ್ದರು

ಜಲಾಶಯದ ಹಿನ್ನೀರಿನಿಂದ ಮುಳುಗಡೆ ಆಗಲಿರುವ 188 ಗ್ರಾಮಗಳಿಗೆ ಸಂಬಂಧಿಸಿದಂತೆ ಮುಳುಗಡೆಯಾಗುವ 73,020 ಎಕರೆ ಭೂಸ್ವಾಧೀನಕ್ಕೆ ಬಾಕಿಯಿದೆ. 2022ರಲ್ಲಿ ಅಂದಿನ ಸರ್ಕಾರ ಮುಳುಗಡೆಯಾಗುವ ಜಮೀನನ್ನು ಎರಡು ಹಂತದಲ್ಲಿ ಭೂಸ್ವಾಧೀನಪಡಿಸುವ ನಿರ್ಧಾರ ಕೈಗೊಂಡಿತ್ತು.

ಜಮೀನು ಕಳೆದುಕೊಳ್ಳುವ ರೈತರಿಗೆ ಜಮೀನಿನ ಮಾರುಕಟ್ಟೆ ದರ, ಆಸ್ತಿಯ ಮಾರ್ಗಸೂಚಿ ದರ, ಭೂಸ್ವಾಧೀನ ಕಾಯ್ದೆಯನ್ನು ಗಮನದಲ್ಲಿರಿಸಿ ನ್ಯಾಯಯುತ ಪರಿಹಾರ ಒದಗಿಸಲಾಗುವುದು. ರೈತರಿಗಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಜಮೀನಿಗೆ ಪರಿಹಾರ ನೀಡುವ ಕುರಿತು ಸಹಮತದ ದರ ನಿಗದಿಪಡಿಸಲು ಎಲ್ಲರೂ ಮುಂದೆ ಬರಬೇಕು. ರೈತರಿಗೂ ಅನ್ಯಾಯ ಆಗಬಾರದು, ಸರ್ಕಾರಕ್ಕೂ ಹೊರೆಯಾಗದಂತೆ ನಿರ್ಣಯಕ್ಕೆ ಬರಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 20 ಸಾವಿರ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಈ ಪ್ರಕರಣಗಳನ್ನು ಹಿಂಪಡೆದುಕೊಂಡು ಸಹಮತದ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕು ಎಂದೂ ಅಧಿಕಾರಿಗಳಿಗೆ ಅವರು ಸಲಹೆ ನೀಡಿದರು.

ವಿಜಯಪುರ, ಬಾಗಲಕೋಟೆ ಜಿಲ್ಲೆಯ ಹೋರಾಟಗಾರರು, ರೈತ ಮುಖಂಡರು ಸಭೆಯಲ್ಲಿ ಅಹವಾಲು ಮಂಡಿಸಿದರು. ಸಚಿವರಾದ ಎಂ.ಬಿ. ಪಾಟೀಲ, ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

'ಪ್ರಜಾವಾಣಿ' ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆ–2024 • ದಾವಣಗೆರೆಯ ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲಾ ತಂಡ ದ್ವಿತೀಯ

ಆರ್ಮಿ ಪಬ್ಲಿಕ್ ಸ್ಕೂಲ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ರಾಜ್ಯ ಮಟ್ಟದ ರಸಪ್ರಶ್ನೆ ಫೈನಲ್‌ನಲ್ಲಿ ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡಿದ್ದ ಬೆಂಗಳೂರಿನ ಆರ್ಮಿ ಪಬ್ಲಿಕ್ ಸ್ಕೂಲ್ ತಂಡ ಅಂತಿಮ ಹಂತದಲ್ಲಿ ಸತತ ಎರಡು ಪ್ರಶ್ನೆಗಳಿಗೆ 'ಸ್ಟೆಪ್‌ಅಪ್' ತೆಗೆದುಕೊಂಡು 30 ಅಂಕಗಳನ್ನು ಬಾಚುವ ಮೂಲಕ ಉಳಿದ ತಂಡಗಳನ್ನು ಭಾರಿ ಅಂಕಗಳ ಅಂತರದಿಂದ ಹಿಂದಿಕ್ಕಿ ಚಾಂಪಿಯನ್ ಆಗಿ ಹೊರ ಹೊಮ್ಮಿತು.

ಜಯನಗರದ ವಿವೇಕ ಸಭಾಂಗಣದಲ್ಲಿ ಸೋಮವಾರ 'ಪೈಲಟ್ ಪೆನ್' ಸಹಯೋಗದಲ್ಲಿ ನಡೆದ ಫೈನಲ್ಸ್‌ನಲ್ಲಿ ದಾವಣಗೆರೆಯ ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲಾ ತಂಡವು ದ್ವಿತೀಯ ಹಾಗೂ ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್ ತಂಡವು ತೃತೀಯ ಸ್ಥಾನ ಪಡೆದವು.

ವಂಡರ್ ಲಾ, ಪೂರ್ವಿಕಾ ಮೊಬೈಲ್ಸ್, ವಿಬ್‌ಗಯಾರ್, ಸರ್.ಎಂ. ವಿಶ್ವೇಶ್ವರಯ್ಯ ಗ್ರೂಪ್–ದಾವಣಗೆರೆ, ಮಾರ್ಗದರ್ಶಿ ಚಿಟ್ ಫಂಡ್, ಎಚ್‌ಎಎಲ್, ಭೀಮಾ ಜ್ಯೂವೆಲರ್ಸ್ ಕಾರ್ಯಕ್ರಮಕ್ಕೆ ಸಹಕಾರ ನೀಡಿದವು. ಟಿವಿ ಸಹಯೋಗವನ್ನು ಏಷ್ಯಾನೆಟ್ ಸುವರ್ಣ ನ್ಯೂಸ್, ಜ್ಞಾನ ಸಹಯೋಗವನ್ನು ಕ್ಯೂರಿಯೊಸಿಟಿ ಸಲ್ಯೂಷನ್ಸ್ ಸಂಸ್ಥೆಗಳು ನೀಡಿದವು.

ಮೈಸೂರು, ಕಲಬುರ್ಗಿ, ಹುಬ್ಬಳ್ಳಿ, ಬಾಗಲಕೋಟೆ ಹಾಗೂ ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿ, ಫೈನಲ್‌ಗೆ ಆಯ್ಕೆಯಾಗಿದ್ದ ಆರು ತಂಡಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

7ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆದ ವಲಯವಾರು ಸ್ಪರ್ಧೆಯಲ್ಲಿ ನೂರಾರು ತಂಡಗಳು ಪಾಲ್ಗೊಂಡಿದ್ದವು. ಅದರಲ್ಲಿ ವಿಜೇತ ತಂಡಗಳು ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪಾಲ್ಗೊಂಡವು. ಫೈನಲ್‌ನಲ್ಲಿ ಸರಿಯಾದ ಉತ್ತರ ನೀಡಿದವರು ಆಕರ್ಷಕ ಟ್ರೋಫಿ, ಗಿಫ್ಟ್ ವೋಚರ್, ಪ್ರಶಸ್ತಿಪತ್ರವನ್ನು ತಮ್ಮದಾಗಿಸಿಕೊಂಡರು.

ಫೈನಲ್ಸ್‌ನಲ್ಲಿ ಪೈಲಟ್ ನಂಬರ್ ಒನ್ ಚಾಯ್ಸ್, ವಸುದೈವ ಕುಟುಂಬಕಂ, ದೃಶ್ಯ, ನಿಮ್ಮ ಆಯ್ಕೆ, ನಮ್ಮ ಪ್ರಶ್ನೆ ಹಾಗೂ ಫಟಾಫಟ್ ಎಂಬ ಐದು ಸುತ್ತುಗಳಿದ್ದವು. ಪ್ರತಿ ಸುತ್ತು ಸ್ಪರ್ಧಿಗಳ, ಪ್ರೇಕ್ಷಕ ವರ್ಗದ ಕುತೂಹಲ ಹೆಚ್ಚಿಸುವಂತೆ ಮಾಡಿತ್ತು.

ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಅವರು ಪ್ರಶ್ನೆಗಳ ಸುರಿಮಳೆ ಸುರಿಸುತ್ತಿದ್ದರೆ, ವಿದ್ಯಾರ್ಥಿಗಳು ಅಷ್ಟೇ ವೇಗವಾಗಿ ಉತ್ತರ ನೀಡುವ ಮೂಲಕ ಶಹಬ್ಬಾಸ್ ಗಿರಿ ಗಿಟ್ಟಿಸಿದರು. ಪರದೆ ಮೇಲೆ ಪ್ರಶ್ನೆ ಮೂಡುತ್ತಿದ್ದಂತೆ ಉತ್ತರ ನೀಡಲು ಹಾತೊರೆಯುತ್ತಿದ್ದ ವಿದ್ಯಾರ್ಥಿಗಳು ಬಜರ್‌ಗೆ ವಿರಾಮ ನೀಡದೆ ಜಾಣ್ಮೆ ಮೆರೆದರು.

ಒಮ್ಮೊಮ್ಮೆ ಸರಳ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಎಡವುತ್ತಿದ್ದರು. ಸರಿ ಉತ್ತರ ನೀಡುತ್ತಿದ್ದಂತೆ ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಚಪ್ಪಾಳೆ ತಟ್ಟಿ ಸ್ಪರ್ಧಿಗಳನ್ನು ಹುರಿದುಂಬಿಸಿದರು.

ಸ್ಪರ್ಧೆಯಲ್ಲಿ ಸ್ಥಳೀಯದಿಂದ ಜಾಗತಿಕ ಮಟ್ಟದವರೆಗಿನ ವಿಷಯಗಳ ಕುರಿತು ಪ್ರಶ್ನೆಗಳನ್ನು ಕೇಳಲಾಯಿತು. ಪ್ರೇಕ್ಷಕರ ವಿಭಾಗದ ಪ್ರಶ್ನೆಗಳಿಗೆ ಉತ್ತರಿಸಲು ಪೈಪೋಟಿ ಕಂಡು ಬಂತು. ಸರಿ ಉತ್ತರ ನೀಡಿದವರಿಗೆ ಆಕರ್ಷಕ ಬಹುಮಾನಗಳನ್ನು ವಂಡರ್ ಲಾ ಕಡೆಯಿಂದ ನೀಡಲಾಯಿತು.

'ನಿಮ್ಮ ಆಯ್ಕೆ ನಮ್ಮ ಪ್ರಶ್ನೆ' ಸುತ್ತು ಆಸಕ್ತಿದಾಯವಾಗಿತ್ತು. ಕ್ರೀಡಾ ಜಗತ್ತು, ಧಾರ್ಮಿಕ, ವಾಸ್ತುಶಿಲ್ಪ, ರಾಜಕೀಯ ಕುರಿತು ಪ್ರಶ್ನೆ ಕೇಳಲಾಯಿತು. ಜಾಣ್ಮೆ, ತಾಳ್ಮೆಯ ಉತ್ತರಗಳು ಬಂದವು. ಋಣಾತ್ಮಕ ಅಂಕಗಳ ಸುತ್ತಿನಲ್ಲಿ ತಪ್ಪು ಉತ್ತರ ನೀಡಿ ಅಂಕ ಕಳೆದುಕೊಂಡು ನಿರಾಸೆ ಅನುಭವಿಸಿದರು.

ಫಟಾಫಟ್ ಸುತ್ತಿನಲ್ಲಿ 'ಡಿಫಾಲ್ಟ್' ಸರಿ ಉತ್ತರಕ್ಕೆ 10 ಅಂಕ, ತಪ್ಪು ಉತ್ತರಕ್ಕೆ ಮೈನಸ್ 5, 'ಸ್ಟೆಪ್‌ಅಪ್' ತೆಗೆದುಕೊಂಡರೆ ಸರಿ ಉತ್ತರಕ್ಕೆ 15 ಅಂಕ, ತಪ್ಪು ಉತ್ತರಕ್ಕೆ ಮೈನಸ್ 7 ಅಂಕಗಳಿದ್ದವು. ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡಿದ್ದ ಆರ್ಮಿ ಪಬ್ಲಿಕ್ ಸ್ಕೂಲ್, ಕೊನೆಯ ಸುತ್ತಿನಲ್ಲೂ ಎರಡು ಪ್ರಶ್ನೆಗಳಿಗೆ ಸರಿ ಉತ್ತರ ನೀಡಿ ಅಂಕ ಹೆಚ್ಚಿಸಿಕೊಂಡು, ಗೆಲುವಿನ ನಗೆ ಬೀರಿತು.

ಪ್ರಥಮ ಸ್ಥಾನ ಪಡೆದ ತಂಡಕ್ಕೆ ಟ್ಯಾಬ್, ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ಮೊಬೈಲ್ ಫೋನ್ ಹಾಗೂ ತೃತೀಯ ಸ್ಥಾನ ಪಡೆದ ತಂಡಕ್ಕೆ ಗ್ಯಾಜೆಟ್ ನೀಡಲಾಯಿತು.

ಪ್ರಜಾವಾಣಿ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಟಿಪಿಎಂಎಲ್ ನ್ಯಾಷನಲ್ ಸೇಲ್ಸ್ ಹೆಡ್ ಆನಂದ್ ಬಿಲ್ಡಿಕರ್, ಪೈಲಟ್ ಪೆನ್ಸ್ ರೀಜನಲ್ ಬ್ಯುಸಿನೆಸ್ ಮ್ಯಾನೇಜರ್‌ಗಳಾದ ಆರ್.ಕುಮಾರ್, ಗಣೇಶ್ ಹೆಗಡೆ, ದಾವಣಗೆರೆಯ ಸರ್.ಎಂ.ವಿ. ಪಿಯು ಕಾಲೇಜಿನ ನಿರ್ದೇಶಕ ಜೆ.ಪದ್ಮನಾಭ, ವಂಡರ್ ಲಾ ಬ್ಯುಸಿನೆಸ್ ಡೆವಲಂಪ್‌ಮೆಂಟ್ ಮ್ಯಾನೇಜರ್ ಅವರು ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ನಡೆದ ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆ 2024ರಲ್ಲಿ ಬೆಂಗಳೂರಿನ ಆರ್ಮಿ ಪಬ್ಲಿಕ್ ಸ್ಕೂಲ್‌ನ ನಿಯತಿ ಜೋಇಸ್, ರಿದಂ ಶ್ರೀವಾಸ್ತವ್ ಅವರು (ಮಧ್ಯೆ) ಪ್ರಥಮ ಸ್ಥಾನ, ದಾವಣಗೆರೆಯ ಶ್ರೀ ತರಳಬಾಳು ಜಗದ್ಗುರು ಪ್ರೌಢ ಶಾಲೆಯ ಮಾನಸಿ ಷಾ, ಬೃಂದಾ ಸತ್ಯಪ್ರಿಯ (ಎಡದಿಂದ ಮೊದಲ ಜೋಡಿ) ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ಜೆ. ಚಿನ್ಮಯ್, ಎಸ್. ಚಿರಾಗ್ ಅವರು ಟ್ರೋಫಿಯೊಂದಿಗೆ ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ :ರಂಜು ಪಿ

ಪೈಪೋಟಿ ನೀಡಿದ ಸರ್ಕಾರಿ ಶಾಲೆ ಮಕ್ಕಳು

'ಪ್ರಜಾವಾಣಿ' ಕ್ವಿಜ್ ಚಾಂಪಿಯನ್‌ಶಿಪ್ ರಾಜ್ಯದಲ್ಲಿಯೇ ವಿಶೇಷವಾದದ್ದು. ಸರ್ಕಾರಿ ಶಾಲೆ ಮಕ್ಕಳು ಸಹ ಖಾಸಗಿ ಶಾಲೆಯ ಮಕ್ಕಳಿಗೆ ಪೈಪೋಟಿ ನೀಡಿದರು. ಎಲ್ಲಾ ವಿಷಯಗಳ ಕುರಿತು ಪ್ರಶ್ನೆಗಳನ್ನು ಕೇಳಲಾಯಿತು. ಕಠಿಣ ಮತ್ತು ಸುಲಭ ಪ್ರಶ್ನೆಗಳಿದ್ದವು. ವರ್ಷದಿಂದ ವರ್ಷಕ್ಕೆ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆ.

ಮೇಘವಿ ಮಂಜುನಾಥ್, ಕ್ವಿಜ್ ಮಾಸ್ಟರ್

ಫಲಿತಾಂಶದ ವಿವರ

ಶಾಲೆ	ವಿದ್ಯಾರ್ಥಿಗಳು	ವಲಯ	ಸ್ಥಾನ
ಆರ್ಮಿ ಪಬ್ಲಿಕ್ ಸ್ಕೂಲ್	ನಿಯತಿ ಜೊಇಸ್, ರಿದಂ ಶ್ರೀವಾಸ್ತವ್	ಬೆಂಗಳೂರು	ಪ್ರಥಮ
ತರಳಬಾಳು ಜಗದ್ಗುರು ಪ್ರೌಢಶಾಲೆ	ಮಾನಸಿ ಷಾ, ಬೃಂದಾ ಸತ್ಯಪ್ರಿಯ	ದಾವಣಗೆರೆ	ದ್ವಿತೀಯ
ಎಕ್ಸೆಲ್ ಪಬ್ಲಿಕ್ ಸ್ಕೂಲ್	ಜೆ.ಚಿನ್ಮಯ್, ಎಸ್.ಚಿರಾಗ್	ಮೈಸೂರು	ತೃತೀಯ
ಎಸ್‌ಬಿಆರ್ ಪಬ್ಲಿಕ್ ಸ್ಕೂಲ್	ಬಸವಪ್ರಸಾದ್, ಸಾಯಿಸಮರ್ಥ	ಕಲಬುರ್ಗಿ	ನಾಲ್ಕನೇ ಸ್ಥಾನ
ಆದರ್ಶ ವಿದ್ಯಾಲಯ	ಸಮರ್ಥ್ ಪತ್ತಾರ, ಪ್ರಣವ್ ಕೊಲ್ಕರ್	ಹುಬ್ಬಳ್ಳಿ	ಐದನೇ ಸ್ಥಾನ
ಆದರ್ಶ (ಆರ್‌ಎಂಎಸ್‌ಎ) ವಿದ್ಯಾಲಯ	ಸಮರ್ಥ್ ನಾಲ್ವಡೆ, ರಹತಲಿ ಡಾಂಗೆ	ಬಾಗಲಕೋಟೆ	ಆರನೇ ಸ್ಥಾನ

ವಿಜೇತರ ಅಭಿಪ್ರಾಯಗಳು

ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಿದೆವು..

'ಪ್ರಜಾವಾಣಿ' ಪತ್ರಿಕೆಯಲ್ಲಿನ ಜಾಹೀರಾತು ನೋಡಿ ರಸಪ್ರಶ್ನೆಯಲ್ಲಿ ಪಾಲ್ಗೊಂಡೆವು. ನಿಜಕ್ಕೂ ಖುಷಿ ನೀಡಿತು. ವಲಯ ಮಟ್ಟದ ಸ್ಪರ್ಧೆಯಲ್ಲಿ ಪ್ರಶ್ನಾವಳಿಗಳು ಉತ್ತಮವಾಗಿದ್ದವು. ಪ್ರಾಥಮಿಕ ಹಂತದಲ್ಲಿ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಿದೆವು. ಕ್ವಿಜ್ ಮಾಸ್ಟರ್ ಆಕರ್ಷಕವಾಗಿ ಸ್ಪರ್ಧೆ ನಡೆಸಿಕೊಟ್ಟರು.

ನಿಯತಿ ಜೋಇಸ್, ರಿದಂ ಶ್ರೀವಾಸ್ತವ್, ಪ್ರಥಮ ಸ್ಥಾನ ಪಡೆದವರು

ಜ್ಞಾನಾರ್ಜನೆಗೆ ಸಹಕಾರಿ

ವಿದ್ಯಾರ್ಥಿಗಳಿಗೆ ಜ್ಞಾನ ಬೆಳೆಸಿಕೊಳ್ಳಲು ಈ ರಸಪ್ರಶ್ನೆ ಸುವರ್ಣಾವಕಾಶ. ಪ್ರತಿಯೊಂದು ಪ್ರಶ್ನೆಗೆ ಯೋಚಿಸಿ, ತಾಳ್ಮೆಯಿಂದ ಉತ್ತರಿಸಿದೆವು. ನಮ್ಮ ಪ್ರತಿಭೆ ಪ್ರದರ್ಶನಕ್ಕೆ ಒಳ್ಳೆಯ ವೇದಿಕೆ ದೊರಕಿತು. ಕೆಲವು ಪ್ರಶ್ನೆಗಳು ಕಠಿಣವಾಗಿತ್ತು. ನಿತ್ಯ ದಿನಪತ್ರಿಕೆಗಳನ್ನು ಓದುತ್ತಿದ್ದೆವು.

ಮಾನಸಿ ಷಾ, ಬೃಂದಾ ಸತ್ಯಪ್ರಿಯ, ದ್ವಿತೀಯ ಸ್ಥಾನ ಪಡೆದವರು

ಮತ್ತಷ್ಟು ಪ್ರಯತ್ನಿಸಬೇಕಿತ್ತು...

ಕಳೆದ ವರ್ಷ ನಮ್ಮ ಶಾಲೆ ಚಾಂಪಿಯನ್ ಆಗಿತ್ತು. ಈ ವರ್ಷ ಪ್ರಥಮ ಸ್ಥಾನ ಪಡೆಯುವ ಅವಕಾಶ ಇತ್ತು. ಸ್ವಲ್ಪದರಲ್ಲಿಯೇ ದ್ವಿತೀಯ ಸ್ಥಾನ ತಪ್ಪಿತ್ತು. ತೃತೀಯ ಸ್ಥಾನ ಪಡೆದಿರುವುದು ಖುಷಿ ನೀಡಿದೆ. ಮತ್ತಷ್ಟು ಪ್ರಯತ್ನ ಹಾಕಬೇಕಿತ್ತು. ಕಠಿಣ ಪ್ರಶ್ನೆಗಳಿದ್ದವು.

ಜೆ. ಚಿನ್ಮಯ್, ಎಸ್. ಚಿರಾಗ್, ತೃತೀಯ ಸ್ಥಾನ ಪಡೆದವರು

ವಿಜೇತರಿಗೆ ಉಚಿತ ಪ್ರವೇಶ: ಸರ್‌ಎಂವಿ ಪಿಯು ಕಾಲೇಜು

ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯಮಟ್ಟದಲ್ಲಿ ವಿಜೇತರಾದವರಿಗೆ ಪ್ರಥಮ ಪಿಯುಗೆ ಉಚಿತವಾಗಿ ಪ್ರವೇಶ ನೀಡಲಾಗುವುದು ಎಂದು ದಾವಣಗೆರೆ ಸರ್ ಎಂ.ವಿ. ಪಿಯು ಕಾಲೇಜಿನ ನಿರ್ದೇಶಕ ಜೆ. ಪದ್ಮನಾಭ ಘೋಷಿಸಿದರು.

ಅಲ್ಲದೇ ವಲಯಮಟ್ಟದಲ್ಲಿ ಚಾಂಪಿಯನ್‌ಗಳಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಆರು ತಂಡಗಳ ಸದಸ್ಯರಿಗೆ ತಲಾ ₹ 1 ಲಕ್ಷ ಸ್ಕಾಲರ್‌ಶಿಪ್ ನೀಡಲಾಗುವುದು ಎಂದು ತಿಳಿಸಿದರು.

ಆಯುರ್ವೇದ ಕಾಲೇಜುಗಳ ಅರ್ಜಿ ಆಕ್ಷೇಪಣೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ, 'ರಾಜ್ಯ ಖಾಸಗಿ ಆಯುರ್ವೇದ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳ ಸಂಘಗಳ ಒಕ್ಕೂಟ' ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಯಾದ ಕೇಂದ್ರ ಸರ್ಕಾರದ ರಾಷ್ಟ್ರೀಯ ವೈದ್ಯಕೀಯ ಪದ್ಧತಿ ಆಯುಕ್ತರ ಪರ ವಕೀಲರು ಹೈಕೋರ್ಟ್‌ಗೆ ಆಕ್ಷೇಪಣೆ ಸಲ್ಲಿಸಿದರು.

ಈ ಸಂಬಂಧ, ಒಕ್ಕೂಟದ ಅಧ್ಯಕ್ಷ ಅಶೋಕ್ ಕುಮಾರ್ ಬಾಗ್ಮಾರ್ ಸೇರಿದಂತೆ ಒಟ್ಟು ಐದು ಆಯುರ್ವೇದ ಕಾಲೇಜುಗಳ ವತಿಯಿಂದ ಸಲ್ಲಿಸಲಾಗಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆಯುಷ್ ಪರ ವಕೀಲರಾದ ಎಂ.ಎನ್.ಕುಮಾರ್, 'ಅರ್ಜಿಗೆ ಸಂಬಂಧಿಸಿದಂತೆ ಆಯುಷ್ ಸಚಿವಾಲಯದ ಪರವಾಗಿ ಸಲ್ಲಿಸಬೇಕಾಗಿರುವ ಆಕ್ಷೇಪಣೆಯ ಕರಡು ಸಿದ್ಧಗೊಂಡಿದೆ. ಸಂಬಂಧಿಸಿದ ಅಧಿಕಾರಿಯ ಅನುಮೋದನೆಗಾಗಿ ಕಾಯಲಾಗುತ್ತಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು 2025ರ ಜನವರಿ 3ಕ್ಕೆ ಮುಂದೂಡಿತು.

'ಆಕ್ಷೇಪಣೆ ಸಲ್ಲಿಸದಿದ್ದರೆ ದಂಡ ವಿಧಿಸಲಾಗುವುದು ಎಂಬ ಎಚ್ಚರಿಕೆಯ ಆದೇಶ ವಾಪಸು ಪಡೆಯಬೇಕು' ಎಂದು ಭಾರತೀಯ ವೈದ್ಯ ಪದ್ಧತಿ ಆಯೋಗದ ಪರ ವಕೀಲರು ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, ಆಯೋಗಕ್ಕೆ ಸೀಮಿತವಾಗಿ ಇದೇ ವೇಳೆ ಹಿಂಪಡೆಯಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಹಾಜರಿದ್ದರು.

'ತಳಸಮುದಾಯದ ಹೆಣ್ಣು ಮಕ್ಕಳಿಂದ ಲಿಂಗಾಯತ ಧರ್ಮ ಸ್ಥಾಪನೆ'

ಹೊಸದುರ್ಗ (ಚಿತ್ರದುರ್ಗ): 'ಲಿಂಗಾಯತ ಧರ್ಮ ಸ್ಥಾಪಿಸಿದವರು ತಳಸಮುದಾಯಗಳ ಹೆಣ್ಣು ಮಕ್ಕಳೇ ಹೊರತು ವೈದಿಕ ಪರಂಪರೆ ಜನರಲ್ಲ. ಲಿಂಗಾಯತರು ವೈದಿಕತೆಯ ಆಚರಣೆ ಮಾಡುವ ಅಗತ್ಯವಿಲ್ಲ' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಇಲ್ಲಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ತಾಲ್ಲೂಕು ಘಟಕದ ಉದ್ಘಾಟನೆ ಹಾಗೂ ಸೇವಾದೀಕ್ಷಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ಈ ಮಾತು ಹೇಳಿದರೆ ಜನ ನಮ್ಮ ಮೇಲೆ ಮುಗಿಬೀಳುತ್ತಾರೆ. ಹಾಗಂತ ಸತ್ಯ ಹೇಳಲು ಹಿಂಜರಿಯುವುದಿಲ್ಲ. ಸತ್ಯ ಯಾವತ್ತಿದ್ದರೂ ಸತ್ಯವೇ' ಎಂದರು.

'ಲಿಂಗಧಾರಿಗಳೆಲ್ಲಾ ಲಿಂಗಾಯತರೇ ಹೊರತು ವೀರಶೈವರಲ್ಲ. ಲಿಂಗಾಯತ ಧರ್ಮ ನೀಡಿದವರು ಬಸವಣ್ಣ' ಎಂದು ಮೈಸೂರಿನ ಬಸವ ಜ್ಞಾನ ಮಂದಿರದ ಬಸವಾಂಜಲಿ ಮಾತಾಜಿ ಹೇಳಿದರು.

ಮರಗಳೊಂದಿಗೆ ಅಮರವಾದರು...

• ರಶ್ಮಿ ಎಸ್.

ನುಡಿ ನಮನ

'ಮಕ್ಕಳನ್ನ ಹೆತ್ತು ಬೆಳಸ್ತೀವಿ. ನಮಗಷ್ಟೆ ಆಗ್ತಾರೆ. ಸಸಿ ನೆಟ್ಟು ಮರ ಬೆಳಸ್ರಿ. ಏಳೇಳು ತಲೆಮಾರುಗಳಿಗೂ ಹಣ್ಣು, ಹಂಪಲು, ನೆರಳು ನೀಡುತ್ವೆ, ಅಲ್ಲಾ...' ಪ್ರಶ್ನಿಸಿ ಸುಮ್ಮನಾಗಿದ್ದರು ತುಳಸೀಗೌಡ.

ಪದ್ಮ ಪ್ರಶಸ್ತಿ ಪಡೆದ ನಂತರ ಹೊನ್ನಾಳಿಯ ತಮ್ಮ ಮನೆಯಲ್ಲಿ 'ಪ್ರಜಾವಾಣಿ' ಜೊತೆಗೆ ಮಾತನಾಡಿದ್ದ ತುಳಸಜ್ಜಿ ಈಗ ಅಮರರಾದಾಗ ಅವರ ಆ ಮಾತುಗಳು ಮತ್ತೆ ಮತ್ತೆ ಕಾಡುತ್ತಿವೆ.

ಕರಿಮಣಿಗಳ ಹಾರದಿಂದ ತುಂಬಿದ ಕೊರಳಿನಿಂದ ಕಂಗೊಳಿಸುತ್ತಾ, ಹಾಲಕ್ಕಿ ಸಂಪ್ರದಾಯದಂತೆ ಸೀರೆಯುಟ್ಟು ಈ ಅಜ್ಜಿ ಬರಿಗಾಲಿನಲ್ಲಿ ನಡೆದು ಬರುತ್ತಿದ್ದರೆ ಹಾಲಕ್ಕಿ ಸಂಸ್ಕೃತಿಯೇ ನಡೆದುಬಂದಂತೆ ಭಾಸವಾಗುತ್ತಿತ್ತು. ರಾಶಿ ಗಿಡ ನೆಟ್ಟ ಈ ಸಾಧಕಿಗೆ ಒಂದಿನಿತೂ ಹಮ್ಮು–ಬಿಮ್ಮು ಇರಲಿಲ್ಲ. ಮುಂದೆ ಈಕೆ ವೃಕ್ಷಮಾತೆ ಆಗುತ್ತಾಳೆ ಎಂಬ ಮುಂಗಾಣ್ಕೆಯನ್ನು ಕಂಡೋ ಏನೋ ಅವರ ತಂದೆ–ತಾಯಿ ಅವರಿಗೆ ತುಳಸಿ ಎಂಬ ಹೆಸರಿಟ್ಟಿರಬೇಕು!

ಬಡತನದ ಬೇಗೆಯಲ್ಲೇ ಬೆಳೆದ ತುಳಸಿಯವರಿಗೆ ಸಿಕ್ಕಿದ್ದು ಕೂಲಿ ಮಾಡುತ್ತಲೇ ಪಡೆದ ಅನುಭವದ ವಿದ್ಯೆ ಮತ್ತು ಅಪಾರ ಪರಿಸರಪ್ರೀತಿ. 'ನಾನ್ಯಾವತ್ತೂ ಸಸಿಗಳ ಲೆಕ್ಕ ಇಡಲಿಲ್ಲ. ಬೀಜ ಮಣ್ಣಲ್ಲಿ ಬಿತ್ತಿದಾಗ ಅದು ಮೊಳಕೆಯೊಡೆದು ಮಣ್ಣಿಂದ ಹೊರಬರುವುದನ್ನು ನೋಡಿ ಆನಂದಿಸುತ್ತಿದ್ದೆ. ಸೃಷ್ಟಿಯ ಸೋಜಿಗ ನೋಡಿ, ಸಣ್ಣದೊಂದು ಕಾಳಲ್ಲಿ, ದೊಡ್ಡದೊಂದು ಮರ ಬೆಳೆಯುವುದು. ಅದರ ಸಂಘರ್ಷಗಳೇನು ಕಡಿಮೆಯೇ. ಬಿಸಿಲು, ಮಳೆಗೆ ಮೈದೆರೆದುಕೊಂಡು ಬಾನೆತ್ತರಕ್ಕೆ ಬೆಳೆದು, ಎಲ್ಲರಿಗೂ ಫಲ, ನೆರಳು ನೀಡ್ತಾವಲ್ಲ, ನಾವು ಮನುಷ್ಯರು ಏನು ಮಾಡ್ತೀವಿ ಅನ್ನೂದೆ ಯೋಚನೆ ಆಗ್ತಿತ್ತು' ಎನ್ನುತ್ತಿದ್ದರು ಈ ಅಜ್ಜಿ.

ಕಾಡಿನಲ್ಲಿ ಉದುರಿಬಿದ್ದ ಕಟ್ಟಿಗೆಗಳನ್ನು ಒಟ್ಟು ರಾಶಿ ಮಾಡುವಾಗ ಅಲ್ಲಿ ಸಿಗುತ್ತಿದ್ದ ನಾನಾ ನಮೂನಿಯ ಗಿಡಗಳ ಬೀಜಗಳನ್ನೂ ಆಯ್ದು ಸೆರಗಿನಲ್ಲಿ ಕಟ್ಟಿಕೊಂಡು ಬರುತ್ತಿದ್ದರಂತೆ ತುಳಸಿ ಅಜ್ಜಿ. ಅವುಗಳನ್ನು ಬೆಳೆಸಿ, ಅರಣ್ಯ ಇಲಾಖೆಗೆ ಕೊಡುತ್ತಿದ್ದ ಅವರು, ಮುಂದೆ ಅದೇ ಇಲಾಖೆಯಲ್ಲಿ ಕೂಲಿ ಕೆಲಸ ಮಾಡಿದರು.

ಮನೆ, ಮಕ್ಕಳಿಗಿಂತ ಮರಗಳೇ ಅವರಿಗೆ ಹೆಚ್ಚು ಆಪ್ತವಾದವು. ಸಸಿ ನೆಟ್ಟು ಅವುಗಳ ಜೊತಿಗೆ ಮಾತಿಗಿಳಿಯುತ್ತಿದ್ದರು. 'ಮನುಷ್ಯರ ಜೊತೆ ಮಾತಾಡಿದರೆ ಜಗಳಗಳಾಗುತ್ತಿದ್ದವು. ಸಸಿ ಜೊತೆಗೆ ಇದ್ಯಾವುದೂ ಆಗೂದಿಲ್ಲ. ಅದಕ್ಕೇ ಪ್ರತಿದಿನ ಸಸಿ ಮಾಡೋದು, ಸಸಿ ನೆಡೋದು ನನಗಿಷ್ಟ ಆಗುತ್ತಿತ್ತು' ಎನ್ನುತ್ತಿದ್ದರು ಅಜ್ಜಿ.

'ಹಬ್ಬ, ಹರಿದಿನಗಳನ್ನೆಲ್ಲ ನಮ್ಮತ್ತೆ ನೋಡ್ಕೊತಿದ್ರು. ಅವರೇ ಅಡುಗೆ ಮಾಡೋರು. ನನ್ನ ಮಕ್ಕಳನ್ನ ಬೆಳೆಸಿದ್ರು. ನಾನು ಸಸಿಗಳನ್ನೇ ಮಕ್ಕಳಂತೆ ಬೆಳೆಸಿದೆ. ಲಕ್ಷ ಸಸಿ ಅಂತ ಲೆಕ್ಕ ಹಾಕಿ ಪ್ರಶಸ್ತಿ ಕೊಟ್ರು. ಹಕ್ಕಿಗಳೆಲ್ಲ ಪ್ರತಿವರ್ಷ ಸಾವಿರ ಸಾವಿರ ಸಸಿ ಬೆಳೆಯುವಂತೆ ಬೀಜ ಹರಡ್ತವೆ ಅವುಕ್ಕೇನು ಪ್ರಶಸ್ತಿ ಕೊಡ್ತೀವಿ' ಎಂದು ಪ್ರಶ್ನಿಸಿದ್ದ ವೃಕ್ಷಮಾತೆ ಆಕೆ. ಕಾಡಿನ ಅಪಾರ ಜ್ಞಾನ ಅವರಿಗೆ ಸಿದ್ಧಿಸಿತ್ತು. ಯಾವ ಗಿಡದ ಬೀಜವನ್ನು ಹೇಗೆ ಸಂಗ್ರಹಿಸಬೇಕು, ಬೀಜೋಪಚಾರ ಹೇಗೆ ಮಾಡಬೇಕು ಎಂಬುದರ ಅರಿವು ಅವರಿತ್ತು.

'ಪದ್ಮ ಪ್ರಶಸ್ತಿ ಬಂದಾಗ ಇಮಾನದಾಗೆ (ವಿಮಾನ) ಹೋದೆ. ಬರೀ ಮೋಡ ಕಾಣಸ್ತಿತ್ತು, ಹತ್ತಿ ಹಿಂಜಿದಂಗೆ. ನಮ್ಮ ಕಾಡು ದಾರಿಯ ನೆನಪು ಕಾಡಿತು. ಅದೆಷ್ಟು ಸಸಿ, ಮರ, ಹಚ್ಚಹಸಿರು, ಎಳೆ ಹಸಿರು, ಬಣ್ ಬಣ್ಣದ ಹೂವ.. ನಾವು ಭೂಮಿಮ್ಯಾಲಿದ್ದಂಗೆ! ಎಲ್ಲ ಒಟ್ಗೆ ಇದ್ದಂಗೆ ಅವೂ ಕಾಣ್ತವೆ. ಆದರೆ ಅವು ಮಾತ್ರ ನಾನು, ತಾನು ಅನ್ನದೆ ಎಲ್ಲರಿಗೂ ಉಪಕಾರನೇ ಮಾಡ್ತವೆ. ನಾವೂನು ಹಂಗಾಗಬೇಕು ಮಗ.. ಹಂಗಾಗಿ ನೀವೂನು...' ಅನ್ನುತ್ತ ಸಸಿಗಳಿಗೆ ನೀರೆರೆಯಲು ಹೊರಡುತ್ತಿದ್ದ ತುಳಸಿ ಅಜ್ಜಿ ಇನ್ನಿಲ್ಲ.

ಈಗ ಮರಗಳ ಸುಳಿಗಾಳಿಯೊಂದಿಗೆ ತುಳಸಿಗೌಡ ಅವರ ಉಸಿರು ಸಂವಾದಿಯಾಗಿದೆ. ಅವರು ಮೌನವಾಗಿದ್ದಾರೆ. ❖

ರಟ್ಟೆ ಗಟ್ಟಿಯಾಗಬೇಕು...

'ಊಟದಲ್ಲೇನಿಷ್ಟ?' ಅಜ್ಜಿಯ ಮುಂದೆ ಈ ಪ್ರಶ್ನೆ ಇಟ್ಟಾಗ ಅವರ ಕೊಟ್ಟ ಉತ್ತರ ಏನಾಗಿತ್ತು ಗೊತ್ತೆ?

ಇಷ್ಟ, ಕಷ್ಟ ಅಂತನ್ನಬಾರದು ಮಗ.. ರಟ್ಟೆಗೆ ಕಸುವು ಕೊಡುವುದೇನಾದರೂ ಉಣ್ಣಬೇಕು. ಬೀಜವೊಂದು ಅನ್ನವಾಗೂದು, ಜೀವವೊಂದು (ಮೀನು, ಕೋಳಿ) ಆಹಾರ ಆಗೂದು ಸುಮ್ನಲ್ಲ. ಹೊಟ್ಟೆ ತುಂಬಬೇಕು. ರಟ್ಟೆ ಗಟ್ಟಿಯಾಗಬೇಕು. ಅಂಥದ್ದೇನಾದರೂ ಅದೀತು.

ಜೀವಕ್ಕೆ ಬೇಕಿರುವಷ್ಟು ಉಣ್ಣಬೇಕು. ಜೀವನಕ್ಕೆ ಬೇಕಿರುವಷ್ಟು ಗಳಿಸಬೇಕು. ಯಾವುದು ಹೆಚ್ಚಾದರೂ ಮನಷಂಗೆ ಸೊಕ್ಕು ಬರ್ತದ. ನಾನು ಮೀನೂ ಉಣ್ತೇನಿ, ಗಂಜಿನೂ ಉಣ್ತೇನಿ. ಏನಿದ್ರೂ ಉಣ್ತೇನಿ. ಋಣ ತೀರಿದರೆ ಊಟ ಎಲ್ಲಿ? ನೀರೆಲ್ಲಿ?

ತುಳಸಿಗೌಡ ಅವರ ಬದುಕಿನ ಸೂತ್ರ ಇದಾಗಿತ್ತು. ಸಮಾಧಾನದ ಮಂತ್ರವೂ ಇದೇ ಆಗಿತ್ತು.

ಫೆ.4ರಂದು 'ಬ್ರಿಗೇಡ್' ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕ್ರಾಂತಿಕಾರಿ ಬಸವಣ್ಣನವರ ಜನ್ಮಸ್ಥಳ ಬಸವನಬಾಗೇವಾಡಿಯಲ್ಲಿ 1008 ಸಾಧುಸಂತರ ಪಾದಪೂಜೆಯೊಂದಿಗೆ ಮುಂಬರುವ ಫೆಬ್ರುವರಿ 4ರಂದು 'ಕ್ರಾಂತಿವೀರ ಬ್ರಿಗೇಡ್' ಉದ್ಘಾಟಿಸಲಾಗುವುದು' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

'ಮಖಣಾಪುರದ ಸೋಮೇಶ್ವರ ಸ್ವಾಮೀಜಿ ಅವರು ಬ್ರಿಗೇಡ್ ನೇತೃತ್ವ ವಹಿಸುವರು. ಹಿಂದೂ ಧರ್ಮದ ರಕ್ಷಣೆಗಾಗಿ ಅಸ್ತಿತ್ವಕ್ಕೆ ಬರುವ ಈ ಬ್ರಿಗೇಡ್‌ನಲ್ಲಿ ನಾನೂ ಮಾರ್ಗದರ್ಶಕ ಮಂಡಳಿಯಲ್ಲಿರುವೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬ್ರಿಗೇಡ್‌ಗೆ ಒಂದು ಸಮಿತಿ ಇನ್ನೂ ರಚಿಸಬೇಕಿದೆ. ರಾಜ್ಯದೆಲ್ಲೆಡೆ ಸಾವಿರಾರು ಸಣ್ಣ ಮಠಗಳಿದ್ದು, ಅವುಗಳಿಗೆ ಸಮರ್ಪಕ ಆದಾಯವಿಲ್ಲ. ಇಂಥ ಮಠಗಳಿಗೆ ಅನುದಾನ ಒದಗಿಸುವ ಕೆಲಸವನ್ನು ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರಂಭಿಸಲಾಗಿತ್ತು. ಅದು ಈಗ ನಿಂತಿದೆ. ಈ ಮಠಗಳಿಗೆ ನ್ಯಾಯ ದೊರಕಿಸುವ ಕೆಲಸವನ್ನು ಕ್ರಾಂತಿವೀರ ಬ್ರಿಗೇಡ್ ಮಾಡಲಿದೆ' ಎಂದರು.

ಮಖಣಾಪುರ ಸೋಮೇಶ್ವರ ಸ್ವಾಮೀಜಿ ಮಾತನಾಡಿ, 'ವಿವಿಧ ಮಠಗಳ ಸ್ವಾಮೀಜಿಗಳೆಲ್ಲ ಸೇರಿ ಕ್ರಾಂತಿವೀರ ಬ್ರಿಗೇಡ್ ಎಂದು ನಾಮಕರಣ ಮಾಡಿದ್ದೇವೆ. 25 ಮಠಾಧೀಶರ ಒಕ್ಕೂಟ ಮಾಡಿಕೊಂಡು ವಕ್ಫ್ ವಿರುದ್ಧ ಹೋರಾಟ ಆರಂಭಿಸುತ್ತೇವೆ. ನ್ಯಾಯ ಒದಗಿಸುವಂತೆ ಯಾವುದೇ ರಾಜಕೀಯ ಪಕ್ಷದ ಮೊರೆ ಹೋಗುವುದಿಲ್ಲ' ಎಂದರು.

ಡ್ರೋನ್ ಪ್ರತಾಪ್‌ಗೆ ನ್ಯಾಯಾಂಗ ಬಂಧನ

ಮಧುಗಿರಿ: ಡ್ರೋನ್ ಪ್ರತಾಪ್‌ಗೆ ಡಿಸೆಂಬರ್ 26ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಮಧುಗಿರಿ ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರ ಆದೇಶ ಹೊರಡಿಸಿದೆ.

ಮಿಡಿಗೇಶಿ ಪೊಲೀಸರು ಡ್ರೋನ್ ಪ್ರತಾಪ್ ಅವರನ್ನು ಸೋಮವಾರ ಮಧುಗಿರಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಾದ ಆಲಿಸಿದ ನ್ಯಾಯಾಧೀಶರು, ಡಿ.26ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದ್ದಾರೆ. ಮಧುಗಿರಿ ತಾಲ್ಲೂಕು ಉಪ ಕಾರಾಗೃಹಕ್ಕೆ ಅವರನ್ನು ಪೊಲೀಸರು ಕರೆದೊಯ್ದರು.

ಏನಿದು ಪ್ರಕರಣ: ತಾಲ್ಲೂಕಿನ ಐ.ಡಿ.ಹಳ್ಳಿ ಹೋಬಳಿ ಜನಕಲೋಟಿ ಗ್ರಾಮದ ರಾಯರ ಬೃಂದಾವನ ಫಾರ್ಮ್‌ನಲ್ಲಿ ಡ್ರೋನ್ ಪ್ರತಾಪ್ ಕೆಲವು ದಿನಗಳ ಹಿಂದೆ ಕೃಷಿ ಹೊಂಡದಲ್ಲಿ ಸೋಡಿಯಂ ಬಳಸಿ ಸ್ಫೋಟ ನಡೆಸಿದ್ದರು. ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಈ ವಿಚಾರವಾಗಿ ಮಿಡಿಗೇಶಿ ಠಾಣೆ ಪೊಲೀಸರು ಅವರನ್ನು ಬಂಧಿಸಿದ್ದರು.

ಸಚಿವ ಮಹದೇವಪ್ಪ ಭರವಸೆ: ಸುವರ್ಣ ಸೌಧ ಮುತ್ತಿಗೆ ಕೈಬಿಟ್ಟ ಪ್ರತಿಭಟನಕಾರರು

ಮೂರೇ ತಿಂಗಳಲ್ಲಿ ಒಳ ಮೀಸಲಾತಿ ಜಾರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಇಲ್ಲಿನ ಸುವರ್ಣ ಸೌಧ ಮುತ್ತಿಗೆ ಹಾಕಲು ಉದ್ದೇಶಿಸಿದ್ದ ಮಾದಿಗ ಹಾಗೂ ಉಪಜಾತಿ ಸಂಘಟನೆಗಳ ಒಕ್ಕೂಟದ ಸದಸ್ಯರು, ರಾಜ್ಯ ಸರ್ಕಾರದ ಭರವಸೆ ಹಿನ್ನೆಲೆಯಲ್ಲಿ ಹೋರಾಟ ಕೈಬಿಟ್ಟರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಂಡ ಮಾದಿಗ ಹಾಗೂ ಉಪಜಾತಿ ಸಂಘಟನೆಗಳ ಒಕ್ಕೂಟದ ಪ್ರಮುಖರು, 'ಚಳಿಗಾಲದ ಅಧಿವೇಶನದಲ್ಲಿ ಒಳಮೀಸಲಾತಿ ಅನುಷ್ಠಾನ ಮಾಡಲೇಬೇಕು' ಎಂದು ಪಟ್ಟು ಹಿಡಿದರು.

ಸ್ಥಳಕ್ಕೆ ಬಂದ ಸಚಿವ ಮಹದೇವಪ್ಪ, 'ಮೂರೇ ತಿಂಗಳಲ್ಲಿ ಒಳಮೀಸಲಾತಿ ಜಾರಿಗೊಳಿಸುತ್ತೇವೆ. ಇದಕ್ಕೆ ಸರ್ಕಾರ ಬದ್ಧವಿದೆ. ಸುಪ್ರೀಂಕೋರ್ಟ್ ಕೂಡ ನಿರ್ದೇಶಿಸಿದೆ. ಅದರಂತೆ ಅಗತ್ಯ ದತ್ತಾಂಶ ಸಂಗ್ರಹಿಸಿ ಅನುಷ್ಠಾನ ಮಾಡಬೇಕು. ಇಲ್ಲದಿದ್ದರೆ ಯಾರಾದರೂ ನ್ಯಾಯಾಲಯಕ್ಕೆ ಹೋದರೆ ಮತ್ತೆ ಸಮಸ್ಯೆಯಾಗುತ್ತದೆ. ಅದಕ್ಕಾಗಿ ಮೂರು ತಿಂಗಳ ಕಾಲಾವಕಾಶ ಬೇಕು' ಎಂದರು. ಇದಕ್ಕೆ ಸಚಿವರಾದ ಆರ್. ಬಿ.ತಿಮ್ಮಾಪೂರ, ಸತೀಶ ಜಾರಕಿಹೊಳಿ, ಕೆ.ಎಚ್.ಮುನಿಯಪ್ಪ ಕೂಡ ಇದಕ್ಕೆ ಧ್ವನಿ ಗೂಡಿಸಿದರು.

ಒಳಮೀಸಲಾತಿಗೆ ಆಗ್ರಹಿಸಿ ಬೆಳಗಾವಿಯಲ್ಲಿ ಸೋಮವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಪಟ್ಟು ಹಿಡಿದ ಜನರನ್ನು ಸಚಿವರಾದ ಎಚ್‌.ಸಿ.ಮಹದೇವಪ್ಪ ಹಾಗೂ ಕೆ.ಎಚ್.ಮುನಿಯಪ್ಪ ಸಮಾಧಾನ ಮಾಡಿದರು ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಇದಕ್ಕೂ ಮುನ್ನ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ, ಸಿ.ಟಿ. ರವಿ ಮುಂತಾದವರು ಮಾತನಾಡಿ, 'ಒಳಮೀಸಲಾತಿಯನ್ನು ಈ ಹಿಂದಿನ ಬಿಜೆಪಿ ಸರ್ಕಾರವೇ ಘೋಷಿಸಿದೆ. ಕಾಂಗ್ರೆಸ್ ಸರ್ಕಾರ ವಿರೋಧಿಸುವುದನ್ನು ಬಿಟ್ಟು ಇದೇ ಅಧಿವೇಶನದಲ್ಲಿ ಘೋಷಿಸಬೇಕು' ಎಂ ದರು.

'ನಮ್ಮ ಸಮಾಜ ಮೂರು ದಶಕಗಳಿಂದ ಶಾಂತಿಯುತ ಹೋರಾಟ ನಡೆಸುತ್ತಿದೆ. ನಮ್ಮ ಹಕ್ಕು ನಮಗೆ ಕೊಡುವಲ್ಲಿ ಈವರೆಗಿನ ಎಲ್ಲ ಸರ್ಕಾರಗಳೂ ನಿರ್ಲಕ್ಷ್ಯ ಮಾಡಿವೆ. ಇನ್ನು ಮೂರು ತಿಂಗಳಲ್ಲಿ ನುಡಿದಂತೆ ನಡೆಯದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಎಚ್ಚರಿಕೆ ನೀಡಿದರು. ವಿವಿಧ ಮಠಾಧೀಶರು, ಶಾಸಕರು, ಮುಖಂಡರ ನೇತೃತ್ವದಲ್ಲಿ ಮಾದಿಗ, ಸಮಗಾರ, ಮಚಗಾರ, ಡೋಹರ ಡಕ್ಕಲಿಗ ಜಾತಿ ಉಪಜಾತಿಗಳ ಜನರೂ ಪಾಲ್ಗೊಂಡರು.

'ಪ್ರಾಣ ಬಿಡುವೆ, ಮೀಸಲಾತಿ ಬಿಡಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪ್ರಾಣ ಬೇಕಾದರೂ ಚೆಲ್ಲುವೆ. ಮೀಸಲಾತಿ ಹೋರಾಟ ನಿಲ್ಲಿಸಲ್ಲ' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಘೋಷಿಸಿದರು.

ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟಿಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಇಡೀ ದಿನ ಧರಣಿ ನಡೆಸಿದ ಅವರು, 'ಪಂಚಮಸಾಲಿ ವಿರೋಧಿ ಧೋರಣೆ ತಾಳಿದ ಸಿಎಂ ಸಿದ್ದರಾಮಯ್ಯ ತಪ್ಪು ತಿದ್ದಿಕೊಳ್ಳಬೇಕು. ಲಾಠಿ ಚಾರ್ಜ್ ಮಾಡಿಸಿದ್ದಕ್ಕೆ ಬಹಿರಂಗ ಕ್ಷಮೆ ಕೇಳಬೇಕು. ನ್ಯಾಯಸಮ್ಮತವಾಗಿ ಮೀಸಲಾತಿ ನೀಡಲೇಬೇಕು' ಎಂದರು.

'ಎಲ್ಲ ಪಕ್ಷಗಳ, ಎಲ್ಲ ಸರ್ಕಾರಗಳೂ ನಮಗೆ ಅನ್ಯಾಯ ಮಾಡಿವೆ. ಈಗಾಗಲೇ ನಮ್ಮ ಸಮಾಜದವರನ್ನು ಹೊಡೆಸಿ ರಕ್ತ ಚೆಲ್ಲಿದ್ದೀರಿ. ನನ್ನ ಪ್ರಾಣ ಚೆಲ್ಲಿದರೂ ಚಿಂತೆ ಇಲ್ಲ. ಮೀಸಲಾತಿ ಪಡೆದೇ ತೀರುವೆ' ಎಂದರು.

'ಸುವರ್ಣ ವಿಧಾನಸೌಧದ ಮುಂದೆ ಡಿಸೆಂಬರ್ 17ರಿಂದ ಮತ್ತೆ ಧರಣಿ ಮಾಡುತ್ತೇವೆ. ಅವಕಾಶ ಕೊಡದಿದ್ದರೆ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುತ್ತೇವೆ' ಎಂದರು. ಜಿಲ್ಲಾಧಿಕಾರಿ ಭರವಸೆ ಮೇರೆಗೆ ಸಂಜೆ 6ಕ್ಕೆ ಅವರು ಧರಣಿ ಕೈಬಿಟ್ಟರು.

ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಸೋಮವಾರ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಬಾಣಂತಿ ಹಾಗೂ ಶಿಶುಗಳ ಸಾವು ಖಂಡಿಸಿ ಸೋಮವಾರ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು ಪ್ರಜಾವಾಣಿ ಚಿತ್ರ

ಬಾಣಂತಿ, ಶಿಶುಗಳ ಸಾವಿಗೆ ಖಂಡನೆ: ಬಿಜೆಪಿ ನಾಯಕರ ವಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಬಾಣಂತಿಯರು ಮತ್ತು ಶಿಶುಗಳ ಸಾವು ಹೆಚ್ಚಲು ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಕಾರಣ' ಎಂದು ಆರೋಪಿಸಿ ಇಲ್ಲಿನ ಮಾಲಿನಿ ಸಿಟಿ ಮೈದಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾದಿಂದ ನಡೆದ ಹೋರಾಟದಲ್ಲಿ ಪಾಲ್ಗೊಂಡ ಕಾರ್ಯಕರ್ತರು, ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದರು. ಪೊಲೀಸರು ಅವರನ್ನು ತಡೆದರು. ಆಗ, ಪರಸ್ಪರರ ಮಧ್ಯೆ ವಾಗ್ವಾದ ನಡೆಯಿತು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಬಾಣಂತಿಯರು ಮತ್ತು ಶಿಶುಗಳು ಸಾವಿನ ಕುರಿತಾಗಿ ಸದನದಲ್ಲಿ ಚರ್ಚೆಯಾಗುತ್ತಿಲ್ಲ. ಉತ್ತರ ಕರ್ನಾಟಕದ ಸಮಸ್ಯೆಗಳೂ ಪ್ರಸ್ತಾಪವಾಗುತ್ತಿಲ್ಲ. ಇಲ್ಲಿ ವಿಧಾನ ಮಂಡಲ ಚಳಿಗಾಲದ ಅಧಿವೇಶನ ಪಿಕ್‌ನಿಕ್ ರೀತಿ ನಡೆದಿದೆ' ಎಂದು ಆರೋಪಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಷ್ಟ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ, ಶಾಸಕಿ ಶಶಿಕಲಾ ಜೊಲ್ಲೆ, ಪಕ್ಷದ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಮತ್ತಿತರರು ಪಾಲ್ಗೊಂಡಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಯಾವುದೂ ಇದ್ದ ಹಾಗೆ ಇರುವುದಿಲ್ಲ, ಎಲ್ಲವೂ ಬದಲಾಗುತ್ತಿರುತ್ತವೆ ಎಂಬ ಸತ್ಯ ಅರಿವಿಗೆ ಬಂದರೆ ಮನುಷ್ಯ ನಿಶ್ಚಿಂತೆಯಿಂದ ಇರುತ್ತಾನೆ.

–ಸಿದ್ಧೇಶ್ವರ ಸ್ವಾಮೀಜಿ

‘ಇಂಡಿಯಾ’ ಮೈತ್ರಿಕೂಟದಲ್ಲಿ ಬಿರುಕು ಭಿನ್ನಮತದಿಂದ ಹಾನಿಯೇ ಹೆಚ್ಚು

ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಆಗಿರುವ ಭಾರಿ ಹಿನ್ನಡೆಯು ‘ಇಂಡಿಯಾ’ ಮೈತ್ರಿಕೂಟಕ್ಕೆ ಗಾಸಿ ಮಾಡಿದೆ. ಇದರಿಂದಾಗಿ, ಮೈತ್ರಿಕೂಟದ ಉಳಿವಿನ ಬಗ್ಗೆಯೇ ಹೊಸ ಪ್ರಶ್ನೆಗಳು ಎದುರಾಗಿವೆ. ಇಂತಹ ಪ್ರಶ್ನೆಗಳು ಕೇಳಿಬಂದಿರುವುದು ಮೈತ್ರಿಕೂಟದ ಒಳಗಿನಿಂದಲೇ ವಿನಾ ಹೊರಗಿನಿಂದ ಅಲ್ಲ ಎಂಬುದು ಗಂಭೀರವಾದ ವಿಚಾರ. ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷವು ಏಕಾಂಗಿಯಾಗಿ ಹೋರಾಡಿ ಸೋತುಹೋಯಿತು. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್, ಶರದ್ ಪವಾರ್ ಅವರ ಎನ್‌ಸಿಪಿ, ಉದ್ಧವ್ ಠಾಕ್ರೆ ಅವರ ಶಿವಸೇನಾ ಒಟ್ಟಾಗಿರುವ ಮಹಾ ವಿಕಾಸ್ ಆಘಾಡಿ (ಎಂವಿಎ) ಹೀನಾಯವಾಗಿ ಸೋತಿತು. ಮೈತ್ರಿಕೂಟದ ನಾಯಕತ್ವ ಸ್ಥಾನದಲ್ಲಿ ಕಾಂಗ್ರೆಸ್ ಇರಬೇಕೇ ಎಂಬ ಪ್ರಶ್ನೆ ಸೋಲಿನ ತಕ್ಷಣದ ಪ್ರತಿಕ್ರಿಯೆಯಾಗಿ ಹೊರಹೊಮ್ಮಿದೆ. ಮೈತ್ರಿಕೂಟವನ್ನು ಮುನ್ನಡೆಸಲು ತಾವು ಸಿದ್ಧ ಎಂದು ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಮೈತ್ರಿಕೂಟದ ಒಳಗೆ ಅವರಿಗೆ ವ್ಯಾಪಕ ಬೆಂಬಲವೂ ಇದೆ. ಅವರಿಗೆ ಎನ್‌ಸಿಪಿ ಮತ್ತು ಸಮಾಜವಾದಿ ಪಕ್ಷ ಬೆಂಬಲ ಘೋಷಿಸಿವೆ. ಮಮತಾ ಅವರೇ ಮೈತ್ರಿಕೂಟದ ನಾಯಕತ್ವ ವಹಿಸಿಕೊಳ್ಳಬೇಕು ಎಂದು ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಹೇಳಿದ್ದಾರೆ. ತಾನು ನಾಯಕತ್ವ ಸ್ಥಾನದಲ್ಲಿ ಏಕೆ ಇರಬೇಕು ಎಂಬುದಕ್ಕೆ ಕಾಂಗ್ರೆಸ್ ಪಕ್ಷವು ಕಾರಣಗಳನ್ನು ನೀಡಬೇಕು ಎಂದು ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಹೇಳಿದ್ದಾರೆ. ಎಲ್ಲ ಸಂದರ್ಭಗಳಲ್ಲಿಯೂ ನಾಯಕತ್ವವು ತನ್ನದೇ ಆಗಿರುತ್ತದೆ ಎಂದು ಕಾಂಗ್ರೆಸ್ ಭಾವಿಸಬಾರದು ಎಂದೂ ಅವರು ಹೇಳಿದ್ದಾರೆ. ಕಾಂಗ್ರೆಸ್ ವಿರುದ್ಧ ಮಾತನಾಡಿದ ಎಲ್ಲರೂ ‘ಇಂಡಿಯಾ’ ಗುಂಪಿನ ಪ್ರಮುಖ ನಾಯಕರು. ಕಾಂಗ್ರೆಸ್ ನಾಯಕತ್ವದ ಕುರಿತು ಮೈತ್ರಿಕೂಟದ ಒಳಗೆ ಅತೃಪ್ತಿ ಇದೆ ಎಂಬುದನ್ನು ಇದು ತೋರಿಸುತ್ತದೆ.

ಆಡಳಿತ ಪಕ್ಷವನ್ನು ವಿರೋಧಿಸುವುದಕ್ಕಿಂತ ಹೆಚ್ಚಾಗಿ, ಗಟ್ಟಿಯಾದ ನೆಲಗಟ್ಟುಳ್ಳ ಸಾಮಾನ್ಯ ಕಾರ್ಯಸೂಚಿಯೊಂದು ಮೈತ್ರಿಕೂಟಕ್ಕೆ ಬೇಕು

ಲೋಕಸಭೆ ಚುನಾವಣೆಯ ಫಲಿತಾಂಶದಿಂದಾಗಿ ‘ಇಂಡಿಯಾ’ ಮೈತ್ರಿಕೂಟಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ಬಂದಿತ್ತು. ಆದರೆ, ಆ ಲವಲವಿಕೆ ಈಗ ಕಾಣಿಸುತ್ತಿಲ್ಲ. ಮೈತ್ರಿಕೂಟವು ರೂಪುಗೊಳ್ಳುವ ಸಂದರ್ಭದಲ್ಲಿಯೇ ಕಾಂಗ್ರೆಸ್ ನಾಯಕತ್ವದ ಕುರಿತು ಪ್ರಶ್ನೆಗಳು ಎದ್ದಿದ್ದವು. ಈಗ ಈ ಕೂಗು ಮತ್ತಷ್ಟು ಬಲವಾಗಿದೆ. ಬಿಜೆಪಿಯೊಂದಿಗೆ ನೇರ ಸ್ಪರ್ಧೆ ಇದ್ದಾಗ ಕಾಂಗ್ರೆಸ್‌ನ ಸಾಧನೆಯು ಮೈತ್ರಿಕೂಟದ ಇತರ ಪಕ್ಷಗಳಿಗಿಂತ ಕಳಪೆಯಾಗಿದೆ. ಮೈತ್ರಿಕೂಟದಲ್ಲಿ ಇರುವ ಅತ್ಯಂತ ದೊಡ್ಡ ಪಕ್ಷ ಕಾಂಗ್ರೆಸ್, ಜೊತೆಗೆ ಎಲ್ಲ ರಾಜ್ಯಗಳಲ್ಲಿಯೂ ಈ ಪಕ್ಷಕ್ಕೆ ಅಸ್ತಿತ್ವ ಇದೆ. ಆದರೆ ಕೆಲವು ರಾಜ್ಯಗಳಲ್ಲಿ ಪಕ್ಷದ ಅಸ್ತಿತ್ವವು ಹೆಸರಿಗಷ್ಟೇ ಎಂಬಂತಿದೆ. ಇಂತಹ ಪರಿಸ್ಥಿತಿಯಿಂದ ಚುನಾವಣೆಯಲ್ಲಿ ಯಾವ ಅನುಕೂಲವೂ ಆಗುವುದಿಲ್ಲ. ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಅಥವಾ ರಾಹುಲ್ ಗಾಂಧಿ ಅವರಿಗಿಂತ ಮಮತಾ ಅವರು ಹೆಚ್ಚು ಪರಿಣಾಮಕಾರಿ ನಾಯಕತ್ವ ಒದಗಿಸಬಲ್ಲರು ಎಂದು ಮೈತ್ರಿಕೂಟದ ಹಲವರು ಭಾವಿಸಿದ್ದಾರೆ. ಮೈತ್ರಿಕೂಟದ ಪಾಲುದಾರರಲ್ಲಿ ಹಲವರು ಈ ಭಾವನೆಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಲು ಆರಂಭಿಸಿದ್ದಾರೆ. ತಮಗೆ ಬೆಂಬಲ ಕೊಟ್ಟ ನಾಯಕರಿಗೆ ಮಮತಾ ಅವರು ಕೃತಜ್ಞತೆ ಸಲ್ಲಿಸಿದ್ದಾರೆ. ನಾಯಕತ್ವದ ವಿಚಾರವು ಮುಂದಿನ ದಿನಗಳಲ್ಲಿ ಇನ್ನಷ್ಟು ಜೋರಾಗಿ ಚರ್ಚೆಗೆ ಒಳಪಡಬಹುದು.

ಯಾವ ವಿಚಾರಗಳನ್ನು ಜನರ ಮುಂದೆ ಇಡಬೇಕು, ಯಾವ ನೀತಿಯನ್ನು ಅನುಸರಿಸಬೇಕು ಎಂಬುದರ ಕುರಿತು ಕೂಡ ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯ ಇದೆ. ಸಂಸತ್ ಅಧಿವೇಶನದಲ್ಲಿ ಅದಾನಿ ವಿಚಾರವನ್ನು ಇರಿಸಿಕೊಂಡು ಸರ್ಕಾರದ ಮೇಲೆ ಮುಗಿಬೀಳಲು ಕಾಂಗ್ರೆಸ್ ಪಕ್ಷವು ತೀವ್ರ ಉತ್ಸಾಹ ತೋರಿದೆ. ಆದರೆ, ಇತರ ಪಕ್ಷಗಳು ಹಾಗೆ ಮಾಡಿಲ್ಲ. ತೃಣಮೂಲ ಕಾಂಗ್ರೆಸ್ ಪಕ್ಷವಾಗಲೀ ಸಮಾಜವಾದಿ ಪಕ್ಷವಾಗಲೀ ಈ ವಿಚಾರದಲ್ಲಿ ಕಾಂಗ್ರೆಸ್ ಬೆಂಬಲಕ್ಕೆ ನಿಂತಿಲ್ಲ. ಬಾಬರಿ ಮಸೀದಿ ಧ್ವಂಸವನ್ನು ಶ್ಲಾಘಿಸಿ ಶಿವಸೇನಾ (ಯುಬಿಟಿ) ನಾಯಕರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಪ್ರಕಟಿಸಿದ್ದನ್ನು ಸಮಾಜವಾದಿ ಪಕ್ಷವು ಖಂಡಿಸಿದೆ. ಎಲ್ಲರಿಗೂ ಒಪ್ಪಿಗೆ ಆಗುವಂತಹ ದೊಡ್ಡ ವಿಚಾರವೊಂದು ಮೈತ್ರಿಕೂಟದ ಮುಂದೆ ಇದ್ದಾಗ, ಇತರ ಎಲ್ಲ ವಿಚಾರಗಳಲ್ಲಿಯೂ ಎಲ್ಲರಿಗೂ ಸಹಮತ ಇರಬೇಕು ಎಂದೇನೂ ಇಲ್ಲ. ಆಡಳಿತ ಪಕ್ಷ ಅಥವಾ ಸರ್ಕಾರವನ್ನು ವಿರೋಧಿಸುವುದಕ್ಕಿಂತ ಹೆಚ್ಚಾಗಿ, ಗಟ್ಟಿಯಾದ ನೆಲಗಟ್ಟುಳ್ಳ ಸಾಮಾನ್ಯ ಕಾರ್ಯಸೂಚಿಯೊಂದು ಮೈತ್ರಿಕೂಟಕ್ಕೆ ಬೇಕು. ನಾಯಕತ್ವದ ಕುರಿತು ಗೊಂದಲ ಇದೆ ಮತ್ತು ಈ ವಿಚಾರದಲ್ಲಿ ಒಗ್ಗಟ್ಟು ಇಲ್ಲ ಎಂಬುದರ ಪ್ರದರ್ಶನದಿಂದ ‘ಇಂಡಿಯಾ’ ಗುಂಪಿಗೆ ಹಾನಿಯಲ್ಲದೆ ಅನುಕೂಲವಂತೂ ಆಗದು.

ದಿನದ ಟ್ವೀಟ್

ಜ್ಞಾನಕ್ಕೆ ಭಾಷೆಯ ಹಂಗಿಲ್ಲ

...ಯಾವುದೇ ವಿಷಯದ ಬಗ್ಗೆ ಆಳವಾಗಿ ತಿಳಿದುಕೊಳ್ಳಬೇಕೆಂದರೆ ಅದಕ್ಕೆ ಇಂಗ್ಲಿಷಿನ ಅಗತ್ಯ ಬಹಳ ಇದೆ... ಪ್ರಪಂಚದೆಲ್ಲೆಡೆ ನಡೆಯುವ ಅಧ್ಯಯನ, ಇನೊವೇಷನ್ ಅನ್ನು ಇಂಗ್ಲಿಷ್ ಮೂಲಕ ಗ್ರಹಿಸಬೇಕಿದೆ. ಅದಕ್ಕೆ ಯೂಟ್ಯೂಬ್ ಮುಂತಾದ ನೆರವು ಪಡೆಯಬೇಕು. ಕನ್ನಡ ಪುಸ್ತಕಗಳು, ವಿಡಿಯೊಗಳು ಮುಖ್ಯ. ಅದರಿಂದ ಬೇಸಿಕ್ ಕಲಿಕೆ ಸಾಧ್ಯ. ಆದರೆ ಅಷ್ಟಕ್ಕೇ ಸೀಮಿತವಾಗಬೇಡಿ...

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಜರ್ಮನಿಯಿಂದ ಒಬ್ಬರು ನನಗೆ ತಂದುಕೊಟ್ಟ ಸಾಸೇಜಿನ ಡಬ್ಬಿಯ ಮೇಲೆ ಜರ್ಮನ್ ನುಡಿ ಬಿಟ್ಟು ಬೇರೆ ನುಡಿಯ ಒಂದೇ ಒಂದು ಪದ ಹುಡುಕಿದರೂ ಸಿಗಲಿಲ್ಲ. ಜರ್ಮನ್ನರು ತಮ್ಮ ನಾಡಿನ ಜನರಿಗೆ ಮತ್ತು ತಮ್ಮ ನುಡಿಗೆ ಹೆಚ್ಚಿನ ಒತ್ತು ನೀಡುತ್ತಾರೆ. ಆದರೆ ನಮ್ಮಲ್ಲಿ?
#serveInMyLanguage

ಅಮ್ರುತ್ ಬಾಳ್ಬಯ್ಲ್

25 ವರ್ಷಗಳ ಹಿಂದೆ
ಶುಕ್ರವಾರ, 17-12-1999

- **ಆಂಧ್ರ; ನಕ್ಸಲೀಯ ಹಿಂಸೆಗೆ 5 ಬಲಿ ಮಧ್ಯಪ್ರದೇಶ ಸಚಿವನ ಭೀಕರ ಹತ್ಯೆ**

ಹೈದರಾಬಾದ್, ಡಿ. 16 (ಪಿಟಿಐ): ತಮ್ಮ ಮುಖಂಡರ ಕೊಲೆಯ ಪ್ರತೀಕಾರವಾಗಿ ನಕ್ಸಲೀಯರು ಕೈಗೊಂಡಿರುವ ಹಿಂಸಾಚಾರ ಭುಗಿಲೆದ್ದು, ಮಧ್ಯಪ್ರದೇಶ ಮತ್ತು ಆಂಧ್ರವನ್ನು ನಡುಗಿಸಿದೆ.

ಮಧ್ಯಪ್ರದೇಶದ ಸಾರಿಗೆ ಸಚಿವ ಲಖಿರಾಂ ಕವ್ರೆ ಅವರನ್ನು ನಿನ್ನೆ ರಾತ್ರಿ ಭೀಕರವಾಗಿ ಹತ್ಯೆ ಮಾಡಿ ‘ಸೇಡು ತೀರಿಸಿಕೊಂಡಿರುವ’ ನಕ್ಸಲೀಯರು, ಆಂಧ್ರದ ನಿಜಾಮಾಬಾದ್ ಜಿಲ್ಲೆಯಲ್ಲಿ ಐದು ಜನರನ್ನು ಕೊಂದಿದ್ದಾರೆ.

- **ಸಾಹಿತಿ ಕಮಲಾದಾಸ್ ವಿಧ್ಯುಕ್ತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರ**

ಕೊಚ್ಚಿ, ಡಿ. 16 (ಪಿಟಿಐ)– ಭಾರತದ ಖ್ಯಾತ ದ್ವಿಭಾಷಿ ಸಾಹಿತಿ ಮತ್ತು ಕವಯಿತ್ರಿ ಕಮಲಾ ದಾಸ್ ಉರ್ಫ್ ಮಾಧವಿ ಕುಟ್ಟಿ (67) ಅವರು ಇಂದು ಇಲ್ಲಿ ನಡೆದ ಸರಳ ಸಮಾರಂಭದಲ್ಲಿ ವಿಧ್ಯುಕ್ತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು.

ಕಮಲಾದಾಸ್ ಅವರ ಮನೆಯಲ್ಲಿಯೇ ಜರುಗಿದ ಧಾರ್ಮಿಕ ವಿಧಿವಿಧಾನ ‘ಕಲಿಮಾ’ವನ್ನು ಎರ್ನಾಕುಲಂ ಜುಮಾ ಮಸೀದಿ ಇಮಾಂ ಎ.ಎಂ. ಮೂಸಾ ಅವರು ನೆರವೇರಿಸಿದರು. ಕಮಲಾದಾಸ್ ಅವರಿಗೆ ‘ಸುರಯ್ಯಾ’ ಎಂದು ಹೊಸ ನಾಮಕರಣ ಮಾಡಲಾಗಿದೆ.

‘ಇನ್ನು ಮುಂದೆ ನಾನು ಇಸ್ಲಾಂ ಧರ್ಮದ ಪ್ರಚಾರಕ್ಕೆ ನನ್ನ ಜೀವ ಮುಡಿಪಿಡಲು ನಿರ್ಧರಿಸಿರುವೆ. ಇದಕ್ಕಾಗಿ ಹಲವಾರು ದೇಶಗಳಿಗೆ ಭೇಟಿ ನೀಡಲಿರುವೆ’ ಎಂದು ‘ಸುರಯ್ಯಾ’ ಆನಂತರ ತಿಳಿಸಿದರು.

ಒಂದೇ ನಿಮಿಷದಲ್ಲಿ ಮುಗಿದ ಸಮಾರಂಭದಲ್ಲಿ ಅವರ ಪುತ್ರ ಎಂ.ಡಿ. ನಲಪತ್, ಕುಟುಂಬದ ಸ್ನೇಹಿತರು ಹಾಜರಿದ್ದರು.

50 ವರ್ಷಗಳ ಹಿಂದೆ
ಮಂಗಳವಾರ, 17-12-1974

- **ಜನಸಂಖ್ಯೆ ಏರಿಕೆ ಅನಾಹುತಕ್ಕೆ ಹಾದಿ**

ನವದೆಹಲಿ, ಡಿ. 16– ಪ್ರಪಂಚದ ಜನಸಂಖ್ಯೆ ಈಗ ಸುಮಾರು ನಾಲ್ಕು ನೂರು ಕೋಟಿ. ಇನ್ನು ಇಪ್ಪತ್ತೈದು ವರ್ಷಗಳಲ್ಲಿ ಇದು ಏಳುನೂರು ಕೋಟಿಗೆ ಏರುತ್ತದೆ. ಇಷ್ಟು ಜನರ ಹೊಟ್ಟೆ ತುಂಬಬೇಕು ಆಗ. ಎಂದಿಗಿಂತಲೂ ಹೆಚ್ಚು ಜನ ಇಂದು ಹಸಿವಿನಿಂದ ನರಳುತ್ತಿದ್ದಾರೆ. ಹೆಚ್ಚುತ್ತಿರುವ ಜನಸಂಖ್ಯೆಯು ಬದುಕಿಗೆ ಅಗತ್ಯವಾದ ಆಹಾರವನ್ನು ವಂಚಿಸುತ್ತಿದೆ. ಪ್ರಪಂಚದಲ್ಲಿ ಶಾಂತಿಯನ್ನು ಸಾಧಿಸುವ ಯತ್ನಗಳನ್ನು ಇದು ದೂರ ಮಾಡುತ್ತಿದೆ.

ಮನಕಲಕುವ ಈ ಮನವಿಯನ್ನು ವಿಶ್ವರಾಷ್ಟ್ರ ಸಂಸ್ಥೆಗೆ ಮಾಡಿಕೊಳ್ಳಲಾಗಿದೆ. ಪ್ರಪಂಚದಾದ್ಯಂತ ಸಾವಿರಾರು ಶ್ರೇಷ್ಠ ವ್ಯಕ್ತಿಗಳು ಈ ಮನವಿಗೆ ಸಹಿ ಹಾಕಿದ್ದಾರೆ. ಇವರಲ್ಲಿ ಹದಿನಾರು ಮಂದಿ ನೊಬೆಲ್ ಪ್ರಶಸ್ತಿ ಪುರಸ್ಕೃತರು ಸೇರಿದ್ದಾರೆ.

- **ರಾಜ್ಯ ಚಿತ್ರೋದ್ಯಮ ಅಭಿವೃದ್ಧಿ ಸಂಸ್ಥೆಗೆ ಛೋಪ್ರಾ ರಾಜೀನಾಮೆ**

ಬೆಂಗಳೂರು, ಡಿ. 16– ಖ್ಯಾತ ಚಲನಚಿತ್ರೋದ್ಯಮಿ ಬಿ.ಆರ್. ಛೋಪ್ರಾ ಅವರು ಕರ್ನಾಟಕ ಚಲನಚಿತ್ರ ಕೈಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್ನಿನ ಡೈರೆಕ್ಟರ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕಾರ್ಪೊರೇಷನ್ನಿನಲ್ಲಿ ಕ್ಷುಲ್ಲಕ ರಾಜಕೀಯ ಹೆಚ್ಚುತ್ತಿದ್ದು ಚಲನಚಿತ್ರ ಉದ್ಯಮದ ಹಿತಾಸಕ್ತಿಗೆ ಧಕ್ಕೆಯುಂಟಾಗಿರುವುದೇ ತಮ್ಮ ರಾಜೀನಾಮೆಗೆ ಕಾರಣವೆಂದು ಛೋಪ್ರಾ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಜಗತ್ತಿನ 5ನೇ ದೊಡ್ಡ ಆರ್ಥಿಕತೆ, ತಲಾದಾಯದಲ್ಲಿ 140ನೇ ಸ್ಥಾನ– ಏನೀ ವೈರುಧ್ಯ?

ಇದು ಮೂರು ಭಾರತಗಳ ಕತೆ

ವಿಶ್ಲೇಷಣೆ

ವಸಂತ ಶೆಟ್ಟಿ

ಭಾರತ ಜಗತ್ತಿನ ಐದನೆಯ ದೊಡ್ಡ ಆರ್ಥಿಕತೆ, ಇನ್ನು ಕೆಲವೇ ವರ್ಷಗಳಲ್ಲಿ ಜಪಾನ್, ಜರ್ಮನಿಯನ್ನು ಹಿಂದಿಕ್ಕಿ ನಾವು ಜಗತ್ತಿನ ಮೂರನೆಯ ದೊಡ್ಡ ಆರ್ಥಿಕತೆ ಆಗಲಿದ್ದೇವೆ, ಈ ಶತಮಾನದ ದ್ವಿತೀಯಾರ್ಧ ನಿಸ್ಸಂದೇಹವಾಗಿಯೂ ಭಾರತದ್ದು ಅನ್ನುವ ಮಾತುಗಳನ್ನು ಇತ್ತೀಚೆಗೆ ಹೆಚ್ಚೆಚ್ಚು ಕೇಳುತ್ತಿದ್ದೇವೆ. ನಮ್ಮ ದೇಶದ ಬಗ್ಗೆ ಹೆಮ್ಮೆ ತಳೆಯಲು ಇಂತಹ ಮಾತುಗಳು ಕೆಲಮಟ್ಟಿಗೆ ನೆರವಾಗಬಹುದಾದರೂ ಇಂಗ್ಲಿಷಿನಲ್ಲಿ ದ ಡೆವಿಲ್ ಈಸ್ ಇನ್ ದಿ ಡೀಟೇಲ್ಸ್ ಅನ್ನುವಂತೆ ನಮ್ಮ ಆರ್ಥಿಕತೆಯ ನಿಜ ಸ್ವರೂಪ, ಬೇರೆ ದೇಶಗಳ ಹೋಲಿಕೆಯಲ್ಲಿ ನಮ್ಮ ಜನರ ತಲಾದಾಯ, ನಮ್ಮ ಒಟ್ಟಾರೆ ಆರ್ಥಿಕತೆಯನ್ನು ನಿಜಕ್ಕೂ ಮುನ್ನಡೆಸುತ್ತಿರುವ ಜನರೆಷ್ಟು ಅನ್ನುವ ಕುರಿತು ಆಳಕ್ಕಿಳಿದು ನೋಡಿದರೆ, ಭಾರತದೊಳಗೆ ಮೂರು ಭಾರತಗಳಿರುವ ಕತೆಯೊಂದು ಹೊರಹೊಮ್ಮುತ್ತದೆ. ಬ್ಲೂಮ್ ವೆಂಚರ್ಸ್ ಅನ್ನುವ ನವೋದ್ಯಮ ಹೂಡಿಕೆಗಳ ಸುತ್ತಲಿನ ಸಂಸ್ಥೆ ಹೊರತಂದಿರುವ ‘ಇಂಡಸ್ ವ್ಯಾಲಿ ರಿಪೋರ್ಟ್– 2024’ ಈ ಬಗ್ಗೆ ವಿವರವಾದ ಹೊಸ ವಿಚಾರಗಳನ್ನು ನಮ್ಮ ಮುಂದಿರಿಸುತ್ತದೆ.

ಜಗತ್ತಿನ ಮೊದಲ ಹತ್ತು ದೊಡ್ಡ ಆರ್ಥಿಕತೆಗಳಲ್ಲಿ ಅತ್ಯಂತ ವೇಗವಾದ ಜಿಡಿಪಿ ಬೆಳವಣಿಗೆಯ ದರ ಹೊಂದಿರುವ ಭಾರತ, ಜನರ ತಲಾದಾಯದ ವಿಷಯಕ್ಕೆ ಬಂದಾಗ, 2,700 ಡಾಲರ್ (ಅಮೆರಿಕದ ಒಂದು ಡಾಲರ್‌ಗೆ ಸುಮಾರು 85 ರೂಪಾಯಿ) ಜೊತೆ ಜಗತ್ತಿನಲ್ಲಿ 140ನೇ ಸ್ಥಾನದಲ್ಲಿದೆ. ಒಂದೆಡೆ, ನಮ್ಮ ನಗರಗಳೆಲ್ಲ ಗಿಜಿಗುಡುತ್ತ, ವಾಹನಗಳಿಂದ, ಸಿರಿ-ಸವಲತ್ತುಗಳಿಂದ ತುಂಬಿದಂತೆ ಕಂಡರೆ, ಇನ್ನೊಂದೆಡೆ, ದೇಶದ ನೂರು ಕೋಟಿ ಜನರ ತಲಾದಾಯ ಸಬ್-ಸಹಾರಾ ಆಫ್ರಿಕಾದ ದೇಶಗಳ ಜನರ ಮಟ್ಟಕ್ಕೂ ಕೆಳಗಿದೆ ಅನ್ನುವಂತಹ ವೈರುಧ್ಯಗಳನ್ನು ಈ ವರದಿ ಅತ್ಯಂತ ವಸ್ತುನಿಷ್ಠವಾಗಿ ನಮ್ಮ ಮುಂದಿರಿಸುತ್ತದೆ.

ಭಾರತದ ನವೋದ್ಯಮ ಸಂಸ್ಥೆಗಳ ಮೇಲೆ ಹೂಡಿಕೆ ಮಾಡುವ ಬ್ಲೂಮ್ ವೆಂಚರ್ಸ್ ಸಹಜವಾಗಿಯೇ ಭಾರತದ ಆರ್ಥಿಕತೆ, ಇಲ್ಲಿನ ಜನಸಮುದಾಯದ ಆದಾಯ, ಖರ್ಚು, ಉಪಭೋಗ ಯಾವ ರೀತಿಯಲ್ಲಿದೆ ಮತ್ತು ಯಾವ ರೀತಿಯ ಹೊಸ ಉದ್ಯಮದ ಅವಕಾಶಗಳಿವೆ ಅನ್ನುವ ದಿಸೆಯಲ್ಲೇ ಈ ವರದಿಯನ್ನು ಸಿದ್ಧಪಡಿಸಿದೆ. ಏನಿದೆ ವರದಿಯಲ್ಲಿ?

ಖಾಸಗಿಯಾಗಿ ಜನ ದಿನನಿತ್ಯದ ಬದುಕಿಗೆ ಮಾಡುವ ಖರ್ಚುಗಳೇ ಭಾರತದ ಜಿಡಿಪಿಗೆ ಶೇ 60ರಷ್ಟು ಕೊಡುಗೆ ನೀಡುತ್ತಿವೆ. ಇದು ಜಾಗತಿಕ ಸರಾಸರಿಗಿಂತ ಬಹಳವೇ ಹೆಚ್ಚು. ಚೀನಾದಲ್ಲಿ ಇದು ಶೇ 40ರ ಆಸುಪಾಸಿನಲ್ಲಿದೆ. ರಸ್ತೆ, ಕಾರ್ಖಾನೆಯಂತಹ, ಉತ್ಪಾದಕ ಆಸ್ತಿಗಳೆಂದು ಕರೆಸಿಕೊಳ್ಳುವ ಮೂಲ ಸೌಕರ್ಯಗಳ ಮೇಲಿನ ಹೂಡಿಕೆಯ ಪ್ರಮಾಣ ಭಾರತದಲ್ಲಿ ಮೂವತ್ತು ಪ್ರತಿಶತದ ಆಸುಪಾಸಿನಲ್ಲೇ ನಿಂತಿರುವ ಕಾರಣದಿಂದ ಉಪಭೋಗವೇ ಜಿಡಿಪಿಗೆ ಹೆಚ್ಚಿನ ಕೊಡುಗೆ ಕೊಡುವ ಸ್ಥಿತಿಯಿದೆ. ಹೆಚ್ಚಿನ ಅನುತ್ಪಾದಕ ಸಾಲ ಮತ್ತು ಕೋವಿಡ್ ನಂತರದ ಅನಿಶ್ಚಿತತೆಯ ಕಾರಣದಿಂದ ಈ ವಲಯದಲ್ಲಿ ಖಾಸಗಿ ಸಂಸ್ಥೆಗಳ ಹೂಡಿಕೆ ಕಡಿಮೆಯಾಗಿದ್ದು, ಇದನ್ನು ನೀಗಿಕೊಳ್ಳಲು ಸರ್ಕಾರವೇ ಸರ್ಕಾರಿ ಬಾಂಡ್‌ಗಳ ಮೂಲಕ ಸಾಲ ಮಾಡಿ ಹೂಡಿಕೆ ಮಾಡುವ ಪ್ರಮಾಣ ಹೆಚ್ಚಿದೆ. ಇದರಿಂದಾಗಿ ಹಣಕಾಸಿನ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳಿಗೆ ಸಂಪನ್ಮೂಲ ಹೊಂದಿಸುವುದಕ್ಕೆ ತೊಡಕಾಗುತ್ತಿದೆ.

ಇನ್ನೊಂದೆಡೆ, ಸರ್ಕಾರದ ಸಾಲ ಹೆಚ್ಚದೇ ಇರಲು ಇರುವ ಹಾದಿಯೆಂದರೆ ತೆರಿಗೆ ಸಂಗ್ರಹದ ಹೆಚ್ಚಳ. ಆದರೆ ನೇರ ತೆರಿಗೆ ಪಾವತಿದಾರರ ಪ್ರಮಾಣ ಈಗಲೂ ಜನಸಂಖ್ಯೆಯ ಒಂದೂವರೆ ಪ್ರತಿಶತದಷ್ಟು ಮಾತ್ರ ಇದ್ದು, ಔಪಚಾರಿಕ ವಲಯದಲ್ಲಿ ಆಗಬೇಕಾದ ಪ್ರಮಾಣದಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ ಎಂದು ಕಾಣಿಸುತ್ತಿದೆ. ಸರ್ಕಾರವು ಜಿಎಸ್‌ಟಿ, ಸೆಸ್‌ನಂತಹ ಪರೋಕ್ಷ ತೆರಿಗೆಗಳ ಮೂಲಕ ಸಂಪನ್ಮೂಲ ಹೊಂದಿಸುವ ಪ್ರಯತ್ನವನ್ನು ಹೆಚ್ಚಿಸುತ್ತಾ ಹೋಗುವುದು ಬಡ ಮತ್ತು ಕೆಳ ಮಧ್ಯಮವರ್ಗಕ್ಕೇ ಹೆಚ್ಚು ತೊಂದರೆ ಉಂಟು ಮಾಡುತ್ತದೆ ಅನ್ನುತ್ತಾರೆ ಬ್ಲೂಮ್ ವೆಂಚರ್ಸ್‌ನ ಸಜಿತ್ ಪೈ.

ದೇಶದ ಬಹುಪಾಲು ಜನರ ಆದಾಯ ಅವರ ‘ಬೇಕು’ಗಳಿಗಿಂತ ‘ಅಗತ್ಯ’ಗಳಿಗೇ ಹೆಚ್ಚಾಗಿ ವಿನಿಯೋಗ ಆಗುತ್ತಿದ್ದು, ‘ಬೇಕು’ಗಳಿಗೆ ಖರ್ಚು ಮಾಡುವ ಆರ್ಥಿಕ ಬಲ ದೊರಕದೇ ಇದ್ದರೆ ಜಿಡಿಪಿಯ ಬೆಳವಣಿಗೆಯಲ್ಲಾಗಲೀ ತಲಾದಾಯದ ಹೆಚ್ಚಳದಲ್ಲಾಗಲೀ ಹೆಚ್ಚಿನ ಅರ್ಥಪೂರ್ಣವಾದ ಬದಲಾವಣೆ ನಿರೀಕ್ಷಿಸಲಾಗದು ಅನ್ನುವ ವರದಿ, ಭಾರತದೊಳಗಿನ ಮೂರು ಭಾರತಗಳ ಬಗ್ಗೆ ಮಾತನಾಡುತ್ತದೆ. ಈ ಮೂರು ಭಾರತಗಳ ಪರಿಕಲ್ಪನೆಯನ್ನು ಉದ್ಯಮಿ ಕಿಶೋರ್ ಬಿಯಾನಿ ಮೊದಲ ಬಾರಿಗೆ ತಮ್ಮ ಪುಸ್ತಕ ‘ಇಟ್ ಹ್ಯಾಪನ್ಡ್ ಇನ್ ಇಂಡಿಯಾ’ದಲ್ಲಿ ಪರಿಚಯಿಸಿದ್ದರು. ಅದನ್ನು 2024ರ ಈ ಹೊತ್ತಿಗೆ ಹೊಂದುವಂತೆ ವಿವರಿಸುವ ಕೆಲಸವನ್ನು ಈ ವರದಿ ಮಾಡುತ್ತದೆ.

ತಿಂಗಳಿಗೆ ಒಂದು ಲಕ್ಷ ರೂಪಾಯಿ ಆದಾಯ ಇರುವ, ಸರಿಸುಮಾರು ಮೂರು ಕೋಟಿ ಕುಟುಂಬಗಳ ಒಟ್ಟು 12 ಕೋಟಿ ಜನರನ್ನು ‘ಇಂಡಿಯಾ 1’ ಎಂದು ಗುರುತಿಸುವ ವರದಿ, ಅವರನ್ನು ‘ಉಪಭೋಗಿ ವರ್ಗ’ ಎಂದು ಕರೆಯುತ್ತದೆ. ಈ ವರ್ಗ ಬಹುತೇಕ ನಮ್ಮ ನಗರಗಳಲ್ಲಿದೆ. ಇವರೇ ನೆಟ್‌ಫ್ಲಿಕ್ಸ್ ನೋಡುವವರು, ಸ್ಟಾರ್‌ಬಕ್ಸ್‌ನಲ್ಲಿ ಕಾಫಿ ಕುಡಿಯುವವರು, ಕಾರು, ಬೈಕ್ ಹೊಂದಿರುವವರು, ಅಪಾರ್ಟ್‌ಮೆಂಟ್‌ನಲ್ಲಿ ಮನೆ ಹೊಂದಿರುವವರು, ವಿಮಾನದಲ್ಲಿ ಪ್ರಯಾಣಿಸಬಲ್ಲವರು, ದುಬಾರಿ ಗ್ಯಾಜೆಟ್ ಕೊಳ್ಳಬಲ್ಲವರು, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬಲ್ಲವರು ಮತ್ತು ಡಿಜಿಟಲ್ ಪ್ರಪಂಚದಲ್ಲಿ ಚೆನ್ನಾಗಿ ಪಳಗಿರುವವರು. ಇವರೇ ಭಾರತದ ಬಹುತೇಕ ನವೋದ್ಯಮಗಳ ಮಾರುಕಟ್ಟೆ. ‘ಬೇಕು’ಗಳ ಸುತ್ತಲಿನ ಎಲ್ಲ ವಸ್ತು ಮತ್ತು ಸೇವೆಗಳನ್ನು ಕಲ್ಪಿಸುವವರ ಗುರಿ ಇದೇ ವರ್ಗ. ಇವರಿಂದಾಗಿಯೇ ಭಾರತದ ತಲಾದಾಯವು 2,700 ಡಾಲರ್ ಮಟ್ಟದಲ್ಲಿದೆ. ಈ ವರ್ಗವನ್ನು ಹೊರಗಿಟ್ಟು ತಲಾದಾಯ ಎಣಿಸಲು ಹೋದರೆ ಅದು 1,400 ಡಾಲರ್‌ಗೆ ಕುಸಿಯುತ್ತದೆ.

ತಿಂಗಳಿಗೆ ₹ 20 ಸಾವಿರ ಸಂಪಾದಿಸುವ, ಏಳು ಕೋಟಿ ಕುಟುಂಬಗಳ ಒಟ್ಟು 30 ಕೋಟಿ ಜನರನ್ನು ‘ಇಂಡಿಯಾ 2’ ಎಂದು ಗುರುತಿಸುವ ವರದಿ, ಇವರನ್ನು ‘ಮಹತ್ವಾಕಾಂಕ್ಷಿ ವರ್ಗ’ ಎಂದು ಕರೆಯುತ್ತದೆ. ಇವರು ‘ಅಗತ್ಯ’ಗಳ ಆಚೆ ‘ಬೇಕು’ಗಳ ಮೇಲೆ ಸ್ವಲ್ಪವಾದರೂ ಖರ್ಚು ಮಾಡಬಲ್ಲರು ಮತ್ತು ಯುಪಿಐ ತರಹದ ಪಾವತಿ ವ್ಯವಸ್ಥೆಗಳು ಚಿಕ್ಕ ಚಿಕ್ಕ ಪಾವತಿಯನ್ನು ಸಾಧ್ಯವಾಗಿಸಿರುವ ಕಾರಣಕ್ಕೆ ಈ ವರ್ಗ ಚಿಕ್ಕದಾಗಿಯಾದರೂ ‘ಬೇಕು’ಗಳ ಮೇಲೆ ಖರ್ಚು ಮಾಡುತ್ತಿದೆ. ಈ ಎರಡು ವರ್ಗಗಳ ಆಚೆಗಿನ ಸರಿಸುಮಾರು ನೂರು ಕೋಟಿ ಜನರನ್ನು ‘ಇಂಡಿಯಾ 3’ ಎಂದು ವರ್ಗೀಕರಿಸುವ ವರದಿ, ಅವರ ತಿಂಗಳ ಸರಾಸರಿ ಆದಾಯ ₹ 6 ಸಾವಿರದಿಂದ 7 ಸಾವಿರ ಎಂದು ಗುರುತಿಸುತ್ತದೆ. ಸಬ್-ಸಹಾರಾ ಆಫ್ರಿಕಾದ ದೇಶಗಳಿಗಿಂತಲೂ ಕಡಿಮೆ ಆದಾಯ ಇರುವ ಈ ವರ್ಗ ‘ಅಗತ್ಯ’ಗಳ ಹೊರತಾಗಿ ಯಾವುದಕ್ಕೂ ಖರ್ಚು ಮಾಡುವ ಸಾಮರ್ಥ್ಯ ಹೊಂದಿಲ್ಲ ಎಂದು ವರದಿ ಗುರುತಿಸುತ್ತದೆ.

ಭಾರತ ಅತ್ಯಂತ ಯುವ ಜನಲಕ್ಷಣವನ್ನು ಹೊಂದಿರುವ ದೇಶವಾಗಿದೆ. ಇಲ್ಲಿನ ಯುವಕರಲ್ಲಿ ಪ್ರತಿಭೆ ಇದೆ, ಕನಸುಗಳಿವೆ, ಭಾರತದ, ಜಗತ್ತಿನ ಸಮಸ್ಯೆಗಳನ್ನು ಬಗೆಹರಿಸುವ ಇಚ್ಛಾಶಕ್ತಿ ಇದೆ. ಆದರೆ ಅವರ ಶಕ್ತಿಯ ಸದ್ಬಳಕೆಗೆ ಬೇಕಿರುವ ಸಾಂಸ್ಥಿಕ ಬದಲಾವಣೆಗಳು ಇನ್ನೂ ನಮ್ಮಲ್ಲಿ ಇಲ್ಲ. ಹೆಚ್ಚು ಜನ ನೇರ ತೆರಿಗೆ ಪಾವತಿಸುವ ವ್ಯವಸ್ಥೆಯಡಿ ಬರಬೇಕೆಂದರೆ ನಮ್ಮ ತೆರಿಗೆ ನಿಯಮಗಳು ಸರಳಗೊಳ್ಳಬೇಕು. ಮೂಲ ಸೌಕರ್ಯಗಳ ಅಭಿವೃದ್ಧಿಯಲ್ಲಿ ಖಾಸಗಿ ಪಾಲ್ಗೊಳ್ಳುವಿಕೆ ಹೆಚ್ಚಿಸುವಂತೆ ನೀತಿ-ನಿಲುವುಗಳಿಗೆ ಬದಲಾವಣೆ ತರುವುದು, ಹೊಸ ಉದ್ಯಮಗಳ ಆರಂಭಕ್ಕೆ ಇರುವ ಜಟಿಲ ನಿಯಮಗಳನ್ನು ಸಡಿಲಿಸಿ, ಹೆಚ್ಚೆಚ್ಚು ಜನರು ಔಪಚಾರಿಕವಾದ ಉದ್ಯಮಗಳನ್ನು ಸ್ಥಾಪಿಸಲು ಅನುಕೂಲ ಕಲ್ಪಿಸುವುದನ್ನು ಮಾಡಿದಲ್ಲಿ ‘ಇಂಡಿಯಾ 3’ರಿಂದ ‘ಇಂಡಿಯಾ 2’ಕ್ಕೂ ಮತ್ತು ಅಲ್ಲಿಂದ ದೊಡ್ಡ ಪ್ರಮಾಣದಲ್ಲಿ ‘ಇಂಡಿಯಾ 1’ಕ್ಕೂ ಹೆಚ್ಚೆಚ್ಚು ಜನ ಸಾಗುವಂತೆ ಆಗುತ್ತದೆ ಅನ್ನುವ ಆಶಯ ವರದಿಯದ್ದು.

ಈ ದಿಸೆಯಲ್ಲಿ ನಮ್ಮ ಸರ್ಕಾರಗಳು ಕೈಗೊಳ್ಳುವ ನಿರ್ಧಾರಗಳು, ಇನ್ನು ಇಪ್ಪತ್ತೈದು ವರ್ಷಗಳಲ್ಲಿ ಭಾರತ ‘ವಿಶ್ವಗುರು’ ಆಗುತ್ತದೆಯೋ ಇಲ್ಲವೇ ಈ ವೈರುಧ್ಯಗಳ ತವರಾಗಿಯೇ ಮುಂದುವರಿಯುತ್ತದೆಯೋ ಅನ್ನುವುದನ್ನು ನಿರ್ಧರಿಸುತ್ತವೆ.



ಚುರುಮುರಿ



ಕನ್ನಡಮ್ಮನ ಹೊನ್ನಾರು

• ಡಿ.ಎಸ್.ಲಿಂಗರಾಜು

ಮಂಡ್ಯದ ಸಾಹಿತ್ಯ ಸಮ್ಮೇಳನಕ್ಕೆ ನಾನು, ತುರೇಮಣೆ ಹೊಂಟದ್ದೋ. ದಾರಿಯಲ್ಲಿ ನೂರಾರು ಜನ ದೇವತೆಗಳ ರೂಪದೇಲಿ ಕಂಡೋರು ಕಾರು ನಿಲ್ಲಿಸಿ ‘ನಮ್ಮನ್ನೂ ಕರಕೋದೀರಾ?’ ಅಂತಂದ್ರು. ‘ಇಷ್ಟು ಜನ ಕಾರಗೆ ಹ್ಯಂಗೆ ಹತ್ಕಂದೀರಿ?’ ಅಂತ ಕೇಳಿದೆ.

‘ಇವನು ನಮ್ಮ ಮಂಡ್ಯಾದೋನೆ ಕಲಾ’ ಅಂತ ಕೆ.ವಿ.ಶಂಕರೇಗೌಡರು, ಜಿ.ಮಾದೇಗೌಡರು, ಎಸ್.ಎಂ.ಕೃಷ್ಣ ಕಾರು ಹತ್ತಿದರು. ‘ಇವರು ಪುತಿನ, ನಾನು ಬಿಎಂಶ್ರೀ’ ಅಂದೋರಿಗೆ ‘ಸಾ ಅಡ್ಬಿದ್ದೆ’ ಅಂತ ಕೈಮುಗಿದೆ.

ಮಂಡ್ಯದ ಆದಿಕವಿ ಷಡಕ್ಷರದೇವನ ಪಕ್ಕದೇಲಿ ಜಿ.ವೆಂಕಟಸುಬ್ಬಯ್ಯ, ಜಿ.ನಾರಾಯಣ, ಎ.ಎನ್.ಮೂರ್ತಿರಾವ್ ಇದ್ದರು. ‘ನಮ್ಮನ್ನ ಬುಟ್ಬೋದೀರಾ?’ ಅಂತ ಬೆಸಗರಹಳ್ಳಿ ರಾಮಣ್ಣ ಡಾಕ್ಟರು ಮತ್ತು ಎಚ್.ಎಲ್.ಕೇಶವಮೂರ್ತಿ ಬಂದರು. ಹೆಣ್‌ಮಕ್ಕಳು ಕಾರು ಹತ್ತಕ್ಕೆ ಬಂದಾಗ ನಾನು ಸುಮ್ಮಗಿರಲಾರದೇ ‘ಯೆಣ್ಣೆಂಗುಸ್ರು ಯಂಗೆ ಕೂಕಂದೀರಿ?’ ಅಂದಾಗ ಸಂಚಿ ಹೊನ್ನಮ್ಮ ‘ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವಿರಿ ಕಣ್ಣು ಕಾಣದ ಗಾವಿಲರ’ ಅಂತ ಗರ್ಜಿಸಿದಾಗ ಸುಮ್ಮಗಾದೆ.

‘ಸ್ವರ್ಗದೇಲಿ ನೀವೆಲ್ಲಾ ಯಂಗೆ ಕಾಲ ಕಳಿತಿದ್ದರಿ?’ ಮಳವಳ್ಳಿ ಸುಂದರಮ್ಮರನ್ನ ಕೇಳಿದೆ.

‘ಕೊಡಿಯಾಲದ ನಾಟಕದ ಸೀನರಿ ತಕ್ಕೊಗಿದ್ದೀವಲ್ಲೋ. ಅಲ್ಲಿ ಸಿಜಿಕೆ ನಾಟಕ ಆಡಿಸ್ತರೆ’ ಅಂದು ಶಾಕುಂತಲ ನಾಟಕದ ಮಟ್ಟು ಹಾಡಿದರು.

‘ನಾನೂ ಇಲ್ಲೇ ಇದ್ದೀನಿ ಕಲಾ ಅಣ್ತಮ್ಮ’ ಅಂಬರೀಷಣ್ಣ ಗುಟುರು ಹಾಕಿದರು.

‘ಜಾನಪದ ಲೋಕ ಹೆಂಗದೋ?’ ಎಚ್.ಎಲ್.ನಾಗೇಗೌಡರು ವಿಚಾರಿಸಿದರು. ‘ದೀಪವು ನಿನ್ನದೆ ಗಾಳಿಯು ನಿನ್ನದೆ ಆರದಿರಲಿ ಬೆಳಕು’ ಎಂಬ ಇಂಪಾದ ಹಾಡು ಕೇಳಿ ತಿರುಗಿದಾಗ ಕೆ.ಎಸ್.ನರಸಿಂಹಸ್ವಾಮಿಗಳು ಕಂಡರು. ಕೂತಲ್ಲೇ ಕೈಮುಗಿದೆ. ‘ನಾವೂ ಇದ್ದೀವಿ ಕಣೋ’ ಅಂದರು ಹೊ.ಶ್ರೀನಿವಾಸಯ್ಯ, ಖಾದ್ರಿ ಶಾಮಣ್ಣ.

ಮಂಡ್ಯದ ಮಹಾನ್ ಕತೆಗಾರ್ತಿಯರು, ಕಾದಂಬರಿಕಾರರು, ಕಲಾವಿದರು, ಜನಪದ ಗಾಯಕರು ಕೂತಿದ್ದರಿಂದ ಇದೇ ನಿಜವಾದ ಕನ್ನಡ ರಥ ಅನ್ನಿಸಿತು. ‘ಸಮ್ಮೇಳನದೇಲಿ ನಮ್ಮದೇ ಒಂದು ಗೋಷ್ಠಿ ಅದೆ. ನಾವಿನ್ನು ಬತ್ತೀವಿ ಕಪ್ಪ’ ಅಂತ ಎಲ್ಲರೂ ಹಂಗೇ ತೇಲಿಕ್ಯಂದು ಹೊಂಟೋದ್ರು.

ಸಂಗತ

ಗೊತ್ತೇ ‘ಉಡುಗೊರೆ ಸಾಕ್ಷರತೆ?’

ಸ್ವಾಭಾವಿಕವಾದ ಮತ್ತು ಸ್ಥಳೀಯ ಮೂಲದ ಉಡುಗೊರೆಗಳನ್ನು ನೀಡುವುದು ಪ್ರಕೃತಿಗೆ ನಮ್ಮ ಬದ್ಧತೆಯನ್ನು ಸಾಕಾರಗೊಳಿಸುತ್ತದೆ

• ಯೋಗಾನಂದ

ಬೆಂಗಳೂರಿನ ಮಾರುಕಟ್ಟೆಯೊಂದರಲ್ಲಿ ಪರಿಚಿತ ದೈಹಿಕ ಶಿಕ್ಷಣ ಶಿಕ್ಷಕರೊಬ್ಬರು ಸಿಕ್ಕರು. ತಮ್ಮ ಶಾಲೆಯಲ್ಲಿ ಏರ್ಪಡುವ ಕ್ರೀಡಾಸ್ಪರ್ಧೆಗೆ ಅವರು, ‘ಬಳಸಿದ’ ಪದಕ, ಪಾರಿತೋಷಕಗಳ ಹುಡುಕಾಟದಲ್ಲಿದ್ದರು. ಅವರ ಪ್ರಾಮಾಣಿಕತೆಯನ್ನು ಮೊದಲು ಅನುಮಾನಿಸಿದ್ದೆ. ಆದರೆ ಆ ನಡೆ ಸರಿ ಎಂದು ನಂತರವೇ ನನಗೆ ಗೊತ್ತಾದದ್ದು. ಪರಿಸರದ ಹಿತದೃಷ್ಟಿಯಿಂದ ‘ತಗ್ಗಿಸುವಿಕೆ, ಪುನರ್ಬಳಕೆ, ನವೀಕೃತ’ (ರೆಡ್ಯೂಸ್, ರೀಯೂಸ್, ರೀಸೈಕಲ್) ಮಹಾಮಂತ್ರದ ವ್ಯಾಪ್ತಿಗೆ, ಸಾಂಕೇತಿಕವಾಗಿ ನೀಡುವ ಬಹುಮಾನ ಮತ್ತು ಉಡುಗೊರೆಗಳನ್ನೂ ಸೇರಿಸಬಹುದು.

ಪುನರ್ಬಳಕೆಯಾದ ಕಚ್ಚಾ ಸಾಮಗ್ರಿಗಳಿಂದ ತಯಾರಾದ ಉತ್ಪನ್ನಗಳನ್ನೇ ಬಳುವಳಿಯಾಗಿ ನೀಡುವುದು ಮಹತ್ತರ ಹೆಜ್ಜೆ. ಅಗತ್ಯವಿರುವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಹಳೆಯ ಪ್ರತಿಗಳನ್ನು ಕೊಡುವುದರಿಂದ ಎರಡು ಪ್ರಯೋಜನಗಳಿವೆ. ಆರ್ಥಿಕವಾಗಿ ನೆರವಾಗುವುದು ಮತ್ತು ಒಂದು ಪುಸ್ತಕದ ಪ್ರತಿಯ ತಯಾರಿಕೆ ಕಡಿಮೆಯಾಗಿ ಅಷ್ಟರಮಟ್ಟಿಗೆ ಕಾಗದದ ಉಳಿತಾಯವಾಗುತ್ತದೆ. ಇದರಿಂದ ಆ ಕಚ್ಚಾ ವಸ್ತುಗಳು ಕಸ ಸೇರುವುದು ತಪ್ಪುತ್ತದೆ. ಶಾಲೆಯಲ್ಲಿ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪುನರ್ಬಳಸಬಹುದಾದ ನೀರಿನ ಬಾಟಲಿಯನ್ನು ಬಹುಮಾನವಾಗಿ ಇತ್ತರೆ ನಿಜಕ್ಕೂ ಯುಕ್ತ. ಒಟ್ಟಾರೆ, ನೀಡುವವರಿಗೂ ಸ್ವೀಕರಿಸುವವರಿಗೂ ಭೂಗ್ರಹಕ್ಕೂ ಹಿತವೆನ್ನಿಸುವ ಉಡುಗೊರೆಗಳು ಇಂದಿನ ತುರ್ತು.

ನಿಘಂಟು ತಜ್ಞ ಜಿ.ವೆಂಕಟಸುಬ್ಬಯ್ಯ ಅವರ ಮನೆಗೆ ಬಂದಿದ್ದ ಸಂದರ್ಶಕರೊಬ್ಬರು, ಪಡಸಾಲೆಯಲ್ಲಿ ಒಪ್ಪವಾಗಿ ಇರಿಸಿದ್ದ ನೆನಪಿನ ಕಾಣಿಕೆಗಳು, ರುಮಾಲುಗಳು ಹಾಗೂ ಗಂಧದ ಹಾರಗಳನ್ನು ಕಂಡು ಅಚ್ಚರಿಪಟ್ಟರು. ಅದಕ್ಕೆ ವೆಂಕಟಸುಬ್ಬಯ್ಯನವರು ‘ಇದರಲ್ಲಿ ಅತಿಶಯವೇನಿಲ್ಲ. ಯಾರೋ ಒಬ್ಬರು ಒಂದು ತಪ್ಪು ಮಾಡಿದರು. ಅದನ್ನೇ ಹಲವರು ಮುಂದುವರಿಸಿದರು’ ಎಂದರು. ಉಡುಗೊರೆಯು ಶಾಲೊ, ಹೂದಾನಿಯೊ ಅಥವಾ ಕನ್ನಡಿಯೊ... ಅಂಥವನ್ನು ಮನೆಯಲ್ಲಿ ಎಷ್ಟು ದಿನ ಅಂತ ಇಟ್ಟುಕೊಳ್ಳುವುದು? ಶಲ್ಯ, ಬಟ್ಟೆಬರೆಗಳು ಬಣ್ಣಗೆಡುತ್ತವೆ. ಪದಕ, ಪಾರಿತೋಷಕಗಳು ಬಹುತೇಕ ಮರ, ಲೋಹದಿಂದ ತಯಾರಾದವು. ಮರಕ್ಕೆ ಗೆದ್ದಲು ಹತ್ತುವುದು, ಲೋಹಕ್ಕೆ ಕಿಲುಬು ಹಿಡಿಯುವುದು ಸಾಮಾನ್ಯ. ಎಷ್ಟು ದಿನ ಅವು ಹಳ ಹುಪ್ಪಟೆ ಮುತ್ತದೆ ಇದ್ದಾವು? ಇನ್ನು ಅವನ್ನೆಲ್ಲ ಸಂಗ್ರಹಿಸಿ ಇಡಲು ಒಂದು ಪ್ರತ್ಯೇಕ ಕೊಠಡಿಯೇ ಬೇಕು. ಕಾಲಾಂತರದಲ್ಲಿ ಇಡೀ ಕೊಠಡಿ ಜಿರಲೆ, ಹಲ್ಲಿಗಳ ಆವಾಸ ಆಗುತ್ತದೆ. ಅತಿಥಿಗಳಿಗೆ, ಗಣ್ಯರಿಗೆ ಹೊರಲಾಗದ ಹೊರೆ ಹೊರಿಸಿ ಕಳಿಸುವುದೇ ಸಮಾರಂಭ, ಸಭೆಯ ಯಶಸ್ಸಲ್ಲ. ಜೈವಿಕ ವಿಘಟನೆ ಆಗದ ಸ್ಮರಣಿಕೆಗಳ ಸಂಗ್ರಹ ನಿಜಕ್ಕೂ ಉಪಟಳವೆ.

ಹಬ್ಬ, ಹರಿದಿನಗಳಲ್ಲಿ ಬಾಗಿನವಾಗಿ ನೀಡುವ ಹಣ್ಣು ಹಂಪಲು ಒಬ್ಬರಿಂದೊಬ್ಬರಿಗೆ ವಿತರಿಸುವಾಗ ಬಾಡುವ ಉದಾಹರಣೆಗಳೇ ಹೆಚ್ಚು. ಸಸಿಯಿರುವ ಕುಂಡವನ್ನು ನೀಡಿದರೆ ಪೋಷಿಸಿ ಬೆಳೆಸಬಹುದು. ಬೀಜದ ಉಂಡೆಗಳನ್ನು ಕೊಟ್ಟರೆ ಬಿತ್ತಿ ಗಿಡವಾಗಿಸಬಹುದು. ನೀರಿನ ಕ್ಯಾನ್ ಅಥವಾ ಕೈದೋಟ ಮಾಡುವ ಸಣ್ಣಪುಟ್ಟ ಉಪಕರಣಗಳೂ ಉತ್ತಮ ಉಡುಗೊರೆಗಳು. ಪುಸ್ತಕಗಳಿಗಿಂತ ಸಮಂಜಸವಾದ ಬಳುವಳಿ ಮತ್ತೊಂದಿಲ್ಲ. ಇದರಿಂದ ಓದುವವರ ಪಡೆ ಹೆಚ್ಚುತ್ತದೆ. ಪ್ರಕಾಶಕರು, ಲೇಖಕರಿಗೆ ಹಾಕಿದ ಕಾಸು ದಕ್ಕಿ ಮತ್ತಷ್ಟು ಪುಸ್ತಕಗಳನ್ನು ಹೊರತರಲು ಅತೀವ ಉತ್ಸಾಹ ಮೂಡುತ್ತದೆ. ಪ್ರಶಸ್ತಿ ರೂಪದಲ್ಲಿ ನೋಟ್‌ಪುಸ್ತಕ, ಬರೆಯುವ ಸಾಮಗ್ರಿ, ಜ್ಯಾಮಿತಿ ಪೆಟ್ಟಿಗೆಯಿರುವ ಪ್ಯಾಕ್ ಕೈಗಿತ್ತು ‘ನಿಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ ಕೊಡಿ’ ಎನ್ನುವುದು ಬಹು ಸಮಯೋಚಿತ.

ಮಕ್ಕಳು, ಮೊಮ್ಮಕ್ಕಳ ಹುಟ್ಟಿದಹಬ್ಬವನ್ನು ಅದ್ದೂರಿಯಾಗಿ ಆಚರಿಸುವ ಬದಲು ಅವರ ಹೆಸರಿನಲ್ಲಿ ಮನೆಯ ಹತ್ತಿರದ ಉದ್ಯಾನದಲ್ಲಿ ಗಿಡವನ್ನು ದತ್ತು ತೆಗೆದುಕೊಂಡು, ಅದು ಮರವಾಗುವಂತೆ ಪೋಷಿಸುವುದು ಎಂತಹ ಘನ ಕಾರ್ಯ. ಶಾಲಾ ತರಗತಿಗೆ ಒಂದು ಡೆಸ್ಕ್ ಕೊಡುಗೆಯಿತ್ತರಂತೂ ವಿದ್ಯಾರ್ಥಿ ಪೀಳಿಗೆಗಳೇ ನೆನೆಯುತ್ತವೆ. ವಿದ್ಯಾಭ್ಯಾಸಕ್ಕೆ ಸ್ವಾಭಾವಿಕ ಮತ್ತು ಸ್ಥಳೀಯ ಮೂಲದ ಉಡುಗೊರೆಗಳು ಪ್ರಕೃತಿಗೆ ನಮ್ಮ ಬದ್ಧತೆಯನ್ನು ಸಾಕಾರಗೊಳಿಸುತ್ತವೆ. ಇದಕ್ಕೂ ಮುಖ್ಯವೆಂದರೆ ‘ವಿಲ್’ನಲ್ಲಿ ಆಸ್ತಿಪಾಸ್ತಿಯ ಜೊತೆಗೆ ತಾವು ಕೈಗೊಂಡಿರುವ ಪರಿಸರ ಕೈಂಕರ್ಯ, ದತ್ತಿಗಳ ಬಗ್ಗೆಯೂ ವಿವರವಾಗಿ ಬರೆದಿಟ್ಟರೆ ವಾರಸುದಾರರಿಗೆ ಅವನ್ನು ಮುಂದುವರಿಸಲು ಸಾಧ್ಯವಾಗುತ್ತದೆ.

ಈ ದಿಸೆಯಲ್ಲಿ ನಾವು ನಮ್ಮ ನಿತ್ಯಜೀವನದಲ್ಲಿ ಅಷ್ಟಾಗಿ ಗಮನಿಸಿರದ ನಿದರ್ಶನಗಳು ಅನೇಕ. ಗ್ರಾಮಗಳಿಂದ ನಗರಗಳಿಗೆ ತರುವ ಬಾಳೆಎಲೆಗಳನ್ನು ಪ್ಲಾಸ್ಟಿಕ್ ಹುರಿ, ಹಗ್ಗದಿಂದೇನೂ ಬಿಗಿದಿರುವುದಿಲ್ಲ. ಅವನ್ನು ಬಾಳೆಯ ನಾರುಗಳೇ ಬಂಧಿಸಿರುತ್ತವೆ. ಅಂತೆಯೆ ಎರಡು, ಮೂರು ಎಳನೀರುಗಳನ್ನು ನಾರು ಸೀಳಿ, ಮನೆಗೆ ಸರಾಗವಾಗಿ ಒಯ್ಯುವಂತೆ ನಾಜೂಕಾಗಿ ಕಟ್ಟಿಕೊಡಲಾಗುತ್ತದೆ. ಜಪಾನಿನಲ್ಲಿ ತೆಳುವಾದ, ಮೃದುವಾದ ಹಾಗೂ ಗಂಟುಹಾಕಲು ಸುಲಭವಾದ ಪುರೋಶಿಕಿ ಎಂಬ ಪುನರ್ಬಳಕೆಯ ಬಟ್ಟೆಯನ್ನು ಹುರಿಯಂತೆ ಕಟ್ಟಲು ಉಪಯೋಗಿಸುತ್ತಾರೆ.

ನೆನಪುಗಳು ನೆನಪಾಗಿಯೇ ಇರಬಹುದಲ್ಲ. ‘ಭಾರವಾದ’ ನೆನಪುಗಳು ಏಕೆ? ಅಷ್ಟಕ್ಕೂ ಸಲ್ಲುವ ನೆನಪಿನ ಕಾಣಿಕೆಗಳನ್ನು ನಾವು ಯಾರಿಗೆ ತಾನೆ ತೋರಿಸಿ ಮೆಚ್ಚಿಸಬೇಕಿದೆ. ವಿರಳವೆಂದು ತೋರುವ ಯಾವುದೇ ದೃಶ್ಯ ಕಂಡರೆ ನಮ್ಮ ಮೊಬೈಲ್ ಸೆಲ್ಫಿಗೆ ಮುಂದಾಗುತ್ತದೆ. ವಾಸ್ತವವೆಂದರೆ, ಹಾಗೆ ತೆಗೆದ ಫೋಟೊ ನೋಡುವುದು ನಮ್ಮಂತೆಯೆ ಪರರಿಗೂ ಅಪಥ್ಯ. ನಮ್ಮ ಸಮಯದಂತೆ ಮತ್ತೊಬ್ಬರದೂ ಅಲ್ಲವೆ?

ವಾಚಕರ ವಾಣಿ

ಕ್ರೀಡಾಸಕ್ತ ಮಕ್ಕಳಿಗೆ ಬೇಕು ಉತ್ತೇಜನ

ಡಿ. ಗುಕೇಶ್ 18ನೇ ವಯಸ್ಸಿಗೆ ವಿಶ್ವ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿರುವುದು ಹೆಮ್ಮೆಯ ಸಂಗತಿ. ಭಾರತದ ಚೆಸ್ ದಿಗ್ಗಜ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಅವರ ಮಾರ್ಗದರ್ಶನದಲ್ಲಿ ಅತ್ಯುನ್ನತ ಸಾಧನೆಯನ್ನೇ ಅವರು ಮಾಡಿದ್ದಾರೆ. ವಿಶ್ವನಾಥನ್ ಆನಂದ್ ಅವರ ಶ್ರಮದಿಂದಾಗಿ ಚೆಸ್ ಕ್ರೀಡೆ ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಬಹಳಷ್ಟು ಬೆಳವಣಿಗೆಯನ್ನು ಕಂಡಿದೆ.

ಬ್ರಿಟಿಷರ ವಸಾಹತುಗಳಲ್ಲಿ ಒಂದಾಗಿದ್ದ ಭಾರತದಲ್ಲಿ ಕ್ರಿಕೆಟ್ ಇಂದಿಗೂ ಅಚ್ಚುಮೆಚ್ಚು. ಕ್ರೀಡಾಪಟುಗಳು ಮತ್ತು ಕ್ರೀಡಾಪ್ರೇಮಿಗಳು ಕ್ರಿಕೆಟ್‌ಗೆ ಕೊಡುವಷ್ಟು ಮಹತ್ವ ಹಾಗೂ ತೋರುವ ಅಭಿಮಾನವನ್ನು ಬೇರೆ ಕ್ರೀಡೆಗಳಿಗೆ ತೋರುವುದಿಲ್ಲ. ಈ ಕಾರಣಕ್ಕಾಗಿಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲವು ಕ್ರೀಡೆಗಳಲ್ಲಿ ಭಾರತ ನಿರೀಕ್ಷಿತ ಸಾಧನೆ ತೋರಲು ಸಾಧ್ಯವಾಗುತ್ತಿಲ್ಲ. ಕಿರಿಯ ವಯಸ್ಸಿನಲ್ಲಿ ಗುಕೇಶ್ ಮಾಡಿರುವ ಸಾಧನೆಯು ಚೆಸ್ ಮಾತ್ರವಲ್ಲದೆ, ಬೇರೆ ಬೇರೆ ಕ್ರೀಡೆಗಳಲ್ಲಿ ಸಾಧನೆ ಮಾಡಲು ಹೊರಟಿರುವ ಯುವ ಪ್ರತಿಭೆಗಳಿಗೆ ದಾರಿದೀಪವಾಗಲಿ. ಎಳೆವಯಸ್ಸಿನಲ್ಲೇ ಕ್ರೀಡೆಗಳಲ್ಲಿ ಆಸಕ್ತಿ ತೋರುವ ಮಕ್ಕಳನ್ನು ಪೋಷಕರು ಉತ್ತೇಜಿಸಬೇಕು. ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಆದರೆ ಪ್ರತಿಭೆಗೆ ಪ್ರೋತ್ಸಾಹ ನೀಡುವುದರಲ್ಲಿ, ಪ್ರತಿಭಾಶೋಧ ಮಾಡುವುದರಲ್ಲಿ ಕೊರತೆ ಎದ್ದು ಕಾಣುತ್ತದೆ. ಇದು ನೀಗಬೇಕು.

ಪ್ರಸಾದ್ ಜಿ.ಎಂ., ಮೈಸೂರು

ದೋಸೆ ಹಿಟ್ಟು ಮಾರುವುದರಲ್ಲಿ ತಪ್ಪೇನು?

ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಉದ್ದೇಶಿತ ದೋಸೆ ಹಿಟ್ಟು ಮಾರಾಟದ ಬಗ್ಗೆ ಕೆಲವರು ಅಸಂತೃಪ್ತಿ ವ್ಯಕ್ತಪಡಿಸಿರುವುದು ವರದಿಯಾಗಿದೆ. ಯಾವುದೇ ಸಂಸ್ಥೆಯ ಮೂಲ ಉದ್ದೇಶ ಲಾಭ ಗಳಿಸುವುದು. ಆ ದಿಸೆಯಲ್ಲಿ ವಿವಿಧ ರೀತಿಯಲ್ಲಿ ತನ್ನ ವ್ಯಾಪಾರವನ್ನು ವಿಸ್ತರಿಸುವುದರಲ್ಲಿ ತಪ್ಪೇನಿದೆ? ಈಗಿನ ಕಾಲದಲ್ಲಿ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ ಹೊಸ ಬಗೆಯ ಚಿಂತನೆಗಳು ಅನಿವಾರ್ಯ.

ಪ್ರಸ್ತುತ ಸಮಾಜದಲ್ಲಿ ನಗರೀಕರಣದ ಪ್ರಭಾವ, ಅವಿಭಕ್ತ ಕುಟುಂಬಗಳ ಕಣ್ಮರೆ, ಕುಟುಂಬವು ಮೂರ್ನಾಲ್ಕು ಮಂದಿಗೇ ಸೀಮಿತವಾಗಿರುವುದರ ನಡುವೆ, ಶಾಲೆಗೆ ಹೋಗುವ ಮಕ್ಕಳಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನದ ಬುತ್ತಿ ತಯಾರಿ ಗೃಹಿಣಿಯರಿಗೆ ಕಷ್ಟವಾಗುತ್ತಿದೆ. ಈ ಅವಕಾಶವನ್ನು ಬೇರೆ ಬೇರೆ ವ್ಯಾಪಾರಿ ಸಂಸ್ಥೆಗಳು ತಮ್ಮ ಉತ್ಪನ್ನಗಳ ಮಾರಾಟದಿಂದ ನಗದೀಕರಿಸಿಕೊಳ್ಳುತ್ತಿರುವಾಗ ಕೆಎಂಎಫ್ ಕೂಡ ಮಾರುಕಟ್ಟೆ ಪ್ರವೇಶಿಸಿ, ಜನಮನ್ನಣೆ ಗಳಿಸಿರುವ ‘ನಂದಿನಿ’ ಬ್ರ್ಯಾಂಡ್‌ನ ಅಡಿ ಜನೋಪಯೋಗಿ ಸೇವೆ, ಸುರಕ್ಷಿತ ಆಹಾರ ಒದಗಿಸುವುದು ಮತ್ತು ಆ ಮೂಲಕ ಲಾಭದ ಯೋಚನೆ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ.

ಶಾಂತಕುಮಾರ್, ಸರ್ಜಾಪುರ

ಸಮ್ಮೇಳನ: ಸ್ವಚ್ಛತೆಗೆ ಇರಲಿ ಗಮನ

ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸ್ವಚ್ಛತೆಗೆ ಒತ್ತು ನೀಡಬೇಕಾದುದು ಅತ್ಯಗತ್ಯ. ಕನ್ನಡ ತಾಯಿ ಮತ್ತು ಪರಿಸರ ತಾಯಿ ಒಂದೇ ತಾಯಿಯ ಮಕ್ಕಳಿದ್ದಂತೆ. ಇಬ್ಬರಿಗೂ ನೋವಾಗದಂತೆ ನಡೆದುಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರದು.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಪರ್ಯಾಯ ಹಣಕಾಸು ಮೂಲ ಹುಡುಕಲಿ

‘ಹಂಪಿ ವಿ.ವಿ: ಅಸ್ಮಿತೆ ಉಳಿಯಲಿ’ ಎಂಬ ಲೇಖನದಲ್ಲಿ (ಸಂಗತ, ಡಿ. 12) ನಾಗೇಶ ಡೂಗನವರ ಅವರು ಹಂಪಿ ವಿಶ್ವವಿದ್ಯಾಲಯದ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಕನ್ನಡ ಭಾಷೆಯ ಆಮೂಲಾಗ್ರ ಅಧ್ಯಯನಕ್ಕಾಗಿ ಮೀಸಲಿರುವ ಏಕೈಕ ವಿಶ್ವವಿದ್ಯಾಲಯವನ್ನು ಉಳಿಸಿ, ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ. ಇದರ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸರ್ಕಾರವು ಅಗತ್ಯ ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡಬೇಕು. ಇದರೊಂದಿಗೆ ವಿಶ್ವವಿದ್ಯಾಲಯವು ತನ್ನ ಸಂಶೋಧನಾ ಕಾರ್ಯಗಳಿಗೆ ಪರ್ಯಾಯ ಹಣಕಾಸು ಮೂಲಗಳನ್ನೂ ಹುಡುಕಿಕೊಳ್ಳಬೇಕು.

ಗಾನ ಶ್ರುತಿ ಎಂ.ಕೆ., ಹುಲಸೂರು, ಬೀದರ್

ನೋಡಲ್ ಅಧಿಕಾರಿ ನೇಮಕದ ಹಿಂದೆ ಹುನ್ನಾರ?

ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲು ವಾರ್ಡ್ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಂದಾಗಿದೆ. ಆದರೆ ಈಗಾಗಲೇ ಬಿಬಿಎಂಪಿ ಸಹಾಯವಾಣಿ ಸಾರ್ವಜನಿಕರಿಗೆ ಲಭ್ಯವಿದೆ. ಇದರಿಂದ ಯಾವ ಇಲಾಖೆಯನ್ನಾದರೂ ಸಂಪರ್ಕಿಸಬಹುದಾಗಿದೆ. ನೇಮಕದ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಬಿಬಿಎಂಪಿ ಚುನಾವಣೆಯನ್ನು ಮತ್ತೂ ಮುಂದೂಡುವ ಹುನ್ನಾರ ಇರಬಹುದು ಎಂಬ ಸಂಶಯ ಮೂಡುತ್ತದೆ.

ಶ್ರೀಸಾಮಾನ್ಯನಿಗೆ ಚುನಾಯಿತ ಪ್ರತಿನಿಧಿಗಳು ಸ್ಥಳೀಯವಾಗಿ ಲಭ್ಯರಿರುತ್ತಾರೆ ಹಾಗೂ ಅವರಿಗೆ ಸ್ಥಳೀಯ ಪೌರ ಸಮಸ್ಯೆಗಳ ಬಗ್ಗೆ ಅರಿವು ಇರುತ್ತದೆ. ಬಿಬಿಎಂಪಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಒಂದು ಹೊರೆಯಾಗಬಹುದು. ಮೇಲಾಗಿ ಬಿಬಿಎಂಪಿ ಕೌನ್ಸಿಲ್ ಅವಧಿ ಮುಗಿದು ನಾಲ್ಕು ವರ್ಷಗಳೇ ಆಗಿದೆ. ಈ ಬಗ್ಗೆ ವಿರೋಧ ಪಕ್ಷಗಳೂ ಚಕಾರ ಎತ್ತುತ್ತಿಲ್ಲ. ಯಾವ ಪಕ್ಷಕ್ಕೂ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸಲು ಕಾಳಜಿ ಇಲ್ಲವೇನೋ ಎನಿಸುತ್ತದೆ.

ಜಿ.ಪಿ.ದಯಾನಂದ, ಬೆಂಗಳೂರು

ಸಾಧಿಸುವ ಛಲ ಬೇಕು

‘ಸಾಧನೆ ಇಲ್ಲದೆ ಸತ್ತರೆ, ಸಾವಿಗೆ ಅವಮಾನ. ಆದರ್ಶ ಇಲ್ಲದೆ ಬದುಕಿದರೆ, ಬದುಕಿಗೆ ಅವಮಾನ’ ಎಂಬ ಸುಭಾಷಿತ (ಪ್ರ.ವಾ., ಡಿ. 6) ಎಷ್ಟೊಂದು ಅರ್ಥಗರ್ಭಿತ. ನಾವು ಎಷ್ಟು ದಿನ ಬದುಕುತ್ತೇವೆ ಅನ್ನುವುದು ಅಮುಖ್ಯ. ಏನನ್ನು ಸಾಧಿಸುತ್ತೇವೆ ಅನ್ನುವುದು ಮುಖ್ಯ. ವ್ಯಕ್ತಿಯ ಉಸಿರು ನಿಂತ ನಂತರವೂ ಆತನನ್ನು ಈ ಸಮಾಜದಲ್ಲಿ ಚಿರಕಾಲ ಜೀವಂತವಾಗಿ ಇಡುವುದು ಆತನ ಸಾಧನೆ ಮಾತ್ರ. ಆದರ್ಶಗಳು ಕೂಡ ಬದುಕಿಗೆ ಅಷ್ಟೇ ಮುಖ್ಯ. ಮಕ್ಕಳಿಗೆ ಈ ವಿಚಾರಗಳನ್ನು ಪೋಷಕರು ಮನವರಿಕೆ ಮಾಡಿಸಬೇಕು.

ನರೇಂದ್ರ ಘೋರ್ಪಡೆ, ಭದ್ರಾವತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ತಬಲಾದಿಂದಲೇ ಪ್ರೀತಿಯ ಪರ್ವತ ಸೃಷ್ಟಿಸಿದ ಮಾಂತ್ರಿಕ

• ಪಂ.ರವೀಂದ್ರ ಯಾವಗಲ್

ಇಡೀ ಜಗತ್ತಿನಲ್ಲಿ ಯಾರೇ ತಬಲಾ ನುಡಿಸಿದರೂ ಅದರಲ್ಲಿ ಒಂದಂಶವಾದರೂ ಉಸ್ತಾದ್ ಜಾಕಿರ್ ಹುಸೇನ್ ಅವರ ಪ್ರೇರಣೆ ಇರಲೇಬೇಕು. ಅವರ ನುಡಿಸಾಣಿಕೆಯಲ್ಲಿದ್ದ ಮಾಂತ್ರಿಕ ಶಕ್ತಿಯ ಅನುಕರಣೆ ಒಂದಲ್ಲಾ ಒಂದು ರೂಪದಲ್ಲಿ ಆಗಲೇಬೇಕು. ಆ ಅಗಾಧ ಅಧ್ಯಯನ, ಹೊಸತನದ ಹುಡುಕಾಟ, ಸಂಶೋಧನೆ ಮುಂದಿನ ಹಲವು ತಲೆಮಾರುಗಳಿಗೆ ಸ್ಫೂರ್ತಿಯಾಗಿ ಹರಿಯಲೇಬೇಕು.

ಪಂಜಾಬಿ ಘರಾಣೆಯಲ್ಲಿ ಅಭ್ಯಾಸ ಮಾಡಿಬಂದ ಉಸ್ತಾದರು ಹಲವು ಘರಾಣೆಗಳ ಬೇಲಿ ದಾಟಿ ಬಲುದೂರ ಸಾಗಿದ್ದರು. ಸಂಪ್ರದಾಯದ ಹಾದಿಯಲ್ಲೇ ಹೆಜ್ಜೆ ಹಾಕಿದ ಅವರು ತಮ್ಮದೇ ಸ್ವಂತಿಕೆಯನ್ನು ಸೃಷ್ಟಿಸಿದರು. ಅವರ ಕಛೇರಿಗಳೆಂದರೆ ವಿದ್ವತ್ ಪ್ರದರ್ಶನದ ಸ್ಪರ್ಧಾತ್ಮಕ ಪರೀಕ್ಷೆಯಾಗಿರಲಿಲ್ಲ. ಮಧುರ ಮಾತುಕತೆ, ನೋಟ, ಒಳನೋಟ, ಪ್ರೀತಿ, ಅಂತಃಕರಣ, ಕರುಣೆಯ ದರ್ಶನವಾಗಿದ್ದವು. ಲೆಕ್ಕಾಚಾರಗಳಿಗೆ ಹೊರತಾಗಿ ಪ್ರೇಮದ ಪ್ರದರ್ಶನ ಅವರ ತಬಲಾ ನುಡಿಸಾಣಿಕೆಯಲ್ಲಿತ್ತು.

ಬತ್ತಳಿಕೆಯಲ್ಲಿ ಅಸ್ತ್ರ, ಬ್ರಹ್ಮಾಸ್ತ್ರಗಳಿದ್ದರೂ ಅವುಗಳನ್ನು ಹಮ್ಮು, ಬಿಮ್ಮು ತೋರಿಸಲು ಎಂದೂ ಬಳಸಿಕೊಳ್ಳಲಿಲ್ಲ. ಪ್ರಧಾನ ಗಾಯಕ, ವಾದ್ಯಗಾರರಿಗೆ ಸಹಕಾರ ತೋರುವ ಪಕ್ಕವಾದ್ಯ ಕಲಾವಿದರಾಗಿಯೇ ತಮ್ಮ ಛಾಪು ಮೂಡಿಸಿದ್ದರು. ತಮ್ಮ ಇಡೀ ಜ್ಞಾನ ಸಂಪತ್ತನ್ನು ಪ್ರೀತಿ ಹಂಚಲು ಬಳಸಿಕೊಂಡರು. ಸಮಚಿತ್ತವಾದ, ಸಮತೋಲಿತವಾದ ಪಕ್ಕವಾದ್ಯ ಸಹಕಾರದ ಮೂಲಕ ತಮ್ಮ ನಾದಗುಣವನ್ನು ಅವರು ಅನಾವರಣಗೊಳಿಸಿದರು.

ಪ್ರತಿಭೆಯಿಂದ ಅವರು ಬಲು ದೊಡ್ಡವರು ನಿಜ. ಆದರೆ, ಗುಣಧರ್ಮದಲ್ಲಿ, ನಡವಳಿಕೆಯಲ್ಲಿ, ಪ್ರೀತಿಯ ಹಂಚಿಕೆಯಲ್ಲಿ ಉಸ್ತಾದರು ಮತ್ತಷ್ಟು, ಮಗದಷ್ಟು ದೊಡ್ಡವರು. ಅದೊಂದು ಪ್ರೀತಿಯ ಪರ್ವತ. 50ಕ್ಕೂ ಹೆಚ್ಚು ವರ್ಷಗಳವರೆಗೆ ಪ್ರಖ್ಯಾತಿಯ ತುತ್ತತುದಿಯಲ್ಲಿ ಮಿನುಗಿದ ಆ ನಕ್ಷತ್ರ ಸೃಷ್ಟಿಸಿದ ಸೋಜಿಗಗಳು ಒಂದೆರಡಲ್ಲ. ವಾದ್ಯಕ್ಕೆ ಹೊಸ ರೂಪ ಕೊಟ್ಟ ಸಾಧನೆ ಒಂದೆಡೆಯಾದರೆ, ವಾದ್ಯದ ಸಾಧ್ಯತೆಯನ್ನು ಬಲು ಎತ್ತರಕ್ಕೆ ವಿಸ್ತರಣೆ ಮಾಡಿದ ಶ್ರೇಷ್ಠತೆ ಇನ್ನೊಂದೆಡೆ.

ಅವರು ವಾದ್ಯ ಹಿಡಿದು ಕುಳಿತಾಗ ಅವರ ಕಿರುನಗು, ರೇಷ್ಮೆಯ ನೂಲಿನಂತಿದ್ದ ಕೂದಲಿನ ಒಳಗೆ ತೂರಿಬರುತ್ತಿದ್ದ ನೋಟವನ್ನು ನೋಡಲಿಕ್ಕಾಗಿಯೇ ರಸಿಕರು ಬಂದು ಸೇರುತ್ತಿದ್ದರು. ಅವರ ಪ್ರತಿಭೆ ಕಂಡು ಜನರು 'ಭಲಾ' ಎಂಬ ಕೂಗು ಮೊಳಗಿಸುತ್ತಿದ್ದರು. ಇದರಿಂದ ಉಸ್ತಾದರು ಉನ್ಮಾದಗೊಳ್ಳುತ್ತಿರಲಿಲ್ಲ, ಮುಖ್ಯ ಕಲಾವಿದರಿಗೆ ತೋರಬೇಕಾದ ಸಹಕಾರದ ಹಾದಿ ಬಿಟ್ಟು ಕದಲುತ್ತಿರಲಿಲ್ಲ. ಹರಿವ ನದಿಯಂತಿದ್ದ ಅವರ ಸಹಕಾರ ಪಕ್ಕವಾದ್ಯಕ್ಕೆ ಒಂದು ದೊಡ್ಡ ಮಾದರಿಯಾಗಿತ್ತು.

ಕಲಾ ಪ್ರಪಂಚದಲ್ಲಿ ಅವರನ್ನು 'ಜಾಕಿರ್ ಭಾಯ್' ಎನ್ನಲು ಹಲವು ಕಾರಣಗಳಿವೆ. ನನ್ನ ಒಡನಾಟಗಳನ್ನೇ ಇಲ್ಲಿ ಬಿಚ್ಚಿಡುತ್ತೇನೆ. ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಬಿರ್ಜು ಮಹಾರಾಜ್ ತಂಡದ ಕಥಕ್ ಹೆಜ್ಜೆಗಳಿಗೆ ಜಾಕಿರ್ ಹುಸೇನ್ ತಬಲಾ ಸಾಥಿಯಾಗಿದ್ದರು. ನೃತ್ಯದ ನಡುವಿನ ಅವಧಿಯಲ್ಲಿ ನಾನು ಅವರನ್ನು ಕಂಡೆ, ನನ್ನನ್ನು ನೋಡಿದ ಕೂಡಲೇ ಪ್ರೀತಿಯ ನಗೆ ಬೀರಿದರು. ನನ್ನ ಕೈಬೆರಳುಗಳಿಗೆ ಹಾಕಿಕೊಂಡಿದ್ದ ಬ್ಯಾಂಡೇಡ್ ಗಮನಸಿದವರೇ ನನ್ನ ಕೈ ಹಿಡಿದು 'ಏನಿದು, ನಿನ್ನ ಬೆರಳುಗಳಿಗೆ ಏನಾಯಿತು' ಎಂದು ಪ್ರಶ್ನಿಸಿದರು. 'ಬೆರಳು ಒಡೆದುಕೊಂಡಿವೆ, ಅದಕ್ಕೆ ಬ್ಯಾಂಡೇಡ್ ಹಾಕಿಕೊಂಡಿದ್ದೇನೆ' ಎಂದೆ. ಅದಕ್ಕವರು 'ಇದು ಸಣ್ಣ ಸೋರಿಯಾಸಿಸ್ ಅಷ್ಟೆ. ಹೆದರಬೇಡ, ಆರೈಕೆ ಮಾಡು, ನ್ಯೂಟ್ರಿಷನ್ ಕ್ರೀಮ್ ಹಚ್ಚು' ಎಂದು ಅವರು ಹೇಳಿದಾಗ ನನ್ನ ಮನಸ್ಸು ಪ್ರೀತಿಯಲ್ಲಿ ಉಕ್ಕಿತ್ತು. ಅವರ ಆತ್ಮೀಯತೆಯನ್ನು ನಾನು ಏನೆಂದು ವರ್ಣಿಸಲಿ?

ಧಾರವಾಡ ಕಲಾಭವನದಲ್ಲಿ ಮೊದಲ ಬಾರಿಗೆ ಅವರ ಸೋಲೊ ತಬಲಾ ಕಛೇರಿ ನಿಗದಿಯಾಗಿತ್ತು, ಟಿಕೆಟ್ ಪ್ರದರ್ಶನ. ಜನರು ಟಿಕೆಟ್‌ಗಾಗಿ ಹೋರಾಟವನ್ನೇ ಮಾಡಿದ್ದರು. ಹಲವು ಪಟ್ಟು ಹೆಚ್ಚು ಹಣ ಕೊಡಲೂ ಸಿದ್ಧರಿದ್ದರು. ಟಿಕೆಟ್ ಸಿಗದ ಕೆಲವರು ಕಲಾಭವನದ ಮೇಲೆ ಕಲ್ಲು ತೂರಿದರು. ಸಂಗೀತ ಕಛೇರಿಗೆ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಕಲ್ಲು ತೂರಾಟ ನಡೆಸಿದ್ದನ್ನು ನಾನು ಎಲ್ಲೂ ಕೇಳಿರಲಿಲ್ಲ. ಅದೇ ಕಾರ್ಯಕ್ರಮದಲ್ಲಿ ಇನ್ನೊಂದು ಆಶ್ಚರ್ಯವೂ ನಡೆಯಿತು. ಕಲಾಮಂದಿರದಲ್ಲಿ ಪರದೆ ಸರಿದಾಗ ಮುಂದಿನ ಸಾಲಿನಲ್ಲಿ ಕುಳಿತಿದ್ದ ಪಂಡಿತ್ ಮಲ್ಲಿಕಾರ್ಜುನ ಮನಸೂರ ಅವರನ್ನು ಕಂಡು ಜಾಕಿರ್ ಹುಸೇನ್, ವೇದಿಕೆಯಿಂದ ಮಗುವಿನಂತೆ ಜಿಗಿದುಬಂದರು. ಮನಸೂರರ ಕಾಲಿಗೆ ಬಿದ್ದು ಮತ್ತೆ ವೇದಿಕೆಗೆ ತೆರಳಿದರು.

ಮತ್ತೊಮ್ಮೆ ಜಾಕಿರ್ ಭಾಯ್ ಬೆಂಗಳೂರಿಗೆ ಬಂದಿದ್ದಾಗ ನಾನು ಕಛೇರಿಗೆ ಹೋಗಲಾಗಿರಲಿಲ್ಲ. ನನ್ನ ಶಿಷ್ಯರು ಅವರನ್ನು ಕಂಡು ಮಾತನಾಡಿಸಿದಾಗ 'ಯಾವಗಲ್ ಏಕೆ ಬಂದಿಲ್ಲ, ಅವನು ಸಿಕ್ಕರೆ ನೇಣು ಹಾಕುತ್ತೇನೆ' ಎಂದಿದ್ದರು. ಇನ್ನೊಮ್ಮೆ ಜಾಕಿರ್ ಭಾಯ್ ಕಛೇರಿಗೆ ನನ್ನ ಮಗ ಕಿರಣ್ ಯಾವಗಲ್ ಹೋಗಿದ್ದ. ಎಂದೋ ಒಮ್ಮೆ ನನ್ನ ಮಗನನ್ನು ನೋಡಿದ್ದ ಅವರು ಗುರುತಿಸಿ ಗ್ರೀನ್ ರೂಮ್‌ಗೆ ಕರೆದು ಸಮೋಸ ತಿನ್ನಿಸಿದ್ದರು. ತಬಲಾ ನುಡಿಸಿ, ಇದು ಹೇಗಿದೆ ಎಂದು ಕೇಳಿದ್ದರು. ಅದಕ್ಕೆ ನನ್ನ ಮಗ ಏನು ಹೇಳಬೇಕು? ಸಣ್ಣವರಿಗೂ ಮಾನ್ಯತೆ ಕೊಡುತ್ತಿದ್ದ ಅವರ ಗುಣವೇ ದೊಡ್ಡದು. ಆಗ ಸಂಘಟಕರನ್ನು ಕರೆದು, 'ಈ ಹುಡುಗನನ್ನು ಮುಂದಿನ ಸಾಲಿನಲ್ಲೇ ಕೂರಿಸಿ, ಕಛೇರಿ ಮುಗಿಯುವವರೆಗೂ ನನ್ನ ಕಣ್ಣಿಗೆ ಇವನು ಕಾಣಬೇಕು' ಎಂದು ಹೇಳಿದ್ದರು.

ನಾವೇನೂ ಉಸ್ತಾದ್ ಜಾಕಿರ್ ಹುಸೇನ್ ಅವರ ಆತ್ಮೀಯ ವಲಯದಲ್ಲಿ ಗುರುತಿಸಿಕೊಂಡವರಲ್ಲ. ಆದರೂ ಅವರು ತೋರುತ್ತಿದ್ದ ಆತ್ಮೀಯತೆ ಬಲು ದೊಡ್ಡದು. ಪ್ರತಿಯೊಬ್ಬರಿಗೂ ಇದೇ ಪ್ರೀತಿ, ಆತ್ಮೀಯತೆ ತೋರುತ್ತಿದ್ದರು. ಅದರಿಂದಲೇ ಅವರು ದೊಡ್ಡವರಾದರು. ಅವರೀಗ ಇಲ್ಲ ಎಂಬ ಭಾವನೆ ನಮ್ಮೊಳಗಿಲ್ಲ. ಅವರು ಹಂಚಿದ ಪ್ರೀತಿ, ನಾದ ದುಂದುಭಿ ನದಿಯಾಗಿ ಹರಿಯಲಿದೆ.

(ಲೇಖಕ: ಖ್ಯಾತ ತಬಲಾ ವಾದಕ) **ನಿರೂಪಣೆ: ಎಂ.ಎನ್.ಯೋಗೇಶ್**

ವಾಹ್ ತಾಜ್...

ಟಾಟಾದ 'ತಾಜ್ ಮಹಲ್' ಚಹಾ ಬ್ರ್ಯಾಂಡ್‌ಗೆ 1988ರಲ್ಲಿ ಜಾಹೀರಾತು ನೀಡಿದ್ದ ಜಾಕಿರ್ ಹುಸೇನ್, 'ವಾಹ್ ತಾಜ್' ಸಂಭಾಷಣೆಯ ಮೂಲಕ ಹಳ್ಳಿಹಳ್ಳಿಗಳಲ್ಲೂ ಗುರುತಿಸಿಕೊಂಡಿದ್ದರು. ಇಂದಿನ ಜಾಲತಾಣಗಳ ಯುಗದಂತೆ ಆಗ ಅವರ ಆ ಮಾತು ದೊಡ್ಡ ಮಟ್ಟದಲ್ಲಿ 'ವೈರಲ್' ಆಗಿತ್ತು. ಜನರು ಅವರನ್ನು ಕಂಡಾಗಲೆಲ್ಲಾ 'ವಾಹ್ ತಾಜ್' ಎಂದೇ ಕರೆಯುತ್ತಿದ್ದರು.

ಬೆಂಗಳೂರಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ 2006ರಲ್ಲಿ ನಡೆದಿದ್ದ 'ಪ್ರೇಮಾಂಜಲಿ ಹಬ್ಬ'ದಲ್ಲಿ ಕಥಕ್ ಸಾಮ್ರಾಟ ಪಂಡಿತ್ ಬಿರ್ಜು ಮಹಾರಾಜ್ ಅವರ ನೃತ್ಯಕ್ಕೆ ಜಾಕಿರ್ ಹುಸೇನ್ ಅವರು ತಬಲಾ ನುಡಿಸಿದಾಗ... ಚಿತ್ರ ಪ್ರಜಾವಾಣಿ ಆರ್ಕೈವ್ಸ್

ಸಂತೂರ್ ದಂತಕತೆ ಪಂಡಿತ್ ಶಿವಕುಮಾರ್ ಶರ್ಮಾ ಅವರೊಂದಿಗೆ ಉಸ್ತಾದ್ ಜುಗಲ್‌ಬಂದಿ

ತಂದೆ ಉಸ್ತಾದ್ ಅಲ್ಲಾ ರಖಾ ಅವರೊಂದಿಗೆ ಯುವ ಜಾಕಿರ್

ಜಾಕಿರ್ ಹುಸೇನ್

- 1951ರ ಮಾರ್ಚ್ 9ರಂದು ಮುಂಬೈನಲ್ಲಿ ಜನನ
- 7 ವರ್ಷ ವಯಸ್ಸಿನಲ್ಲಿ ಮೊದಲ ಪ್ರದರ್ಶನ ನೀಡಿದ ಪೋರ. 12 ವರ್ಷಕ್ಕೆ ಸಂಗೀತ ಕಛೇರಿ ನೀಡಲು ಆರಂಭ
- ಮುಂಬೈನ ಸೇಂಟ್ ಮೈಕೆಲ್ ಪ್ರೌಢಶಾಲೆಯಲ್ಲಿ ಆರಂಭಿಕ ಶಿಕ್ಷಣ. ಸೇಂಟ್ ಕ್ಸೇವಿಯರ್ ಕಾಲೇಜಿನಿಂದ ಪದವಿ
- ವೃತ್ತಿ ಜೀವನದ ಆರಂಭದಲ್ಲಿ ಸಂಗೀತ ದಿಗ್ಗಜರಾದ ರವಿಶಂಕರ್, ಅಲಿ ಅಕ್ಬರ್ ಖಾನ್ ಮತ್ತು ಶಿವಕುಮಾರ್ ಶರ್ಮಾ ಸೇರಿದಂತೆ ಹಲವರ ಜೊತೆ ಕಛೇರಿ
- 1973ರಲ್ಲಿ ಅವರು ಹುಟ್ಟುಹಾಕಿದ 'ಪ್ರಾಜೆಕ್ಟ್ ಶಕ್ತಿ'ಯಿಂದ ಜನಪ್ರಿಯತೆ ಉತ್ತುಂಗಕ್ಕೆ. ಈ ಬ್ಯಾಂಡ್‌ನ ಅಡಿಯಲ್ಲಿ ಭಾರತ ಮತ್ತು ಪಾಶ್ಚಿಮಾತ್ಯ ಸಂಗೀತದ ಸಮ್ಮಿಶ್ರಣವನ್ನು ಸಂಗೀತ ಪ್ರೇಮಿಗಳಿಗೆ ಉಣಪಡಿಸಿದ ಜಾಕಿರ್ ಹುಸೇನ್, ಬ್ರಿಟನ್ ಗಿಟಾರ್ ವಾದಕ ಜಾನ್ ಮ್ಯಾಕ್‌ಲಾಗ್ಲಿನ್, ಪಿಟೀಲು ವಾದಕ ಎಲ್ ಶಂಕರ್ ಮತ್ತು ಪಕ್ಕವಾದ್ಯ ಕಲಾವಿದ ವಿಕ್ಕು ವಿನಾಯಕರಾಮ್ ತಂಡ
- ಪಾಶ್ಚಿಮಾತ್ಯ ಸಂಗೀತಗಾರರಾದ ಚೆಲೋವಾದಕ (ಸೆಲ್ಲಿಸ್ಟ್) ಯೊ–ಯೊ ಮಾ, ಜಾಸ್ ಸಂಗೀತಗಾರ ಚಾರ್ಲ್ಸ್ ಲಾಯ್ಡ್, ಬ್ಯಾಂಜೋ (ಕೈವೀಣೆ) ವಾದಕ ಬೆಲಾ ಫ್ಲೆಕ್, ಬಾಸ್ ವಾದ್ಯಗಾರ ಎಡ್ಗರ್ ಮೆಯರ್, ಲಯವಾದ್ಯಗಾರ ಮಿಕಿ ಹಾರ್ಟ್ ಮತ್ತು ದಿ ಬೀಟಲ್ಸ್‌ನ ಜಾರ್ಜ್ ಹ್ಯಾರಿಸನ್ ಅವರೊಂದಿಗೆ ಸೇರಿ ಮಾಡಿದ ಸಂಗೀತ ಪ್ರಯೋಗಗಳಿಂದಾಗಿ ಭಾರತದ ಶಾಸ್ತ್ರೀಯ ಸಂಗೀತ ಅಂತರರಾಷ್ಟ್ರೀಯ ಮಟ್ಟಕ್ಕೆ. ಹುಸೇನ್ ಅವರಿಗೆ 'ಜಾಗತಿಕ ಸಾಂಸ್ಕೃತಿಕ ರಾಯಭಾರಿ' ಎಂಬ ಸ್ಥಾನಮಾನದ ಗೌರವ
- ಸಿನಿಮಾಗಳಲ್ಲೂ ಮಿಂಚಿದ ಸಂಗೀತ ತಾರೆ. 'ಇನ್ ಕಸ್ಟಡಿ', 'ದಿ ಮಿಸ್ಟಿಕ್ ಮಸರ್', 'ಮಿಸ್ಟರ್ ಆ್ಯಂಡ್ ಮಿಸೆಸ್ ಅಯ್ಯರ್', 'ಸಾಜ್' (ಹಿಂದಿ ಚಿತ್ರ), 'ಹೀಟ್ ಆ್ಯಂಡ್ ಡಸ್ಟ್', 'ಮಿಸ್ ಬೀಟ್ಟೀಸ್ ಚಿಲ್ಡ್ರನ್' ಮತ್ತು 'ಮಾಂಟೋ' ಚಿತ್ರಗಳಿಗೆ ಸಂಗೀತ ನಿರ್ದೇಶನ. 'ಹೀಟ್ ಆ್ಯಂಡ್ ಡಸ್ಟ್', 'ದಿ ಪರ್ಫೆಕ್ಟ್ ಮರ್ಡರ್', 'ಜಾಸ್' ಸಿನಿಮಾಗಳಲ್ಲಿ ನಟನೆ
- 1990ರಲ್ಲಿ ಸಂಗೀತ ನಾಟಕ ಅಕಾಡೆಮಿ ಗೌರವ, 2018ರಲ್ಲಿ ಅಕಾಡೆಮಿ ಫೆಲೋಶಿಪ್
- 1999ರಲ್ಲಿ ಅಮೆರಿಕದ ನ್ಯಾಷನಲ್ ಎಂಡೋಮೆಂಟ್ ಫಾರ್ ದಿ ಆರ್ಟ್ಸ್‌ನ ನ್ಯಾಷನಲ್ ಹೆರಿಟೇಜ್ ಫೆಲೋಶಿಪ್‌ಗೆ ಭಾಜನ
- 2016ರಲ್ಲಿ ಅಮೆರಿಕದ ಶ್ವೇತಭವನದಲ್ಲಿ 'ಆಲ್ ಸ್ಟಾರ್ ಗ್ಲೋಬಲ್' ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಧ್ಯಕ್ಷ ಬರಾಕ್ ಒಬಾಮ ಆಮಂತ್ರಣ. ಈ ಆಹ್ವಾನ ಪಡೆದ ಭಾರತದ ಮೊದಲ ಸಂಗೀತಗಾರ ಎಂಬ ಹೆಗ್ಗಳಿಕೆ
- ಜಾಗತಿಕ ಸಂಗೀತ ಕ್ಷೇತ್ರಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಾಗಿ 2017ರಲ್ಲಿ 'ಎಸ್‌ಎಫ್ ಜಾಸ್ ಜೀವಮಾನ ಸಾಧನೆ ಪ್ರಶಸ್ತಿ'ಯ ಗೌರವ
- ಸಂಗೀತ ಕ್ಷೇತ್ರದಲ್ಲಿ ಮಾಡಿದ ಜೀವಮಾನ ಸಾಧನೆಗಾಗಿ ಒಮಾನ್‌ನಲ್ಲಿ 2022ರಲ್ಲಿ ಆಗಾ ಖಾನ್ ಪ್ರಶಸ್ತಿಯ ಗರಿ
- ವಿಜ್ಞಾನ ಮತ್ತು ಕಲಾ ಕ್ಷೇತ್ರದಲ್ಲಿ ಜೀವಮಾನ ಸಾಧನೆ ಮಾಡಿದವರಿಗೆ ನೀಡಲಾಗುವ ಜಪಾನಿನ ಪ್ರತಿಷ್ಠಿತ ಕ್ಯೋಟೋ ಬಹುಮಾನಕ್ಕೆ 2022ರಲ್ಲಿ ಆಯ್ಕೆ
- ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರಕ್ಕೆ ಭಾಜನರಾದ ಹಿರಿಮೆ. 1998ರಲ್ಲಿ ಪದ್ಮಶ್ರೀ, 2002ರಲ್ಲಿ ಪದ್ಮಭೂಷಣ 2023ರಲ್ಲಿ ಪದ್ಮ ವಿಭೂಷಣ ಗೌರವ
- ನಾಲ್ಕು ಗ್ರ್ಯಾಮಿ ಪುರಸ್ಕಾರಗಳ ಗೌರವ. 1991ರಲ್ಲಿ ಆಲ್ಬಂ 'ಪ್ಲಾನೆಟ್ ಡ್ರಮ್'ಗಾಗಿ ಮೊದಲ ಬಾರಿ ಪುರಸ್ಕಾರ. ಈ ವರ್ಷ (2024) ಮೂರು ಗ್ರ್ಯಾಮಿ ಪುರಸ್ಕಾರಗಳಿಗೆ (ಉತ್ತಮ ಜಾಗತಿಕ ಸಂಗೀತ ಪ್ರದರ್ಶನ ವಿಭಾಗದಲ್ಲಿ 'ಪಶ್ತೋ'ಗೆ, 'ಆ್ಯಸ್ ವಿ ಸ್ಪೀಕ್‌ಗೆ' ಉತ್ತಮ ಸಮಕಾಲೀನ ಸಂಗೀತ ವಾದ್ಯ ಆಲ್ಬಂ ವಿಭಾಗದಲ್ಲಿ ಮತ್ತು 'ದಿಸ್ ಮೊಮೆಂಟ್'ಗೆ ಉತ್ತಮ ಜಾಗತಿಕ ಸಂಗೀತ ಆಲ್ಬಂ ವಿಭಾಗದಲ್ಲಿ) ಭಾಜನ

ನನ್ನ ಮಾನಸ ಗುರು...

• ಪಂ. ಶ್ರೀಧರ ಮಾಂಡ್ರೆ

ನಾನೂ ಸೇರಿದಂತೆ ಅಸಂಖ್ಯಾತ ತಬಲಾ ವಾದಕರು ಉಸ್ತಾದ್ ಜಾಕಿರ್ ಹುಸೇನ್ ಅವರಿಂದ ನೇರವಾಗಿ ಪಾಠ ಹೇಳಿಸಿಕೊಳ್ಳದಿರಬಹುದು, ಆದರೆ, ನಮ್ಮೆಲ್ಲರಿಗೂ ಅವರೇ ಮಾನಸ ಗುರುವಾಗಿದ್ದಾರೆ. ಅವರನ್ನು ನೋಡಿದರೆ ಸಾಕು, ನಮ್ಮ ಕೈಬೆರಳುಗಳು ಭೋಲ್‌ಗಳಿಂದ ಕುಣಿಯುತ್ತವೆ. ಮನಸ್ಸಿನಲ್ಲಿ ಆನಂದ ತುಂಬಿಕೊಳ್ಳುತ್ತದೆ. ತಬಲಾಕ್ಕೂ ಮೊದಲೇ ಗಾಯನ ಕಾರ್ಯಕ್ರಮಗಳಲ್ಲಿ ಪಖವಾಜ್ ವಾದ್ಯ ಇರುತ್ತಿತ್ತು. ಸಿದ್ಧಾರ್ ಖಾನ್ ದಾಡಿವಾಲೆ ತಬಲಕ್ಕೆ ಮೂಲಪುರುಷ. ಪಖವಾಜ್‌ನ ಭೋಲ್‌ಗಳನ್ನು ಖಾನ್ ಸಾಹೇಬರೇ ತಬಲಾಕ್ಕೆ ಅಳವಡಿಸಿದರು. ನಂತರ ಜಾಕಿರ್ ಹುಸೇನ್ ಅವರ ತಂದೆ ಉಸ್ತಾದ್ ಅಲ್ಲಾ ರಖಾ ತಬಲಾಕ್ಕೆ ಹೊಸ ರೂಪ ಕೊಟ್ಟರು. ತಂದೆಯ ಹಾದಿಯಲ್ಲೇ ನಡೆದ ಉಸ್ತಾದ್ ಜಾಕಿರ್ ಹುಸೇನ್ ಅವರು ವಾದ್ಯವನ್ನು ಬಲು ಎತ್ತರಕ್ಕೆ ಕೊಂಡೊಯ್ದರು. ಅವರಿಂದಾಗಿಯೇ ತಬಲಾ ಎಲ್ಲಾ ಪ್ರಕಾರಗಳ ಸಂಗೀತದ ಅವಿಭಾಜ್ಯ ಅಂಗವಾಯಿತು.

5 ವರ್ಷಗಳ ಹಿಂದೆ ನಾನು ಪುಣೆಯಲ್ಲಿ ಉಸ್ತಾದ್ ಅವರನ್ನು ಭೇಟಿಯಾಗುವ ಅವಕಾಶ ಒದಗಿಬಂದಿತ್ತು. ಸುಭಾಷ್ ವ್ಯಾಸ್ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಉಸ್ತಾದರು ಸೋಲೊ ಕಛೇರಿ ನುಡಿಸಿದ್ದರು. ಶಶಿ ವ್ಯಾಸ್, ಹುಸೇನರಿಗೆ ನನ್ನನ್ನು ಪರಿಚಯಿಸಿದರು. ಉಸ್ತಾದರು 'ನೀನು ನುಡಿಸುವುದನ್ನು ನಾನು ಕೇಳಬೇಕು' ಎಂದರು. ಅವರ ಪ್ರೀತಿಗೆ ಬೆರಗಾದೆ. ಅವರ ಕಾಲಿಗೆ ಹಣೆ ಹಚ್ಚಿ ನಮಸ್ಕರಿಸಿದೆ, ಕಣ್ಣಲ್ಲಿ ನೀರು ಸುರಿಯಿತು. 'ಯಾಕೆ ಅಳುತ್ತೀಯ' ಎಂದು ಕೇಳಿದರು. 'ನೀವು ನನ್ನ ದೇವರು, ದೇವರ ದರ್ಶನ ಸಿಕ್ಕಿತು, ಕಣ್ಣಲ್ಲಿ ನೀರು ಬಂತು' ಎಂದೆ. ಕೈಗಳನ್ನು ಹಿಡಿದು ಆಶೀರ್ವಾದ ಮಾಡಿದರು. ಅವರ ಪ್ರೀತಿಯೇ ನನಗೆ ಪಾಠವಾಗಿದೆ, ಹಾಗಾಗಿ ಅವರೇ ಮಾನಸ ಗುರುವಾಗಿದ್ದಾರೆ.

(ಲೇಖಕ: ತಬಲಾ ವಾದಕ)

ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಅವರೊಂದಿಗೆ ನವದೆಹಲಿಯಲ್ಲಿ 1995ರ ಫೆ.27ರಂದು ಜಾಕಿರ್ ಹುಸೇನ್ ಅವರು ಕಛೇರಿ ನೀಡಿದ ಸಂದರ್ಭ

'ನಾನು ತಬಲಾ ಕೊಟ್ಟೆ ಅವರು ಜೀವನ ಕೊಟ್ಟರು'

'ಹಿಂದಿನಂತೆ ನಾನು ಇನ್ನು ತಬಲಾ ಮಾಡಲಾರೆ' –ಹೀಗೆಂದವರು ಹರಿದಾಸ್ ವಾಟ್ಕರ್. ಜಾಕಿರ್ ಹುಸೇನ್ ಅವರಿಗೆ ತಬಲಾ ಮಾಡಿಕೊಡುತ್ತಿದ್ದವರು ಹರಿದಾಸ್. ಮುಂಬೈನ ಕಂಜುರ್‌ಮಾರ್ಗ್‌ನಲ್ಲಿ ತಮ್ಮ ವರ್ಕ್‌ಶಾಪ್‌ನಲ್ಲಿ ಮಾತನಾಡಿದ ಅವರು, 'ಜಾಕಿರ್ ಅವರ ಸಾವಿಗೆ ಕಂಬನಿ ಮಿಡಿದರು. 'ನಾನು ಉಸ್ತಾದ್ ಅಲ್ಲಾ ರಖಾ ಅವರಿಗೆ ತಬಲಾ ಮಾಡಿಕೊಡಲು ಆರಂಭಿಸಿದೆ. 1998ರಿಂದ ಹುಸೇನ್ ಅವರಿಗೆ ತಬಲಾ ಮಾಡಿಕೊಡತೊಡಗಿದೆ. ತಮಗೆ ಯಾವ ರೀತಿಯ ತಬಲಾ ಬೇಕು, ಯಾವಾಗ ಬೇಕು ಎನ್ನುವ ಬಗ್ಗೆ ಅವರು ಬಹಳ ಖಚಿತತೆ ಹೊಂದಿದ್ದರು. ವಾದ್ಯದ ಶ್ರುತಿಯ ಬಗ್ಗೆ ಅವರು ಹೆಚ್ಚು ಗಮನ ಹರಿಸುತ್ತಿದ್ದರು' ಎಂದರು.

ಜಾಕಿರ್ ಅವರಿಗೆ ಲೆಕ್ಕವಿಲ್ಲದಷ್ಟು ತಬಲಾಗಳನ್ನು ಮಾಡಿಕೊಟ್ಟಿದ್ದಾಗಿ ಮತ್ತು ಅವರ ಹಳೆಯ ತಬಲಾಗಳನ್ನು ರಿಪೇರಿ ಮಾಡುತ್ತಿದ್ದುದಾಗಿ ಅವರು ಹೇಳಿದರು. ಈ ಆಗಸ್ಟ್‌ನಲ್ಲಿ ಗುರು ಪೂರ್ಣಿಮೆಯ ದಿನ ಹರಿದಾಸ್, ಜಾಕಿರ್ ಅವರನ್ನು ಕೊನೆಯದಾಗಿ ಭೇಟಿಯಾಗಿದ್ದರು. 'ನಾನು ಅವರಿಗೆ ತಬಲಾ ಕೊಟ್ಟೆ. ಅವರು ನನಗೆ ಜೀವನ ಕೊಟ್ಟರು' ಎಂದು ಕೃತಜ್ಞತೆಯಿಂದ ಜಾಕಿರ್ ಅವರನ್ನು ಸ್ಮರಿಸಿದರು ಹರಿದಾಸ್.

ಮಗುವಿನ ಕಿವಿಗೆ 'ಭೋಲ್'

ತಮ್ಮ ತಂದೆ ಅಲ್ಲಾ ರಖಾ ತಮಗೆ ಹಸುಗೂಸು ಆಗಿದ್ದಾಗಲೇ ಹೇಗೆ ತಬಲಾದ ತಾಳವನ್ನು ಬೋಧಿಸಿದ್ದರು ಎನ್ನುವುದನ್ನು ಎಂಟು ವರ್ಷದ ಹಿಂದೆ ಜಾಕಿರ್ ಹುಸೇನ್ ಹೇಳಿಕೊಂಡಿದ್ದರು.

'ಹುಟ್ಟಿದ ನಂತರ ನನ್ನನ್ನು ಮನೆಗೆ ಕರೆತರಲಾಯಿತು. ಮಗುವಿನ ಕಿವಿಯಲ್ಲಿ ತಂದೆ ಪ್ರಾರ್ಥನೆ ಮಾಡುವುದು ಸಂಪ್ರದಾಯ. ತಂದೆ ನನ್ನನ್ನು ತಮ್ಮ ತೋಳಿನಲ್ಲಿ ತೆಗೆದುಕೊಂಡರು. ನನ್ನ ಕಿವಿಯ ಬಳಿ ತಮ್ಮ ಬಾಯಿ ಇಟ್ಟು, ಪ್ರಾರ್ಥನೆ ಮಾಡುವ ಬದಲು ತಬಲಾ ಭೋಲ್‌ಗಳನ್ನು (ತಾಳಾಕ್ಷರ) ಉಸುರಿದರು. ಕೋಪಗೊಂಡ ನನ್ನ ತಾಯಿ, ಇದೇನು ಮಾಡುತ್ತಿರುವಿರಿ, ನೀವು ಮಗುವಿನ ಕಿವಿಯಲ್ಲಿ ಹೇಳಬೇಕಿರುವುದು ಮಂತ್ರ ಎಂದರು. ಅದಕ್ಕೆ ತಂದೆ, ಇದೇ ನನ್ನ ಮಂತ್ರ, ನಾನು ಪ್ರಾರ್ಥಿಸುವುದು ಹೀಗೇ ಎಂದಿದ್ದರು' ಎಂದು ಸ್ಮರಿಸಿದ್ದರು ಜಾಕಿರ್ ಹುಸೇನ್.

ಶ್ರದ್ಧಾವಂತ ಮುಸ್ಲಿಂ ಆಗಿದ್ದ ಜಾಕಿರ್ ಹುಸೇನ್, ತಾನು ಸರಸ್ವತಿ ಮತ್ತು ಗಣೇಶನ ಆರಾಧಕ ಎಂದಿದ್ದರು.

ಬೆಲೆ ಕಟ್ಟಲಾಗದ ₹5: 12 ವರ್ಷದವರಿದ್ದಾಗ ಜಾಕಿರ್ ಹುಸೇನ್ ಅವರು ತಂದೆ ಜತೆ ಒಂದು ಸಂಗೀತ ಕಛೇರಿಯಲ್ಲಿ ಭಾಗವಹಿಸಿದ್ದರು. ಪಂಡಿತ್ ರವಿಶಂಕರ್, ಉಸ್ತಾದ್ ಅಲಿ ಅಕ್ಬರ್ ಖಾನ್, ಬಿಸ್ಮಿಲ್ಲಾ ಖಾನ್, ಪಂಡಿತ್ ಶಾಂತಪ್ರಸಾದ್, ಪಂಡಿತ್ ಕಿಶನ್ ಮಹಾರಾಜ್ ಮುಂತಾದ ದಿಗ್ಗಜರು ಭಾಗವಹಿಸಿದ್ದ ಕಛೇರಿ ಅದು. ಆ ಕಾರ್ಯಕ್ರಮದ ಸಂಭಾವನೆಯಾಗಿ ಜಾಕಿರ್ ಅವರಿಗೆ ₹5 ಸಿಕ್ಕಿತ್ತು. ಅದರ ಬಗ್ಗೆ ಅವರಿಗೆ ವಿಶೇಷ ಪ್ರೀತಿ ಇತ್ತು. 'ನಾನು ನನ್ನ ಜೀವನದಲ್ಲಿ ಸಾಕಷ್ಟು ದುಡಿದಿದ್ದೇನೆ. ಆದರೆ, ಆ ₹5 ನನಗೆ ಬಹಳ ಮೌಲ್ಯಯುತವಾದದ್ದು' ಎಂದು ನುಡಿದಿದ್ದರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಿತೀಯ ಗಂ. 10-57 ನಕ್ಷತ್ರ: ಪುನರ್ವಸು ಗಂ. 24-44, ಯೋಗ: ಬ್ರಹ್ಮ ಗಂ. 21-11 ಕರಣ: ಗರ ಗಂ. 10-57, ಧನು ಮಾಸದ 01 ನೇ ದಿನ, ಮಳೆನಕ್ಷತ್ರ: ಮೂಲ 1.
ರಾಹುಕಾಲ : ಮಧ್ಯಾಹ್ನ 03-00 – 4-30
ಸೂರ್ಯೋದಯ : 06-50 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 14 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 1, 9

ಮೇಷ: ಮನೆ ನಿರ್ಮಾಣ ಕೆಲಸಗಳು ಪೂರ್ಣಗೊಂಡು ನೆಮ್ಮದಿ ಪ್ರಾಪ್ತಿ. ಅನಿರೀಕ್ಷಿತ ಘಟನೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಅವಶ್ಯಕತೆಯಿಲ್ಲ. ಅಪೇಕ್ಷಿಸಿದ ಪ್ರಗತಿಯನ್ನು ಅನಾಯಾಸವಾಗಿ ಸಂಪಾದಿಸುವಿರಿ.

ವೃಷಭ: ಶುಭ ಕಾರ್ಯಗಳಿಗೆ ಉತ್ತಮ ಕಾಲ. ಅವಕಾಶಗಳಿಂದ ವಂಚಿತರಾಗದಿರಿ. ತಾಯಿ ಅವರ ಮಾನಸಿಕ ಆರೋಗ್ಯ ದಿನದಿಂದ ದಿನಕ್ಕೆ ಸುಧಾರಿಸಲಿದೆ. ಪ್ರಯತ್ನದಿಂದ ಕೆಲಸಗಳಲ್ಲೂ ಜಯ ಗಳಿಸುವಿರಿ.

ಮಿಥುನ: ಕುಟುಂಬದ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಬರದಂತೆ ನೋಡಿಕೊಳ್ಳುವುದು ಉತ್ತಮ. ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಸಮಯದಲ್ಲಿ ಜಾಗ್ರತರಾಗಿರಿ. ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಕರ್ಕಾಟಕ: ಷೇರು ವ್ಯವಹಾರ, ಎಲೆಕ್ಟ್ರಾನಿಕ್ ವ್ಯಾಪಾರದಲ್ಲಿ ಲಾಭ ಪಡೆಯುವಿರಿ. ಹಣ ಕೈಯಲ್ಲಿ ಉಳಿಯುವುದು ಕಷ್ಟಕರ ವಿಷಯ. ಬಹುಮಟ್ಟಿನ ಪ್ರಯತ್ನದಿಂದ ಆರ್ಥಿಕತೆಯಲ್ಲಿ ಸುಧಾರಣೆಯಾಗುವುದು.

ಸಿಂಹ: ನಿಮಗಿರುವ ಬುದ್ಧಿವಂತಿಕೆಯ, ಸಾಮರ್ಥ್ಯದ ಅರಿವು ನಿಮಗಿಲ್ಲ. ಧೈರ್ಯದಿಂದ ಮುನ್ನುಗ್ಗಿ. ಚರ್ಮದ ವಸ್ತುಗಳ ಉದ್ಯಮ ಹಾಗೂ ರಫ್ತು ವ್ಯಾಪಾರಿಗಳಿಗೆ ಲಾಭವಾಗುವುದು.

ಕನ್ಯಾ: ಮನೆಗೆ ನೂತನ ಸಾಕು ಪ್ರಾಣಿಯ ಆಗಮನ ಮಕ್ಕಳಲ್ಲಿ ಸಂತೋಷ ತರಲಿದೆ. ವೃತ್ತಿಯಲ್ಲಿ ಪೈಪೋಟಿಗಳನ್ನು ಸಹೋದ್ಯೋಗಿಗಳಿಂದ ಎದುರಿಸಬೇಕಾಗಬಹುದು. ಶೀತ ಸಂಬಂಧಿತ ಅನಾರೋಗ್ಯವು ಉಂಟಾಗಬಹುದು.

ತುಲಾ: ಜನರನ್ನು ನಿಯಂತ್ರಿಸುವ ಕೆಲಸದಲ್ಲಿ ಚಾಣಾಕ್ಷತನ ತೋರಿಸುವುದು ಅನಿವಾರ್ಯ. ಮಕ್ಕಳ ಅನಾರೋಗ್ಯದ ಕಾರಣ ಗಾಬರಿಯ ವಾತಾವರಣ ಸೃಷ್ಟಿಯಾಗಬಹುದು.

ವೃಶ್ಚಿಕ: ಪ್ರಯತ್ನ ಬಲಕ್ಕೆ, ಆತ್ಮವಿಶ್ವಾಸಕ್ಕೆ ಸರಿಸಮಾನಾದ ಫಲ ನಿಶ್ಚಿತವಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಅಗತ್ಯವಿದೆ. ಸಹೋದರರ ಸರ್ವತೋಮುಖ ಪ್ರಗತಿಯಿಂದಾಗಿ ಮಾನಸಿಕ ನೆಮ್ಮದಿ ಪ್ರಾಪ್ತಿ.

ಧನು: ಕರ್ತವ್ಯ ನಿಷ್ಠೆಯ ಬಗ್ಗೆ ಆರೋಪ ಬರದಂತೆ ವ್ಯವಹಾರ ಮಾಡಿ. ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವಿರಿ.

ಮಕರ: ಮನೆಯ ರಿಪೇರಿ ಕೆಲಸಗಳು ಅನಿವಾರ್ಯ. ಅಧಿಕ ಹಣ ವ್ಯಯವಾಗುತ್ತದೆ. ವೃತ್ತಿಯಲ್ಲಿ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವಿರಿ. ವಿಜ್ಞಾನಿಗಳಿಗೆ ನಿರೀಕ್ಷಿತ ಯಶಸ್ಸು ದೊರೆತು ಸಂತಸವಾಗುವುದು.

ಕುಂಭ: ನೌಕರಿ ಲಾಭದ ಜತೆಗೆ ಹೊಸ ಆಡಳಿತ ವರ್ಗದಿಂದ ಅಧಿಕಾರಿಗಳ ಕಿರುಕುಳವು ನಿವಾರಣೆಯಾಗಲಿದೆ. ಮೇಲಧಿಕಾರಿಗಳಿಂದ ಅಪೇಕ್ಷಿಸುವ ಸಹಕಾರಗಳು ದೊರೆಯಲಿವೆ. ರಾಜಕೀಯ ವ್ಯಕ್ತಿಗಳ ಪರಿಚಯವಾಗಲಿದೆ.

ಮೀನ: ಕಷ್ಟಪಟ್ಟು ದುಡಿಯುವುದರಿಂದ ಹಣ ಕೈಯಲ್ಲಿ ನಿಲ್ಲುವುದು. ಹಣಕಾಸಿನ ವಿಚಾರದಲ್ಲಿ ಇನ್ನೊಂದು ಮೆಟ್ಟಿಲು ಹತ್ತುವಂತೆ ಆಗಲಿದೆ. ಇತರರಿಗೆ ಸಹಾಯ ಮಾಡುವಲ್ಲಿ ಒಂದು ಬಗೆಯ ಆನಂದ ಅನುಭವಿಸುವಿರಿ.

ಮರ ನಿಜವಾದ ಮಾನವ ಧರ್ಮಪೀಠ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
89

ಮರಗಳ ಮೇಲೆ ಹಕ್ಕಿಗಳು ಗೂಡು ಕಟ್ಟುತ್ತವೆ. 'ಗೂಡು ಕಟ್ಟೀರಿ ಅದಕ್ಕೆ ರೆಂಟ್ ಕೊಡಿ' ಎಂದು ಯಾವುದಾದರೂ ಮರ ಕೇಳ್ತೈತೇನು? 'ಚೊಲೋ ಹಕ್ಕಿಗಳಿಗೆ ಮಾತ್ರ ಗೂಡು ಕಟ್ಟಲು ಜಾಗ ಕೊಡ್ತೇನ' ಎಂದು ಯಾವುದಾದರೂ ಮರ ಹೇಳತ್ತೈತೇನು? ಕಾಗೆಗೂ ಗೂಡು ಕಟ್ಟಲು ಅವಕಾಶ ಕೊಡುತ್ತದೆ. ಗಿಳಿಗಳಿಗೆ, ಹಾಡುವ ಕೋಗಿಲೆಗಳಿಗೂ ಗೂಡು ಕಟ್ಟಲು ಅವಕಾಶ ಕೊಡುತ್ತದೆ. ನಾವಾದರೆ ಮೂರು ತಿಂಗಳ ಮುಂಗಡ ತೆಗೆದುಕೊಂಡಿರುತ್ತೇವೆ. ಒಂದು ಸ್ವಲ್ಪ ತಡವಾದರೆ ಬಾಡಿಗೆ ಕೊಟ್ಟಿಲ್ಲ ಅಂತ ಜಗಳಾ ತೆಗೀತೀರ್ತೀವಿ. ಮರ ಹಾಗೆ ಮಾಡಲ್ಲ.

ನಾವು ಯಾವುದಾದರೂ ದೇವಾಲಯ ಕಟ್ಟಿದರೆ ಇವರು ಮಾತ್ರ ಬರಬೇಕು, ಈ ಧರ್ಮದವರು ಮಾತ್ರ ಬರಬೇಕು. ಇವರು ದೇವಾಲಯದ ಒಳಕ್ಕೆ ಬರಬಾರದು ಎನ್ನುತ್ತೇವೆ. ಆದರೆ ಮರಗಳಿಗೆ ತಾರತಮ್ಯ ಇಲ್ಲ. ಯಾವ ಧರ್ಮದವ ಬಂದರೂ ಅದು ನೆರಳು ಕೊಡುತ್ತೈತಿ. ನಿಜವಾದ ಅರ್ಥದಲ್ಲಿ ಮಾನವ ಧರ್ಮ ಪಾಲಿಸೋದು ಮರಗಳು ಮಾತ್ರ. ಅದೇ ನಿಜವಾದ ಮಾನವ ಧರ್ಮಪೀಠ. ಅದಕ್ಕೆ ನಿಸರ್ಗದಲ್ಲಿ ನಿತ್ಯೋತ್ಸವ ಐತಿ. ಹರಿಯುವಿಕೆ ಐತಿ, ಹಂಚುವಿಕೆ ಐತಿ. ಬೆಳೆಯುವಿಕೆ ಐತಿ, ಬೆಳೆಸುವಿಕೆ ಐತಿ. ಅರಳಿಸುವಿಕೆ ಐತಿ, ಮರಳಿಸುವಿಕೆ ಐತಿ.

ನಮ್ಮದು ಹಾಂಗಲ್ಲ, ಎಲ್ಲಿ ಹೋದರೂ ಬೇಡೋದೆ ಕೆಲಸ. ಮನುಷ್ಯನ ಹೃದಯ ಅಕ್ಷಯಪಾತ್ರೆಯಾಗಬೇಕಿತ್ತು. ಅದು ಭಿಕ್ಷಾ ಪಾತ್ರೆ ಆಗ್ಯೆತಿ. ಮನುಷ್ಯ ಓದಿದಾನ, ಪಿಎಚ್‌ಡಿ ಮಾಡಿದಾನ, ದೊಡ್ಡ ಆಫೀಸರ್ ಆಗಿದಾನ. ಆದರೂ ಟೇಬಲ್ ಕೆಳಗೆ ಕೈ ಒಡ್ಡಾನ. ಡಿವಿಜಿ ಬಹಳ ಚೆನ್ನಾಗಿ ಹೇಳುತ್ತಾರೆ. 'ನೀನು ಉಣ್ಣುವ ಮೊದಲು ತುತ್ತನ್ನು ಕೈಯಲ್ಲಿ ಹಿಡಿದು ಕೇಳಿಕೋ ಈ ಅನ್ನ ನಿನ್ನ ಬೆವರಿನ ಹನಿಯಲ್ಲಿ ಬೆಂದಿದ್ದೋ ಅಥವಾ ಬಡವರ ಕಣ್ಣೀರಿನ ಹನಿಯಲ್ಲಿ ಬೆಂದಿದ್ದೋ ಅಂತ' ಎಂದು. ಮನುಷ್ಯ ಬೇಡೋದು ಬಿಡೋದಿಲ್ಲ. ಕನ್ಯಾ ನೋಡೋಕೆ ಹೋದಾಗಲೂ ಎಷ್ಟು ಕೊಡ್ತೀರಿ ಅಂತ ಕೇಳ್ತಾನ. ಮನುಷ್ಯನಿಗೆ ಒಂದು ಸತ್ಯ ಗೊತ್ತಿರಬೇಕು. ಮಾವ ಕೊಟ್ಟಿದ್ದು ಬರೀ ಮನೆತನಕ, ಮಹದೇವ ಕೊಟ್ಟಿದ್ದು ಕೊನೆತನಕ ಎಂದು.

ಒಂದು ದೇವಸ್ಥಾನ ಇತ್ತು. ಒಂದು ಮುದುಕಿ ದಿನಾ ಕಸ ಹೊಡೀತಿತ್ತು. 50 ವರ್ಷದಿಂದ ಇದೇ ಕೆಲಸ ಮಾಡುತ್ತಿತ್ತು. ದೇವರಿಗೆ ಒಂದು ದಿನ ಈ ಮುದುಕಿಗೆ ಏನಾರ ಕೊಡಬೇಕು ಅಂತ ಅನಿಸಿತು. ಮೇಲಿಂದ ಕೆಳಕ್ಕೆ ಬಂದ. ಮುದುಕಿ ಮುಂದೆ ನಿಂತ. ಆಕಿ 'ನೀ ಯಾರು' ಅಂತ ಕೇಳಿದಳು. 'ನಾನು ದೇವರು ಕೈಲಾಸದಿಂದ ಬಂದೇನಿ' ಅಂದ. 'ನೀನು ಯಾಕ್ ಬಂದೆ. ಯಾರು ಕರೆದಿದ್ದರು ನಿನ್ನ' ಎಂದು ಕೇಳಿದಳು ಮುದುಕಿ. 'ಯಾರೂ ಕರೆದಿಲ್ಲ. ನಾನೇ ಬಂದೆ. ನೀನು 50 ವರ್ಷದಿಂದ ನನ್ನ ಸೇವೆ ಮಾಡುತ್ತಾ ಇದ್ದೀಯಲ್ಲ. ಅದಕ್ಕೆ ನಿನಗೆ ಏನಾದರೂ ಕೊಟ್ಟು ಹೋಗೋಣ ಅಂತ ಬಂದೆ' ಎಂದ. 'ಹೌದಾ ನನಗೆ ಏನೂ ಬೇಡ. ನಾನು ನಿನ್ನನ್ನು ಏನೂ ಕೇಳಿಲ್ಲ. ಈಗಲೂ ಕೇಳೋದಿಲ್ಲ' ಅಂದಳು. 'ನಾನು ಕೈಲಾಸದಿಂದ ಬಂದೇನಿ ನಿರಾಸೆ ಮಾಡಬೇಡ. ಏನಾದರೂ ಕೇಳು' ಎಂದ ದೇವರು. 'ನಿನಗೆ ಕೊಡಬೇಕು ಅಂತಾ ಇದ್ದರೆ ನಾನು ಸಾಯೋತನಕ ನಿನ್ನ ಸೇವೆ ಮಾಡಲು ನನ್ನ ಕೈಗಳಿಗೆ ಶಕ್ತಿ ಕೊಡು' ಎಂದು ಕೇಳಿದಳು ಮುದುಕಿ. ಅದೇ ನಿಜವಾದ ಬೇಡಿಕೆ.

ಪದಬಂಧ 5894

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನದೊಳಗೆ ಒತ್ತುವುದು (3)
2.ಕೆಸರು ಇಲ್ಲಿದೆ (2)
5.ಪರೆಯೊಳಗೆ ಕಾಣಿಸಿದ ಸಂಪ್ರದಾಯ ! (4)
7.ಸಂದೇಶವಾಹಕನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (4)
9.ಔಷಧಿಯ ಗುಳಿಗೆ (2)
10.ಆರಂಭದ ವಿದ್ಯಾಭ್ಯಾಸ (7)
12.ಸಂದುಗೊಂದುಗಳಲ್ಲಿ ಕಾಣುತ್ತಿರುವ ಅಂಟು! (2)
15.ಯುದ್ಧ ಭೂಮಿ ಇಲ್ಲಿದೆ (4)
16.ಅವನ ಸಾವು ಹೀಗೆ ಬಂದಿದೆ! (4)
17.ಕಡಲ ಹತ್ತಿರ ಪಡೆದ ಸಾಲ! (2)
18.ದೇವನೊಲಿದರೆ ಕೊರಡೂ ಹೀಗೆ ಚಿಗುರುವುದು (3)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಬಯಕೆ (4)
3.ಕಪಾಟಿನ ಹತ್ತಿರ ಮೋಸಗಾರನಿದ್ದಾನಲ್ಲಾ! (3)
4.ಕರೆಯೋಲೆಯಲ್ಲಿ ಬಟ್ಟೆಯ ಅಂಚು ಕಾಣುತ್ತಿದೆ (2)
6.ಪಣ ಕಟ್ಟ ತೋರಿಸಿದ ಅಳತೆ (4)
8.ಈಕೆ ದುಷ್ಟ ಹೆಂಗಸು (3)
10.ಭಾವ ಕೊನೆಗಿದ್ದಾಗ ಕಣ್ಣಿಗೆ ಕಾಣಿಸುವುದು! (4)
11.ಶಿರದಲ್ಲಿ ತಾತ್ಕಾಲಿಕ ವಸತಿ (3)
13.ಕರ್ನಾಟಕದ ನೈರುತ್ಯದಲ್ಲಿರುವ ಪ್ರಮುಖ ರೇವುಪಟ್ಟಣ (4)
14. ಪಾಕದ ನಂತರ ತಯಾರಿಸಿದ ಶರಬತ್ತು (3)
16.ಅಗ್ಗಳಿಕೆಯಲ್ಲಿ ಕಡಿಮೆ ಬೆಲೆ (2)



5893ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಾಟಮದ್ದು 3.ತಲೆಗಾಪು 5.ಡಿಕಾವು 7.ಪಡಪೋಸಿ 9.ಗುಣೆ 10.ಡಿಕ್ಕಿ 11.ತಲೋದರಿ 14.ಹೆಡಿಗೆ 16.ಹಕೀಕತ್ತು 17.ದಳಪತಿ

ಮೇಲಿಂದ ಕೆಳಕ್ಕೆ: 1.ನಾಡಾಡಿ 2.ಮರೆವು 3.ತಡಬಡ 4.ಪುರುಷ 6.ಕಾಗುಣಿತ 7.ಪಠಾರಿ 8.ಸಿಡಿಮಿಡಿ 12.ದಸಕತ್ತು 13.ಪ್ರವಾಹ 14.ಹೆಚ್ಚಳ 15.ಗೆಳತಿ

ಸುಡೊಕು 6279

3	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6278 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,768
ಇಂದಿನ ಅಂತ್ಯ	24,668
▼	100
ದಿನದ ಕನಿಷ್ಠ	24,647

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹615
12 ಕ್ಕೆ	₹80
ಮೈಸೂರು	
100ಕ್ಕೆ	₹615

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹300-625

ದ್ವಿತಳಿ (ಬಿ.ವಿ) ₹368-702

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹187

ಆರ್‌ಎಸ್‌ಎಸ್-5 ₹182

ಗುಡ್ ಲಾಟ್ ₹177

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1470)
ಸೋಯಾ (ರಿಫೈನ್ಡ್)	₹1270 (1260)
ಸೂರ್ಯಕಾಂತ (ರಿಫೈನ್ಡ್)	₹1360 (1355)
ಪಾಮೋಲಿನ್	₹1360 (1360)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕುಮಟ	
ಚಾಲಿ	33169-37019
ಚಿಪ್ಪು	18099-26299
ಕೋಕ	6099-22569
ಹಳೆಚಾಲಿ	37089-39499
ಹೊಸಚಾಲಿ	23569-27599
ಪುತ್ತೂರು	
ಕೋಕ	22000-28500
ಹೊಸತು	25000-33500
ಹಳತು	36000-48500
ಸಾಗರ	
ಬಿಳಿಗೋಟು	11899-25969
ಚಾಲಿ	24699-34329
ಕೋಕ	8099-25299
ಕೆಂಪುಗೋಟು	22899-28899
ರಾಶಿ	36899-50839
ಸಿಪ್ಪೆಗೋಟು	8589-16889
ಶಿವಮೊಗ್ಗ	
ಬೆಟ್ಟೆ	47200-57600
ಗೊರಬಲು	17300-32509
ಹೊಸತು	42109-50389
ರಾಶಿ	31469-50500
ಸರಕು	52069-86999
ಸಿದ್ದಾಪುರ	
ಬಿಳಿಗೋಟು	5000-27811
ಚಾಲಿ	26600-37100
ಕೋಕ	1689-24399
ಕೆಂಪುಗೋಟು	2100-22482
ರಾಶಿ	28212-47699
ತಟ್ಟಿಬೆಟ್ಟೆ	11012-27600
ಶಿರಸಿ	
ಬೆಟ್ಟೆ	30199-35108
ಬಿಳಿಗೋಟು	24199-31323
ಚಾಲಿ	34039-38841
ಕೆಂಪುಗೋಟು	12909-22719
ರಾಶಿ	43089-46299
ಯಲ್ಲಾಪುರ	
ಅಪಿ	58895-58895
ಬಿಳಿಗೋಟು	14499-29299
ಚಾಲಿ	30001-39289
ಕೋಕ	4609-18812
ಕೆಂಪುಗೋಟು	14899-26617
ರಾಶಿ	39369-57169
ತಟ್ಟಿಬೆಟ್ಟೆ	28009-38099
ಕಾರ್ಕಳ	
ಹೊಸತು	25000-33500
ಹಳತು	30000-48500

ಹಿಗ್ಗಿದ ವ್ಯಾಪಾರ ಕೊರತೆ

ನವದೆಹಲಿ (ಪಿಟಿಐ): ನವೆಂಬರ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ವಿದೇಶಿ ವ್ಯಾಪಾರದ ಕೊರತೆಯು ₹3.21 ಲಕ್ಷ ಕೋಟಿ ಆಗಿದೆ. ಇದು ಗರಿಷ್ಠ ಮಟ್ಟವಾಗಿದೆ.

ಮದುವೆ ಹಾಗೂ ಹಬ್ಬದ ಋತುವಿನಿಂದಾಗಿ ಚಿನ್ನದ ಆಮದು ಪ್ರಮಾಣದಲ್ಲಿ ಏರಿಕೆಯಾಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸೋಮವಾರ ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಈ ಅಂತರವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ನವೆಂಬರ್‌ನಲ್ಲಿ ₹2.72 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತು ಪ್ರಮಾಣದಲ್ಲಿ ಶೇ 4.85ರಷ್ಟು ಏರಿಕೆಯಾಗಿದೆ. ₹5.93 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 27ರಷ್ಟು ಏರಿಕೆಯಾಗಿದೆ. ಚಿನ್ನ, ಬೆಳ್ಳಿ, ಸಸ್ಯಜನ್ಯ ಎಣ್ಣೆ ಮತ್ತು ರಸಗೊಬ್ಬರದ ಆಮದಿನಲ್ಲಿ ಏರಿಕೆಯಾಗಿದೆ.

ಚಿನ್ನ ಆಮದು ದಾಖಲೆ: ನವೆಂಬರ್‌ನಲ್ಲಿ ಭಾರತವು ದಾಖಲೆ ಪ್ರಮಾಣದಲ್ಲಿ ಚಿನ್ನವನ್ನು ಆಮದು ಮಾಡಿಕೊಂಡಿದೆ. ಒಟ್ಟು ₹1.26 ಲಕ್ಷ ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹29 ಸಾವಿರ ಕೋಟಿ ಮೌಲ್ಯದ ಚಿನ್ನ ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಏರಿಕೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಗಂಗಾಧರ್ ರವರು

ಜನನ: 30.06.1950 • ಮರಣ: 17.12.2021

ಇಂತಿ: ಶ್ರೀಮತಿ ನಂಜಮ್ಮ ಹಾಗೂ ಕುಟುಂಬವರ್ಗದವರು

ಗರಿಷ್ಠ ಪಿಂಚಣಿ 17.4 ಲಕ್ಷ ಅರ್ಜಿ ಸಲ್ಲಿಕೆ: ಕೇಂದ್ರ

ಶೋಭಾ ಕರಂದ್ಲಾಜೆ

ನವದೆಹಲಿ (ಪಿಟಿಐ): ಉದ್ಯೋಗಿ ಪಿಂಚಣಿ ಯೋಜನೆ (ಇಪಿಎಸ್) 1995ರ ಅಡಿ ಗರಿಷ್ಠ ಮಿತಿಗಿಂತಲೂ ಹೆಚ್ಚಿನ ಪಿಂಚಣಿ ಕೋರಿ 17.4 ಲಕ್ಷ ಉದ್ಯೋಗಿಗಳು ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) ಅರ್ಜಿ ಸಲ್ಲಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ) 2014ರ ಯೋಜನೆಯ ಸಿಂಧುತ್ವವನ್ನು 2022ರ ನವೆಂಬರ್ 2ರಂದು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಈವರೆಗೆ ಪಿಂಚಣಿಯ ಮಾಸಿಕ ಗರಿಷ್ಠ ವೇತನವನ್ನು ₹15 ಸಾವಿರಕ್ಕೆ ನಿಗದಿಪಡಿಸ-ಲಾಗಿದೆ.

ಉದ್ಯೋಗಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಇಪಿಎಫ್‌ಒ ಅವಕಾಶ ಕಲ್ಪಿಸಿತ್ತು (ಉದ್ಯೋಗಿ ಮತ್ತು ಉದ್ಯೋಗದಾತ ಸಂಸ್ಥೆಯ ಜಂಟಿ ಘೋಷಣೆ ಸಹಿತ) ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸಂಸತ್‌ಗೆ ತಿಳಿಸಿದ್ದಾರೆ.

ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಒದಗಿಸಲು 1995ರ ನವೆಂಬರ್ 19ರಂದು ಇಪಿಎಫ್‌ಒದಿಂದ ಉದ್ಯೋಗಿ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಇದರಡಿ 58 ವರ್ಷ ದಾಟಿದ ಉದ್ಯೋಗಿಗಳಿಗೆ ಪಿಂಚಣಿ ಸೌಲಭ್ಯ ದೊರೆಯಲಿದೆ.

ತರಕಾರಿ ದರ ಇಳಿಕೆ: ರೆಪೊ ದರ ಕಡಿತ ಸಾಧ್ಯತೆ?

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧರಿತ ಹಣದುಬ್ಬರವು ನವೆಂಬರ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇ 1.89ರಷ್ಟು ದಾಖಲಾಗಿದೆ.

ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಕೂಡ ಇಳಿಕೆಯಾಗಿದೆ. ಹಾಗಾಗಿ, ಫೆಬ್ರುವರಿಯಲ್ಲಿ ನಡೆಯಲಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ರೆಪೊ ದರವನ್ನು ಶೇ 6.25ರಿಂದ ಶೇ 6.5ಕ್ಕೆ ಹೆಚ್ಚಿಸಲಾಗಿತ್ತು. ಸತತ 11ನೇ ಬಾರಿಗೆ ಸಭೆಯು ಯಥಾಸ್ಥಿತಿ ಕಾಯ್ದುಕೊಂಡಿದೆ.

ಸದ್ಯ ಚಿಲ್ಲರೆ ಮತ್ತು ಸಗಟು ಹಣದುಬ್ಬರ ಇಳಿಕೆಯಾಗಿ-ರುವುದರಿಂದ ರೆಪೊ ಆಧರಿತ ಗೃಹ, ವಾಹನ ಮತ್ತು ಇತರೆ ಸಾಲ ಪಡೆದಿರುವ ಸಾಲಗಾರರಲ್ಲಿ ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆ ಗರಿಗೆದರಿದೆ.

ಸಗಟು ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 1.25ರಷ್ಟು ಹಾಗೂ ಅಕ್ಟೋಬರ್‌ನಲ್ಲಿ ಶೇ 2.36ರಷ್ಟು ದಾಖಲಾಗಿತ್ತು. ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 0.39ರಷ್ಟು ದಾಖಲಾಗಿತ್ತು.

ಅಕ್ಟೋಬರ್‌ನಲ್ಲಿ ಶೇ 13.54ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ನವೆಂಬರ್‌ನಲ್ಲಿ ಶೇ 8.63ಕ್ಕೆ ಇಳಿಕೆಯಾಗಿದೆ. ತರಕಾರಿಗಳ ಬೆಲೆಯು ಶೇ 63.04ರಿಂದ ಶೇ 28.57ರಷ್ಟಕ್ಕೆ ಇಳಿದಿದೆ. ಆದರೆ, ಆಲೂಗೆಡ್ಡೆ ಬೆಲೆಯಲ್ಲಿ ಇಳಿಕೆಯಾಗಿಲ್ಲ(ಶೇ 82.79). ಈರುಳ್ಳಿ ಬೆಲೆಯು ಶೇ 2.85ರಷ್ಟಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ವರದಿ ಸೋಮವಾರ ತಿಳಿಸಿದೆ.

ಇಂಧನ ಮತ್ತು ವಿದ್ಯುತ್ ಸೂಚ್ಯಂಕದಲ್ಲಿ ಅಲ್ಪ ಬದಲಾವಣೆಯಾಗಿದೆ. ಅಕ್ಟೋಬರ್‌ನಲ್ಲಿ ಶೇ 5.79ರಷ್ಟು ಇದ್ದಿದ್ದು, ನವೆಂಬರ್‌ನಲ್ಲಿ ಶೇ 5.83ಕ್ಕೆ ಇಳಿಕೆಯಾಗಿದೆ. ಆದರೆ, ತಯಾರಿಕಾ ಸರಕುಗಳ ಬೆಲೆಯು ಶೇ 1.50ರಿಂದ ಶೇ 2ಕ್ಕೆ ಹೆಚ್ಚಳವಾಗಿದೆ.

'ಪ್ರಾಥಮಿಕ ಆಹಾರ ಸರಕುಗಳ ಬೆಲೆಯಲ್ಲಿ ಇಳಿಕೆಯಾಗಿರುವುದರಿಂದ ಹಣದುಬ್ಬರ ಇಳಿಕೆಯಾಗಿದೆ. ಆದರೆ, ಸದ್ಯ ಜಾಗತಿಕ ಮಟ್ಟದಲ್ಲಿ ಶೇ 0.7ರಷ್ಟು ಬೆಲೆ ಏರಿಕೆಯಾಗಿದೆ. ಹಾಗಾಗಿ, ಡಿಸೆಂಬರ್‌ನಲ್ಲಿ ಸಗಟು ಹಣದುಬ್ಬರವು ಏರಿಕೆಯಾಗಬಹುದು' ಎಂದು ಬಾರ್ಕ್‌ಲೇಸ್ ಸೆಕ್ಯುರಿಟೀಸ್ ಸಂಸ್ಥೆ ತಿಳಿಸಿದೆ.

ಎಂಪಿಸಿ ಸಭೆಯು ಚಿಲ್ಲರೆ ಹಣದುಬ್ಬರದ ತಾಳಿಕೆ ಮಟ್ಟವನ್ನು ಕನಿಷ್ಠ 2ರಷ್ಟು ಹಾಗೂ ಗರಿಷ್ಠ 6ಕ್ಕೆ ನಿಗದಿಪಡಿಸಿದೆ. ಸದ್ಯ ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 5.48ಕ್ಕೆ ಇಳಿಕೆಯಾಗಿದೆ. ಹಾಗಾಗಿ, ಸಭೆಯು ರೆಪೊ ದರದ ಕಡಿತಕ್ಕೆ ಮುಂದಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

'ಮುಂಗಾರು ಅವಧಿಯಲ್ಲಿ ಬೆಳೆದಿರುವ ಆಹಾರ ಧಾನ್ಯಗಳು ಮಾರುಕಟ್ಟೆಗೆ ಆವಕವಾಗುತ್ತಿವೆ. ಹಿಂಗಾರು ಅವಧಿಯಲ್ಲೂ ಬಿತ್ತನೆ ಉತ್ತಮವಾಗಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಆಹಾರ ಪದಾರ್ಥಗಳ ಬೆಲೆಯು ಇಳಿಕೆಯಾಗಬಹುದು' ಎಂದು ಐಸಿಆರ್‌ಎ ಹಿರಿಯ ಅರ್ಥಶಾಸ್ತ್ರಜ್ಞ ರಾಹುಲ್ ಅಗರವಾಲ್ ಹೇಳಿದ್ದಾರೆ.

ಅಡಿಕೆ ಕ್ಯಾನ್ಸರ್‌ಕಾರಕ: ಮರು ಸಂಶೋಧನೆಗೆ ಕೇಂದ್ರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಡಿಕೆ ಕ್ಯಾನ್ಸರ್ ಕಾರಕ ಎಂಬ ಫಲಿತಾಂಶ ಬಂದಿರುವ ಸಂಶೋಧನಾ ಅಧ್ಯಯನಗಳಿಗೆ ಬಳಸಿದ್ದ ಮಾದರಿಗಳಲ್ಲಿ ಲೋಪಗಳು ಕಂಡುಬಂದಿದ್ದು, ಇದರ ಸತ್ಯಾಸತ್ಯತೆಯ ಪರಾಮರ್ಶೆಗಾಗಿ ಅಧ್ಯಯನ ಕೈಗೊಳ್ಳಲು ಕಾಸರಗೋಡಿನಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯು (ಸಿಪಿಸಿಆರ್‌ಐ) ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೇಂದ್ರ ಕೃಷಿ ಸಚಿವಾಲಯವು ತಾತ್ವಿಕ ಒಪ್ಪಿಗೆ ನೀಡಿದೆ.

'ಅಡಿಕೆ ಸೇವನೆಯಿಂದ ಕ್ಯಾನ್ಸರ್ ಬರುತ್ತದೆ ಎಂದು ಈಚೆಗೆ ನಡೆದ ಕೆಲವು ಅಧ್ಯಯನಗಳು ಹೇಳಿವೆ. ಆದರೆ, ಆ ಅಧ್ಯಯನಕ್ಕೆ ಬಳಸಲಾಗಿದ್ದ ಮಾದರಿ ವೈಜ್ಞಾನಿಕವಾಗಿರಲಿಲ್ಲ. ಅವುಗಳಲ್ಲಿ ಕೆಲವು ನ್ಯೂನತೆಗಳಿರುವುದು ಕಂಡುಬಂದಿದೆ' ಎಂದು ಸಿಪಿಸಿಆರ್‌ಐ ನಿರ್ದೇಶಕ ಕೆ. ಬಾಲಚಂದ್ರ ಹೆಬ್ಬಾರ್ ಅವರು, 'ಪ್ರಜಾವಾಣಿ'ಗೆ ತಿಳಿಸಿದರು.

ಈ ಕುರಿತು ವಿಸ್ತೃತ ಅಧ್ಯಯನ ಕೈಗೊಳ್ಳುವ ಕುರಿತು ಕೇಂದ್ರ ಕೃಷಿ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿದ್ದೆವು. ಮೂರು ವರ್ಷ ನಡೆಯುವ ಈ ಅಧ್ಯಯನಕ್ಕೆ ₹9.90 ಕೋಟಿ ವೆಚ್ಚವಾಗಲಿದೆ. ನಮ್ಮ ಪ್ರಸ್ತಾವಕ್ಕೆ ಸಚಿವಾಲಯವು ತಾತ್ವಿಕ ಒಪ್ಪಿಗೆ ನೀಡಿದೆ. ಅನುದಾನ ಇನ್ನಷ್ಟೇ ಬಿಡುಗಡೆಯಾಗಬೇಕಿದೆ ಎಂದು ವಿವರಿಸಿದರು.

'ಅಡಿಕೆಯಿಂದ ಕ್ಯಾನ್ಸರ್ ಬರುತ್ತದೆ ಎಂದು ಫಲಿತಾಂಶ ಬಂದಿರುವ ಸಂಶೋಧನೆಗಳಿಗೆ ಅಡಿಕೆ ಜೊತೆಗೆ ತಂಬಾಕು ಮತ್ತು ಇತರೆ ಉತ್ಪನ್ನಗಳನ್ನು ಬೆರೆಸಿದ್ದ ಉತ್ಪನ್ನಗಳನ್ನು ಬಳಸಲಾಗಿತ್ತು. ತಂಬಾಕು ಮತ್ತಿತರ ಪದಾರ್ಥ ಬೆರೆಸದ ಅಡಿಕೆಯನ್ನು ಸೇವಿಸುವವರ ಆರೋಗ್ಯದ ಮೇಲೆ ಏನಾದರೂ ದುಷ್ಪರಿಣಾಮ ಉಂಟಾಗುತ್ತದೆಯೇ ಎಂಬ ಕುರಿತು ಸಮಗ್ರವಾಗಿ ಸಂಶೋಧನೆ ನಡೆಸುವ ಅಗತ್ಯವಿದೆ. ಈ ಅಂಶಗಳು ನಮ್ಮ ಪ್ರಸ್ತಾವದಲ್ಲಿವೆ' ಎಂದು ಹೇಳಿದರು.

'ವೈಜ್ಞಾನಿಕವಾಗಿ ನಿಖರವಾದ ಫಲಿತಾಂಶ ಪಡೆಯಲು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಲಿದ್ದೇವೆ. ತಂಬಾಕು ಬೆರೆಸದ ಅಡಿಕೆ ಸೇವಿಸುವವರನ್ನು ಅಧ್ಯಯನಕ್ಕೆ ಒಳಪಡಿಸಲಿದ್ದೇವೆ. ಅಧ್ಯಯನವನ್ನು ಹೇಗೆ ಕೈಗೊಳ್ಳಬೇಕು, ಇದಕ್ಕೆ ವೈಜ್ಞಾನಿಕ ಪುರಾವೆಗಳನ್ನು ಸಂಗ್ರಹಿಸುವಾಗ ಏನೆಲ್ಲ ಎಚ್ಚರ ವಹಿಸಬೇಕು ಎಂಬ ಬಗ್ಗೆ ಕೃಷಿ ವಿಜ್ಞಾನಿಗಳು ಹಾಗೂ ತಜ್ಞ ವೈದ್ಯರ ಜೊತೆಗೆ ಸಮಗ್ರವಾಗಿ ಚಿಂತನ– ಮಂಥನ ನಡೆಸಲಾಗಿದೆ' ಎಂದರು.

ಕೃಷಿ ಸಚಿವಾಲಯದಿಂದ ಹಣಕಾಸಿನ ನೆರವು ಲಭ್ಯವಾಗುತ್ತಿದ್ದಂತೆಯೇ ಸಿಪಿಸಿಆರ್‌ಐ ಉಸ್ತುವಾರಿಯಲ್ಲೇ ಈ ಅಧ್ಯಯನ ನಡೆಲಿದೆ' ಎಂದು ಹೇಳಿದರು.

ಬಾಂಗ್ಲಾ: ಮುಂದಿನ ವರ್ಷ ಚುನಾವಣೆ?

ಢಾಕಾ (ಪಿಟಿಐ): 2025ರ ಅಂತ್ಯದಲ್ಲಿ ಅಥವಾ 2026ರ ಆರಂಭದಲ್ಲಿ ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ತಿಳಿಸಿದರು.

ಬಾಂಗ್ಲಾದೇಶ ವಿಮೋಚನೆಯ ನೆನಪಿಗಾಗಿ ಆಚರಿಸುವ 'ವಿಜಯ ದಿವಸ್' ಅಂಗವಾಗಿ ದೂರದರ್ಶನದಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಯೂನುಸ್, 'ದೇಶದಲ್ಲಿನ ರಾಜಕೀಯ ಸ್ಥಿತಿಗತಿ ಹಾಗೂ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳುವ ಸುಧಾರಣೆಗಳ ಆಧಾರದ ಮೇಲೆ ಚುನಾವಣೆಗೆ ಸಮಯ ನಿಗದಿ ಮಾಡಲಾಗುವುದು. ಎಲ್ಲ ಪ್ರಮುಖ ಸುಧಾರಣೆಗಳು ಪೂರ್ಣಗೊಂಡ ಬಳಿಕವೇ ಚುನಾವಣೆಯತ್ತ ಗಮನಹರಿಸುವಂತೆ ಮನವಿ ಮಾಡಿದ್ದೇನೆ' ಎಂದು ಹೇಳಿದರು.

ದೋಷರಹಿತವಾಗಿ ಮತದಾರರ ಪಟ್ಟಿಯನ್ನು ತಯಾರಿಸಿ ಅದರ ಆಧಾರದ ಮೇಲೆ ಕೆಲ ಸುಧಾರಣೆಗಳೊಂದಿಗೆ 2025ರ ಅಂತ್ಯದ ವೇಳೆಗೆ ಚುನಾವಣೆ ನಡೆಸಲು ಸಾಧ್ಯವಿದೆ. ರಾಷ್ಟ್ರೀಯ ಒಮ್ಮತ ಹಾಗೂ ಚುನಾವಣಾ ಆಯೋಗದ ಸಲಹೆಗಳೊಂದಿಗೆ ಸುಧಾರಣೆಗಳನ್ನು ತರಲು 6 ತಿಂಗಳು ಬೇಕಾಗುತ್ತದೆ' ಎಂದು ಹೇಳಿದರು.

12 ಮಂದಿ ಭಾರತೀಯರ ಮೃತದೇಹ ಪತ್ತೆ

ಟಿಬಿಲಿಸಿ (ಪಿಟಿಐ): ಜಾರ್ಜಿಯಾದ ಗುಡೌರಿಯಲ್ಲಿರುವ ಹಿಮಚ್ಛಾದಿತ ಬೆಟ್ಟಗಳ ಮೇಲಿರುವ ರೆಸ್ಟೋರೆಂಟ್‌ನಲ್ಲಿ 12 ಮಂದಿ ಭಾರತೀಯರ ಮೃತದೇಹಗಳು ಪತ್ತೆಯಾಗಿವೆ ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಮೃತರ ದೇಹದ ಮೇಲೆ ಯಾವುದೇ ಗಾಯ, ಹಲ್ಲೆ ಹಾಗೂ ಹಿಂಸಾಚಾರ ನಡೆದಿರುವ ಕುರಿತು ಪ್ರಾಥಮಿಕ ಹಂತದ ತನಿಖೆಯಲ್ಲಿ ಕಂಡುಬಂದಿಲ್ಲ ಎಂದು ಜಾರ್ಜಿಯಾದ ಗೃಹ ಸಚಿವಾಲಯವು ಖಚಿತಪಡಿಸಿದೆ. ಇಂಗಾಲದ ಮೊನಾಕ್ಸೈಡ್ ಸೇವಿಸಿಯೇ ಎಲ್ಲರೂ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

'ಮೃತರ ಪೈಕಿ 11 ಮಂದಿ ವಿದೇಶಿಯರಾಗಿದ್ದು, ಒಬ್ಬರು ಸ್ಥಳೀಯ ವ್ಯಕ್ತಿಯಾಗಿದ್ದಾರೆ. ಮೃತರೆಲ್ಲರೂ ಭಾರತದ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಜಾರ್ಜಿಯಾ ಗೃಹ ಸಚಿವಾಲಯ ವಿವರಿಸಿದೆ.

ಅನುದಾನ–ಅಸಮಾಧಾನ

ಒಂದನೇ ಪುಟದಿಂದ..

'ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಕೊಡಲು ಸಾಧ್ಯವಿಲ್ಲ ಎಂದು ಉಪ ಮುಖ್ಯಮಂತ್ರಿಯವರೇ ಹೇಳಿಕೆ ನೀಡಿದ್ದರು. ಸರ್ಕಾರ ಅನುದಾನ ಕೊಡದೇ ಇರುವುದರಿಂದ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಎದುರಾಗಿದೆ ಎಂದು ಆಡಳಿತ ಪಕ್ಷದ ಶಾಸಕರೊಬ್ಬರು ಹೇಳಿದ್ದರು. ಅಭಿವೃದ್ಧಿ ಕೆಲಸಗಳಿಗೆ ಅನುದಾನ ಒದಗಿಸುತ್ತಿಲ್ಲ ಎಂದು ರಾಜ್ಯ ಸರ್ಕಾರದ ಆರ್ಥಿಕ ಸಲಹೆಗಾರರೇ ಅಸಮಾಧಾನ ವ್ಯಕ್ತಪಡಿಸಿದ್ದರು. ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಕೇಳಿದ ಆಡಳಿತ ಪಕ್ಷದ ಶಾಸಕರೊಬ್ಬರಿಗೆ ನೋಟಿಸ್ ನೀಡುವ ಬೆದರಿಕೆ ಹಾಕಲಾಗಿದೆ' ಎಂದು ಮಾಧ್ಯಮಗಳಲ್ಲಿ ಪ್ರಕಟವಾದ ಸುದ್ದಿ ತುಣುಕುಗಳನ್ನು ಪ್ರದರ್ಶಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರು ಮಾಡಿದ್ದ 8,000 ಶಾಲಾ ಕೊಠಡಿಗಳ ನಿರ್ಮಾಣ ಇನ್ನೂ ಪೂರ್ಣಗೊಂಡಿಲ್ಲ. ಹಾಲು ಪೂರೈಕೆದಾರರಿಗೆ ₹700 ಕೋಟಿ ಸಹಾಯಧನ ಬಾಕಿ ಇದೆ. ಶಾಸಕರಿಂದ ಪಟ್ಟಿ ತೆಗೆದುಕೊಂಡರೂ ಅನುದಾನ ಕೊಡುತ್ತಿಲ್ಲ. ಈಗಿನ ಸರ್ಕಾರದಲ್ಲಿ ಶೇಕಡ 100ರಷ್ಟು ಭ್ರಷ್ಟಾಚಾರವಿದೆ ಎಂದು ಸುನಿಲ್ ಆರೋಪಿಸಿದರು. ಇದು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು.

ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಮಾತನಾಡಿ, 'ಹಿಂದೆ ಕೆಲಸ ಮಾಡಿದ್ದ ಗುತ್ತಿಗೆದಾರರು ಬಿಲ್ ಪಾವತಿ ಆಗದೇ ನೇಣು ಹಾಕಿಕೊಳ್ಳುವ ಪರಿಸ್ಥಿತಿ ತಲುಪಿದ್ದಾರೆ. ಒಂದು ಮನೆ ಕೂಡ ಮಂಜೂರಾಗಿಲ್ಲ. ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಹಣ ಎಲ್ಲಿ ಹೋಯಿತು? ಇಷ್ಟು ಕಂಜೂಸ್ ಸರ್ಕಾರವನ್ನು ಯಾವತ್ತೂ ನೋಡಿರಲಿಲ್ಲ' ಎಂದರು.

ಬಿಜೆಪಿಯ ಬಿ. ಸುರೇಶ್ ಗೌಡ, 'ಗ್ಯಾರಂಟಿ ಯೋಜನೆಗಳೇ ಅಭಿವೃದ್ಧಿ ಎಂದು ಬಿಂಬಿಸುತ್ತಿದ್ದೀರಿ. ಕರ್ನಾಟಕ ಪಬ್ಲಿಕ್ ಶಾಲೆ ನಿರ್ಮಾಣಕ್ಕೆ ಮಂಜೂರು ಮಾಡಿದ್ದ ಅನುದಾನವನ್ನೂ ಹಿಂಪಡೆಯಲಾಗಿದೆ. ಯಾರಿಗೂ ಅನುದಾನ ಕೊಟ್ಟಿಲ್ಲ. ಆದರೆ, ಕುಣಿಗಲ್ ಎಕ್ಸ್‌ಪ್ರೆಸ್ ಕಾಲುವೆ ನಿರ್ಮಾಣಕ್ಕೆ ತರಾತುರಿಯಲ್ಲಿ ₹1,000 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ದೂರಿದರು.

ಕೆಡಿಪಿ ಸಭೆಯ ನಡಾವಳಿ ಪ್ರದರ್ಶನ

'ಅನುದಾನದ ಕೊರತೆಯಿಂದ ಉಡುಪಿ ಜಿಲ್ಲೆಯ 39,000 ಬಿಪಿಎಲ್ ಪಡಿತರ ಚೀಟಿದಾರರಿಗೆ ಹೆಚ್ಚುವರಿ 5 ಕೆ.ಜಿ. ಅಕ್ಕಿ ಬಾಬ್ತು ಹಣ ವರ್ಗಾವಣೆ ತಡೆಹಿಡಿಯಲಾಗಿದೆ' ಎಂದು ಉಲ್ಲೇಖಿಸಿದ್ದ ಉಡುಪಿ ಜಿಲ್ಲಾ ಕರ್ನಾಟಕ ಅಭಿವೃದ್ಧಿ ಯೋಜನೆಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯ ನಡಾವಳಿಯನ್ನು ವಿ. ಸುನಿಲ್ ಕುಮಾರ್ ಸದನದಲ್ಲಿ ಪ್ರದರ್ಶಿಸಿದರು.

'ಎಲ್ಲ ಅಭಿವೃದ್ಧಿ ನಿಗಮಗಳ ಅನುದಾನದಲ್ಲಿ ಕಡಿತ ಮಾಡಲಾಗಿದೆ. ಗಂಗಾ ಕಲ್ಯಾಣ, ಸಾರಥಿ, ಸ್ವ ಉದ್ಯೋಗ ಯೋಜನೆ ಫಲಾನುಭವಿಗಳ ಆಯ್ಕೆ ಮಾಡಲಾಗದ ಸ್ಥಿತಿ ಇದೆ' ಎಂದರು.

'ನಮ್ಮೂರಿನಲ್ಲಿ ಕ್ಷೀರಸಾಗರ ಎಂಬ ಹೆಸರಿನ ವ್ಯಕ್ತಿಯೊಬ್ಬ ಇದ್ದ. ಮಜ್ಜಿಗೆ ತೆಗೆದುಕೊಳ್ಳಲು ಆತ ಸಾಲ ಮಾಡುತ್ತಿದ್ದ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಪರಿಸ್ಥಿತಿಯೂ ಅದೇ ಆಗಿದೆ' ಎಂದು ಸುನಿಲ್ ಹೇಳಿದರು.

ಅನುದಾನ ಬೇಕಿದ್ದರೆ ಸಭಾಧ್ಯಕ್ಷರಾಗಿ

'ಯಾರಿಗಾದರೂ ಹೆಚ್ಚಿನ ಅನುದಾನ ಬೇಕಿದ್ದರೆ ಸಭಾಧ್ಯಕ್ಷರಾಗಿ' ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಸಲಹೆ ನೀಡಿದರು.

ಅನುದಾನ ಬಿಡುಗಡೆ ಆಗದಿರುವ ಕುರಿತ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿದ ಅವರು, ಈ ಸಲಹೆ ನೀಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಈ ಸರ್ಕಾರದಲ್ಲಿ ನಿಮ್ಮ ಕಚೇರಿ, ನಿಮ್ಮ ಪೀಠ, ನಿಮ್ಮ ಫೋಟೊ ಮಾತ್ರ ಅಭಿವೃದ್ಧಿ ಆಗುತ್ತಿದೆ' ಎಂದರು.

'ನಿಮ್ಮ ಪಾಪದ ಕೂಸು ಹೊತ್ಕೊಂಡಿದ್ದೀವಿ'

'ನೀವು ಮಾಡಿದ ಪಾಪದ ಕೂಸನ್ನು ನಾವು ಹೊತ್ಕೊಂಡಿದ್ದೇವೆ. ಅದರ ಬಗ್ಗೆಯೂ ಹೇಳಬೇಕಿದೆ. ನೀವು ಅಧಿಕಾರದಲ್ಲಿದ್ದ ಅವಧಿಯಲ್ಲಿ ₹27,000 ಕೋಟಿ ಬಿಲ್ ಬಾಕಿ ಇರಿಸಿದ್ದೀರಿ. ಈ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳು ನಿಂತಿಲ್ಲ' ಎಂದು ಕಾಂಗ್ರೆಸ್‌ನ ಪಿ.ಎಂ. ನರೇಂದ್ರ ಸ್ವಾಮಿ ಅವರು ಬಿಜೆಪಿ ಸದಸ್ಯರಿಗೆ ತಿರುಗೇಟು ನೀಡಿದರು.

'ಹೆಣದ ಮೇಲೆ ಹಣ ಮಾಡಿದವರ ಬಗ್ಗೆಯೂ ಮಾತಾಡಬೇಕಿದೆ. ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಅನುದಾನದ ದುರ್ಬಳಕೆಗೆ ನಮ್ಮ ಸರ್ಕಾರ ತಡೆ ಹಾಕಿದೆ. ಇದಕ್ಕಾಗಿ ಕಾಯ್ದೆಯ ಸೆಕ್ಷನ್ 7–ಡಿ ರದ್ದು-ಗೊಳಿಸಿದ್ದೇವೆ. ಸೆಕ್ಷನ್ 7–ಸಿ ಕೂಡ ರದ್ದುಗೊಳಿಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಜಾಗತಿಕ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಸಭೆಯು ಬಡ್ಡಿದರ ಕಡಿತದ ಬಗ್ಗೆ ಕೈಗೊಳ್ಳಲಿರುವ ನಿರ್ಣಯವು ದೇಶೀಯ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸೂಚ್ಯಂಕ

ಸೆನ್ಸೆಕ್ಸ್ 384 ಅಂಶ ಇಳಿಕೆ ಕಂಡು, 81,748 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 100 ಅಂಶ ಇಳಿಕೆ ಕಂಡು 24,668 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೈಟನ್, ಅದಾನಿ ಪೋರ್ಟ್ಸ್, ಅಲ್ಟ್ರಾ ಟೆಕ್ ಸಿಮೆಂಟ್, ಟಿಸಿಎಸ್, ಎನ್‌ಟಿಪಿಸಿ, ಭಾರ್ತಿ ಏರ್‌ಟೆಲ್, ಟೆಕ್ ಮಹೀಂದ್ರ, ಇನ್ಫೊಸಿಸ್, ಎಚ್‌ಸಿಎಲ್ ಮತ್ತು ಜೆಎಸ್‌ಡಬ್ಲ್ಯು ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಇಂಡಸ್ ಇಂಡ್ ಬ್ಯಾಂಕ್, ಬಜಾಜ್ ಫೈನಾನ್ಸ್, ಪವರ್ ಗ್ರಿಡ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜಾಗತಿಕ ಮಟ್ಟದಲ್ಲಿ ಕಚ್ಚಾತೈಲದ ಬೆಲೆಯೂ ಶೇ 0.75ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 73.91 ಡಾಲರ್ ಆಗಿದೆ.

642 ವಿದೇಶಿ ಆನ್‌ಲೈನ್ ಗೇಮಿಂಗ್ ಕಂಪನಿ ಪತ್ತೆ

ನವದೆಹಲಿ (ಪಿಟಿಐ): ವಿದೇಶಗಳಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ 642 ಆನ್‌ಲೈನ್ ಗೇಮಿಂಗ್ ಕಂಪನಿಗಳನ್ನು ಕೇಂದ್ರ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯವು (ಡಿಜಿಜಿಐ) ಪತ್ತೆಹಚ್ಚಿದೆ ಎಂದು ಕೇಂದ್ರ ಸರ್ಕಾರ, ಸೋಮವಾರ ಸಂಸತ್‌ಗೆ ತಿಳಿಸಿದೆ.

ಈ ಕಂಪನಿಗಳ ವಿರುದ್ಧ ಜಿಎಸ್‌ಟಿ ವಂಚನೆ ಸಂಬಂಧ ತನಿಖೆ ನಡೆಸಲಾಗುತ್ತಿದೆ. ಆದರೆ, ಕೆಲವು ಕಂಪನಿಗಳು ತನಿಖೆಗೆ ಸ್ಪಂದಿಸುತ್ತಿಲ್ಲ. ಐಜಿಎಸ್‌ಟಿ ಕಾಯ್ದೆ 2017ರ ಸೆಕ್ಷನ್ 14ಎ(3) ಅಡಿ ಅಂತಹ ಕಂಪನಿಗಳ ಯುಆರ್‌ಎಲ್/ ವೆಬ್‌ಸೈಟ್ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವಂತೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಸೂಚಿಸಲಾಗಿದೆ ಎಂದು ವಿವರಿಸಿದೆ.

ಈ ಕಂಪನಿಗಳ ವಿರುದ್ಧ ಕ್ರಮಕ್ಕೆ ಸಂಬಂಧಿಸಿದಂತೆ ವಿದೇಶಿ ಸರ್ಕಾರಗಳ ಜೊತೆಗೆ ಡಿಜಿಜಿಐ ಯಾವುದೇ ಸಂವಹನ ನಡೆಸಿಲ್ಲ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಎಲ್‌ಐಸಿಯಲ್ಲೇ ಉಳಿದ ₹881 ಕೋಟಿ

ನವದೆಹಲಿ (ಪಿಟಿಐ): 2023–24ನೇ ಸಾಲಿನಡಿ ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಪಾಲಿಸಿಯ ಮೆಚ್ಯೂರಿಟಿ ಅವಧಿ ಪೂರ್ಣಗೊಂಡ ಬಳಿಕವೂ ಪಾಲಿಸಿದಾರರು ಅಥವಾ ಫಲಾನುಭವಿಗಳು ಪಡೆಯದಿರುವ ₹881 ಕೋಟಿ ಮೊತ್ತ ಉಳಿದುಕೊಂಡಿದೆ ಎಂದು ಕೇಂದ್ರ ಸರ್ಕಾರವು ಸೋಮವಾರ ಸಂಸತ್‌ಗೆ ತಿಳಿಸಿದೆ.

3.72 ಲಕ್ಷ ಪಾಲಿಸಿದಾರರು ಈ ವಿಮಾ ಮೊತ್ತವನ್ನು ಪಡೆದುಕೊಂಡಿಲ್ಲ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2022–23ನೇ ಸಾಲಿನಡಿ 3.73 ಲಕ್ಷ ಪಾಲಿಸಿದಾರರಿಗೆ ಸೇರಿದ ₹815 ಕೋಟಿ ಮೊತ್ತವು ನಿಗಮದಲ್ಲಿಯೇ ಇದೆ ಎಂದು ಹೇಳಿದ್ದಾರೆ. ಎಲ್‌ಐಸಿ ಖಾತೆಯಲ್ಲಿ ಉಳಿದಿರುವ ಈ ಮೊತ್ತವನ್ನು ಪಾಲಿಸಿದಾರರಿಗೆ ವಾಪಸ್ ನೀಡುವ ಬಗ್ಗೆ ನಿಗಮವು ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ಮುದ್ರಣ, ಡಿಜಿಟಲ್ ಮಾಧ್ಯಮದಲ್ಲಿ ಜಾಹೀರಾತು ಪ್ರಕಟಿಸುವ ಮೂಲಕ ಪಾಲಿಸಿದಾರರಿಗೆ ಅರಿವು ಮೂಡಿಸಲು ಕ್ರಮಕೈಗೊಂಡಿದೆ ಎಂದು ಹೇಳಿದ್ದಾರೆ.

ಪಾಲಿಸಿದಾರರ ವಿಳಾಸಗಳಿಗೆ ಅಂಚೆ ಮೂಲಕ ಸಂದೇಶ ರವಾನಿಸಲಾಗಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ, ಬ್ರಿಟಾನಿಯಾ, TVSಕಂಪನಿಗಳಿಗೆ SSLC, PUC, Degree, Diploma, ITIನವರು 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036791033

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

ಪ್ರವಾಸ

Travel

04.01.2025 12.03.2025 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 13.01.2025 11.02.2025 10.03.2025 ದುಬೈ,ಅಬುದಾಬಿ 6 ದಿನಗಳು. 11.03.2025 ಭೂತಾನ್ 8 ದಿನಗಳು. 08.01.2025 11.02.2025 ಶ್ರೀಲಂಕಾ 7 ದಿನಗಳು. 14.01.2025 11.02.2025 ಗುಜರಾತ್/ಉಜ್ಜಯಿನಿ 8/11 ದಿನಗಳು. 23.01.2025 20.02.2025 ರಾಜಸ್ಥಾನ್ 9 ದಿನಗಳು. ಇದಲ್ಲದೆ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿರಿ ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

ಪ್ರವಾಸ 4/1/2025 ಪುರಿಜಗನ್ನಾಥ, ಕಲ್ಕತ್ತಾ 28/1/2025 ತಮಿಳುನಾಡು:11/2/2025 ಗುಜರಾತ್,ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ: 25/2/25 ಶಿವರಾತ್ರಿ ವಿಶೇಷ ಕಾಶಿ, ಜಾರ್ಖಂಡ್ ವೈದ್ಯನಾಥ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ @50/-* PER WORDS www.dhclassifieds.com ಬುಕ್ ಮಾಡಿ

ಹೆಸರು ಬದಲಾವಣೆ

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 7795158424 | +91 9901641752

+91 9731810277 | +91 9900428036

*Conditions apply

'ಒಂದೇ ಚುನಾವಣೆ': ಇಂದು ಮಂಡನೆ?

ಪ್ರಜಾವಾಣಿ ವಾರ್ತೆ

ನವದೆಹಲಿ: 'ಒಂದು ದೇಶ, ಒಂದು ಚುನಾವಣೆ'ಗೆ ಸಂಬಂಧಿಸಿದ ಎರಡು ಮಸೂದೆಗಳನ್ನು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಮಂಗಳವಾರ ಲೋಕಸಭೆಯಲ್ಲಿ ಮಂಡಿಸುವ ಸಾಧ್ಯತೆಯಿದೆ. ಅದನ್ನು ಸಂಸತ್ತಿನ ಜಂಟಿ ಸದನ ಸಮಿತಿಗೆ ಒಪ್ಪಿಸಬಹುದು ಎಂದು ಮೂಲಗಳು ತಿಳಿಸಿವೆ.

ಈ ಮಸೂದೆಗಳನ್ನು ಮಂಗಳವಾರ ಪ್ರಶ್ನೋತ್ತರ ಅವಧಿಯ ಬಳಿಕ ಪರಿಚಯಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ. ಇದರ ಮುನ್ಸೂಚನೆ ಎಂಬಂತೆ, ಆಡಳಿತಾರೂಢ ಬಿಜೆಪಿಯು ತನ್ನ ಸಂಸದರಿಗೆ 'ವಿಪ್' ಜಾರಿಗೊಳಿಸಿದೆ. ಕೆಲ ಮಹತ್ವದ ವಿಷಯಗಳ ಪ್ರಸ್ತಾಪ ಇರುವ ಕಾರಣಕ್ಕೆ ಎಲ್ಲ ಸದಸ್ಯರೂ ಲೋಕಸಭೆಯಲ್ಲಿ ಹಾಜರಿರಬೇಕು ಎಂದೂ ಅದು ಹೇಳಿದೆ.

ವಿಧಾನಸಭೆ: ಪ್ರತ್ಯೇಕ ಚುನಾವಣೆಗೂ ಅವಕಾಶ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆ ಜತೆಗೆ ವಿಧಾನಸಭಾ ಚುನಾವಣೆ ನಡೆಸಲು ಸಾಧ್ಯವಾಗದ ಸಂದರ್ಭ ಎದುರಾದರೆ ಅದಕ್ಕೆ ಅವಕಾಶ ಕಲ್ಪಿಸುವ ನಿಬಂಧನೆಯನ್ನು ಏಕಕಾಲದಲ್ಲಿ ಚುನಾವಣೆ ಯೋಜನೆ ಜಾರಿಗೊಳಿಸುವುದನ್ನು ಮಸೂದೆ ಒಳಗೊಂಡಿದೆ.

ಲೋಕಸಭೆಯ ಜತೆಗೆ ಏಕ ಕಾಲದಲ್ಲಿ ಚುನಾವಣೆ ನಡೆಯದ ವಿಧಾನಸಭೆಗೆ, ಆ ಬಳಿಕವೂ ಚುನಾವಣೆ ನಡೆಸಬಹುದು ಎಂದು ರಾಷ್ಟ್ರಪತಿಯವರು ಆದೇಶ ಹೊರಡಿಸಬಹುದು. ಇದಕ್ಕೆ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಂವಿಧಾನದ (129) ತಿದ್ದುಪಡಿ ಮಸೂದೆಯ 2ನೇ ಉಪ ಕಲಂ 5ರ ಪ್ರಕಾರ, ಲೋಕಸಭೆಗೆ ನಡೆಯುವ ಚುನಾವಣೆ ಜತೆಗೆ ಯಾವುದಾದರೂ ವಿಧಾನಸಭೆಯ ಚುನಾವಣೆ ನಡೆಸಲು ಆಗುವುದಿಲ್ಲ ಎಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟರೆ, ಆ ಕುರಿತು ರಾಷ್ಟ್ರಪತಿಗೆ ಶಿಫಾರಸು ಮಾಡಬಹುದು. ಅದನ್ನು ಆಧರಿಸಿ ರಾಷ್ಟ್ರಪತಿಯವರು ಆ ವಿಧಾನಸಭೆಯ ಚುನಾವಣೆಯನ್ನು ಆ ನಂತರ ನಡೆಸಲು ಆದೇಶ ಹೊರಡಿಸಬಹುದು.

ಭಾರತ–ಬಾಂಗ್ಲಾದೇಶ ಗಡಿಯ ಚೆಕ್‌ಪೋಸ್ಟ್ ಬಳಿ ಕಾರ್ಯಕ್ರಮ

'ವಿಜಯ್ ದಿವಸ್': ಬಾಂಗ್ಲಾ ಮಾಜಿ ಸೈನಿಕರು ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಂಗ್ಲಾದೇಶದಲ್ಲಿ ಈಚೆಗೆ ನಡೆದ ಬೆಳವಣಿಗೆಗಳ ಬಗ್ಗೆ ಭಾರತವು ಕಳವಳ ವ್ಯಕ್ತಪಡಿಸಿರುವ ಹೊರತಾಗಿಯೂ, ಅಲ್ಲಿನ ಎಂಟು ಮಾಜಿ ಸೈನಿಕರು ಮತ್ತು ಸೇನೆಯ ಇಬ್ಬರು ಅಧಿಕಾರಿಗಳು '1971ರ ಬಾಂಗ್ಲಾ ವಿಮೋಚನಾ ಯುದ್ಧ'ದ ಸ್ಮರಣಾರ್ಥ ಆಯೋಜಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕೋಲ್ಕತ್ತಕ್ಕೆ ಬಂದರು.

ಅದಕ್ಕೆ ಪ್ರತಿಯಾಗಿ ಭಾರತದ ಎಂಟು ಮಾಜಿ ಸೈನಿಕರು ಮತ್ತು ಇಬ್ಬರು ಅಧಿಕಾರಿಗಳು ಯುದ್ಧದ 53ನೇ ವರ್ಷಾಚರಣೆ ಪ್ರಯುಕ್ತ ಆಯೋಜಿಸಿರುವ 'ವಿಜಯ್ ದಿವಸ್' ಕಾರ್ಯಕ್ರಮದಲ್ಲಿ ಭಾಗಿಯಾಗಲು ಢಾಕಾ ತಲುಪಿದರು.

ಬಾಂಗ್ಲಾದ ನಿಯೋಗವು ಭಾರತೀಯ ಸೇನೆಯ ಪೂರ್ವ ಕಮಾಂಡ್‌ನ ಕೇಂದ್ರ ಕಚೇರಿಯಾಗಿರುವ ಕೋಲ್ಕತ್ತದ ಫೋರ್ಟ್ ವಿಲಿಯಂನಲ್ಲಿ ಸೋಮವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿತು.

ಬಾಂಗ್ಲಾದೇಶವನ್ನು ಸಾರ್ವಭೌಮ ರಾಷ್ಟ್ರವನ್ನಾಗಿಸಲು ಕಾರಣವಾದ 1971ರ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಭಾರತವು ಜಯಗಳಿಸಿದ ನೆನಪಿಗಾಗಿ ಪ್ರತಿ ವರ್ಷ ಡಿಸೆಂಬರ್ 16ರಂದು 'ವಿಜಯ್ ದಿವಸ್' ಆಚರಿಸಲಾಗುತ್ತದೆ.

'ವಿಜಯ್ ದಿವಸ್' ಅಂಗವಾಗಿ ಅಗರ್ತಲಾದ ಭಾರತ–ಬಾಂಗ್ಲಾದೇಶ ಗಡಿಯ ಚೆಕ್‌ಪೋಸ್ಟ್ ಬಳಿ ಉಭಯ ದೇಶಗಳ ಸೈನಿಕರು ಸಿಹಿ ವಿನಿಮಯ ಮಾಡಿಕೊಂಡರು –ಪಿಟಿಐ ಚಿತ್ರ

'ಚಿತ್ರ ಮತ್ತೆ ಪ್ರದರ್ಶಿಸಲಿ'

ನವದೆಹಲಿ: 1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ ಭಾರತೀಯ ಸೇನೆಯ ತ್ಯಾಗವನ್ನು ಸ್ಮರಿಸಿರುವ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, 'ಆ ಯುದ್ಧದಲ್ಲಿ ಪಾಕಿಸ್ತಾನದ ಸೇನೆಯು ಭಾರತದ ಸೇನೆಗೆ ಶರಣಾಗುತ್ತಿರುವ ಚಿತ್ರವೊಂದು ಸೇನೆಯ ಪ್ರಧಾನ ಕಚೇರಿಯಲ್ಲಿತ್ತು, ಆ ಚಿತ್ರವನ್ನು ಅಲ್ಲಿಂದ ತೆರವುಗೊಳಿಸಲಾಗಿದ್ದು, ಅದನ್ನು ಮತ್ತೆ ಹಾಕಬೇಕು' ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಗರ್ಭಗೃಹಕ್ಕೆ ಪ್ರವೇಶ ನಿರಾಕರಣೆ: ವರದಿ ಅಲ್ಲಗಳೆದ ಇಳಯರಾಜ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ತಮಿಳುನಾಡಿನ ಶ್ರೀವಿಲ್ಲಿಪುತ್ತೂರ್‌ನಲ್ಲಿ ಇರುವ ಪ್ರಸಿದ್ಧ ಆಂಡಾಳ್ ದೇವಸ್ಥಾನದ ಗರ್ಭಗುಡಿಗೆ ತಮಗೆ ಪ್ರವೇಶ ನೀಡಲಿಲ್ಲ ಎಂಬ ಮಾಧ್ಯಮ ವರದಿಗಳನ್ನು ಖ್ಯಾತ ಸಂಗೀತ ನಿರ್ದೇಶಕ ಇಳಯರಾಜ ನಿರಾಕರಿಸಿದ್ದಾರೆ.

ನಡೆಯದೇ ಇರುವ ಘಟನೆಯ ಬಗ್ಗೆ ಸುಳ್ಳು ಸುದ್ದಿ ಹರಡಲಾಗುತ್ತಿದೆ ಎಂದು ಇಳಯರಾಜ ಹೇಳಿದ್ದಾರೆ. ಆದರೆ ಹೆಚ್ಚಿನ ವಿವರಗಳನ್ನು ಅವರು ನೀಡಿಲ್ಲ. 'ಯಾವುದೇ ಸಮಯದಲ್ಲಿ ಅಥವಾ ಸ್ಥಳದಲ್ಲಿ ಆತ್ಮಗೌರವದ ಜೊತೆ ರಾಜಿ ಮಾಡಿಕೊಳ್ಳುವ ವ್ಯಕ್ತಿ ನಾನಲ್ಲ' ಎಂದು ಅವರು ಹೇಳಿದ್ದಾರೆ.

ವಿರುಧುನಗರ ಜಿಲ್ಲೆಯಲ್ಲಿ ಇರುವ ದೇವಸ್ಥಾನದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಇಳಯರಾಜ ಅವರು ಡಿಸೆಂಬರ್ 15ರಂದು ಭಾಗಿಯಾಗಿದ್ದರು

ಇಳಯರಾಜ

ಎಂದು ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಭೇಟಿಯ ಸಂದರ್ಭದಲ್ಲಿ ಇಳಯರಾಜ ಅವರು ಶ್ರೀ ತ್ರಿಬಂದಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನ ಜೀಯರ್ (ಶ್ರೀವೈಷ್ಣವ ಸಂಪ್ರದಾಯದ ಗುರುಗಳು) ಅವರ ಜೊತೆ ಮಾತುಕತೆಯಲ್ಲಿದ್ದರು, ದೇವಸ್ಥಾನದ ಗರ್ಭಗೃಹದ ಮುಂದೆ ಇರುವ ಅರ್ಥ ಮಂಟಪವನ್ನು ಪ್ರವೇಶಿಸುವವರಿದ್ದರು. ಆಗ, ಉತ್ಸವ ಮೂರ್ತಿಗಳನ್ನು ಇರಿಸುವ ಅರ್ಥ ಮಂಟಪವನ್ನು ಪ್ರವೇಶಿಸಲು ದೇವಸ್ಥಾನದ ಅರ್ಚಕರು ಮತ್ತು ಜೀಯರ್‌ಗಳಿಗೆ ಮಾತ್ರ ಅನುಮತಿ ಇದೆ ಎಂದು ಅವರಿಗೆ ಹೇಳಲಾಯಿತು ಎಂದು ಅಧಿಕಾರಿ ವಿವರಿಸಿದ್ದಾರೆ.

'ಮಂಟಪದ ಪ್ರವೇಶದ್ವಾರದಲ್ಲಿ ತಕ್ಷಣ ನಿಂತ ಇಳಯರಾಜ ಅವರು ಅಲ್ಲಿಂದಲೇ ಪ್ರಾರ್ಥನೆ ಸಲ್ಲಿಸಿದರು. ಅವರು ಬಂದಿದ್ದಾಗ ದೇವಸ್ಥಾನದಿಂದ ನೀಡುವ ಎಲ್ಲ ಗೌರವ ನೀಡಲಾಗಿದೆ' ಎಂದು ಆ ಅಧಿಕಾರಿ ಹೇಳಿದ್ದಾರೆ.

ಇಳಯರಾಜ ಅವರ ಭೇಟಿಯ ಸುತ್ತಲಿನ ವಿವಾದದ ಬಗ್ಗೆ ಪ್ರಶ್ನಿಸಿದಾಗ ಅಧಿಕಾರಿಯು, ಅರ್ಥ ಮಂಟಪದ ಮೆಟ್ಟಿಲು ಏರಲು ಇಳಯರಾಜ ಮುಂದಾದಾಗ, ಮಂಟಪದ ಎದುರಿನಿಂದ ದರ್ಶನ ಪಡೆಯಬಹುದು ಎಂಬುದನ್ನು ಅವರಿಗೆ ತಿಳಿಸಲಾಯಿತು ಎಂದು ವಿವರಿಸಿದ್ದಾರೆ.

'ಅದಕ್ಕೆ ಅವರು ಒಪ್ಪಿ, ದರ್ಶನ ಪಡೆದರು. ದೇವಸ್ಥಾನದಲ್ಲಿನ ಪದ್ಧತಿಯ ಪ್ರಕಾರ, ಅರ್ಚಕರಿಗೆ ಮತ್ತು ಮಠಾಧೀಶರಿಗೆ ಮಾತ್ರ ದೇವಸ್ಥಾನದ ಗರ್ಭಗೃಹದ ಒಳಗೆ ಹೋಗಲು ಅವಕಾಶ ಇದೆ' ಎಂದು ಇಲಾಖೆಯ ಜಂಟಿ ಆಯುಕ್ತರು ವಿರುಧುನಗರ ಜಿಲ್ಲಾಧಿಕಾರಿಗೆ ರವಾನಿಸಿರುವ ಸಂದೇಶದಲ್ಲಿ ಹೇಳಿದ್ದಾರೆ.

'ತಮಿಳುನಾಡಿನ ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ, ಅಲ್ಲಿ ನಿತ್ಯಪೂಜೆ ಹಾಗೂ ಅಭಿಷೇಕ ನಡೆಸುವ ಅರ್ಚಕರಿಗೆ ಮಾತ್ರ ಗರ್ಭಗೃಹ ಪ್ರವೇಶಕ್ಕೆ ಅವಕಾಶ ಇದೆ. ಬ್ರಾಹ್ಮಣರು ಸೇರಿದಂತೆ ಭಕ್ತರಿಗೆ ಅಲ್ಲಿಗೆ ಪ್ರವೇಶಿಸಲು ಅವಕಾಶ ಇಲ್ಲ' ಎಂದು ಚೆನ್ನೈನ ಸ್ವಯಂಸೇವಾ ಸಂಘಟನೆ ಜನಕಲ್ಯಾಣದ ಕಾರ್ಯದರ್ಶಿ ವಿ. ಸುಬ್ರಮಣಿಯನ್ ಹೇಳಿದರು.

ಇಳಯರಾಜ ಅವರು ಅರ್ಥ ಮಂಟಪದಿಂದ ಹೊರಬರುತ್ತಿರುವುದು ಹಾಗೂ ಅರ್ಚಕರು ಗರ್ಭಗೃಹವನ್ನು ಪ್ರವೇಶಿಸುತ್ತಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳ ಮೂಲಕ ಹರಿದಾಡಿದ್ದು, ಇಳಯರಾಜ ಅವರು ದಲಿತರು ಎಂಬ ಕಾರಣಕ್ಕೆ ಅವರಿಗೆ ಪ್ರವೇಶ ನಿರಾಕರಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು.

ಅಸ್ಪೃಶ್ಯತೆ ಜೀವಂತ ಇರುವುದಕ್ಕೆ ಉದಾಹರಣೆ: ಎಚ್.ಸಿ. ಮಹದೇವಪ್ಪ

ಬೆಂಗಳೂರು: ಸಂಗೀತ ಮಾಂತ್ರಿಕ, ರಾಜ್ಯಸಭಾ ಸದಸ್ಯರಾದ ಇಳಯರಾಜ ಅವರನ್ನು ತಮಿಳುನಾಡಿನ ದೇವಸ್ಥಾನವೊಂದರಲ್ಲಿ ಪ್ರವೇಶ ಮಾಡಲು ನಿರಾಕರಿಸಿದ ಘಟನೆಯು ನಿಜಕ್ಕೂ ಅವಮಾನಕರ ಸಂಗತಿ ಆಗಿದ್ದು, ಸಮಾಜದಲ್ಲಿ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯು ಇನ್ನೂ ಜೀವಂತವಾಗಿದೆ ಎಂಬುದನ್ನು ಸಾರಿ ಹೇಳುತ್ತಿದೆ ಎಂದು ಸಚಿವ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿ, ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಗಳಿಸಿದವರ ಸ್ಥಿತಿಯೇ ಹೀಗಿದ್ದರೆ, ಸಾಮಾನ್ಯರಾಗಿ ಜೀವಿಸುತ್ತಿರುವ ಪರಿಶಿಷ್ಟ ಸಮುದಾಯಗಳ ಪರಿಸ್ಥಿತಿ ಏನಾಗಿರಬೇಕು ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಭಾರತೀಯ ಜನಗಳಾದ ನಾವು ಭ್ರಾತೃತ್ವ ಮತ್ತು ಏಕತೆಯಿಂದ ಇರಬೇಕು ಎಂಬ ಸಂವಿಧಾನದ ಆಶಯವನ್ನು ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ್ದು ಈ ಹೊತ್ತಿನ ಜರೂರು ಎಂಬುದನ್ನು ಇಳಯರಾಜ ಅವರ ಈ ಘಟನೆಯು ನಮಗೆ ಮತ್ತೆ ಮತ್ತೆ ನೆನಪಿಸುತ್ತದೆ ಎಂದು ಹೇಳಿದ್ದಾರೆ.

ಕುಟುಂಬ, ಸರ್ವಾಧಿಕಾರದ ಸುತ್ತ ಚರ್ಚೆ

ನವದೆಹಲಿ: ಸಂವಿಧಾನದ ಮೇಲಿನ ಚರ್ಚೆ ರಾಜ್ಯಸಭೆಯಲ್ಲಿ ಸೋಮವಾರ ಆರಂಭಗೊಂಡಿತು. ಮಂಗಳವಾರವೂ ಚರ್ಚೆ ಮುಂದುವರಿಯಲಿದೆ. ಚರ್ಚೆಗೆ ಚಾಲನೆ ನೀಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಕುಟುಂಬಕ್ಕೆ ಲಾಭ ಮಾಡಿಕೊಡಲು ಕಾಂಗ್ರೆಸ್ ಪಕ್ಷವು ಸಂವಿಧಾನಕ್ಕೆ ಮನಸೋ ಇಚ್ಛೆ ತಿದ್ದುಪಡಿಗಳನ್ನು ಮಾಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೋದಿ ಭಕ್ತಿಯು ದೇಶವನ್ನು ಸರ್ವಾಧಿಕಾರದತ್ತ ಕೊಂಡೊಯ್ಯುತ್ತಿದೆ ಎಂದು ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು. ಪ್ರಜಾಪ್ರಭುತ್ವ ಸರ್ವಾಧಿಕಾರವಾಗಿ ಬದಲಾಗಬಾರದು ಎಂದೂ ಅಭಿಪ್ರಾಯ ವ್ಯಕ್ತಪಡಿಸಿದರು.

ಕುಟುಂಬ ಲಾಭಕ್ಕೆ ಸಂವಿಧಾನ ತಿದ್ದುಪಡಿ: ನಿರ್ಮಲಾ

ಕುಟುಂಬ ಮತ್ತು ವಂಶ ರಾಜಕಾರಣಕ್ಕೆ ಸಹಾಯ ಮಾಡಲು ಕಾಂಗ್ರೆಸ್ ಪಕ್ಷವು ಸಂವಿಧಾನಕ್ಕೆ ಪ್ರಮುಖ ತಿದ್ದುಪಡಿಗಳನ್ನು ಮಾಡಿತ್ತು ಎಂದು ನಿರ್ಮಲಾ ಸೀತಾರಾಮನ್ ಆರೋಪಿಸಿದರು.

ತನ್ನ ಸಮ್ಮಿಶ್ರ ಪಾಲುದಾರರ ಒತ್ತಡಕ್ಕೆ ಮಣಿದು ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸದ ಕಾಂಗ್ರೆಸ್ ಪಕ್ಷವನ್ನು 'ಮಹಿಳಾ ವಿರೋಧಿ' ಎಂದು ಅವರು ಟೀಕಿಸಿದರು.

ಸುಮಾರು 50 ವರ್ಷಗಳ ಕಾಂಗ್ರೆಸ್ ಸರ್ಕಾರಗಳ ಆರ್ಥಿಕ ನೀತಿಗಳು ಭಾರತದ ಆರ್ಥಿಕತೆಯನ್ನು ಬಲಪಡಿಸಲಿಲ್ಲ. ಆರ್ಥಿಕ ನೀತಿಗಳು ದೇಶಕ್ಕೆ ಹಾನಿಕಾರಕವಾಗಿದ್ದವು ಎಂದು ಅವರು ವಾಗ್ದಾಳಿ ನಡೆಸಿದರು.

'ಕುಟುಂಬ ರಾಜಕಾರಣಕ್ಕೆ ಅನುಕೂಲ ಮಾಡಿಕೊಡುವ ಏಕೈಕ ಉದ್ದೇಶದಿಂದ ಪ್ರತಿ ಬಾರಿ ಕಾಂಗ್ರೆಸ್ ನಿರ್ಲಜ್ಜವಾಗಿ ಸಂವಿಧಾನ ತಿದ್ದುಪಡಿ ಮಾಡಿತು. ಸಂವಿಧಾನ ತಿದ್ದುಪಡಿ ಮಾಡಿದ್ದು ಪ್ರಜಾಪ್ರಭುತ್ವವನ್ನು ಬಲಪಡಿಸಲು ಅಲ್ಲ. ಅಧಿಕಾರದಲ್ಲಿರುವವರನ್ನು ರಕ್ಷಿಸಲು ಹಾಗೂ ಕುಟುಂಬವನ್ನು ಬಲಪಡಿಸಲು' ಎಂದು ವ್ಯಂಗ್ಯವಾಡಿದರು.

1949ರಲ್ಲಿ ಖ್ಯಾತ ಸಾಹಿತಿ ಮಜ್ರೂಹ್ ಸುಲ್ತಾನಪುರಿ ಮತ್ತು ನಟ ಬಲರಾಜ್ ಸಾಹ್ನಿ ಇಬ್ಬರನ್ನೂ ಜೈಲಿಗೆ ಹಾಕಲಾಗಿತ್ತು. ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ ಪ್ರಕರಣ ಇದೊಂದೇ ಅಲ್ಲ. ಆಗಿನ ಪ್ರಧಾನಿ ಇಂದಿರಾ ಗಾಂಧಿ ಮತ್ತು ಅವರ ಮಗನನ್ನು ಪ್ರಶ್ನಿಸಿದ ಕಾರಣಕ್ಕಾಗಿ 'ಕಿಸ್ಸಾ ಕುರ್ಸಿ ಕಾ' ಎಂಬ ಚಲನಚಿತ್ರವನ್ನು ನಿಷೇಧಿಸಲಾಗಿತ್ತು' ಎಂದರು.

'ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಸೋವಿಯತ್ ಮಾದರಿಯನ್ನು ನಕಲು ಮಾಡಿದರು. ಅದನ್ನು ಇಂದಿರಾ ಗಾಂಧಿ ಮುಂದುವರಿಸಿದರು. ಆದರೆ, ಸಮಾಜವಾದಿ ಮಾದರಿಯು ಭಾರತಕ್ಕೆ ಪ್ರಯೋಜನವಾಗಲಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು. ಗರೀಬಿ ಹಟಾವೋ ಕಾಂಗ್ರೆಸ್ ಪ್ರಮುಖ ಘೋಷಣೆ. ಅವರು ಬಡತನ ನಿರ್ಮೂಲನೆ ಮಾಡಿದ್ದಾರೆಯೇ ಎಂದು ಅವರು ಪ್ರಶ್ನಿಸಿದರು.

ಮಹಿಳಾ ಮೀಸಲಾತಿ ಮತ್ತು ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಬಿಜೆಪಿ ಬದ್ಧವಾಗಿದೆ ಎಂದ ಅವರು, 'ನಾನೇ ಇದರ ಫಲಾನುಭವಿ' ಎಂದರು.

ಮೋದಿ ಕ್ಷಮೆಯಾಚನೆಗೆ ಮಲ್ಲಿಕಾರ್ಜುನ ಖರ್ಗೆ ಪಟ್ಟು

ಜವಾಹರಲಾಲ್ ನೆಹರೂ ಅವರು ರಾಜ್ಯಗಳಿಗೆ ಬರೆದ ಪತ್ರವನ್ನು ತಿರುಚುವ ಮೂಲಕ ದೇಶದ ಜನರನ್ನು ದಾರಿ ತಪ್ಪಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಕ್ಷಮೆಯಾಚಿಸಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

ಮೋದಿ ಅವರು ಭೂತಕಾಲದಲ್ಲಿ ಬದುಕುತ್ತಾರೆಯೇ ಹೊರತು ವರ್ತಮಾನದಲ್ಲಲ್ಲ. ಪ್ರಜಾಪ್ರಭುತ್ವವನ್ನು ಬಲಪಡಿಸಿದ ಪ್ರಸ್ತುತ ಸಾಧನೆಗಳನ್ನು ಪಟ್ಟಿ ಮಾಡಿದ್ದರೆ ಉತ್ತಮ ಎಂದು ಅವರು ವ್ಯಂಗ್ಯವಾಡಿದರು. ಬಿಜೆಪಿಯವರು ಮೀಸಲಾತಿಗೆ ವಿರುದ್ಧವಾಗಿದ್ದಾರೆ ಮತ್ತು ಅದಕ್ಕಾಗಿಯೇ ಜಾತಿ ಗಣತಿಗೆ ವಿರುದ್ಧವಾಗಿದ್ದಾರೆ ಅವರು ಕಿಡಿಕಾರಿದರು. ದೇಶದ ಜನರನ್ನು ಮೂರ್ಖರನ್ನಾಗಿಸಲು ಬಿಜೆಪಿ ಸುಳ್ಳು ಭರವಸೆಗಳನ್ನು ನೀಡುತ್ತಿದೆ ಮತ್ತು ನಮ್ಮನ್ನು ದೂಷಿಸುತ್ತಿದೆ ಎಂದು ಅವರು ಹೇಳಿದರು.

'ಆರ್‌ಎಸ್‌ಎಸ್‌ನ ಹಿಂದಿನ ನಾಯಕರು ಸಂವಿಧಾನಕ್ಕೆ ವಿರುದ್ಧವಾಗಿದ್ದರು ಎಂಬುದು ಸಂವಿಧಾನ ಸಭೆಯ ಚರ್ಚೆಗಳಿಂದ ಸ್ಪಷ್ಟವಾಗಿದೆ. ಧ್ವಜ, ಅಶೋಕ ಚಕ್ರ ಮತ್ತು ಸಂವಿಧಾನವನ್ನು ದ್ವೇಷಿಸುವವರು ಇಂದು ಸಂವಿಧಾನದ ಬಗ್ಗೆ ನಮಗೆ ಪಾಠ ಹೇಳುತ್ತಾರೆ. ದೇಶಕ್ಕಾಗಿ ಹೋರಾಡದವರಿಗೆ ಸ್ವಾತಂತ್ರ್ಯದ ಮಹತ್ವ ಹೇಗೆ ತಿಳಿಯುತ್ತದೆ ಅವರು ಪ್ರಶ್ನಿಸಿದರು.

'ಆರೆಸ್ಸೆಸ್ ನಾಯಕರು ಸಂವಿಧಾನವನ್ನು ವಿರೋಧಿಸಿದರು. ಏಕೆಂದರೆ ಅದು ಮನುಸ್ಮೃತಿಯನ್ನು ಆಧರಿಸಿಲ್ಲ. ಅವರು ಸಂವಿಧಾನವನ್ನು ಅಥವಾ ತ್ರಿವರ್ಣ ಧ್ವಜವನ್ನು ಸ್ವೀಕರಿಸಲಿಲ್ಲ. ಸಂವಿಧಾನವನ್ನು ಅಂಗೀಕರಿಸಿದ ದಿನ ರಾಮಲೀಲಾ ಮೈದಾನದಲ್ಲಿ ಅಂಬೇಡ್ಕರ್, ಜವಾಹರಲಾಲ್ ನೆಹರೂ, ಮಹಾತ್ಮ ಗಾಂಧಿಯವರ ಪ್ರತಿಕೃತಿಗಳನ್ನು ದಹಿಸಿದರು' ಎಂದು ಅವರು ಹೇಳಿದರು.

2002 ರ ಜನವರಿ 26 ರಂದು ಮೊದಲ ಬಾರಿಗೆ, ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ಬಲವಂತವಾಗಿ ತ್ರಿವರ್ಣ ಧ್ವಜ ಹಾರಿಸಲಾಯಿತು' ಎಂದು ಅವರು ಹೇಳಿದರು. ಎಲ್ಲ ನಾಗರಿಕರಿಗೆ ತಲಾ ₹15 ಲಕ್ಷ ನೀಡುವುದಾಗಿ ಮೋದಿ ಭರವಸೆ ನೀಡಿದ್ದರು. ಆದರೆ, ಏನೂ ಆಗಲಿಲ್ಲ. ಸಂವಿಧಾನವನ್ನು ಬಲಪಡಿಸಲು ಕಳೆದ 11 ವರ್ಷಗಳಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಪ್ರಧಾನಿ ಹೇಳಬೇಕಿತ್ತು' ಎಂದರು.



ಐತಿಹಾಸಿಕ ದಾಖಲೆಗಳು ದೇಶದ ಸ್ವತ್ತು: ಬಿಜೆಪಿ
'ನೆಹರೂ ಪತ್ರ ವ್ಯವಹಾರ ದಾಖಲೆ ಕೊಡಿ'

ನವದೆಹಲಿ (ಪಿಟಿಐ): 'ಐತಿಹಾಸಿಕ ದಾಖಲೆಗಳು ದೇಶದ ಸ್ವತ್ತೇ ಹೊರತು, ಯಾರೊಬ್ಬರ ವೈಯಕ್ತಿಕ ಆಸ್ತಿಯಲ್ಲ' ಎಂದಿರುವ ಬಿಜೆಪಿ, ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಪತ್ರ ವ್ಯವಹಾರಗಳನ್ನು ಪ್ರಧಾನ ಮಂತ್ರಿಗಳ ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯಕ್ಕೆ (ಪಿಎಂಎಂಎಲ್) ಹಿಂದಿರುಗಿಸುವಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಒತ್ತಾಯಿಸಿದೆ.

ದೇಶದ ಕೊನೆಯ ವೈಸರಾಯ್ ಅವರ ಪತ್ನಿಯಾದ ಎಡ್ವಿನ್ ಮೌಂಟ್‌ಬ್ಯಾಟನ್, ಪ್ರಸಿದ್ಧ ನಾಯಕರಾದ ಜಯಪ್ರಕಾಶ ನಾರಾಯಣ್, ಜಗಜೀವನ್ ರಾಮ್ ಅವರಿಗೆ ಬರೆದ ಪತ್ರಗಳನ್ನು ಆಗಿನ ನೆಹರೂ ವಸ್ತು-ಸಂಗ್ರಹಾಲಯ ಮತ್ತು ಗ್ರಂಥಾಲಯ

ಸಂಬಿತ್ ಪಾತ್ರ

ಸೊಸೈಟಿಯು ಸೋನಿಯಾ ಗಾಂಧಿ ಅವರಿಗೆ 2008ರಲ್ಲಿ ಹಿಂದಿರುಗಿಸಿತ್ತು ಎಂದು ಬಿಜೆಪಿ ಸಂಸದ ಮತ್ತು ವಕ್ತಾರ ಸಂಬಿತ್ ಪಾತ್ರ ಅವರು ಪಿಎಂಎಂಎಲ್ ಚರ್ಚೆಯ ವರದಿಗಳನ್ನು ಉಲ್ಲೇಖಿಸಿ ಹೇಳಿದ್ದಾರೆ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ನೆಹರೂ ವಸ್ತು ಸಂಗ್ರಹಾಲಯವನ್ನು ವಿಸ್ತರಿಸಿ, ಪ್ರಧಾನ ಮಂತ್ರಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಎಂದು ಮರುನಾಮಕರಣ ಮಾಡಿತು.

ವಸ್ತುಸಂಗ್ರಹಾಲಯದ ಆಗಿನ ನಿರ್ದೇಶಕರ ಅನುಮೋದನೆ ಬಳಿಕ ನೆಹರೂ ಅವರ ಪತ್ರವ್ಯವಹಾರಗಳ ದಾಖಲೆಗಳ 51 ಪೆಟ್ಟಿಗೆಗಳನ್ನು ಸೋನಿಯಾ ಗಾಂಧಿ ಅವರಿಗೆ ನೀಡಲಾಗಿದೆ ಎಂದು ಪಾತ್ರ ಸುದ್ದಿಗಾರರಿಗೆ ತಿಳಿಸಿದರು.

ನೆಹರೂ ಅವರ ಯಾವ ಪತ್ರಗಳ ವಿಷಯಗಳನ್ನು ಸಾರ್ವಜನಿಕಗೊಳಿಸಬಾರದು ಎಂದು ಅವರ ಕುಟುಂಬದವರು ಭಾವಿಸಿದ್ದಾರೆ ಎಂದು ಅವರು ಪ್ರಶ್ನಿಸಿದರು.

ಈ ಕುರಿತು ಸಂಸದರು ನೀಡಿರುವ ಸಲಹೆಯನ್ನು ಗಮನಿಸಿದ್ದು, ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು
ಗಜೇಂದ್ರ ಸಿಂಗ್ ಶೇಖಾವತ್
ಕೇಂದ್ರ ಸಂಸ್ಕೃತಿ ಸಚಿವ

ಪ್ರಿಯಾಂಕಾ ಕೈಯಲ್ಲಿ 'ಪ್ಯಾಲೆಸ್ಟೀನ್' ಕೈಚೀಲ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು 'ಪ್ಯಾಲೆಸ್ಟೀನ್' ಎಂದು ಬರೆದಿದ್ದ ಕೈಚೀಲವನ್ನು ಸಂಸತ್ತಿಗೆ ಸೋಮವಾರ ತರುವ ಮೂಲಕ ಗಮನ ಸೆಳೆದರು.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಯುದ್ಧದಲ್ಲಿ ಮೊದಲಿನಿಂದಲೂ ಇಸ್ರೇಲ್ ನಡೆಯನ್ನು ಖಂಡಿಸುತ್ತಿರುವ ಪ್ರಿಯಾಂಕಾ, ಪ್ಯಾಲೆಸ್ಟೀನ್‌ಗೆ ತಮ್ಮ ಬೆಂಬಲ ಸೂಚಿಸುತ್ತಿದ್ದಾರೆ. ಇದರ ಭಾಗವಾಗಿಯೇ ಅವರು ಈ ವಿಶೇಷ ಕೈಚೀಲವನ್ನು ಸಂಸತ್ತಿಗೆ ತಂದರು.

ಪ್ರಿಯಾಂಕಾ ತಂದಿದ್ದ ಚೀಲದ ಮೇಲೆ 'ಪ್ಯಾಲೆಸ್ಟೀನ್' ಎಂಬ ಬರಹ ಮತ್ತು ಲಾಂಛನದ ಚಿತ್ರ ಹಾಗೂ ಕಲ್ಲಂಗಡಿ ಹಣ್ಣಿನ ಚಿತ್ರವಿತ್ತು. ಕಲ್ಲಂಗಡಿ ಹಣ್ಣಿನ ಚಿತ್ರವು ಪ್ಯಾಲೆಸ್ಟೀನಿಯರ ಜತೆಗಿನ ಒಗ್ಗಟ್ಟನ್ನು ಸೂಚಿಸುತ್ತದೆ.

ವಯನಾಡ್ ಸಂಸದೆಯಾಗಿ ಆಯ್ಕೆಯಾದ ಪ್ರಿಯಾಂಕಾ ಅವರಿಗೆ ನವದೆಹಲಿಯಲ್ಲಿರುವ ಪ್ಯಾಲೆಸ್ಟೀನ್ ರಾಯಭಾರಿಯು ಕಳೆದ ವಾರ ಕರೆ ಮಾಡಿ ಅಭಿನಂದಿಸಿದ್ದರು.

ಜೂನ್‌ನಲ್ಲಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಟೀಕಿಸಿದ್ದ ಪ್ರಿಯಾಂಕಾ, 'ಇಸ್ರೇಲ್ ಸರ್ಕಾರ ನರ ಹಂತಕನಂತೆ ಅನಾಗರಿಕವಾಗಿ ವರ್ತಿಸುತ್ತಿದೆ. ಹಿಂಸಾಚಾರ ಮತ್ತು ನರಮೇಧಗಳನ್ನು ಸಹಿಸದ ಇಸ್ರೇಲ್ ನಾಗರಿಕರು ಮತ್ತು ಪ್ರಪಂಚದ ಎಲ್ಲರೂ ಇಸ್ರೇಲ್ ನಡೆಯನ್ನು ಖಂಡಿಸಬೇಕು ಮತ್ತು ಪ್ಯಾಲೆಸ್ಟೀನ್ ಮೇಲಿನ ದಾಳಿಯನ್ನು ನಿಲ್ಲಿಸುವಂತೆ ಒತ್ತಾಯಿಸಬೇಕು' ಎಂದು ಹೇಳಿದ್ದರು.

ಪ್ರಿಯಾಂಕಾ ಅವರ ನಡೆಯನ್ನು ಬಿಜೆಪಿ ಟೀಕಿಸಿದೆ.

'ಪ್ರಿಯಾಂಕಾ ಅವರು ಬಾಂಗ್ಲಾದೇಶದಲ್ಲಿ ದೌರ್ಜನ್ಯಕ್ಕೊಳಗಾಗುತ್ತಿರುವ ಹಿಂದೂಗಳ ಕುರಿತು ಒಂದೇ ಒಂದು ಮಾತನ್ನೂ ಮಾಡಿಲ್ಲ. ಆದರೆ 'ಪ್ಯಾಲೆಸ್ಟೀನ್' ಬ್ಯಾಗ್ ಮೂಲಕ ನಾಟಕೀಯ ಹೇಳಿಕೆ ನೀಡುತ್ತಿದ್ದಾರೆ' ಎಂದು ಬಿಜೆಪಿ ಸಂಸದ ಅನುರಾಗ್ ಠಾಕೂರ್ ಟೀಕಿಸಿದ್ದಾರೆ.

'ತಮ್ಮ ಈ ನಡೆಯ ಮೂಲಕ ಪ್ರಿಯಾಂಕಾ ಯಾವ ಸಂದೇಶ ನೀಡಲು ಹೊರಟಿದ್ದಾರೆ' ಎಂದು ಪ್ರಶ್ನಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪ್ರಿಯಾಂಕಾ, 'ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳು ಮತ್ತು ಕ್ರೈಸ್ತರ ಮೇಲಿನ ದೌರ್ಜನ್ಯ ತಡೆಗೆ ಕ್ರಮ ಕೈಗೊಳ್ಳಲು ಬಿಜೆಪಿಯವರಿಗೆ ಹೇಳಿ. ಬಾಂಗ್ಲಾದೇಶದ ಸರ್ಕಾರದೊಂದಿಗೆ ಈ ಕುರಿತು ಮಾತನಾಡಿ ದೌರ್ಜನ್ಯ ನಿಲ್ಲಿಸಲು ತಿಳಿಸಿ' ಎಂದರು.

ಜಾಕಿರ್ ಹುಸೇನ್ ಇನ್ನಿಲ್ಲ

ಒಂದನೇ ಪುಟದಿಂದ...

'ಹುಸೇನ್ ನಿಧನರಾದಾಗ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಸಮಯ ಭಾನುವಾರ ಸಂಜೆ 4 ಆಗಿತ್ತು (ಭಾರತೀಯ ಕಾಲಮಾನ ಸೋಮವಾರ ಬೆಳಿಗ್ಗೆ 5.30)' ಎಂದು ಖುರ್ಷಿದ್ ಔಲಿಯಾ ತಿಳಿಸಿದರು. ತಮ್ಮ ಪೀಳಿಗೆಯ ಶ್ರೇಷ್ಠ ತಬಲಾ ವಾದಕ ಎಂದು ಪರಿಗಣಿಸಲ್ಪಟ್ಟ ಹುಸೇನ್ ಅವರಿಗೆ ಪತ್ನಿ ಆಂಟೋನಿಯಾ ಮಿನೆಕೋಲಾ, ಪುತ್ರಿಯರಾದ ಅನಿಸಾ ಖುರೇಷಿ ಮತ್ತು ಇಸಾಬೆಲ್ಲಾ ಖುರೇಷಿ ಇದ್ದಾರೆ.

'ಜಗತ್ತಿನಾದ್ಯಂತ ಇರುವ ಅಸಂಖ್ಯಾತ ಸಂಗೀತ ಪ್ರೇಮಿಗಳು ನೆನಪಿನಲ್ಲಿಟ್ಟುಕೊಳ್ಳುವ ಮತ್ತು ಮುಂದಿನ ಹಲವು ತಲೆಮಾರುಗಳ ವರೆಗೆ ಅನುರಣಿಸುವಂತಹ ಅಸಾಧಾರಣ ಪರಂಪರೆಯನ್ನು ಅವರು ಬಿಟ್ಟು ಹೋಗಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಕಾಲಿಕ ಶ್ರೇಷ್ಠ ತಬಲಾ ವಾದಕ ಎನಿಸಿರುವ ಉಸ್ತಾದ್ ಅಲ್ಲಾ ರಖಾ ಅವರ ಪುತ್ರ ಜಾಕಿರ್, 1951ರ ಮಾರ್ಚ್ 9ರಂದು ಜನಿಸಿದರು. 7 ವರ್ಷ ವಯಸ್ಸಿನಲ್ಲಿ ತಬಲಾ ನುಡಿಸಲು ಆರಂಭಿಸಿದ ಅವರು 12ನೇ ವರ್ಷಕ್ಕೆ ಮೊದಲ ಕಾರ್ಯಕ್ರಮ ನೀಡಿ ಎಲ್ಲರ ಹುಬ್ಬೇರುವಂತೆ ಮಾಡಿದ್ದರು.

ತಬಲಾವನ್ನು ತಮ್ಮ 'ಸಂಗಾತಿ, ಸಹೋದರ ಮತ್ತು ಗೆಳೆಯ' ಎಂದಿದ್ದ ಅವರು ಅಲ್ಪ ಅವಧಿಯಲ್ಲೇ ಜಾಗತಿಕ ಮನ್ನಣೆ ಗಳಿಸಿ ಸಂಗೀತ ಲೋಕದ ಸಾಮ್ರಾಟರಲ್ಲಿ ಒಬ್ಬರೆನಿಸಿದರು.

ಸೃಜನಶೀಲತೆ ಮತ್ತು ನಾವೀನ್ಯತೆಗೆ ಹೆಸರುವಾಸಿ ಆಗಿದ್ದ ಜಾಕಿರ್ ಅವರು, ಭಾರತ ಹಾಗೂ ಪಾಶ್ಚಿಮಾತ್ಯ ಸಂಗೀತ ಸಂಪ್ರದಾಯಗಳ ನಡುವಿನ ಕೊಂಡಿಯಾಗಿದ್ದರು
ದ್ರೌಪದಿ ಮುರ್ಮು, ರಾಷ್ಟ್ರಪತಿ

ಭಾರತೀಯ ಶಾಸ್ತ್ರೀಯ ಸಂಗೀತವನ್ನು ಪಾಶ್ಚಿಮಾತ್ಯ ಸಂಗೀತದೊಂದಿಗೆ ಅತ್ಯಂತ ನಾಜೂಕಿನಿಂದ ಬೆರೆಸಿರುವ ಜಾಕಿರ್, ಸಾಂಸ್ಕೃತಿಕ ಏಕತೆಯ ಐಕಾನ್ ಆಗಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ

ಜಾಕಿರ್ ಹುಸೇನ್ ನಿಧನದ ಸುದ್ದಿ ದುಃಖಕರ. ಅವರು ಬಿಟ್ಟುಹೋಗಿರುವ ಸಂಗೀತದ ಭವ್ಯ ಪರಂಪರೆ ನಮ್ಮ ನೆನಪಿನಲ್ಲಿ ಸದಾ ಜೀವಂತವಾಗಿರುತ್ತದೆ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಲಾಠಿಚಾರ್ಜ್ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಜಾರ್ಖಂಡ್‌ನ ರಾಂಚಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಅಭ್ಯರ್ಥಿಗಳನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು – ಪಿಟಿಐ ಚಿತ್ರ

ಭಿಕ್ಷೆ ನೀಡಿದವರ ವಿರುದ್ಧವೇ ಎಫ್‌ಐಆರ್!

ಇಂದೋರ್ (ಪಿಟಿಐ): 'ಭಿಕ್ಷಾಟನೆ ಮುಕ್ತ ನಗರ' ನಿರ್ಮಾಣಕ್ಕೆ ಪಣ ತೊಟ್ಟಿರುವ ಇಂದೋರ್ ಮಹಾನಗರ ಪಾಲಿಕೆಯು, ಭಿಕ್ಷೆ ನೀಡುವವರ ವಿರುದ್ಧವೇ ಎಫ್‌ಐಆರ್ ದಾಖಲಿಸಲು ನಿರ್ಧರಿಸಿದೆ.

'ಭಿಕ್ಷುಕರಿಗೆ ಭಿಕ್ಷೆ ನೀಡಿ, ಭಿಕ್ಷಾಟನೆಯನ್ನು ಪ್ರೋತ್ಸಾಹಿಸದಂತೆ ಇಂದೋರ್ ನಗರದಾದ್ಯಂತ ಈ ತಿಂಗಳ ಅಂತ್ಯದವರೆಗೆ ಜಾಗೃತಿ ಕಾರ್ಯಕ್ರಮಹಮ್ಮಿಕೊಳ್ಳಲಾಗಿದೆ. ಯಾವುದೇ ವ್ಯಕ್ತಿಯು ಜನವರಿ 1ರ ಬಳಿಕವೂ ಭಿಕ್ಷೆ ನೀಡುವುದು ಕಂಡುಬಂದಲ್ಲಿ, ಆತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಆಶಿಶ್ ಸಿಂಗ್ ಅವರು ತಿಳಿಸಿದ್ದಾರೆ. 'ಇಂದೋರ್ ನಗರದ ವ್ಯಾಪ್ತಿಯಲ್ಲಿ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿಷೇಧಿಸಿದ್ದು, ಈ ಬಗ್ಗೆ ಆದೇಶ ಹೊರಡಿಸಲಾಗಿದೆ. ಅಲ್ಲದೇ, ಭಿಕ್ಷೆ ನೀಡುವ ಮೂಲಕ ಪಾಪ ಕೃತ್ಯದಲ್ಲಿ ತಾವೂ ಭಾಗಿಯಾಗದಂತೆ, ಇಂದೋರ್‌ನ ಎಲ್ಲ ನಿವಾಸಿಗಳಲ್ಲಿ ಮನವಿ ಮಾಡುತ್ತೇನೆ' ಎಂದರು.

ಕರ್ನಾಟಕ ಸಿ.ಎಂ ಸಿದ್ದರಾಮಯ್ಯ ಪತ್ರಕ್ಕೆ ಪಿಣರಾಯಿ ಪ್ರತಿಕ್ರಿಯೆ

ತಿರುವನಂತಪುರ: ವಯನಾಡ್‌ನಲ್ಲಿ ಸಂಭವಿಸಿದ್ದ ಭೂಕುಸಿತದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಎಲ್ಲರ ನೆರವು ಒಳಗೊಂಡಂತೆ 'ಇಂಟಿಗ್ರೇಟೆಡ್ ಟೌನ್‌ಶಿಪ್' ನಿರ್ಮಿಸುವ ಯೋಜನೆಯನ್ನು ಕೇರಳ ಸರ್ಕಾರ ಹೊಂದಿದೆ. ಈ ಕುರಿತು ವಿಸ್ತೃತ ಯೋಜನೆ ಸಿದ್ಧವಾದ ಬಳಿಕ ಕರ್ನಾಟಕ ಸರ್ಕಾರಕ್ಕೆ ಮಾಹಿತಿ ನೀಡಲಾ ಗುವುದು ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಈ ಕುರಿತು ಅವರು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಸಂತ್ರಸ್ತರ ಕುಟುಂಬಗಳಿಗೆ 100 ಮನೆ ನಿರ್ಮಿಸಿಕೊಡುವ ಕುರಿತ ತಮ್ಮ ಪ್ರಸ್ತಾವನೆಗೆ ಕೇರಳ

ಪಿಣರಾಯಿ ವಿಜಯನ್

ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಸಿದ್ದರಾಮಯ್ಯ ಇತ್ತೀಚೆಗೆ ಅಸಮಾಧಾನ ವ್ಯಕ್ತಪಡಿಸಿ, ಪಿಣರಾಯಿ ಅವರಿಗೆ ಪತ್ರ ಬರೆದಿದ್ದರು. ಅದಕ್ಕೆ ಕೇರಳ ಸಿ.ಎಂ ಪತ್ರ ಮೂಲಕ ಪ್ರತಿಕ್ರಿಯಿಸಿದ್ದಾರೆ. ಭೂಕುಸಿತ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಅಗತ್ಯವಿರುವ ನೆರವು ನೀಡಲು ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸುತ್ತಿರುವ ಕೇರಳ ಸರ್ಕಾರಕ್ಕೆ, ಸಿದ್ದರಾಮಯ್ಯ ಪತ್ರ ಮುಜುಗರ ಉಂಟು ಮಾಡಿತ್ತು.

ಶಬರಿಮಲೆ: ಅರಣ್ಯ ಮೂಲಕ ಬರುವ ಭಕ್ತರಿಗೆ ವಿಶೇಷ ದರ್ಶನ

ಶಬರಿಮಲೆ (ಪಿಟಿಐ): ಪುಲ್ಲಮೇಡು ಮತ್ತು ಎರುಮಲೆಯ ಸಾಂಪ್ರದಾಯಿಕ ಅರಣ್ಯ ಮಾರ್ಗಗಳ ಮೂಲಕ ಕಾಲ್ನಡಿಗೆಯಲ್ಲಿ ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಬರುವ ಯಾತ್ರಿಗಳಿಗೆ ದರ್ಶನಕ್ಕೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿರುವಾಂಕೂರು ದೇವಸ್ವಂ ಮಂಡಳಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ತಿಳಿಸಿದ್ದಾರೆ. ಹೀಗೆ ದೂರದಿಂದ ಕಾಲ್ನಡಿಗೆ ಮೂಲಕ ಬರುವ ಯಾತ್ರಿಗಳಿಗೆ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶೇಷ ಟ್ಯಾಗ್ ನೀಡಲಾಗುವುದು ಎಂದು ಅವರು ಹೇಳಿದರು.

'ಸುಪ್ರೀಂ' ವಿಭಾಗೀಯ ಪೀಠದ ಮಧ್ಯಂತರ ಸೂಚನೆ
ಗಾಯಕ ಕೃಷ್ಣರನ್ನು 'ಸುಬ್ಬುಲಕ್ಷ್ಮಿ ಪ್ರಶಸ್ತಿ' ಪುರಸ್ಕೃತ ಎಂದು ಪರಿಗಣಿಸುವಂತಿಲ್ಲ

ನವದೆಹಲಿ (ಪಿಟಿಐ): ಗಾಯಕ ಟಿ.ಎಂ. ಕೃಷ್ಣ ಅವರನ್ನು 'ಸಂಗೀತ ಕಲಾನಿಧಿ ಎಂ.ಎಸ್. ಸುಬ್ಬುಲಕ್ಷ್ಮಿ ಪ್ರಶಸ್ತಿ'ಗೆ ಭಾಜನರಾದವರು ಎಂದು ಪರಿಗಣಿಸುವಂತಿಲ್ಲ ಎಂಬ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ನೀಡಿದೆ.

ಸುಬ್ಬುಲಕ್ಷ್ಮಿ ಅವರ ಮೊಮ್ಮಗ ವಿ. ಶ್ರೀನಿವಾಸನ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇರುವ ವಿಭಾಗೀಯ ಪೀಠವು ಈ ಆದೇಶ ನೀಡಿದೆ. ಸುಬ್ಬುಲಕ್ಷ್ಮಿ ಅವರಿಗೆ ಅಗೌರವ ಸೂಚಿಸುವಂತಹ ಹೇಳಿಕೆಗಳನ್ನು ಕೃಷ್ಣ ಅವರು ನೀಡಿದ್ದಾರೆ ಎಂದು ಶ್ರೀನಿವಾಸನ್ ಅವರು ಅರ್ಜಿಯಲ್ಲಿ ದೂರಿದ್ದಾರೆ.

'ಸುಬ್ಬುಲಕ್ಷ್ಮಿ ಅವರು ಸಂಗೀತಪ್ರಿಯರ ನಡುವೆ ಎಲ್ಲೆಡೆ ಹೊಂದಿರುವ ಗೌರವವು ನ್ಯಾಯಾಲಯಕ್ಕೆ ತಿಳಿದಿದೆ. ಅವರು ಅತ್ಯಂತ ಪ್ರಸಿದ್ಧರಾದ ಗಾಯಕರಲ್ಲಿ ಒಬ್ಬರು. 2004ರ ಡಿಸೆಂಬರ್‌ನಲ್ಲಿಯೇ ಅವರು ಮೃತಪಟ್ಟಿದ್ದಾರಾದರೂ ಅವರ ಮಧುರ ಧ್ವನಿಯು ಅಭಿಮಾನಿಗಳ ಪಾಲಿಗೆ ಬಹಳ ಆನಂದ ತರುತ್ತಿದೆ' ಎಂದು ಪೀಠವು ಹೇಳಿದೆ.

'ಪ್ರಶಸ್ತಿಯನ್ನು ಈಗಾಗಲೇ ಪ್ರದಾನ ಮಾಡಿ ಆಗಿರುವ ಕಾರಣ ಮಧ್ಯಂತರ ಕ್ರಮವಾಗಿ, ಕೃಷ್ಣ ಅವರನ್ನು ಎಂ.ಎಸ್. ಸುಬ್ಬುಲಕ್ಷ್ಮಿ ಪ್ರಶಸ್ತಿ ಪುರಸ್ಕೃತ ಎಂದು ಪರಿಗಣಿಸಬಾರದು' ಎಂದು ಪೀಠವು ಆದೇಶದಲ್ಲಿ ಹೇಳಿದೆ.

ಕೃಷ್ಣ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡುವುದನ್ನು ತಡೆಹಿಡಿಯಬೇಕು ಎಂಬ ಮಧ್ಯಂತರ ಆದೇಶವನ್ನು ಮದ್ರಾಸ್ ಹೈಕೋರ್ಟ್ ಅನೂರ್ಜಿತಗೊಳಿಸಿತ್ತು. ಹೈಕೋರ್ಟ್‌ನ ಈ ಕ್ರಮವನ್ನು ಶ್ರೀನಿವಾಸನ್ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.


ಟಿ.ಎಂ. ಕೃಷ್ಣ

ಸುಪ್ರೀಂ ಕೋರ್ಟ್ ಪೀಠವು ಕೃಷ್ಣ ಅವರಿಗೆ, ಚೆನ್ನೈ ಸಂಗೀತ ಅಕಾಡೆಮಿ ಹಾಗೂ ಪ್ರಶಸ್ತಿಯ ಪ್ರಾಯೋಜಕರಿಗೆ ನೋಟಿಸ್ ಜಾರಿಗೆ ಸೂಚಿಸಿದೆ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಹೇಳಿದೆ. ಸುಬ್ಬುಲಕ್ಷ್ಮಿ ಅವರ ಹೆಸರು ಹಾಳುಮಾಡುವ ರೀತಿಯಲ್ಲಿ ಕೃಷ್ಣ ಅವರು ಲೇಖನ ಬರೆದಿದ್ದಾರೆ ಎಂಬ ಆರೋಪ ಇದ್ದು, ಇದೊಂದು ಅಸಾಮಾನ್ಯ ಪ್ರಕರಣ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಮಣ್ ಅವರು ವಿವರಿಸಿದ ನಂತರ ಪೀಠವು ಈ ಆದೇಶ ನೀಡಿದೆ.

ಕೃಷ್ಣ ಅವರು ಸುಬ್ಬುಲಕ್ಷ್ಮಿ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳ ಮೂಲಕ 'ಕೆಟ್ಟ, ನಿಂದನೆಯ ಹಾಗೂ ಮಾನಹಾನಿ ಉಂಟುಮಾಡುವಂತಹ' ದಾಳಿ ನಡೆಸಿದ್ದಾರೆ, ಸುಬ್ಬುಲಕ್ಷ್ಮಿ ಅವರ ಹೆಸರಿಗೆ ಹಾನಿ ಉಂಟುಮಾಡಿದ್ದಾರೆ. ಅವರಿಗೆ ಪ್ರಶಸ್ತಿ ನೀಡಬಾರದು ಎಂದು ಶ್ರೀನಿವಾಸನ್ ಅವರು ಕೋರಿದ್ದಾರೆ.

ಕೇನ್ ಶತಕ: ಜಯದತ್ತ ದಾಪುಗಾಲಿಟ್ಟ ಕಿವೀಸ್

ಹ್ಯಾಮಿಲ್ಟನ್ (ಎಪಿ): ಕೇನ್ ವಿಲಿಯಮ್ಸನ್ ಅವರ ಅಮೋಘ ಶತಕದ ಬಲದಿಂದ ಆತಿಥೇಯ ನ್ಯೂಜಿಲೆಂಡ್ ತಂಡವು ಇಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಬೃಹತ್ ಗುರಿಯೊಡ್ಡಿದೆ.

ಪಂದ್ಯದ 3ನೇ ದಿನವಾದ ಸೋಮವಾರ ನ್ಯೂಜಿಲೆಂಡ್ ತಂಡವು ಇಂಗ್ಲೆಂಡ್‌ಗೆ 658 ರನ್‌ಗಳ ಗೆಲುವಿನ ಗುರಿ ನೀಡಿದೆ. ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ದಿನದಾಟದ ಅಂತ್ಯಕ್ಕೆ 6 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 18 ರನ್ ಗಳಿಸಿ, ಸೋಲಿನ ಭೀತಿಯಲ್ಲಿದೆ.

ಮೊದಲ ಇನಿಂಗ್ಸ್‌ನಲ್ಲಿ 204 ರನ್‌ಗಳ ಮುನ್ನಡೆ ಗಳಿಸಿದ್ದ ನ್ಯೂಜಿಲೆಂಡ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 453 ರನ್ ಗಳಿಸಿತು. ಕೇನ್ ವಿಲಿಯಮ್ಸನ್ (156; 204ಎ, 4x20, 6x1) ಸುಂದರ ಶತಕ ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 97.1 ಓವರ್‌ಗಳಲ್ಲಿ 347. ಇಂಗ್ಲೆಂಡ್: 35.4 ಓವರ್‌ಗಳಲ್ಲಿ 143. ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 101.1 ಓವರ್‌ಗಳಲ್ಲಿ 453 (ವಿಲ್ ಯಂಗ್ 60, ಕೇನ್ ವಿಲಿಯಮ್ಸನ್ 156, ರಚಿನ್ ರವೀಂದ್ರ 44, ಡ್ಯಾರಿಲ್ ಮಿಚೆಲ್ 60, ಟಾಮ್ ಬ್ಲಂಡೆಲ್ ಔಟಾಗದೆ 44, ಮಿಚೆಲ್ ಸ್ಯಾಂಟನರ್ 49, ಬೆನ್ ಸ್ಟೋಕ್ಸ್ 52ಕ್ಕೆ2, ಶೋಯಬ್ ಬಶೀರ್ 170ಕ್ಕೆ2, ಜೇಕಬ್ ಬೆತೆಲ್ 72ಕ್ಕೆ3) ಇಂಗ್ಲೆಂಡ್: 6 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 18 (ಜೇಕಬ್ ಬೆತೆಲ್ ಬ್ಯಾಟಿಂಗ್ 9)

ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಶತಕ ಸಂಭ್ರಮ —ಎಎಫ್‌ಪಿ ಚಿತ್ರ

ಟೆಸ್ಟ್ ತಂಡಕ್ಕೂ ಸ್ಯಾಮಿ ಕೋಚ್

ಬ್ರಿಡ್ಜ್‌ಟೌನ್ (ಪಿಟಿಐ): ಮಾಜಿ ನಾಯಕ ಡ್ಯಾರೆನ್ ಸ್ಯಾಮಿ, ವೆಸ್ಟ್ ಇಂಡೀಸ್ ಪುರುಷರ ಕ್ರಿಕೆಟ್ ತಂಡದ ಮೂರು ಮಾದರಿಗೂ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

2023ರಿಂದ ವಿಂಡೀಸ್‌ನ ಏಕದಿನ ಮತ್ತು ಟಿ20 ತಂಡಕ್ಕೆ 40 ವರ್ಷ ವಯಸ್ಸಿನ ಸ್ಯಾಮಿ ಕೋಚ್ ಆಗಿದ್ದಾರೆ. ಮುಂದಿನ ಏಪ್ರಿಲ್ 1ರಿಂದ ಟೆಸ್ಟ್ ತಂಡಕ್ಕೂ ಮಾರ್ಗದರ್ಶನ ನೀಡುವರು ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್‌ನ ನಿರ್ದೇಶಕ ಮೈಲ್ಸ್ ಬಾಸ್ಕೊಂಬೆ ಸೋಮವಾರ ಘೋಷಿಸಿದ್ದಾರೆ.

ಕ್ರಿಕೆಟ್: ಸತೀಶ್‌ಗೆ ಐದು ವಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಿನ್ನರ್ ಎಸ್. ಸತೀಶ್ (33ಕ್ಕೆ5) ಅವರ ಬೌಲಿಂಗ್ ಮತ್ತು ಎಚ್. ರಾಘವೇಂದ್ರ (69 ರನ್) ಅವರ ಬ್ಯಾಟಿಂಗ್ ಬಲದಿಂದ ಮರ್ಚಂಟ್ಸ್ ಕ್ರಿಕೆಟ್ ಕ್ಲಬ್ ತಂಡವು ಮೆಟ್ರೊ ಶೀಲ್ಡ್ ನಾಲ್ಕನೇ ಡಿವಿಷನ್ ಲೀಗ್ ಕೆಎಸ್‌ಸಿಎ ಒಂದನೇ ಗುಂಪಿನ ಪಂದ್ಯದಲ್ಲಿ ಜಯಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮರ್ಚಂಟ್ಸ್ ತಂಡವು 11 ರನ್‌ಗಳಿಂದ ಶಿರೂರ್ ಪಾರ್ಕ್ ಕ್ಲಬ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮರ್ಚಂಟ್ಸ್ ಸಿಸಿ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 257 (ಎಚ್. ರಾಘವೇಂದ್ರ 69, ಎಂ. ಎಲ್. ಗಗನ್ 52, ವೆಂಕಿ ಔಟಾಗದೆ 42, ಅನಂತ ಪದ್ಮನಾಭ 33ಕ್ಕೆ3) ಕರ್ನಾಟಕ ಯೂತ್ ಕ್ರಿಕೆಟ್, ಮಾಲೂರು: 41.1 ಓವರ್‌ಗಳಲ್ಲಿ 140 (ಎಂ.ಜೆ. ಸಾಗರ್ 33, ಆರ್. ರಕ್ಷಿತ್ ಕುಮಾರ್ 39, ಎಸ್. ಸತೀಶ್ 33ಕ್ಕೆ5) ಮರ್ಚಂಟ್ಸ್ ಸಿಸಿಗೆ 117 ರನ್ ಜಯ.
ಶಿರೂರ್ ಪಾರ್ಕ್ ಕ್ಲಬ್: 47.2 ಓವರ್‌ಗಳಲ್ಲಿ 213 (ಅನೀಶ್ ಜಾನ್ 93, ವೆಂಕಟ ಸುನಿಲ್ 25, ಎಸ್.ಎಂ. ಹನ್ಷಲ್ 41ಕ್ಕೆ2, ಎಸ್. ಚೇತನ್ 37ಕ್ಕೆ5), ಸಿಟಿ ಕ್ರಿಕೆಟರ್ಸ್(1): 48.4 ಓವರ್‌ಗಳಲ್ಲಿ 202 (ಶ್ಲೋಕ್ ಗಂಗತ್‌ಕರ್ 29, ಎಲ್. ತೇಜಸ್ 42, ದೇತನ್ 45, ಸಂಜಯ್ ಗೊರೂರ್ 37ಕ್ಕೆ3, ಶ್ರೀ ರೂಪೇಶ್ 35ಕ್ಕೆ2) ಶಿರೂರ್ ಪಾರ್ಕ್ ತಂಡಕ್ಕೆ 11 ರನ್ ಜಯ.
ಲಯನ್ಸ್ ಸಿಸಿ: 29.5 ಓವರ್‌ಗಳಲ್ಲಿ 138 (ಹೇಮರಾಜ್ ಪುರೋಹಿತ್ 38, ಮಂಜುನಾಥ್ 25ಕ್ಕೆ2, ಸಿ. ರಿತೀಶ್ 19ಕ್ಕೆ3, ಅಭಯ್ ಎಂ.ಬಿ. 21ಕ್ಕೆ3) ವಿಕ್ಟರಿ ಸಿಸಿ: 33.5 ಓವರ್‌ಗಳಲ್ಲಿ 132 (ಎಸ್. ಅಭಿರಾಜ್ 27, ಸಿ. ಮಂಜುನಾಥ್ 35, ಹೇಮರಾಜ್ ಪುರೋಹಿತ್ 31ಕ್ಕೆ2, ಪ್ರಶಾಂತ್ ಆನಂದ್ 32ಕ್ಕೆ5) ಲಯನ್ಸ್ ಸಿಸಿಗೆ 6 ರನ್‌ಗಳ ಜಯ.
ಸೆಲೆಕ್ಟ್ ಕ್ರಿಕೆಟರ್ಸ್: 38 ಓವರ್‌ಗಳಲ್ಲಿ 9ಕ್ಕೆ202 (ಅರ್ಪಿತ್ ರಾಜೀವ ನಾಗಾನಂದ 29, ಯೋಗೇಶ್ ಕಸಾಮಸೆಟ್ಟಿ 31, ಆರ್. ಗಿರೀಶ ಕುಮಾರ್ 33, ಎಸ್.ಪಿ. ಸಿರಂತ್ 21, ಎಂ.ಬಿ. ಬಸವರಾಜ್ 30ಕ್ಕೆ2, ಎಚ್.ಎಸ್. ರಾಘವೇಂದ್ರ 45ಕ್ಕೆ3) ರಣಜಿ ಸಿಸಿ: 33.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 203 (ಆದಿತ್ಯ ವಡೂಳ್ 44, ಪ್ರಣವ್ ಕೆದಲಾಯ ಅಜೇಯ 107) ರಣಜಿ ಸಿಸಿಗೆ 8 ವಿಕೆಟ್ ಜಯ.

ಶುಭಾ, ವೃಂದಾ ಶತಕ: ಕರ್ನಾಟಕಕ್ಕೆ ಜಯ

ಬೆಂಗಳೂರು: ಶುಭಾ ಸತೀಶ್ (140; 138ಎ) ಮತ್ತು ವೃಂದಾ ದಿನೇಶ್ (125; 65ಎ) ಅವರ ಅಮೋಘ ಶತಕಗಳ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 218 ರನ್‌ಗಳಿಂದ ತ್ರಿಪುರ ತಂಡವನ್ನು ಮಣಿಸಿತು.

ಹರಿಯಾಣದ ಝಜ್ಜರ್‌ನ ಸೆಹ್ವಾಗ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 349 ರನ್ ಪೇರಿಸಿತು.

ಶುಭಾ ಮತ್ತು ವೃಂದಾ ಎರಡನೇ ವಿಕೆಟ್ ಜೊತೆಯಾಟದಲ್ಲಿ 201 ರನ್ ಸೇರಿಸಿದರು. ಶುಭಾ ಇನಿಂಗ್ಸ್‌ನಲ್ಲಿ 15 ಬೌಂಡರಿ ಮತ್ತು ವೃಂದಾ ಇನಿಂಗ್ಸ್‌ನಲ್ಲಿ 14 ಬೌಂಡರಿ ಮತ್ತು 7 ಭರ್ಜರಿ ಸಿಕ್ಸರ್ ಒಳಗೊಂಡಿತ್ತು.

ಶುಭಾ ಸತೀಶ್

ತ್ರಿಪುರ ತಂಡವು 43.3 ಓವರ್‌ಗಳಲ್ಲಿ 131 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಕರ್ನಾಟಕದ ಸಹನಾ ಎಸ್.ಪವಾರ್ ಮತ್ತು ಅನನ್ಯಾ ಹೆಗ್ಡೆ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 348 (ಶುಭಾ ಸತೀಶ್ 140, ವೃಂದಾ ದಿನೇಶ್ 125, ಆರ್.ಆರ್. ಮಾಣೆ 61ಕ್ಕೆ 4). ತ್ರಿಪುರ: 43.3 ಓವರ್‌ಗಳಲ್ಲಿ 131 (ಮೌಚ್ಮಿತಿ ದೇವನಾಥ್ 31, ಪಿ.ಎ. ಆಚಾರ್ಜಿ 31; ಸಹನಾ ಎಸ್.ಪವಾರ್ 34ಕ್ಕೆ 3, ಅನನ್ಯಾ ಹೆಗ್ಡೆ 28ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ 218 ರನ್ ಜಯ.

ಗಾಬಾ ಟೆಸ್ಟ್: ಆಸ್ಟ್ರೇಲಿಯಾ ವೇಗಿಗಳ ಮುಂದೆ ಪರದಾಡಿದ ಭಾರತದ ಬ್ಯಾಟರ್‌ಗಳು

ಮಳೆಯಲಿ ಕಳೆಗುಂದಿದ ಶರ್ಮಾ ಪಡೆ

● ಮಧು ಜವಳಿ

ಬ್ರಿಸ್ಬೇನ್: ಭಾರತ ತಂಡವು ಸೋಮವಾರ ಮೊದಲ ಇನಿಂಗ್ಸ್ ಆರಂಭಿಸಿದ ನಂತರ ಮಳೆಯಿಂದಾಗಿ ಆರು ಸಲ ಆಟ ಸ್ಥಗಿತವಾಯಿತು. ಸುಮಾರು ಐದೂವರೆ ತಾಸುಗಳಲ್ಲಿ ಕೇವಲ 17 ಓವರ್‌ಗಳ ಆಟವಷ್ಟೇ ಸಾಧ್ಯವಾಯಿತು. ಆದರೆ ಈ ಅವಧಿಯಲ್ಲಿಯೇ ಭಾರತ ತಂಡವು ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡಿತು!

ಬೆಳಿಗ್ಗೆ ಆತಿಥೇಯ ಆಸ್ಟ್ರೇಲಿಯಾ ತಂಡವು 445ಕ್ಕೆ ಆಲೌಟ್ ಆಯಿತು. ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಪ್ರವಾಸಿ ಬಳಗವು 51 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೂರನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದಲ್ಲಿ ನಡೆದಿದ್ದು ಒಟ್ಟು 33.1 ಓವರ್‌ಗಳ ಆಟವಷ್ಟೇ. ಉಳಿದಿದ್ದು ಮಳೆಯಾಟ.

ಪಂದ್ಯದ ಮೊದಲ ದಿನವೂ ಮಳೆಯಿಂದಾಗಿ ಆಟ ಸ್ಥಗಿತವಾಗಿತ್ತು. ಎರಡನೇ ದಿನವಾದ ಭಾನುವಾರ ಆತಿಥೇಯ ತಂಡವು 7ಕ್ಕೆ 405 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಅಲೆಕ್ಸ್ ಕ್ಯಾರಿ (70 ರನ್) ಮೂರನೇ ದಿನ ಬೆಳಿಗ್ಗೆ ತಮ್ಮ ಅರ್ಧಶತಕ ಪೂರೈಸಿದರು.

ಗಾಬಾ ಕ್ರೀಡಾಂಗಣದ ಮೇಲೆ ಕಾರ್ಮೋಡಗಳು ಠಳಾಯಿಸುತ್ತಿದ್ದವು. ಇತ್ತ ಆಸ್ಟ್ರೇಲಿಯಾ ಬೌಲರ್‌ಗಳು ಮತ್ತೊಮ್ಮೆ ಭಾರತದ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದರು. ಆದರೆ ಕನ್ನಡಿಗ ಕೆ.ಎಲ್. ರಾಹುಲ್ (ಬ್ಯಾಟಿಂಗ್ 33; 64ಎ, 4X4) ಅವರೊಬ್ಬರೇ ಗಟ್ಟಿಯಾಗಿ ನಿಂತರು. ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಮಿಚೆಲ್ ಸ್ಟಾರ್ಕ್‌ಗೆ ವಿಕೆಟ್ ಒಪ್ಪಿಸಿದರು.

ಇನ್‌ಸ್ವಿಂಗ್ ಎಸೆತವನ್ನು ಫ್ಲಿಕ್ ಮಾಡಿದ ಜೈಸ್ವಾಲ್ ಲೆಗ್‌ಸೈಡ್‌ನಲ್ಲಿದ್ದ ಫೀಲ್ಡರ್ ಮಿಚೆಲ್ ಮಾರ್ಷ್‌ಗೆ ಕ್ಯಾಚ್ ಆದರು. ಅಡಿಲೇಡ್ ಪಂದ್ಯದಲ್ಲಿಯೂ ಸ್ಟಾರ್ಕ್ ಅವರ ಇದೇ ತರಹದ ಎಸೆತದಲ್ಲಿ ಯಶಸ್ವಿ ಬೌಲ್ಡ್ ಆಗಿದ್ದರು.

ತಮ್ಮ ಇನ್ನೊಂದು ಓವರ್‌ನಲ್ಲಿ ಸ್ಟಾರ್ಕ್ ಹಾಕಿದ ತುಸು ವೈಡ್ ಆಗಿದ್ದ ಎಸೆತವನ್ನು ಆಡಿದ ಶುಭಮನ್ ಗಿಲ್ ಅವರು ಸೆಕೆಂಡ್ ಗಲೀ ಫೀಲ್ಡರ್ ಮಾರ್ಷ್‌ಗೆ ಕ್ಯಾಚ್ ಕೊಟ್ಟರು. ಈ ಹಂತದಲ್ಲಿ ವಿರಾಟ್ ಕೊಹ್ಲಿ ಕ್ರೀಸ್‌ಗೆ ಬಂದಾಗ ಭಾರತದ ಪಾಳೆಯದಲ್ಲಿ ವಿಶ್ವಾಸದ ಕುಡಿಯೊಡೆದಿತ್ತು. ಆದರೆ ತಾವೆದುರಿಸಿದ 16ನೇ ಎಸೆತದಲ್ಲಿ ಕೊಹ್ಲಿ ಮತ್ತೊಮ್ಮೆ ಆಫ್‌ಸ್ಟಂಪ್ ಹೊರಗೆ ಹೊರಟಿದ್ದ ಚೆಂಡನ್ನು ಕೆಣಕಿ ಕೈಸುಟ್ಟುಕೊಂಡರು.

ಬ್ರಿಸ್ಬೇನ್‌ನ ಗಾಬಾ ಕ್ರೀಡಾಂಗಣದಲ್ಲಿ ಮಳೆ ಸುರಿದಾಗ ಪೆವಿಲಿಯನ್‌ನತ್ತ ಓಡಿದ ಭಾರತದ ಬ್ಯಾಟರ್ ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ವೇಗಿ ಜೋಶ್ ಹ್ಯಾಜಲ್‌ವುಡ್ ಸಂಭ್ರಮಿಸಿದರು. ಇದಾದ ನಂತರ ಮಳೆ ಸುರಿಯಲಾರಂಭಿಸಿತು.

ಆ ಒಂದು ಎಸೆತವನ್ನು ತಡವದೇ ಇದ್ದಿದ್ದರೆ ಮಳೆ ನಂತರವೂ ಕೊಹ್ಲಿ ಆಡಬಹುದಿತ್ತು!

ರಾಹುಲ್ ಜೊತೆಗೂಡಿದ ರಿಷಭ್ ಪಂತ್ ಸ್ವಲ್ಪ ಹೊತ್ತು ಪ್ರತಿರೋಧವೊಡ್ಡಿದರು. ಆಗಾಗ ಮಳೆಯಿಂದಾಗಿ ಆಟ ಸ್ಥಗಿತವಾಯಿತು. ಆದರೆ ಪಂತ್ (9; 12ಎ) ಅವರು ಪ್ಯಾಟ್ ಕಮಿನ್ಸ್ ಎಸೆತವನ್ನು ಆಡುವ ಭರದಲ್ಲಿ ಚೆಂಡು ಬ್ಯಾಟ್ ಅಂಚು ಸವರಿ ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿ ಕೈಗವಸು ಸೇರಿತು. ಪಂತ್ ಕ್ರೀಸ್‌ನಲ್ಲಿದ್ದಷ್ಟು ಹೊತ್ತು ತಮ್ಮ ನಿರ್ಭೀತ ಆಟವಾಡಿದರು. ಆತಿಥೇಯ ವೇಗಿಗಳನ್ನು ಆತ್ಮವಿಶ್ವಾಸಭರಿತರಾಗಿ ಎದುರಿಸಿದರು. ಕೆಲವು ಎಸೆತಗಳನ್ನು ಬಿಟ್ಟರು, ಕೆಲವನ್ನು ರಕ್ಷಣಾತ್ಮಕವಾಗಿ ಆಡಿದರು.

ಆಸ್ಟ್ರೇಲಿಯಾ ಮೂವರು ವೇಗಿಗಳು ನಾಲ್ಕು ವಿಕೆಟ್‌ಗಳನ್ನು ಹಂಚಿಕೊಂಡರು. ತಮಗೆ ಸಿಕ್ಕ ಓವರ್‌ಗಳನ್ನು ಶಿಸ್ತಿನಿಂದ ಬೌಲಿಂಗ್ ಮಾಡಿ ಬ್ಯಾಟರ್‌ಗನ್ನುಒತ್ತಡಕ್ಕೆ ಸಿಲುಕಿಸಿದರು. 6.4 ಅಡಿ ಮತ್ತು 6.6 ಅಡಿ ಎತ್ತರದ ಬೌಲರ್‌ಗಳು ತಮ್ಮ ಸಾಮರ್ಥ್ಯವನ್ನು ಅಚ್ಚುಕಟ್ಟಾಗಿ ಬಳಸಿಕೊಂಡರು. ಹೈ ರಿಲೀಸ್ ಪಾಯಿಂಟ್ ನಿಂದಾಗಿ ಎಸೆತಗಳ ಪುಟಿತ ಹೆಚ್ಚಿತ್ತು.

ಭಾರತ ಮತ್ತು ಆಸ್ಟ್ರೇಲಿಯಾ ಬೌಲರ್‌ಗಳ ನಡುವೆ ಇರುವ ಪ್ರಮುಖ ವ್ಯತ್ಯಾಸ ಇದು. ಬೂಮ್ರಾ (76ಕ್ಕೆ6) ಮಾತ್ರ ತಮ್ಮ ಸಾಮರ್ಥ್ಯ ಮೀರಿ ಎದುರಾಳಿಗಳಿಗೆ ಸವಾಲೊಡ್ಡಿದರು.

ಕ್ರೀಸ್‌ನಲ್ಲಿರುವ ರಾಹುಲ್ ಮತ್ತು ನಾಯಕ ರೋಹಿತ್ (ಖಾತೆ ತೆರೆದಿಲ್ಲ) ಅವರ ಮೇಲೆ ನಿರೀಕ್ಷೆಯ ಭಾರವಿದೆ. ಮಂಗಳವಾರವೂ ರಭಸದ ಮಳೆ ಸುರಿಯುವ ಸಾಧ್ಯತೆಗಳಿವೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 445 (117.1 ಓವರ್‌ಗಳಲ್ಲಿ)
(ಭಾನುವಾರ 101 ಓವರ್‌ಗಳಲ್ಲಿ 7ಕ್ಕೆ405)
ಕ್ಯಾರಿ ಸಿ ಶುಭಮನ್ ಬಿ ಆಕಾಶ್ 70 (88ಎ, 4x7, 6x2)
ಸ್ಟಾರ್ಕ್ ಸಿ ಪಂತ್ ಬಿ ಬೂಮ್ರಾ 18 (30ಎ, 4x1, 6x1)
ಲಯನ್ ಬಿ ಸಿರಾಜ್ 2 (30ಎ)
ಜೋಶ್ ಹ್ಯಾಜಲ್‌ವುಡ್ ಔಟಾಗದೇ 0 (3ಎ)
ಇತರೆ: 35 (ಲೆಗ್‌ಬೈ 17, ನೋಬಾಲ್ 5, ವೈಡ್ 13)
ವಿಕೆಟ್ ಪತನ: 8-423 (ಮಿಚೆಲ್ ಸ್ಟಾರ್ಕ್, 105.6), 9-445 (ನೇಥನ್ ಲಯನ್, 116.3), 10-445 (ಅಲೆಕ್ಸ್ ಕ್ಯಾರಿ, 117.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 28–9–76–6, ಮೊಹಮ್ಮದ್ ಸಿರಾಜ್ 23.2–5–97–2, ಆಕಾಶ್ ದೀಪ್ 29.5–5–95–1, ನಿತೀಶ್ ಕುಮಾರ್ ರೆಡ್ಡಿ 13–1–65–1, ರವೀಂದ್ರ ಜಡೇಜ 23–2–95–0
ಭಾರತ: 4ಕ್ಕೆ 51 (17 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಮಾರ್ಷ್ ಬಿ ಸ್ಟಾರ್ಕ್ 4 (2ಎ, 4x1)
ಕೆ.ಎಲ್. ರಾಹುಲ್ ಬ್ಯಾಟಿಂಗ್ 33 (64ಎ, 4x4)
ಶುಭಮನ್ ಸಿ ಮಾರ್ಷ್ ಬಿ ಸ್ಟಾರ್ಕ್ 1 (3ಎ)
ವಿರಾಟ್ ಸಿ ಕ್ಯಾರಿ ಬಿ ಹ್ಯಾಜಲ್‌ವುಡ್ 3 (16ಎ)
ರಿಷಭ್ ಸಿ ಕ್ಯಾರಿ ಬಿ ಕಮಿನ್ಸ್ 9 (12ಎ)
ರೋಹಿತ್ ಶರ್ಮಾ ಬ್ಯಾಟಿಂಗ್ 0 (6ಎ)
ಇತರೆ: 1 (ನೋಬಾಲ್ 1)
ವಿಕೆಟ್ ಪತನ: 1-4 (ಯಶಸ್ವಿ ಜೈಸ್ವಾಲ್, 0.2), 2-6 (ಶುಭಮನ್ ಗಿಲ್, 2.1), 3-22 (ವಿರಾಟ್ ಕೊಹ್ಲಿ, 7.2), 4-44 (ರಿಷಭ್ ಪಂತ್, 13.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 8–1–25–2, ಜೋಶ್ ಹ್ಯಾಜಲ್‌ವುಡ್ 5–2–17–1, ಪ್ಯಾಟ್ ಕಮಿನ್ಸ್ 2–0–7–1, ನೇಥನ್ ಲಯನ್ 1–0–1–0, ಟ್ರಾವಿಸ್ ಹೆಡ್ 1–0–1–0

ನೋವಿನಲ್ಲಿ ಸಿರಾಜ್ ಬೌಲಿಂಗ್

ಬ್ರಿಸ್ಬೇನ್ (ಪಿಟಿಐ): ಮೊಹಮ್ಮದ್ ಸಿರಾಜ್ ಅವರ ಸ್ನಾಯುಸೆಳೆತದ ನೋವಿನಲ್ಲಿಯೂ ಬೌಲಿಂಗ್ ಮಾಡುತ್ತಿದ್ದಾರೆ. ಅವರ ಉತ್ಸಾಹ ಮತ್ತು ಉತ್ತಮ ಬೌಲಿಂಗ್ ತಮಗೆ ಇಷ್ಟವಾಯಿತು ಎಂದು ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಹೇಳಿದರು.

ದಿನದಾಟದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿರಾಜ್ ಅವರಲ್ಲಿರುವ ಹೋರಾಟ ಮನೋಭಾವವು ಸ್ಫೂರ್ತಿದಾಯಕ. ತಮ್ಮ ಈ ಗುಣದಿಂದಲಾಗಿ ಅವರು ತಂಡದ ಎಲ್ಲರಿಗೂ ಪ್ರೀತಿಪಾತ್ರರಾಗಿದ್ದಾರೆ' ಎಂದರು.

ಸೈಕ್ಲೊಥಾನ್ ಇಂದು

ಬೆಂಗಳೂರು: 'ಫಿಟ್‌ನೆಸ್ ಇಂಡಿಯಾ' ಅಭಿಯಾನದ ಭಾಗವಾಗಿ ಮಾಲಿನ್ಯ ಜಾಗೃತಿಗಾಗಿ ಭಾರತೀಯ ಕ್ರೀಡಾ ಪ್ರಾಧಿಕಾರವು (ಸಾಯ್) ಶಾಂತಿನಗರದ ಹಾಕಿ ತರಬೇತಿ ಕ್ರೀಡಾಂಗಣದಲ್ಲಿ ಮಂಗಳವಾರ (ಡಿ.17) ಬೆಳಿಗ್ಗೆ 7ಕ್ಕೆ ಸೈಕ್ಲೊಥಾನ್ ರ್‍ಯಾಲಿ ಹಮ್ಮಿಕೊಂಡಿದೆ.

ಖ್ಯಾತ ತಬಲಾ ವಾದಕರಿಗೆ ನಮನ !

ಕರ್ನಾಟಕದ ಸಹನಾ ಮೂರ್ತಿ (ಎಡಚಿತ್ರ). ಪಿಎಸ್‌ಪಿಬಿ ತಂಡದ ಯಶಸ್ವಿನಿ ಘೋರ್ಪಡೆ –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಟೇಬಲ್ ಟೆನಿಸ್: ರಾಜ್ಯದ ಯಶಸ್ವಿನಿ, ಸಹನಾ ಮುನ್ನಡೆ

ಮೊದಲ ಸುತ್ತಿನಲ್ಲೇ ಹೊರಬಿದ್ದ ಸುತೀರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಉದಯೋನ್ಮುಖ ಆಟಗಾರ್ತಿ ದಿವ್ಯಾಂಶಿ ಬೌಮಿಕ್ ಅವರು ಇಲ್ಲಿ ನಡೆಯುತ್ತಿರುವ ಯುಟಿಟಿ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಮತ್ತು ಅಗ್ರ ಶ್ರೇಯಾಂಕದ ಸುತೀರ್ಥ ಮುಖರ್ಜಿ ಅವರಿಗೆ ಆಘಾತ ನೀಡಿದರು.

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಎರಡನೇ ದಿನವಾದ ಸೋಮವಾರ ಮುಖ್ಯ ಸುತ್ತಿನ 64ರ ಘಟ್ಟದ ಪಂದ್ಯದಲ್ಲಿ 14 ವರ್ಷ ವಯಸ್ಸಿನ ದಿವ್ಯಾಂಶಿ 3–0ಯಿಂದ ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿಯ (ಆರ್‌ಎಸ್‌ಪಿಬಿ) ಸುತೀರ್ಥ ಅವರನ್ನು ಹಿಮ್ಮೆಟ್ಟಿಸಿ 32ರ ಘಟ್ಟಕ್ಕೆ ಮುನ್ನಡೆದರು.

ಎರಡನೇ ಶ್ರೇಯಾಂಕದ ಪೊಯಮಂತಿ ಬೈಸ್ಯ 3–2ರಿಂದ ಪಶ್ಚಿಮ ಬಂಗಾಳದ ಕ್ವಾಲಿಫೈಯರ್ ಆಟಗಾರ್ತಿ ನಂದಿನಿ ಸಹಾಅವರನ್ನು ಸೋಲಿಸಿದರು. ಮೂರನೇ ಶ್ರೇಯಾಂಕದ ಸ್ವಸ್ತಿಕಾ ಘೋಷ್ ಮತ್ತು ನಾಲ್ಕನೇ ಶ್ರೇಯಾಂಕದ ಯಶಸ್ವಿನಿ ಘೋರ್ಪಡೆ ಅವರು ನೇರ ಗೇಮ್‌ಗಳಿಂದ ಗೆದ್ದು ಮುನ್ನಡೆದರು.

ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಪಿಎಸ್‌ಪಿಬಿ) ತಂಡ ಪ್ರತಿನಿಧಿಸುತ್ತಿರುವ ಕರ್ನಾಟಕದ ಯಶಸ್ವಿನಿ 3–0ಯಿಂದ ಬಂಗಾಳದ ಶುಭಂಕೃತ ದತ್ತಾರನ್ನು ಮಣಿಸಿದರು.

ಸ್ಥಳೀಯ ನೆಚ್ಚಿನ ಆಟಗಾರ್ತಿ ಸಹನಾ ಮೂರ್ತಿ ತವರಿನ ಪ್ರೇಕ್ಷಕರನ್ನು ನಿರಾಸೆಗೊಳಿಸಲಿಲ್ಲ. 3–1ರಿಂದ ಕೆನರಾ ಬ್ಯಾಂಕ್ ತಂಡದ ಪ್ರಣತಿ ನಾಯರ್ ಅವರನ್ನು ಮಣಿಸಿ 32ರ ಘಟ್ಟಕ್ಕೆ ಮುನ್ನಡೆದರು.

ಕರ್ನಾಟಕ ಆಟಗಾರರ ಫಲಿತಾಂಶ

ಗುಂಪು ಹಂತ: 19 ವರ್ಷದೊಳಗಿನ ಬಾಲಕರ ಸಿಂಗಲ್ಸ್: ಸಂಜಯ್ ಮಾಧವನ್ 3–0ಯಿಂದ ಹರಿಯಾಣದ ಆರುಷ್ ಗೋಸ್ವೈನ್ ವಿರುದ್ಧ; ಅಥರ್ವ ನವರಂಗ 3–0ಯಿಂದ ಬಂಗಾಳದ ತನಿಶ್ ಗೋಯಲ್ ವಿರುದ್ಧ; ಗೌರವ್ ರಾಮ್‌ಪ್ರಸಾದ್ 3–2ರಿಂದ ಮಹಾರಾಷ್ಟ್ರದ ತೇಜಸ್ ವಾಸ್ಕಿಕರ್ ವಿರುದ್ಧ; ವಿಭಾಸ್ ವೆಂಕಟೇಶ್ 3–0ಯಿಂದ ಬಂಗಾಳದ ಸಾಯನ್ ಚೌಧರಿ ವಿರುದ್ಧ; ಅಭಿನವ್ ಮೂರ್ತಿ 3–0ಯಿಂದ ಬಂಗಾಳದ ದೇವಾಯುಧ್ ನಂದಿ ವಿರುದ್ಧ; ಸಿದ್ದಾಂತ್ ಧರಿವಾಲ್ 3–2ರಿಂದ ಪಿಎಸ್‌ಪಿಬಿಯ ರೊನಾಲ್ಡ್ ಸರ್ಕಾರ್ ವಿರುದ್ಧ; ರೆಯಾನ್ಶ್ ಜಲನ್ 3–1ರಿಂದ ದೆಹಲಿಯ ಸಮರ್ಥ್ ಸಿಂಗ್ ವಿರುದ್ಧ; ವಿಭಾಸ್ 3–0ಯಿಂದ ಛತ್ತೀಸಗಢದ ಹರ್ಷಿತ್ ಕೆಡಿಯಾ ವಿರುದ್ಧ; ರೋಹಿತ್ ಶಂಕರ್ 3–0ಯಿಂದ ತೆಲಂಗಾಣದ ಬಿ.ಯಶಸ್ವಿನ್ ವಿರುದ್ಧ ಜಯ ಸಾಧಿಸಿದರು.

19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್: ಸಹನಾ ಮೂರ್ತಿ 3–1ರಿಂದ ಮಹಾರಾಷ್ಟ್ರದ ಜೆ. ಸ್ವರಾ ವಿರುದ್ಧ; ತನಿಷ್ಕಾ ಕಾಲಭೈರವ 3–1ರಿಂದ ಮಹಾರಾಷ್ಟ್ರದ ಹೃತಿಕಾ ಮಧುರ್ ವಿರುದ್ಧ; ಹಿಮಾಂಶಿ ಚೌಧರಿ 3–0ಯಿಂದ ದೆಹಲಿಯ ವಿನಯಾ ಖಂಡೇಲ್ವಾಲ್ ವಿರುದ್ಧ ಜಯ ಸಾಧಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ 1ರಿಂದ 16 ಶ್ರೇಯಾಂಕದ ಆಟಗಾರರು 128ರ ಘಟ್ಟದ ಸ್ಪರ್ಧೆಯಲ್ಲಿ ಬೈ ಪಡೆದರು. 64ರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ಮೂರು ಆಟಗಾರರು ಹೊರಬಿದ್ದರು.

ಸಂಕ್ಷಿಪ್ತ ಸುದ್ದಿ

ಅಂಕಿತ್ ನಿವೃತ್ತಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಕ್ರಿಕೆಟ್ ತಂಡದ ವೇಗಿ ಅಂಕಿತ್ ರಜಪೂತ್ ಅವರು ಕ್ರಿಕೆಟ್‌ಗೆ ವಿದಾಯ ಘೋಷಿಸಿದರು.

31 ವರ್ಷದ ಅಂಕಿತ್ ಈಚೆಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತರ ಪ್ರದೇಶ ತಂಡದಲ್ಲಿ ಆಡಿದ್ದರು. ಟಿ20 ಲೀಗ್ ಟೂರ್ನಿಗಳಲ್ಲಿ ಮುಂದುವರಿಯಲು ನಿರ್ಧರಿಸಿದ್ದಾರೆ.

18ರಿಂದ ಬ್ಯಾಡ್ಮಿಂಟನ್

ಬೆಂಗಳೂರು: ನಗರದ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಂಗಣದಲ್ಲಿ ಇದೇ 18ರಿಂದ 24ರವರೆಗೆ 77ನೇ ಅಂತರ ವಲಯ ಮತ್ತು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ನಡೆಯಲಿದೆ.

ಶುಕ್ರವಾರ ವೈಯಕ್ತಿಕ ವಿಭಾಗಗಳ ಸ್ಪರ್ಧೆ ಪ್ರಾರಂಭವಾಗಲಿವೆ. ಹಾಲಿ ಚಾಂಪಿಯನ್‌ಗಳಾದ ಚಿರಾಗ್ ಸೇನ್ ಮತ್ತು ಅನ್ಮೋಲ್ ಖಾರ್ಬ್ ಪ್ರಶಸ್ತಿ ಉಳಿಸಿಕೊಳ್ಳಲು ಹೋರಾಡಲಿದ್ದಾರೆ.

ಮೈಂಡ್ ಕೋಚ್ ಪ್ಯಾಡಿ ಆಪ್ಟನ್ ನೆರವು ಸ್ಮರಿಸಿದ ಗ್ರ್ಯಾಂಡ್ ಮಾಸ್ಟರ್

ವಿಶ್ವ ವಿಜಯದ ಗುಟ್ಟು ಬಿಚ್ಚಿಟ್ಟ ಗುಕೇಶ್

ಚೆನ್ನೈ (ಪಿಟಿಐ): ವಿಶ್ವ ಚೆಸ್ ಚಾಂಪಿಯನ್ ಡಿ.ಗುಕೇಶ್ ಅವರು ತಾವು ಅತ್ಯುನ್ನತ ಸಾಧನೆ ಮಾಡಲು 'ಭಾವನಾತ್ಮಕ ಒತ್ತಡ' ನಿರ್ವಹಣೆ ಯನ್ನು ಯಶಸ್ವಿಯಾಗಿ ಮಾಡಿದ್ದು ಕಾರಣ. ಆ ರೀತಿಯ ನಿರ್ವಹಣೆಯನ್ನು ಕಲಿಸಿದ ಮೈಂಡ್ ಕಂಡಿಷನಿಂಗ್ ಕೋಚ್ ಪ್ಯಾಡಿ ಆಪ್ಟನ್ ಅವರಿಗೆ ಆಭಾರಿಯಾಗಿರುವುದಾಗಿ ತಿಳಿಸಿದ್ದಾರೆ.

18 ವರ್ಷದ ಗುಕೇಶ್ ಅವರು ಈಚೆಗೆ ಸಿಂಗಪುರದಲ್ಲಿ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಚೀನಾದ ಡಿಂಗ್ ಲಿರೇನ್ ವಿರುದ್ಧ ಗೆದ್ದು ದಾಖಲೆ ಬರೆದರು.

ಸೋಮವಾರ ಸಿಂಗಪುರದಿಂದ ತಮ್ಮ ತವರು ಚೆನ್ನೈಗೆ ಮರಳಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬರೀ ಚೆಸ್ ಕೌಶಲಗಳಷ್ಟೇ ಅಲ್ಲ. ಅದರಲ್ಲಿ ಬಹಳಷ್ಟು ಮಾನಸಿಕ ಮತ್ತು ಭಾವನಾತ್ಮಕವಾದ

ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಅವರು ಸೋಮವಾರ ಸಿಂಗಪುರದಿಂದ ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಅದ್ದೂರಿ ಸ್ವಾಗತ ನೀಡಿ ಸನ್ಮಾನಿಸಲಾಯಿತು. ಗುಕೇಶ್ ತಂದೆ ಡಾ. ರಜನಿಕಾಂತ್, ತಾಯಿ ಪದ್ಮಾ ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

ಒತ್ತಡಗಳೂ ಇರುತ್ತವೆ. ಅವುಗಳನ್ನು ಸಮರ್ಥವಾಗಿ ನಿಭಾಯಿಸಲು ಪ್ಯಾಡಿ (ಆಪ್ಟನ್) ನೀಡಿದ ಮಾರ್ಗದರ್ಶನದಿಂದ ನನಗೆ ಬಹಳಷ್ಟು ನೆರವಾಯಿತು' ಎಂದರು.

ಪ್ಯಾಡಿ ಹೆಸರಾಂತ ಮೆಂಟಲ್ ಕೋಚ್ ಆಗಿದ್ದು, ಫೈನಲ್‌ಗೂ ಮುನ್ನ ಮತ್ತು ಅಂತಿಮ 14 ಸುತ್ತುಗಳ ಸಂದರ್ಭದಲ್ಲಿ ಅವರು ಗುಕೇಶ್ ಅವರಿಗೆ ಮಾರ್ಗದರ್ಶನ ನೀಡಿದ್ದರು.

'ಪ್ಯಾಡಿಯೊಂದಿಗೆ ಮಾತುಕತೆ ಮತ್ತು ಅವರ ಸಲಹೆಗಳು ಬಹಳ ಮುಖ್ಯವಾಗಿವೆ. ಒಬ್ಬ ಆಟಗಾರನಾಗಿ ಸುಧಾರಣೆಗೊಳ್ಳಲು ಅವರ ಸಲಹೆ ಗಳು ಉತ್ತಮವಾಗಿವೆ' ಎಂದರು.

'ನನ್ನ ತಂಡದಲ್ಲಿ ಪ್ಯಾಡಿ ಬಹಳ ಪ್ರಮುಖ ಸದಸ್ಯ. ಕ್ಯಾಂಡಿಡೇಟ್ಸ್‌ನಲ್ಲಿ ಗೆದ್ದ ನಂತರ ಸಂದೀಪ್ ಸರ್ (ವೆಸ್ಟ್‌ಬ್ರಿಜ್ ಕ್ಯಾಪಿಟಲ್‌ನ ಸಂದೀಪ್ ಸಿಂಘಾಲ್) ಅವರಲ್ಲಿ ಮೆಂಟಲ್ ಟ್ರೇನರ್ ಬೇಕು ಎಂದು ಕೇಳಿದೆ. ಆಗ ಅವರು ಕೂಡಲೇ ಪ್ಯಾಡಿಯನ್ನು ಪರಿಚಯಿಸಿದರು. ಅಂತರ ರಾಷ್ಟ್ರೀಯ ಅಥ್ಲೀಟ್‌ಗಳೊಂದಿಗೆ ಕಾರ್ಯನಿರ್ವಹಿಸಿದ ಅಪಾರ ಅನುಭವ ಪ್ಯಾಡಿಗೆ ಇದೆ' ಎಂದು ಗುಕೇಶ್ ನೆನಪಿಸಿಕೊಂಡರು.

ಎಬಿಲಿಟಿ ಸ್ಪೋರ್ಟ್ಸ್ ಲೀಗ್ 3ನೇ ಆವೃತ್ತಿಯ ಟಿ20 ಗಾಲಿಕುರ್ಚಿ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದ ಚೆನ್ನೈ ಲೆಜೆಂಡ್ಸ್ ತಂಡ

ಗಾಲಿಕುರ್ಚಿ ಕ್ರಿಕೆಟ್: ಚೆನ್ನೈ ಲೆಜೆಂಡ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಚೆನ್ನೈ ಲೆಜೆಂಡ್ಸ್ ತಂಡವು ಎಬಿಲಿಟಿ ಸ್ಪೋರ್ಟ್ಸ್ ಲೀಗ್ 3ನೇ ಆವೃತ್ತಿಯ ಟಿ20 ಗಾಲಿಕುರ್ಚಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ಈಗಲ್ಸ್ ತಂಡವನ್ನು 53 ರನ್‌ಗಳಿಂದ ಮಣಿಸಿ ಪ್ರಶಸ್ತಿ ಗೆದ್ದಿದೆ.

ಸೋಮವಾರ ನಡೆದ ಫೈನಲ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡವು ಸುರೇಶ್ ಸೆಲ್ವಂ (ಔಟಾಗದೇ 111;43ಎ) ಅವರ ಶತಕದ ಬಲದಿಂದ 20 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 203 ರನ್ ಗಳಿಸಿತು.

ಗುರಿಯನ್ನು ಬೆನ್ನತ್ತಿದ ಈಗಲ್ಸ್ ತಂಡವು 18.4 ಓವರ್‌ಗಳಲ್ಲಿ 150 ರನ್ ಗಳಿಸಲಷ್ಟೇ ಶಕ್ತವಾಯಿತು. ಶೈಲೇಶ್ ಯಾದವ್ (42;28ಎ) ಏಕಾಂಗಿ ಹೋರಾಟ ನಡೆಸಿದರು. ಚೆನ್ನೈ ತಂಡದ ಜೆನಿಶ್ ಆಂಟೊ ನಾಲ್ಕು ವಿಕೆಟ್ ಪಡೆದು ಮಿಂಚಿದರು.

ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಶೀರ್ಷಿಕೆ ಪ್ರಾಯೋಜಕರಾಗಿರುವ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ಸಿಇಒ ಅರ್ಜುನ್ ರಂಗ, ಕ್ರಿಕೆಟಿಗ ಕೃಷ್ಣಪ್ಪ ಗೌತಮ್ ಉಪಸ್ಥಿತರಿದ್ದರು.

ಸರಣಿ ಕೈವಶದತ್ತ ಭಾರತ ಚಿತ್ತ

ನವಿ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಕ್ರಿಕೆಟ್ ಸರಣಿಯನ್ನು ಕೈವಶ ಮಾಡಿಕೊಳ್ಳುವ ಛಲದಲ್ಲಿದೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಗೆದ್ದಿತ್ತು. ಮಂಗಳವಾರ ಎರಡನೇ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್ ಅವರು ಅಮೋಘ ಅರ್ಧಶತಕ ಗಳಿಸಿದ್ದರು. ಮಧ್ಯಮವೇಗಿ ತಿತಾಸ್ ಸಾಧು ಕೂಡ ಉತ್ತಮ ಲಯದಲ್ಲಿದ್ದಾರೆ. ವಿಂಡೀಸ್ ತಂಡದ ಒಲಿನಾ ಜೋಸೆಫ್,

ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್

ದಿಯಾಂದ್ರ ಡಾಟಿನ್ ಅವರೂ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಮೂರು ಪಂದ್ಯಗಳ ಸರಣಿಯಲ್ಲಿ ಭಾರತ 1–0 ಮುನ್ನಡೆ ಗಳಿಸಿದೆ.

ಪಂದ್ಯ ಆರಂಭ: ರಾತ್ರಿ 7ರಿಂದ

ಡೆಲ್ಲಿ ದಬಾಂಗ್ ರೇಡರ್‌ನನ್ನು ಹಿಡಿಯಲು ಯತ್ನಿಸಿದ ಬೆಂಗಾಲ್ ವಾರಿಯರ್ಸ್ ತಂಡದ ಆಟಗಾರರು –ಎಕ್ಸ್ ಚಿತ್ರ

ದಬಾಂಗ್‌ಗೆ ಮಣಿದ ಬೆಂಗಾಲ್

ಪುಣೆ (ಪಿಟಿಐ): ಅಶು ಮಲಿಕ್ ಅವರ ಅಮೋಘ ರೇಡಿಂಗ್ ಬಲದಿಂದ ಡೆಲ್ಲಿ ದಬಾಂಗ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 47–25ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ದಬಾಂಗ್ ವಿರಾಮದ ವೇಳೆ 26–9ರಿಂದ ಮುಂದಿತ್ತು. ಉತ್ತರಾರ್ಧದಲ್ಲೂ ಎದುರಾಳಿ ತಂಡಕ್ಕೆ ಚೇತರಿಸಿಕೊಳ್ಳಲು ಅವಕಾಶ ನೀಡದೆ ಡೆಲ್ಲಿ ತಂಡವು ಪಾರಮ್ಯ ಮೆರೆಯಿತು.

17 ಅಂಕ ಗಳಿಸಿದ ಅಶು ಗೆಲುವಿನ ರೂವಾರಿಯಾದರು. ಅವರಿಗೆ ಯೋಗೇಶ್ ದಾಹಿಯಾ (9) ಸಾಥ್ ನೀಡಿದರು. ಈ ಗೆಲುವಿನೊಂದಿಗೆ ಡೆಲ್ಲಿ ತಂಡವು 71 ಪಾಯಿಂಟ್ಸ್‌ನೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ಬಲಪಡಿಸಿಕೊಂಡಿತು.

ದಿನದ ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 37–32ರಿಂದ ಪುಣೇರಿ ಪಲ್ಟನ್ ತಂಡವನ್ನು ಸೋಲಿಸಿತು.